
# ಗಮಕ ದಿಗ್ಗಜಗಳು



ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ
ಬೆಂಗಳೂರು

# ಗಮಕ ದಿಗ್ಗಜಗಳು

ಲೇಖಕರು

**ಎಂ. ಎ. ಜಯರಾಮ್‌ರಾವ್**



ಪ್ರಕಾಶನ

**ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ**

**ಬೆಂಗಳೂರು-560 001**

**GAMAKADIGGAJAGALU :-**
**Narration by Sri M.A. Jayaram Rao**

No. 4362/A 3rd Cross, 14th Main
A.Block, Subramanya Nagar, Bangalore - 560021

First Edition - 1998

Chief Editor :- S.N. Chandrashekhar

Editor :- H.N. Suresh

Published by :

Registrar, Sri H. Shankarappa

Karnataka Sangeeta Nritya Academy

14/3 Nrupatunga Road.

Bangalore - 560002

Price : Rs 25 /-

Printed at :

**Sree Ranga Printers & Binders**
Hanumanthanagar, Bangalore - 560019
Phone : 6679333

# ಮುನ್ನುಡಿ

ಗಮಕ ಕಲೆಗೆ, ಸಾಹಿತ್ಯ - ಸಂಗೀತಗಳಿಗಿರುವಷ್ಟೇ ಹಳೆಯ ಇತಿಹಾಸವಿದೆ. ಕನ್ನಡ ಕಾವ್ಯವನ್ನು ಜನಪ್ರಿಯಗೊಳಿಸಿದ ಕೀರ್ತಿ ಈ ವಿಶಿಷ್ಟ ಕಲೆಯದು. ಸಂದರ್ಭೋಚಿತವಾದ ರಾಗಗಳಿಂದ ಆ ಕಾವ್ಯದ ಪರಿಮಳವನ್ನು ಜನಜೀವನದಲ್ಲಿ ಬೆರೆಯುವಂತೆ ಮಾಡಿದವರು ಗಮಕಿಗಳು.

ಇತ್ತೀಚಿನ ದಿನಗಳಲ್ಲಂತೂ, ಸಮಕಾಲೀನ ಕಾವ್ಯಗಳನ್ನು ಆಯ್ದು, ಅವನ್ನು ಪ್ರಚಾರಕ್ಕೆ ತಂದವರು ಗಮಕಿಗಳು. ಅಂಥವರಲ್ಲಿ ಸಂಪತ್ಕುಮಾರಾಚಾರ್ಯರ ಹೆಸರನ್ನು ಅರಿಯದ ಸಾಹಿತ್ಯ-ಸಂಗೀತ ಪ್ರಿಯರೇ ವಿರಳ ಎನ್ನಬಹುದು.

ನಮ್ಮ ಅಕಾಡೆಮಿಯ ವ್ಯಾಪ್ತಿಯಲ್ಲಿ ಗಮಕ ಕಲೆಯೂ ಸೇರಿರುವುದು ಔಚಿತ್ಯ ಪೂರ್ಣ. ಈಗಾಗಲೇ ಅಕಾಡೆಮಿ ಖ್ಯಾತ ಬಿಂದೂರಾಯರನ್ನು ಕುರಿತ ಪುಸ್ತಕ ಒಂದನ್ನು ಪ್ರಕಟಿಸಿದೆ. ಅದು ಸಾಕಷ್ಟು ಓದುಗರ ಗಮನವನ್ನು ಸೆಳೆದಿದೆ.

ಈ ಸಂಕಲನದಲ್ಲಿ, ಗಮಕ ಕಲೆಯನ್ನು ಕರಗತಮಾಡಿಕೊಂಡು, ಅದರಲ್ಲಿ ಸಾಕಷ್ಟು ಕೀರ್ತಿಶಾಲಿಗಳಾಗಿರುವ ಶ್ರೀ ಎಂ. ಎ. ಜಯರಾಮರಾವ್ ಇತರ ಹಲವು ಹಿರಿಯ ಗಮಕ ವಿದ್ವಾಂಸರನ್ನು ಪರಿಚಯಿಸಿದ್ದಾರೆ. ಇದರಲ್ಲಿ ಬಿಟ್ಟು ಹೋಗಿರುವವರೂ ಇಲ್ಲದಿಲ್ಲ. ಅವರುಗಳ ಬಗ್ಗೆ ಸಾಕಷ್ಟು ಮಾಹಿತಿ ದೊರಕದಿರುವುದೇ ಈ ಲೋಪಕ್ಕೆ ಕಾರಣ. ಅವರುಗಳಲ್ಲಿ ಹಿಂದಿನ ತಲೆಮಾರಿನವರಿಗೆ ಚೆನ್ನಾಗಿ ಪರಿಚಿತರಾಗಿದ್ದವರು ಪಂಡಿತ ರಾಮಾರಾಧ್ಯರು. ಶ್ರೀಯುತರು ಒಂದು ಹೆಜ್ಜೆ ಮುಂದೆ ಹೋಗಿ ''ಗಮಕ ರೂಪಕ''ಗಳನ್ನೇ ರೂಪಿಸಿ, ಪ್ರದರ್ಶಿಸಿದ ಕೀರ್ತಿಗೆ ಭಾಜನರು. ಅವರು ಹಾಗೆ ತಯಾರು ಮಾಡಿದ ತರುಣರನೇಕರು ಮಲ್ಲೇಶ್ವರದ ಗಾಂಧೀ ಸಾಹಿತ್ಯ ಸಂಘದ ಸದಸ್ಯರು. ಅವರಲ್ಲಿ ಕೆಲವರು ಈಗಲೂ ಅದನ್ನು ಮುಂದುವರಿಸಿಕೊಂಡು ಬರುತ್ತಿದ್ದಾರೆ. ಅವರ, ಇನ್ನಿತರ ಮಹನೀಯರನ್ನು ಕುರಿತ ಮಾಹಿತಿ ದೊರೆತಾಗ ಅವಶ್ಯಕವಾಗಿ ಪುಸ್ತಗಳನ್ನು ಯೋಜಿಸಿಕೊಳ್ಳಬಹುದು. ಪ್ರಸ್ತುತ ಈ ಕಿರು ಗ್ರಂಥ ಸಹೃದಯರ ವಿಶ್ವಾಸಕ್ಕೆ ಪಾತ್ರವಾಗುವುದೆಂದು ಆಶಿಸೋಣ.

— ಶ್ಯಾಮಲಾ ಜಿ. ಭಾವೆ

ಅಧ್ಯಕ್ಷರು

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ

# ಎರಡು ಮಾತು

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಅಧ್ಯಕ್ಷಿಣಿ ಶ್ರೀಮತಿ ಶ್ಯಾಮಲಾ ಜಿ. ಭಾವೆಯವರು ಕೆಲವೊಂದು ಗಮಕಿಗಳ ಪರಿಚಯ ಲೇಖನವನ್ನು ಬರೆಯಿಸಿ ಪ್ರಕಟಿಸುವ ಉದ್ದೇಶವನ್ನು ಅಕಾಡೆಮಿ ಹೊಂದಿದ್ದು ಆ ಜವಾಬ್ದಾರಿಯನ್ನು ನನಗೆ ವಹಿಸಿದಾಗ ಸಂತೋಷವಾಯಿತು. ಕಾರಣ ಅವರು ಹೆಸರಿಸಿದ್ದ ಏಳು ಗಮಕಿಗಳಲ್ಲಿ ಒಬ್ಬರನ್ನುಳಿದು ಉಳಿದವರೆಲ್ಲರನ್ನೂ ನಾನು ಹತ್ತಿರದಿಂದ ಕಂಡವನು. ಇಂಥವರನ್ನು ಕುರಿತು ಬರೆಯುವ ಕೆಲಸ ನನ್ನ ಪಾಲಿಗೆ ಬಂದದ್ದು ನನ್ನ ಸುಕೃತ.

ಶ್ರೀಮತಿ ಭಾವೆಯವರ ಆದೇಶದಂತೆ ಅವರು ನಿಗದಿಪಡಿಸಿದ ಅವಧಿಗಿಂತಲೂ ಸ್ವಲ್ಪ ಹೆಚ್ಚು ಕಾಲಾವಧಿ ತೆಗೆದುಕೊಂಡು ಇದನ್ನು ಒಪ್ಪಿಸಿದ್ದೇನೆ. ಇಲ್ಲಿನ ಎಲ್ಲ ಗಮಕಿಗಳನ್ನು ನಾ ಕಂಡ ರೀತಿಯಲ್ಲಿ ಪರಿಚಯಿಸುವ ಸಾಹಸ ಮಾಡಿದ್ದೇನೆ. ಈ ಕಾರ್ಯ ಯಶಸ್ವಿಯಾಗಲು ಇದರಲ್ಲಿ ಉಲ್ಲೇಖಿತವಾಗಿರುವ ಗಮಕಿಗಳ ಬಂಧುಗಳು ನನಗೆ ತುಂಬಾ ಸಹಕಾರ ಸಲಹೆ ನೀಡಿದ್ದಾರೆ. ಅವರಿಗೆಲ್ಲ ನನ್ನ ತುಂಬುಹೃದಯದ ಕೃತಜ್ಞತೆಗಳು. ಇದರಲ್ಲಿ ಉಲ್ಲೇಖಿತವಾಗಿರುವ ಗಮಕಿಗಳಲ್ಲಿ ಗಮಕವಿದುಷಿ ಶಕುಂತಲಾಬಾಯಿ ಪಾಂಡುರಂಗರಾವ್ ಹಾಗೂ ಗಮಕಿ ಎಂ. ರಾಘವೇಂದ್ರರಾವ್ ಅವರನ್ನು ಬಿಟ್ಟರೆ ಉಳಿದೆಲ್ಲ ಗಮಕಿಗಳು ದಿವಂಗತರು. ಗಮಕ ಕ್ಷೇತ್ರಕ್ಕೆ ಇವರ ಪರಿಚಯ ಅನುಕೂಲವಾಗಬಹುದು.

ಈ ಒಂದು ಮಹತ್ಕಾರ್ಯವನ್ನು ಮಾಡಲು ನನಗೆ ಅನುವು ಮಾಡಿಕೊಟ್ಟ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಅಧ್ಯಕ್ಷಿಣಿ ವಿದುಷಿ ಶ್ಯಾಮಲಾ ಜಿ. ಭಾವೆಯವರಿಗೂ ಅವರ ಅಧಿಕಾರ ವರ್ಗಕ್ಕೂ ನನ್ನ ಅನಂತ ಧನ್ಯವಾದಗಳು.

ಕನ್ನಡ ಜನತೆ ಮುಖ್ಯವಾಗಿ ಗಮಕಕಲಾ ಕ್ಷೇತ್ರ ಇದನ್ನು ಆದರದಿಂದ ಬರಮಾಡಿಕೊಂಡರೆ ನನ್ನ ಶ್ರಮ ಸಾರ್ಥಕ.

ಬೆಂಗಳೂರು-೨೧ ಇಂತು ಸಜ್ಜನ ವಿಧೇಯ,

೮.೯.೧೯೯೭ ಎಂ. ಎ. ಜಯರಾಮ್‌ರಾವ್

## ಗಮಕ ದಿಗ್ಗಜಗಳು

೧. ಕೃಷ್ಣಗಿರಿ ಕೃಷ್ಣರಾಯರು

೨. ಕಳಲೆ ಸಂಪತ್ಕುಮಾರಾಚಾರ್ಯರು

೩. ಮೈ. ಶೇ. ಅನಂತಪದ್ಮನಾಭರಾಯರು

೪. ಮಾಲೂರು ಟಿ. ವೆಂಕಟಪ್ಪನವರು

೫. ಗಮಕಿ ರಾಘವೇಂದ್ರರಾವ್

೬. ಶಕುಂತಲಾಬಾಯಿ ಪಾಂಡುರಂಗರಾವ್ ಅವರು

೭. ಗಮಕಿ ರಾಮಕೃಷ್ಣಶಾಸ್ತ್ರೀ

# ಭಾರತದ ಕೃಷ್ಣಗಿರಿ ಕೃಷ್ಣರಾಯರು

''ಕುಮಾರವ್ಯಾಸನು ಹಾಡಿದನೆಂದರೆ
ಕಲಿಯುಗ ದ್ವಾಪರವಾಗುವುದು ।
ಭಾರತ ಕಣ್ಣಲಿ ಕುಣಿಯುವುದು
ಮೈಯಲಿ ಮಿಂಚಿನ ಹೊಳೆ ಹರಿದಾಡುವುದು।''

ಎಂಬ ರಾಷ್ಟ್ರಕವಿ ಕುವೆಂಪುರವರ ಕವಿವಾಣಿ ಎಷ್ಟರಮಟ್ಟಿಗೆ ನಿಜವೋ ಹೇಳುವಂತಿಲ್ಲ. ಕಾರಣ ಕುವೆಂಪುಯಾದಿಯಾಗಿ ಯಾರೂ ಕುಮಾರವ್ಯಾಸ ಹಾಡಿದ್ದು ಕೇಳಿಲ್ಲ. ಇದು ಕಾವ್ಯ ರಸಾಸ್ವಾದನೆಯ ಕಲ್ಪನೆಯಷ್ಟೆ!

ಆದರೆ ಇದೇ ಕುಮಾರವ್ಯಾಸ ಭಾರತದ ಕಾವ್ಯಭಾಗಗಳನ್ನು ಒಬ್ಬ ಗಮಕಿಯ ಬಾಯಿಂದ, ಅದರಲ್ಲೂ 'ಭಾರತದ ಕೃಷ್ಣರಾಯ'ರೆಂದೇ ಪ್ರಸಿದ್ಧರಾದ ಕೃಷ್ಣಗಿರಿ ಕೃಷ್ಣರಾಯರ ಸಿರಿಕಂಠದಿಂದ ಕೇಳಿದಾಗ ಕವಿ ಕುವೆಂಪು ಅವರ ಮೇಲಿನ ಸಾಲುಗಳು ಹುಸಿಯಲ್ಲ ಎನಿಸುವುದು ಸಹಜ.

ಕೃಷ್ಣರಾಯರ ಕಂಠಮಾಧುರ್ಯತೆ ಅಂಥಾದ್ದು. ಇದನ್ನು ಕೇಳಿ, ಅನುಭವಿಸಿದ್ದಾರೆ ಕೆ. ವಿ. ಪುಟ್ಟಪ್ಪನವರು. ಅವರ ವಾಚನದಲ್ಲಿನ ಗಮಕದ ಏರಿಳಿತಗಳು, ಭಾವಪೂರ್ಣಗಾಯನ ಎಂಥವರ ಮನಸ್ಸನ್ನೂ ಸೂರೆಗೊಳ್ಳುವಂಥದ್ದು. ಇವರ ವಾಚನವನ್ನೇ ಕೇಳಿ, ಅನುಭವಿಸಿ, ಅವರ ಶಿಷ್ಯರಲ್ಲೊಬ್ಬರಾಗಿ, ಕೃಷ್ಣರಾಯರಂತೆಯೇ ಪ್ರಸಿದ್ಧ ಗಮಕಿಯೆನಿಸಿದ್ದ ದಿ॥ ಮೈ. ಶೇ. ಅನಂತಪದ್ಮನಾಭರಾಯರು ಅವರ ಭಾರತವಾಚನದ ವೈಖರಿಯನ್ನು ತಮ್ಮ 'ಬೃಂದಾವನ' ಕವನ ಸಂಗ್ರಹದಲ್ಲಿ ಹೀಗೆ ವರ್ಣಿಸಿದ್ದಾರೆ.

''ಕುಮಾರವ್ಯಾಸನ ವಾಣಿಯ ನುಡಿಯುವ
ವೀಣೆಯು-ಗಮಕದ ಶಾಸ್ತ್ರಜ್ಞಾನ ।
ಆ ಕವಿ-ಕಾವ್ಯದ ದಿವ್ಯಧ್ವನಿ-ಯಾ
ಕೃಷ್ಣನ ಹೃದಯದ ಗಾನದ ತಾನ ॥ ೧ ॥

ಕುಮಾರವ್ಯಾಸನ ದೇಗುಲ-ಕೃಷ್ಣನ
ಹಾಡುವ ಸೊಬಗಿನ ಹೃದಯ ನವೀನ ।



ಆ ಕವಿಯಗ್ಗಳಿಕೆಗಳಂ ಸಾಧಿಸಿ
ಶೋಧಿಸುತುಣಿಸುವ ಮಧುರಸಪಾನ ॥ ೨ ॥

ಎಲ್ಲಿದೆ ಜೀವ; ಎಲ್ಲಿದೆ ಭಾವ
ಮೌನದ ಮಾತನು ಕುಣಿಸುವನಾವ
ಸಂಗೀತದ ದನಿಯಿಂದಲಿ ಕೂಡಿಸಿ
ರಸಕಳೆ ತುಂಬುವ ಶಬ್ದದ ಜೀವ ॥ ೩ ॥

ಆ ಕವಿಯಿತ್ತನು ಮಾತಿನ ಮುತ್ತು
ಕೃಷ್ಣನ ಕೊರಳಿನ ಗಾನಧ ಬಿತ್ತು ।
ಕೇಳುವ ಹೃದಯದ ಮಿಡಿಯುವ ಗತ್ತು
ಪಾತ್ರವನಾಡುವ ಪರಿಣತಿಯಿತ್ತು ॥ ೪ ॥

ಎಲ್ಲಿವನೊಂದೇ ಹೃದಯದಿ ತೋರುವ
ಸರ್ವರ ದೃಷ್ಟಿಗೆ ನೈಜವ ತರುವ
ಕೃಷ್ಣನ ಲೀಲೆಗಳೆಲ್ಲವ ತುಂಬುವ
ಭಾರತ ಚರಿತೆಯ ಹಾಡುವನಾವ ॥ ೫ ॥

ಅವರೇ ಕೃಷ್ಣಗಿರಿ (ಭಾರತದ) ಕೃಷ್ಣರಾಯರು !

ಭಾರತದ ಬಿಂದೂರಾಯರ ನಂತರ ಬರುವ ಹೆಸರು ಕೃಷ್ಣಗಿರಿ ಕೃಷ್ಣರಾಯರದು. ಬಿಂದೂರಾಯರು ಕೇವಲ ಕುಮಾರವ್ಯಾಸನ ಭಾರತಕ್ಕೇ ಅಂಟಿಕೊಂಡವರು. ಹಾಗಾಗಿ ಅವರಿಗೆ 'ಭಾರತದ ಬಿಂದೂರಾಯ'ರೆಂದೇ ಹೆಸರು. ಆದರೆ ಕೃಷ್ಣರಾಯರು ಹಾಗಲ್ಲ. ಭಾರತ ಮಾತ್ರವಲ್ಲ ಕನ್ನಡದ ಸಮಗ್ರ ಕಾವ್ಯಗಳನ್ನೆಲ್ಲಾ ಲೀಲಾಜಾಲವಾಗಿ, ರಸವತ್ತಾಗಿ ಓದುತ್ತಿದ್ದರು. ಆದರೆ ಅವರ ಹೆಚ್ಚಿನ ಒಲವು ಕುಮಾರವ್ಯಾಸನಲ್ಲಿ. ಹಾಗಾಗಿ ಅವನ ಭಾರತ ಇವರಿಗೆ ಕರಗತ. ''ಆ ಕವಿ-ಕಾವ್ಯದ ದಿವ್ಯಧ್ವನಿ-ಈ ಕೃಷ್ಣನ ಹೃದಯದ ಗಾನದ ತಾನ'' ಎಂಬ ಕವಿವಾಣಿ ಅನ್ವರ್ಥ! ಭಾರತದ ಕೃಷ್ಣರಾಯರೆಂಬ ಹೆಸರಿನ ಸಾರ್ಥಕ್ಯ!!

## ಕೃಷ್ಣರಾಯರನ್ನ ನಾ ಕಂಡಿದ್ದು

ಇಂಥ ಒಬ್ಬ ಕಲಾತಪಸ್ವಿಯನ್ನು, ಗಮಕಕಲಾಕ್ಷೇತ್ರದ ಇತಿಹಾಸ ಪುರುಷನನ್ನು ನಾನು ಮೊದಲಬಾರಿಗೆ ಕಂಡಿದ್ದು ೧೯೪೨ರಲ್ಲಿ. ಆಗ ನನ್ನ ತಂದೆಯವರಾದ ಮೈ.ಶೇ. ಅನಂತಪದ್ಮನಾಭ ರಾಯರು ಮಡಿಕೇರಿಯಲ್ಲಿ ಗಮಕ ತರಗತಿಗಳನ್ನು ಆರಂಭಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತು ಇದಕ್ಕೆ

ಮಾನ್ಯತೆ ನೀಡಿ ಪರೀಕ್ಷೆಗಳನ್ನು ನಡೆಸಲು ಕೃಷ್ಣರಾಯರನ್ನ ನೇಮಿಸಿದ್ದರು. ಈ ಹಿಂದೆ ರಾಯರು ಅನೇಕ ಬಾರಿ ಮಡಿಕೇರಿಗೆ ಬಂದಿದ್ದರೂ ಅದು ನನಗೆ ನೆನಪಿಲ್ಲ.

೧೯೪೭೨ರಲ್ಲಿ ಅಕ್ಟೋಬರ್ ತಿಂಗಳಿರಬಹುದು. ನನಗಿನ್ನೂ ಆಗ ೭-೮ ವರ್ಷ. ಗಮಕ ಪರೀಕ್ಷೆ ಮಡಿಕೇರಿಯ ವೇದಾಂತ ಸಂಘದಲ್ಲಿ ಏರ್ಪಾಡಾಗಿತ್ತು. ಇಬ್ಬರೇ ವಿದ್ಯಾರ್ಥಿಗಳು. ಕೃಷ್ಣರಾಯರೇ ಪರೀಕ್ಷಕರು. ಪರೀಕ್ಷೆಯ ಬಗ್ಗೆ ನನಗೆ ಅಷ್ಟು ಆಸಕ್ತಿಯಿರಲಿಲ್ಲ. ಆದರೆ ಪರೀಕ್ಷೆಯ ನಂತರ ಅದೇ ಸಭಾಂಗಣದಲ್ಲಿ ಕೃಷ್ಣರಾಯರ ವಾಚನ ಕಾರ್ಯಕ್ರಮವಿತ್ತು. ಈಗಾಗಲೇ ಅನೇಕ ಬಾರಿ ನಮ್ಮ ತಂದೆಯವರು ಹಾಡುತ್ತಿದ್ದ ಭಾರತ ಪದ್ಯಗಳನ್ನು ಕೇಳಿ ಕೆಲವೊಂದು ಪದ್ಯಗಳು ನನಗೆ ಬಾಯಿಪಾಠವಾಗಿತ್ತು. ಕೃಷ್ಣರಾಯರು ತುಂಬಾ ಚೆನ್ನಾಗಿ ಭಾರತ ಓದುತ್ತಾರೆಂದು ನಮ್ಮ ತಂದೆ ತಾಯಿಗಳು ಹೇಳುತ್ತಿದ್ದುದನ್ನು ಕೇಳಿದ್ದ ನನಗೆ ಅವರ ವಾಚನ ಕೇಳುವ ಆಸಕ್ತಿ ಮೂಡಿತ್ತು. ಮೊದಲಿನಿಂದಲೂ ಏನಾದರೊಂದು ಹೊಸ ವಿಷಯವನ್ನು ತಿಳಿಯುವಲ್ಲಿ ನನಗೆ ಹೆಚ್ಚಿನ ಆಸಕ್ತಿ. ಹಾಗೆಯೇ ಕೃಷ್ಣರಾಯರ ವಾಚನ ಕೇಳುವ ಕುತೂಹಲ. ಹಾಗಾಗಿ ಅವರ ಮುಂದೆಯೇ ಕುಳಿತಿದ್ದೆ-ನಮ್ಮ ತಂದೆಯವರ ಪಕ್ಕದಲ್ಲಿ. ಇಲ್ಲಿ ಬರೀ ಕೇಳುವುದು ಮಾತ್ರವಲ್ಲ. ಅವರು ಬಳಸುತ್ತಿದ್ದ ರಾಗಗಳನ್ನ ಕಂಡು ಹಿಡಿದು ತಂದೆಯವರಿಗೆ ತಿಳಿಸಬೇಕಿತ್ತು. ಇದೂ ಒಂದು ವಿಧದ ಶಿಕ್ಷಣ ಕ್ರಮವೇ. ಜೊತೆಗೆ ಅವರು ಹಾಡುವ ಶೈಲಿಯನ್ನು ಮನನಮಾಡಿ ಅವರ ಮುಂದೆ ಹಾಡಿ ತೋರಿಸಬೇಕಿತ್ತು.

ಸರಿ. ಕೃಷ್ಣರಾಯರ ವಾಚನ ಆರಂಭವಾಯಿತು. ನಾಟ, ಭೈರವಿ, ಬೇಹಾಗ್ ಮುಂತಾದ ರಾಗಗಳಲ್ಲಿ ಮಂಗಲಾಚರಣ ಪದ್ಯಗಳ ನಿರೂಪಣೆ. ಎಲ್ಲವೂ ಸಾಂಪ್ರದಾಯಿಕ. ನಮ್ಮ ತಂದೆಯವರೂ ಕೃಷ್ಣರಾಯರ ಶಿಷ್ಯರೇ ಆಗಿದ್ದರಿಂದ ಇದರಲ್ಲಿ ನನಗೆ ಹೆಚ್ಚಿನ ವ್ಯತ್ಯಾಸ ಕಾಣಲಿಲ್ಲ. ಮುಂದೆ ಕಥಾಭಾಗವನ್ನಾಗಿ ''ಶ್ರೀಕೃಷ್ಣಸಾರಥ್ಯ''ದ ಪ್ರಸಂಗವನ್ನು ಆಯ್ಕೆ ಮಾಡಿಕೊಂಡರು.

> ''ನಂಬಿದವರಿಗೆ ತನ್ನ ತೆತ್ತಿಹೆನೆಂಬ ಬಿರುದನು ಮೆರೆದು ಭಕ್ತ ಕು
> ಟುಂಬಿ ಸಾರಥಿಯಾದನೊಲಿದರ್ಜುನಗೆ ಮುರವೈರಿ''...

ಕಲ್ಯಾಣಿರಾಗದಲ್ಲಿ ಹೊರಹೊಮ್ಮಿತು ಪದ್ಯಗಳ ಸಾಲು. ತಾರಕದಿಂದ ಆರಂಭ. ಕೃಷ್ಣರಾಯರದ್ದು ಸಿರಿಕಂಠ ಎನ್ನುವುದಕ್ಕಿಂತ 'ಕಂಚಿನಕಂಠ' ಎಂದೇ ಹೇಳಬಹುದು-ಉತ್ತಮ ಎರಕದ ಘಂಟೆಯಿಂದ ಹೊರಹೊಮ್ಮಿದ ನಾದದಂತೆ! ಕೃಷ್ಣರಾಯರ ಕಲ್ಯಾಣಿ ರಾಗದ ನಿರೂಪಣೆಯ ಶೈಲಿ ಇಂದಿಗೂ

ಯಾವ ಗಮಕಿಗೂ ಸಿದ್ಧಿಸಿಲ್ಲವೆಂದರೆ ಅತಿಶಯೋಕ್ತಿಯಲ್ಲ. ಇದಕ್ಕೆ ಕಾರಣ ಅವರಿಗೆ ದೊರೆತಿದ್ದ ಉನ್ನತ ಮಟ್ಟದ ಸಂಗೀತ ಶಿಕ್ಷಣ, ಸಂಗೀತ ಕಚೇರಿಗಳ ಕೇಳ್ಮೆ ಹಾಗೂ, ವೀಣೆ ಶೇಷಣ್ಣ, ಬಿಡಾರಂ ಕೃಷ್ಣಪ್ಪ, ಮೈಸೂರು ವಾಸುದೇವಾಚಾರ್ಯರಂಥ ಸಂಗೀತ ದಿಗ್ಗಜಗಳ ನಿಕಟ ಸಂಪರ್ಕ.

ನಾನು ಈಗಾಗಲೇ ಈ ಭಾಗವನ್ನು ನನ್ನ ತಂದೆಯವರ ಬಾಯಿಯಿಂದ ಹಲವಾರು ಬಾರಿ ಕೇಳಿ ಅಭ್ಯಾಸವಾಗಿ ಪೂರ್ಣ ಅಧ್ಯಾಯ ಕಂಠಪಾಠವಾಗಿತ್ತು. ಒಳ್ಳೆಯ ರಸವತ್ತಾದ ಸನ್ನಿವೇಶ;

''ಹೊಗಳುತರ್ಜುನನಸುರರಿಪುವಿನ
ನಗರಿಗೈತಂದರಮನೆಯ ಹೊಗ
ಲಗಧರನು ಮಂಚದಲಿ ನಿದ್ರಾಂಗನೆಯ ಕೇಳಿಯಲಿ ।
ಸೊಗಸುಮಿಗಲು.....

ತೋಡಿರಾಗದಲ್ಲಿ ಹೊರಹೊಮ್ಮಿತ್ತು ಪದ್ಯ. ನನಗರಿಯದಂತೆಯೇ ನಾನು ಆ ಗಾನಸುಧೆಯಲ್ಲಿ ತಲ್ಲೀನನಾಗಿದ್ದೆ. ''ರಾಮ ಮಂಗಳ ನಾಮ'' ಪದ್ಯ ಕೇಳಿದಾಗಲೇ ನನಗೆಚ್ಚರ. ಚಿಕ್ಕ ಹುಡುಗನಾಗಿದ್ದ ನಾನು ಹಾಡಿನ ಮೋಡಿಗೆ ಸಿಲುಕಿ ತೂಕಡಿಸುತ್ತಿದ್ದೆ ಎಂದು ನನ್ನ ತಂದೆಯವರ ಅನಿಸಿಕೆ. ಆದರೆ ಹಾಗಾಗದೇ ನಾನು ಅವರು ಅಂದು ಹಾಡಿದ ಪದ್ಯ -ರಾಗಗಳನ್ನು ಮನನ ಮಾಡಿಕೊಂಡಿದ್ದೆ. ಈಗಲೂ ನಾನು ಅದೇ ರಾಗಗಳಲ್ಲಿ ಆ ಪದ್ಯಗಳು ಹಾಡುವ ಪರಿಪಾಠವನ್ನಿಟ್ಟುಕೊಂಡಿದ್ದೇನೆ.

ಕೃಷ್ಣರಾಯರಿಗೆ ಅಂದು ನಮ್ಮ ಮನೆಯಲ್ಲೇ ವಾಸ್ತವ್ಯ. ರಾತ್ರಿ ಊಟದ ನಂತರ ಮನೆಯಲ್ಲೇ ಒಂದು ಸಣ್ಣ ಗೋಷ್ಠಿ. ನಾವೇ ಮನೆಯವರು ಸದಸ್ಯರು. ಕೃಷ್ಣರಾಯರೇ ಅಧ್ಯಕ್ಷರು. ಅವರ ಮುಂದೆ ನಮ್ಮ ಪ್ರತಿಭಾ ಪರೀಕ್ಷೆ. ಹುಡುಗರ ಪೈಕಿ ನಾವು ಮೂರು ಜನರು. ನಮ್ಮ ಸೋದರತ್ತೆಯ ಮಗ, ನಮ್ಮ ಅಣ್ಣ ಹಾಗೂ ನಾನು. ಮೊದಲಿಗೆ ಹಿರಿಯರಿಬ್ಬರೂ ಕೆಲವು ಪದ್ಯಗಳನ್ನು ಹಾಡಿದರು. ನಮ್ಮ ಅಣ್ಣನ ಶಾರೀರ ಸ್ವಲ್ಪಮೆದು. ಆದರೆ ಅವನಿಗೆ ಫಲಕುಗಳು-ಗಮಕಗಳು ದೈವದತ್ತವಾಗಿ ಬಂದಿತ್ತು. ಗಾಯನದಲ್ಲೂ ಇಂಪಿರುತ್ತಿತ್ತು. ಅವನ ಹಾಡಿಕೆಗೆ ರಾಯರು ಆಗಾಗ್ಗೆ 'ಭೇಷ್' ಎನ್ನುತ್ತಿದ್ದರು.

ಮುಂದಿನದು ನನ್ನ ಸರದಿ. ನನ್ನದು ಇನ್ನೂ ಒಡೆದಿರದ ಎಳೆ ಕಂಠ. ಹೇಗೆ ಎಳೆದರೂ ಲೀಲಾಜಾಲ ವಾಗಿ ನುಡಿಯುತ್ತಿತ್ತು. ನಾನು ಬೇಕೆಂದೇ ಅಂದು ರಾಯರು ಹಾಡಿದ ಭಾಗದಿಂದಲೇ ಪದ್ಯ ಆರಿಸಿಕೊಂಡಿದ್ದೆ.

''ಲೇಸನಾಡಿದೆ ರಾಮ ಬಳಿಕೇನಾ ಸುಯೋಧನನಧಮನೇ' ಹಂಸಾನಂದಿಯಲ್ಲಿ ನಾನು ಹಾಡಿದ ರೀತಿಗೆ ಕೃಷ್ಣರಾಯರು ''ಒಹ್ ಭೇಷ್'

ಎಂದರು. ಮಕ್ಕಳನ್ನೆಲ್ಲಾ ಹೊಗಳಿದರು. ನಮಗೆಲ್ಲಾ ಹೆಚ್ಚಿನ ಸ್ಫೂರ್ತಿ ನೀಡಿದರು. ಮಾರನೇ ದಿನ ಬೆಳಿಗ್ಗೆ ಊರಿಗೆ ಹೊರಡುವಾಗ ನಮ್ಮ ಕೈಗೆ ನಾಲ್ಕಾಣೆ ಪಾವಲಿಗಳನ್ನಿಟ್ಟು 'ಭಾರತ ಅಭ್ಯಾಸ ಮಾಡಿ ಬಿಡಬೇಡಿ' ಎಂದರು. ಅವರ 'ಅಂದಿನ ಹರಕೆ' ಇಂದು ಫಲಿಸಿ ನಾನೂ ಗಮಕ ಕ್ಷೇತ್ರದಲ್ಲಿ 'ಗಮಕಿ' ಎನಿಸದಿದ್ದರೂ ಕಲಾವಿದನಾಗಲು ಕಾರಣವಾಯಿತು. ಹೀಗೆ ನಾ ಕಂಡ ಕೃಷ್ಣರಾಯರು ನನ್ನ ಮನಃ ಪಟಲದಲ್ಲಿ ಇಂದೂ ನೆಲೆಸಿದ್ದಾರೆ.

ಗಮಕ ಕ್ಷೇತ್ರದಲ್ಲಿ ಹೀಗೆ ಅಜರಾಮರವಾಗಿ ಮೆರೆದು ಗಮಕ ಭಗೀರಥರಲ್ಲೊಬ್ಬರೆನಿಸಿ, ಗಮಕಲೋಕದ ಇತಿಹಾಸಪುರುಷರಾಗಿ ಮೆರೆದ ಕೃಷ್ಣರಾಯರು ಮೂಲತಃ ಆಂಧ್ರಬುಡಕಟ್ಟಿಗೆ ಸೇರಿದವರು. ಇವರ ಪೂರ್ವಿಕರು ಕೃಷ್ಣಗಿರಿಯವರು. ಇವರ ತಾತನವರು ಕೃಷ್ಣಗಿರಿಯನ್ನು ಬಿಟ್ಟು ಮೈಸೂರು ಪ್ರಾಂತ್ಯಕ್ಕೆ ನೆಲೆಸಿದರಂತೆ. ಹೀಗಾಗಿ ರಾಯರ ಮನೆ ಮಾತು ತೆಲುಗಾದರೂ ಅವರು ಮಾತ್ರ ಅಚ್ಚಕನ್ನಡಿಗರಾದರು. ಈಗಲೂ ಅವರ ಕುಟುಂಬದವರ್ಯಾರೂ ತೆಲುಗು ಮಾತನಾಡಿದ್ದು ನಾನು ಕೇಳಿಲ್ಲ. ಇವರು ಮಾಧ್ವಸಂಪ್ರದಾಯದ ಆರವೇಲು ಮನೆತನಕ್ಕೆ ಸೇರಿದವರು. ನಮ್ಮ ಮಾವನವರೊಬ್ಬರು ಇದೇ ಮನೆತನಕ್ಕೆ ಸೇರಿದವರಾದ ಕಾರಣ ಅವರೊಡನೆ ರಾಯರು ತೆಲುಗಿನಲ್ಲಿ ಮಾತನಾಡಿದ್ದನ್ನು ಕೇಳಿದ್ದೇನೆ.

## ರಾಯರ ಜನನ ಬಾಲ್ಯ

ಕೃಷ್ಣರಾಯರ ಜನನ ೧೮೯೦ರ ಜೂನ್ ೩ರಂದು ಹಾಸನದಲ್ಲಿ, ಕೃಷ್ಣಗಿರಿ ಅನಂತಯ್ಯ-ನಾಮಗಿರಿಯಮ್ಮನವರ ಕಿರಿಯ ಪುತ್ರರಾಗಿ. ಅಕ್ಕ-ಜಾನಕಮ್ಮ-ಅಣ್ಣ-ಶ್ರೀನಿವಾಸ ಇವರಿಗಿಂತ ಹಿರಿಯರು. ಅನಂತಯ್ಯನವರು ಹಾಸನದ ಕೋರ್ಟಿನಲ್ಲಿ ಗುಮಾಸ್ತರಾಗಿದ್ದರು. ಸಾಧಾರಣ ಮಧ್ಯಮ ವರ್ಗದ ಕುಟುಂಬ. ಹೇಳಿಕೊಳ್ಳುವಂಥ ಸ್ಥಿತಿವಂತ ರೇನಲ್ಲ. ಅನಂತಯ್ಯನವರ ಆರೋಗ್ಯ ಅಷ್ಟಾಗಿ ಸುಸ್ಥಿತಿಯಲ್ಲಿರಲಿಲ್ಲ. ನಾಮಗಿರಿಯಮ್ಮನವರಿಗೆ ಅದೇ ಚಿಂತೆಯಾಗಿತ್ತು. ಭವಿಷ್ಯದ ಚಿಂತೆ ಅವರನ್ನು ಕಾಡುತ್ತಿತ್ತು. ಇಬ್ಬರಿಗೂ ಕಿರಿಯ ಮಗ ಕೃಷ್ಣನ ಮೇಲೆ ಅಪಾರ ಮಮತೆ. ಅಕ್ಕ ಜಾನಕಮ್ಮನಿಗೆ ಈ 'ಬಾಲಕೃಷ್ಣ'ನನ್ನ ಕಂಡರೆ ಅಮಿತ ವಾತ್ಸಲ್ಯ. ವಟಸಾವಿತ್ರಿ ಹುಣ್ಣಿಮೆದಿನ ಹುಟ್ಟಿದ ಕೃಷ್ಣವರ್ಣದ ಈ ಬಾಲಕನಿಗೆ 'ಕೃಷ್ಣ' ಎಂಬ ಹೆಸರು ಅನ್ವರ್ಥವಾಗಿತ್ತು. ಕಡಗೋಲ ಕೃಷ್ಣನಂತೆ ಎಲ್ಲರ ಕಣ್ಮಣಿ ಯಾಗಿದ್ದ ಹುಡುಗನನ್ನು ನೋಡಿ ಎಲ್ಲರೂ ಆನಂದಿಸುತ್ತಿದ್ದರು. ಅನಂತಯ್ಯ ನವರಿಗೇನೋ ಮಗನಿಗೆ ಉಜ್ವಲ ಭವಿಷ್ಯವಿದೆ ಎಂಬ ನಂಬಿಕೆ ಬಲವಾಗಿ ಬೇರೂರಿತ್ತು. ಅವರ ಆಶೀರ್ವಾದವೇ ಇವರಿಗೆ ರಕ್ಷಾಕವಚ. ಆದರೆ ಮಗನ

ಊರ್ಜಿತವನ್ನು ನೋಡಲು ತಂದೆಗೆ ಲಭ್ಯವಿರಲಿಲ್ಲ. ಕೃಷ್ಣರಾಯರು ಶೈಶವದಲ್ಲಿದ್ದಾಗಲೇ ಅನಂತಯ್ಯ ಇಹಲೋಕ ತ್ಯಜಿಸಿದರು. ಆಶ್ರಯ ತಪ್ಪಿದ ನಾಮಗಿರಿಯಮ್ಮ ತಮ್ಮ ಸೋದರಮಾವ ರಂಗರಾಯರ ಮಡಿಲಿಗೆ ಮಕ್ಕಳನ್ನು ಹಾಕಿ ಅವರ ಆಶ್ರಯ ಪಡೆದರು.

ಸೋದರತ್ತೆ ಸುಬ್ಬಾಳಮ್ಮ ವಾತ್ಸಲ್ಯಮಯಿ. ಅಳಿಯನನ್ನು ಒಡಲ ಕೂಸಿನಂತೆಯೇ ಸಾಕಿ, ಪೋಷಿಸಿ ಬೆಳೆಸಿದರು. ಈ ಸುಬ್ಬಾಳಮ್ಮ ಉತ್ತಮ ಗಾಯಕಿಯೇ ಅಲ್ಲದೆ ಗೀತರಚನೆಯನ್ನೂ ಮಾಡುತ್ತಿದ್ದರು. ಈಕೆ ವಾವೆಯಲ್ಲಿ ಕೃಷ್ಣರಾಯರ ತಾತಂದಿರೆನಿಸಿದ್ದ - ರಾಮಾಯಣದ ರಾಮಚಂದ್ರರಾಯರೆಂದೇ ಪ್ರಸಿದ್ಧರಾಗಿದ್ದ ಕೆ. ರಾಮಚಂದ್ರರಾಯರ ಅಕ್ಕರೆಯ ಮಗಳು. ರಾಮಚಂದ್ರ ರಾಯರು ಮೈಸೂರು ಸರಕಾರದಲ್ಲಿ ರೆವಿನ್ಯೂ ಕಮಿಷನರಾಗಿದ್ದರು. ಉತ್ತಮ ವಿದ್ವಾಂಸರು, ಆಂಗ್ಲ, ಕನ್ನಡ, ತೆಲುಗು ಹಾಗೂ ಸಂಸ್ಕೃತ ಭಾಷೆಗಳಲ್ಲಿ ಪ್ರಭುತ್ವಸಾಧಿಸಿ ಪಂಡಿತರೆನಿಸಿದ್ದವರು. ಶ್ರೀವಾಲ್ಮೀಕಿ ರಾಮಾಯಣ ಇವರಿಗೆ ಕರಗತ. ಬಿಡುವಿನ ವೇಳೆಯಲ್ಲಿ ಅಹನ್ಯಹನಿ ಕಾಲಕ್ಷೇಪ ಮಾಡದೆ ರಾಮಾಯಣ ಪ್ರವಚನ ಮಾಡುತ್ತಿದ್ದರು. ಕನ್ನಡ, ತೆಲುಗು ಭಾಷೆಗಳಲ್ಲಿ ಕೀರ್ತನೆಗಳನ್ನ ರಚಿಸಿ ಕವಿಯೂ ಆಗಿದ್ದರು. ಅಲ್ಲದೆ ತಮ್ಮ ಸಂಸ್ಕೃತ ಪಾಂಡಿತ್ಯದ ಬಲ ಹಾಗೂ ರಾಮಾಯಣ ವಾಚನದ ಪ್ರಭಾವದಿಂದ ಹೆಸರಿಸಿದ ರಾಗಗಳಿಂದಲೇ ಆರಂಭವಾಗುವಂತೆ ಒಂಭತ್ತು ಶ್ಲೋಕಗಳಲ್ಲಿ ಸಂಪೂರ್ಣ ರಾಮಾಯಣವನ್ನು ರಚಿಸಿದ ಹೆಗ್ಗಳಿಕೆ ಇವರದು. ಜಮಾಬಂದಿಗೆ ಹೋದಲ್ಲೆಲ್ಲಾ ಜನರನ್ನು ಸೇರಿಸಿ ರಾಮಾಯಣ ಪಾರಾಯಣ ಮಾಡಿ ರಾಮ ಪಟ್ಟಾಭಿಷೇಕ ನಡೆಸಿ ಪುಷ್ಕಳವಾಗಿ ಚರ್ಪು ಹಂಚಿಸುತ್ತಿದ್ದರಂತೆ. ಆದ್ದರಿಂದಲೇ ಇವರಿಗೆ ರಾಮಾಯಣದ ರಾಮಚಂದ್ರರಾಯರೆಂದೇ ಹೆಸರು ಬಂತು.

ತಂದೆಯ ಪಾಂಡಿತ್ಯ ಮಗಳು ಸುಬ್ಬಾಳಮ್ಮನಲ್ಲೂ ಚಿಗುರಿತ್ತು. ತಂದೆ ರಚಿಸುತ್ತಿದ್ದ ರೀತಿಯಲ್ಲೇ ತಾವೂ ಕೃತಿರಚನೆ ಮಾಡುತ್ತಿದ್ದರು. ಅಲ್ಲದೆ ಎರಡನ್ನೂ ಭಾವ ಪೂರ್ಣವಾಗಿ ಹಾಡಿಯೂ ತೋರಿಸುತ್ತಿದ್ದರು. ಇದು ಬಾಲಕ ಕೃಷ್ಣನ ಮೇಲೆ ಸಾಕಷ್ಟು ಪ್ರಭಾವ ಬೀರಿತು. ಈ ಸುಬ್ಬಾಳಮ್ಮನೇ ಕೃಷ್ಣರಾಯರಿಗೆ ಸಂಗೀತದ ಪ್ರಥಮಗುರು.

## ಸಂಗೀತಾಸಕ್ತಿ

ಕೃಷ್ಣರಾಯರ ಅಣ್ಣ-ಅಕ್ಕ ಇಬ್ಬರಲ್ಲೂ ಸಂಗೀತಾಸಕ್ತಿ ಬೆಳೆದು ಬಂದಿತ್ತು. ಅಣ್ಣ ಶ್ರೀನಿವಾಸರಾಯರು ಅನೇಕ ದೇವರನಾಮಗಳನ್ನೂ

ರಚಿಸಿದ್ದಾರೆ. ಅಕ್ಕ ಜಾನಕಮ್ಮ ಚೆನ್ನಾಗಿ ಹಾಡುವುದನ್ನು ರೂಢಿಸಿಕೊಂಡಿದ್ದರು. ಈ ಮಧ್ಯೆ ಕೃಷ್ಣರಾಯರು ಹೇಗೋ ಯಾರಿಂದಲೋ ಪಿಟೀಲು ನುಡಿಸುವುದನ್ನು ಕಲಿತಿದ್ದರು. ಹೇಗೋ ಏನೊ ಒಂದು ಪಿಟೀಲನ್ನೂ ಸಂಪಾದಿಸಿ ಕೊಂಡಿದ್ದರು. ಅದು ಹೇಗೆ ಅವರಿಗೆ ಕರಗತವಾಯಿತು; ಯಾರಿಂದ ಪಿಟೀಲು ಕಲಿತರು ಎಂಬುದು ಚಿದಂಬರ ರಹಸ್ಯವಾಗೇ ಉಳಿಯಿತು. ಪಿಟೀಲು ಮಾತ್ರ ಅವರ ಹೇಳಿದಂತೆ ನುಡಿಯುತ್ತಿತ್ತು. ಉಲಿತ ಸುಶ್ರಾವ್ಯವಾಗಿರುತ್ತಿತ್ತು. ಅಣ್ಣ ಶ್ರೀನಿವಾಸನ ಶೃತಿ, ಅಕ್ಕ ಜಾನಕಮ್ಮನ ಗಾಯನ ಹಾಗೂ ಕೃಷ್ಣನ ಪಿಟೀಲು. ಈ ಮಕ್ಕಳ ಗಾಯನ ಕೇಳಲು ಅಕ್ಕಪಕ್ಕದವರು ಹಾತೊರೆಯುತ್ತಿದ್ದರಂತೆ. ಹೀಗೆ ಸಂಗೀತಾಸಕ್ತಿಯನ್ನು ಬೆಳೆಸಿಕೊಂಡ ಕೃಷ್ಣರಾಯರು ಅತ್ತೆ ಸುಬ್ಬಾಳಮ್ಮ ಹಾಗೂ ಅಕ್ಕ ಜಾನಕಮ್ಮ ಇಬ್ಬರಿಂದಲೂ ಹಾಡುಗಾರಿಕೆಯನ್ನು ಅಭ್ಯಾಸ ಮಾಡಿದರು.

ಮುಂದೆ ವಯಸ್ಸಿಗೆ ಬಂದ ಕೃಷ್ಣರಾಯರು ಸಂಸಾರದ ಜವಾಬ್ದಾರಿಯನ್ನ ಹೊತ್ತು ವಿದ್ಯಾರ್ಥಿಯಾಗಿದ್ದಾಗಲೇ ಹಲವು ಮನೆ ಪಾಠಗಳನ್ನಿಟ್ಟು ಕೊಂಡು ಸಂಸಾರ ನಿರ್ವಹಣೆಗೆ ನೆರವಾದರು.

ರಾಮಚಂದ್ರರಾಯರು ಮಾಡುತ್ತಿದ್ದ ರಾಮಾಯಣ ಪ್ರವಚನ ಕೇಳಿದ್ದ ಕೃಷ್ಣರಾಯರು ಸಂಗೀತದ ಜೊತೆ ಜೊತೆಗೇ ಕಾವ್ಯ ವಾಚನ ಮಾಡುವುದನ್ನೂ ಅಭ್ಯಸಿಸಿ ಪ್ರತಿನಿತ್ಯವೂ ರಾತ್ರಿ ಊಟವಾದ ನಂತರ ಒಂದು ಘಂಟೆಗಳ ಕಾಲ ತಾಯಿಯ ಮುಂದೆ ವಾಚನ ಮಾಡುತ್ತಿದ್ದರು.

ಮೈಸೂರಿನಲ್ಲಿ ಯಾವುದೇ ಸಂಗೀತ ಕಚೇರಿಯಾಗಲಿ ಕೃಷ್ಣರಾಯರು ತಪ್ಪದೆ ಅಲ್ಲಿ ಹಾಜರ್. ಹಾಡು ಕೇಳುವುದರ ಜೊತೆಗೆ ಪಕ್ಕವಾದ್ಯದಲ್ಲಿ ನುಡಿಸುತ್ತಿದ್ದ ಪಿಟೀಲಿನ ಮೇಲೆ ಹೆಚ್ಚು ಆಕರ್ಷಣೆ. ಅದರ ತಾಂತ್ರಿಕತೆ ಬಗ್ಗೆ ತಿಳಿಯಲು ಅತೀವ ಉತ್ಸುಕತೆ. ಅದರಲ್ಲೂ ದ್ವಾರಂ ವೆಂಕಟಸ್ವಾಮಿಯವರ ಪಿಟೀಲೆಂದರೆ ತುಂಬಾ ಅಚ್ಚುಮೆಚ್ಚು. ಮೈಯೆಲ್ಲಾ ಕಿವಿಯಾಗಿ ತನ್ಮಯರಾಗಿ ಅವರ ನುಡಿಸಾಣಿಕೆಯನ್ನು ಆಲಿಸುತ್ತಿದ್ದರಂತೆ. ತಾವು ಕೇಳಿ ಮನನ ಮಾಡಿ ಕೊಂಡಿದ್ದ ರಾಗಸಂಚಾರಗಳನ್ನು ಏಕಲವ್ಯನಂತೆ ಮನೆಯಲ್ಲಿ ಅಭ್ಯಸಿಸುತ್ತಿದ್ದರಂತೆ.

ಮುಂದೆ ಮೈಸೂರಿನ ಸುಬ್ಬಣ್ಣನವರಲ್ಲಿ ಸಂಗೀತಾಭ್ಯಾಸ. ಬಾಯಿ - ಹಾಡುಗಾರಿಕೆ ಕೆಲವು ಕಾಲ ಅಭ್ಯಸಿಸಿದರು. ಆಗಿನ ಕಾಲಕ್ಕೆ ಸಂಗೀತ ದಿಗ್ಗಜಗಳೆನಿಸಿದ ಮೈಸೂರು ವಾಸುದೇವಾಚಾರ್ಯರು, ಬಿಡಾರಂ ಕೃಷ್ಣಪ್ಪನವರು, ವೀಣೆ ಶೇಷಣ್ಣನವರ ನಿಕಟ ಸಂಪರ್ಕ ಹೊಂದಿದ್ದು ಅವರ ಸಹವಾಸದಲ್ಲಿ ಅರಿಯಾಕುಡಿ, ಚೆಂಬೈ, ವೀಣಾಧನಂ, ದ್ವಾರಂ ಮುಂತಾದವರ

ಸಂಗೀತ ಕಚೇರಿಗಳನ್ನು ಸನಿಹದಲ್ಲೇ ಕುಳಿತು ಕೇಳುವ ಸುಯೋಗ ಒದಗಿ ಅದರಲ್ಲಿ ಪಕ್ವತೆಯನ್ನು ಪಡೆದರು. ಸಂಗೀತದ ಜೊತೆ-ಜೊತೆಗೇ ಸಾಹಿತ್ಯಾಭಿರುಚಿಯನ್ನೂ ರೂಢಿಸಿಕೊಂಡು ಸಾಹಿತ್ಯ-ಸಂಗೀತ ಎರಡರಲ್ಲೂ ಪರಿಣತಿಯನ್ನು ಪಡೆದರು. ಇದಕ್ಕೆ ಅವರ ನೌಕರಿಯೂ ಸಹಾಯವಾಯಿತು.

## ರಾಯರ ಸಂಸಾರ

ಕೃಷ್ಣರಾಯರು ಒಳ್ಳೆಯ ವಾಗ್ಮಿಗಳು. ತಮ್ಮ ಅಭಿಪ್ರಾಯಗಳನ್ನು ಖಂಡ ತುಂಡವಾಗಿ ನಿರೂಪಿಸುತ್ತಿದ್ದವರು. ಆದರೆ ಎಂದೂ ಸಹನೆ, ಸಂಯಮವನ್ನು ಕಳಕೊಂಡವರಲ್ಲ. ಅಕ್ಕ ಜಾನಕಮ್ಮನವರು ರೂಡಿಸಿಕೊಂಡಿದ್ದ ಆದರ್ಶ, ಸಹನೆ ಇವರಿಗೆ ಮೇಲ್ಪಂಕ್ತಿಯಾಗಿತ್ತು. ಸರಳತೆ ನಿರಾಡಂಬರ ಜೀವನ ಇವರ ಹಾಸುಹೊಕ್ಕಾಗಿತ್ತು. ಒಳ್ಳೆಯ ರಸಿಕರು, ಸುಹೃದಯರು, ವಿನೋದಪ್ರಿಯರು.

ಇವರಿಗೆ ಒಂದು ಮಹತ್ವಾಕಾಂಕ್ಷೆ. ದೊಡ್ಡ ವಕೀಲರಾಗಬೇಕೆಂಬುದು. ಇತಿಹಾಸದ ವಿದ್ಯಾರ್ಥಿಯಾಗಿದ್ದವರು. ಪ್ಲೀಡರ್ ಪರೀಕ್ಷೆಗೂ ಕುಳಿತರು. ಆದರೆ ಸಂಸಾರದ ಜಂಜಾಟದಲ್ಲಿ ಆ ಕಡೆ ಪೂರ್ಣಗಮನ ನೀಡಲಾಗದೇ ಅದನ್ನು ಕೈಬಿಟ್ಟರು.

ಸಂಸಾರ ನಿರ್ವಹಣೆಯನ್ನು ಹೊತ್ತ ರಾಯರು ಆ ಕಾಲಕ್ಕೆ ಸ್ವಲ್ಪ ತಡವಾಗಿಯೇ ವಿವಾಹವಾದರೆನ್ನಬಹುದು. ತಮ್ಮ ಇಪ್ಪತ್ತೈದನೇ ವಯಸ್ಸಿನಲ್ಲಿ ಕಮಲಮ್ಮನ ಕೈ ಹಿಡಿದರು. ಸದ್ಗೃಹಿಣಿಯಾಗಿ ಆಕೆ ರಾಯರ ಮನ -ಮನೆ ಬೆಳಗಿದರು. ಇಬ್ಬರು ಹೆಣ್ಣುಮಕ್ಕಳನ್ನು ನೀಡಿದರು. ಆದರೆ ಕ್ಷಯರೋಗಕ್ಕೆ ಬಲಿಯಾದ ಕಮಲಮ್ಮ ಚೇತರಿಸಿಕೊಳ್ಳಲಿಲ್ಲ. ಪತ್ನಿವಿಯೋಗ ರಾಯರ ಮೇಲೆ ತೀವ್ರ ಪರಿಣಾಮ ಬೀರಿತು. ಗಾಯದ ಮೇಲೆ ಬರೆಯೆಳೆದಂತೆ ಅವರ ಹಿಂದೆಯೇ ತಾಯಿ ನಾಮಗಿರಿಯಮ್ಮ ಅಣ್ಣ ಶ್ರೀನಿವಾಸರಾಯರೂ ಕಣ್ಮರೆಯಾದರು. ಅಣ್ಣನ ಸಂಸಾರ ಭಾರವೂ ಇವರ ಮೇಲೇ ಬಿತ್ತು. ಮಕ್ಕಳೂ ಚಿಕ್ಕವರು.

ಸಂಸಾರ ನಿರ್ವಹಣೆಗಾಗಿ ರಾಯರು ಮರುಮದುವೆಯಾದರು. ಎರಡನೇ ಪತ್ನಿ ಶಾಂತಮ್ಮ ಏರುಪೇರಾಗಿದ್ದ ಸಂಸಾರದ ಬಂಡಿಯನ್ನು ನಡೆಸುವಲ್ಲಿ ಯಶಸ್ವಿಯಾದರು. ಆದರೂ ವಿಧಿಯಾಟ ತನ್ನ ಅಟ್ಟಹಾಸವನ್ನು ಮೆರೆಯಿಸಿತು. ಒಂದು ಗಂಡು ಕೂಸಿಗೆ ಜನ್ಮ ನೀಡಿದ ಶಾಂತಮ್ಮ ಪ್ಲೇಗಿಗೆ ತುತ್ತಾದರು. ಕಂಗಾಲಾದ ರಾಯರು ಮಗ 'ಅನಂತು'ವನ್ನು ನೋಡಿ ದುಃಖವನ್ನು ಮರೆಯುತ್ತಿದ್ದರು. ಪಿಟೀಲು ನುಡಿಸುತ್ತಾ ಮನಸ್ಸಿನ ಉಮ್ಮಳವನ್ನು ತೊಡೆಯಲು ಪ್ರಯತ್ನಿಸುತ್ತಿದ್ದರು. ಮಗು ಅನಂತು ತಂದೆಯ ತದ್ರೂಪ. ಆಕಾರ, ಆಚಾರ ಎಲ್ಲದರಲ್ಲಿಯೂ ತಂದೆಯಂತೆ ಮಗ.

ಸಂಗೀತ-ಹಾಡು ಕರಗತ ಮಾಡಿಕೊಂಡು ಎಲ್ಲರ ಕಣ್ಮಣಿಯಾಗಿದ್ದ. ರಾಯರನ್ನು ಅನುಕರಣೆ ಮಾಡುವುದರಲ್ಲಿ ಅವನಿಗೆ ಎಲ್ಲಿಲ್ಲದ ಆನಂದ. ಅವರ ಪಿಟೀಲಿನ ಬಗ್ಗೆ ವಿಶೇಷ ಆಸಕ್ತಿ. ಮತ್ತೆ ಹೆಣ್ಣು ದಿಕ್ಕಿಲ್ಲದ ಮನೆ ಬಿಕೋ ಎನಿಸುತ್ತಿತ್ತು. ಮಕ್ಕಳ ಪೋಷಣೆಗಾಗಿ ಹಿರಿಯರ ಬಲವಂತದಿಂದ ರಾಯರು ಮತ್ತೆ ಲಗ್ನವಾಗಬೇಕಾಯಿತು.

ರಾಯರ ಮೂರನೇ ಪತ್ನಿಯೇ ಸರಸ್ವತೀಬಾಯಿ. ಬೇಲೂರಿನವರು. ಮನೆ ಮಂದಿಗೆಲ್ಲ 'ಸರಸಮ್ಮ'ನಾಗಿ ರಾಯರಿಗೆ 'ಸರಸು'ವಾಗಿ ಮನೆ ತುಂಬಿದರು. ರಾಯರ ಮನೆಯನ್ನು ನಂದಗೋಕುಲವನ್ನಾಗಿಸಿದರು. ರಾಯರೇ ಸಹನಾ ಮೂರ್ತಿಯೆಂದರೆ ಅವರ ದುಪ್ಪಟ್ಟು ಸಂಯಮ ಶೀಲೆ ಸರಸಮ್ಮ. ಇವರಿಗೆ ನಾಲ್ವರು ಗಂಡು-ಮೂವರು ಹೆಣ್ಣು ಮಕ್ಕಳು-ನಾಗರಾಜ, ಶ್ರೀನಿವಾಸ, ರಾಮಚಂದ್ರ ಹಾಗೂ ಮುರಳೀಧರ ಮತ್ತು ಕಮಲಾ, ಶಾಂತಾ ಹಾಗೂ ರತ್ನ.

ಎಲ್ಲರಿಗೂ ಆತ್ಮೀಯರಾಗಿದ್ದ ಕೃಷ್ಣರಾಯರು ಮನೆ ಮಕ್ಕಳಿಗೆ, ನೆರೆಹೊರೆಗೆ ''ಕಿಟ್ಟೂಮಾವ''ನಾದರೆ ಸರಸಮ್ಮ 'ಸರಸೂ ಚಿಕ್ಕಮ್ಮ!' ಸರಸಮ್ಮ ರಾಯರ ಅಭ್ಯುದಯ, ಅಭಿವೃದ್ಧಿಗೆ ಪ್ರೇರಕ ಶಕ್ತಿಯಾದರು.

## ರಾಯರ ಸಾಹಿತ್ಯಾಸಕ್ತಿ

ಕೃಷ್ಣರಾಯರು ಕಾಲೇಜಿನಲ್ಲಿ ಓದುತ್ತಿದ್ದ ಕಾಲದಲ್ಲಿ ಆಚಾರ್ಯ ಬಿ. ಎಂ. ಶ್ರೀಕಂಠಯ್ಯನವರು ಇವರಿಗೆ ಗುರುಗಳಾಗಿದ್ದವರು. ಕಾನಕಾನಹಳ್ಳಿ ವರದಾಚಾರ್ಯರು, ಕರಿಬಸಪ್ಪ ಶಾಸ್ತ್ರಿಗಳು ಗುರುಸ್ಥಾನದಲ್ಲಿದ್ದವರು. ಇವರೆಲ್ಲರಿಗೂ ರಾಯರ ಭಾರತವಾಚನ ಅಚ್ಚುಮೆಚ್ಚು. ಕಾವ್ಯಕ್ಕೆ ಸಂಗೀತ ಲೇಪನ ಹಚ್ಚಿ ಹೃದಯಂಗಮವಾಗಿ ಓದುತ್ತಿದ್ದರು ರಾಯರು. ತಾವು ಕಲಿತ ಸಂಗೀತದ ಪ್ರಭಾವದಿಂದ, ಸಾಹಿತ್ಯಜ್ಞಾನದಿಂದ ಕಾವ್ಯವಾಚನವನ್ನು ತಮ್ಮದೇ ಆದ ಶೈಲಿಯಲ್ಲಿ ವಾಚಿಸುತ್ತಿದ್ದರು. ವರದಾಚಾರ್ಯರ , ಕೊಟ್ಟೂರಪ್ಪನವರ ರಂಗಸಂಗೀತದ ಪ್ರಭಾವವೂ ಇವರ ವಾಚನಕ್ಕೆ ಸಾಕಷ್ಟು ಪುಷ್ಟಿನೀಡಿತ್ತು. ಇವರ ಸಾಹಿತ್ಯಾಸಕ್ತಿಗೆ ಸಾಕಷ್ಟು ಪೋಷಣೆ ದೊರೆಯಿತು.

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಎಂ. ಆರ್. ಶ್ರೀನಿವಾಸ ಮೂರ್ತಿ ಮತ್ತು ಕೃಷ್ಣರಾಯರು ಸ್ವಜನ. ಇಬ್ಬರ ಮನೆ ಮಾತೂ ತೆಲುಗು. ಅಲ್ಲದೆ ಸಮಕಾಲೀನರು. ಇಬ್ಬರದೂ ಸಾಹಿತ್ಯಕಲೆಗಳಲ್ಲಿ ಸಮಾನಾಸಕ್ತಿ. ಎಂ.ಆರ್.ಶ್ರೀಯವರು ಮೈಸೂರಿನಲ್ಲಿದ್ದಾಗ ಭಾರತ ವಾಚನದಲ್ಲಿ ಸಾಕಷ್ಟು ಕೀರ್ತಿಗಳಿಸಿ ''ಭಾರತ ಬಿಂದೂರಾಯರು'' ಎಂದೇ ಖ್ಯಾತರಾಗಿದ್ದ ಸಂ.

ಗೋ. ಬಿಂದೂರಾಯರು ಮೈಸೂರಿನ ಕೃಷ್ಣರಾಜೇಂದ್ರ ಬಟ್ಟೆಗಿರಣಿಯಲ್ಲಿ ಆಡಳಿತಾಧಿಕಾರಿಯಾಗಿದ್ದರು. ಆ ಸಮಯಕ್ಕೆ ಕೃಷ್ಣರಾಯರು ಮಹಾರಾಜಾ ಕಾಲೇಜಿನ ಗ್ರಂಥಪಾಲಕರ ಸೇವೆಯಲ್ಲಿದ್ದರು. ಈ ಹುದ್ದೆ ಇವರಿಗೆ ದೊರೆತಿದ್ದೂ ಒಂದು ಆಕಸ್ಮಿಕವೇ!

ರಾಯರು ಕಾಲೇಜಿನಲ್ಲಿ ಓದುತ್ತಿದ್ದಾಗ್ಗೆ ಪ್ರೊ|| ಸಿ. ಆರ್. ರೆಡ್ಡಿಯವರು ಅಲ್ಲಿನ ಪ್ರಾಂಶುಪಾಲರಾಗಿದ್ದರು. ವಿದ್ಯಾಭ್ಯಾಸ (ಆಗಿನ ಎಫ್. ಎ.) ಮುಗಿದ ಮೇಲೆ ಹುದ್ದೆಗಾಗಿ ರಾಯರು ರೆಡ್ಡಿಯವರನ್ನು ಆಶ್ರಯಿಸಿದಾಗ ಅವರು ತಮಗೆ ''ಸ್ಟೆನೋಟೈಪಿಸ್ಟ್' ಗೊತ್ತಿರುವ ಕೆಲಸಗಾರರು ಬೇಕೆಂದಾಗ ಅದನ್ನು ತಾವು ಕಲಿತಿರುವುದಾಗಿ ರಾಯರು ತಿಳಿಸಿದಾಗ ರೆಡ್ಡಿಯವರು ಅವರಿಗೆ ಆ ಗುಮಾಸ್ತೆ ಹುದ್ದೆಯನ್ನು ನೀಡಿದರು. ಮುಂದೆ ರೆಡ್ಡಿಯವರು ಶಿಕ್ಷಣಾಧಿಕಾರಿಗಳಾಗಿ ಬಡ್ತಿ ಹೊಂದಿದರು. ಅವರ ಗೌರವಾರ್ಥ ಏರ್ಪಡಿಸಿದ ಸತ್ಕಾರ ಕೂಟದಲ್ಲಿ ಕೃಷ್ಣರಾಯರ ಪ್ರಾರ್ಥನೆ. ರಾಯರು ತಮ್ಮ ಕಂಚುಕಂಠ ದಿಂದ ಸುಶ್ರಾವ್ಯವಾಗಿ ತೆಲುಗು ಶ್ಲೋಕವೊಂದನ್ನು ಹಾಡಿದರು. ಸಿ. ಆರ್. ರೆಡ್ಡಿಯವರ ಕಿವಿ ನೆಟ್ಟಗಾಯಿತು.

ಕೃಷ್ಣರಾಯರ ತೆಲುಗು ಉಚ್ಚಾರಣೆಯನ್ನು ಬಹುವಾಗಿ ಪ್ರಶಂಸಿಸಿದ ರೆಡ್ಡಿಯವರು ಅಚ್ಚಕನ್ನಡಿಗನಾಗಿ ಇಷ್ಟು ಸ್ಫುಟವಾಗಿ ತೆಲುಗಿನಲ್ಲಿ ಹಾಡಿದ ವೈಖರಿಯ ಬಗ್ಗೆ ಪ್ರಶ್ನಿಸಿದಾಗ ರಾಯರು ತೆಲುಗು ತಮ್ಮ ಮಾತೃಭಾಷೆಯೆಂದರು. ಸ್ವತಃ ತೆಲುಗಿನವರಾದ ರೆಡ್ಡಿಯವರು ಸಂತುಷ್ಟರಾಗಿ ರಾಯರಿಗೆ ಬಡ್ತಿ ನೀಡಿ ಪುಸಕ್ತಭಂಡಾರಿಯಾಗಿ ನೇಮಿಸಿದರು. ಇದು ಕೃಷ್ಣರಾಯರ ಸಾಹಿತ್ಯಾಭಿವೃದ್ಧಿಗೆ ಅತ್ಯಂತ ಸಹಕಾರಿಯಾಯಿತು.

## ಬಿಂದೂರಾಯರ ಸಂಪರ್ಕ

ಎಂ. ಆರ್. ಶ್ರೀಯವರು ಮೈಸೂರಿನಲ್ಲಿದ್ದಾಗ ಬಿಂದೂರಾಯರನ್ನು ನೋಡುವ ಸಂದರ್ಭವೊಂದು ಬಂತು. ಆದರೆ ಬಿಂದೂರಾಯರ ಪರಿಚಯ ಶ್ರೀಯವರಿಗಿರಲಿಲ್ಲ. ಹೆಸರು ಕೇಳಿದ್ದರಷ್ಟೆ! ಬಿಂದೂರಾಯರ ನಿಕಟವರ್ತಿಗಳಾಗಿದ್ದ ಧೀರೇಂದ್ರದಾಸರೆಂಬುವರು ಶ್ರೀನಿವಾಸಮೂರ್ತಿಗಳಿಗೂ ಪರಿಚಿತರು. ಜೊತೆಗೆ ಸಹಪಾಠಿಗಳು. ಅವರ ಮಧ್ಯಸ್ಥಿಕೆಯಲ್ಲಿ ರಾಯರನ್ನು ಭೇಟಿಮಾಡುವುದೆಂದು ನಿರ್ಧಾರವಾಯಿತು. ಕೃಷ್ಣರಾಯರೂ ಅಲ್ಲಿಯ ತನಕ ಬಿಂದೂರಾಯರನ್ನು ಭೇಟಿಯಾಗಿರಲಿಲ್ಲ. ಹಾಗಾಗಿ ಎಂ.ಆರ್.ಶ್ರೀ ಅವರ ಜೊತೆ ಕೃಷ್ಣರಾಯರೂ ಬಿಂದೂರಾಯರ ಭೇಟಿಗಾಗಿ ಹೊರಟರು. ಕೃಷ್ಣರಾಯರಿಗೂ ಬಿಂದೂರಾಯರ ಪರಿಚಯವಾಯಿತು.

ಒಂದು ಸಂಜೆ ಬಿಂದೂರಾಯರು, ಧೀರೇಂದ್ರದಾಸರು ಮೈಸೂರಿನಲ್ಲಿರುವ ಈದಿಗದ ಕಡೆ ವಿಹಾರಾರ್ಥ ಹೊರಟಿದ್ದರು. ಜೊತೆಯಲ್ಲಿ ಎಂ. ಆರ್. ಶ್ರೀ ಮತ್ತು ಕೃಷ್ಣರಾಯರೂ ಇದ್ದರು. ಒಂದು ಪ್ರಶಾಂತ ಸ್ಥಳದಲ್ಲಿ ನಾಲ್ವರೂ ಕುಳಿತರು. ಲೋಕಾಭಿರಾಮವಾಗಿ ಪ್ರಾರಂಭವಾದ ಮಾತುಕತೆ ಮುಂದೆ ದೇವರ ನಾಮ-ಭರತವಾಚನಗಳ ಕಡೆಗೆ ತಿರುಗಿತು. ಧೀರೇಂದ್ರದಾಸರು ತಮಗೆ ಮೈಸೂರಿನಲ್ಲಿ ಎರಡು ಆಕರ್ಷಣೆಗಳು-ಒಂದು ಬಿಂದೂರಾಯರ ಭಾರತವಾಚನ ಮತ್ತೊಂದು ನರಸಿಂಹದಾಸರ ದೇವರ ನಾಮಗಳು ಎಂದರು.

ಇದೇ ಸಮಯಕ್ಕಾಗಿ ಕಾಯುತ್ತಿದ್ದ ಎಂ. ಆರ್. ಶ್ರೀಯವರು ಬಿಂದೂರಾಯರ ಭಾರತವಾಚನ ಕೇಳುವ ಬಯಕೆ ವ್ಯಕ್ತಪಡಿಸಿದರು. ಇದು ಬಹಳ ದಿನಗಳ ಆಸೆಯೆಂದೂ ಈ ದಿನ ಅದನ್ನು ನಮಗೆ ಕೇಳಿಸಿದರೆ ನಾವು ಸುಕೃತರಾಗುವೆವೆಂದೂ ಪ್ರಾರ್ಥಿಸಿದರು.

ಬಿಂದೂರಾಯರೂ ಸಹ ಹೆಚ್ಚು ಬಲವಂತಕ್ಕೆ ಒಳಪಡದೆ ವಾಚನವನ್ನು ಪ್ರಾರಂಭಿಸಿಯೇ ಬಿಟ್ಟರು. ಅವರ ನೆನಪಿನಾಳವೇ ಭಾರತ ಪುಸ್ತಕವಾಯಿತು. ಅರಣ್ಯಪರ್ವದಲ್ಲಿನ 'ಪಾಶುಪತಾಸ್ತ್ರ' ಭಾಗದ ಪದ್ಯಗಳು ಪುಂಖಾನು ಪುಂಖವಾಗಿ ಅವರ ಬಾಯಿಂದ ಹೊರಟಿತು. *'ಎಲೆ ಕಿರಾತಮದೀಯ ಬಾಣದ। ಬಲೆಗೆ ನೀ ಮೃಗವಾಗದಿರು ನಿ । ನ್ನಳವ ಮೆರೆಯೈ ಬನದ ನರಿ ಮೊಲ ಹುಲ್ಲೆಹರಿಣನಲಿ'*... ಎಂದು ಪ್ರಾರಂಭವಾದ ವಾಚನ ಸುಮಾರು ೬೦-೭೦ ನಿಮಿಷಗಳವರೆಗೆ ಯಾವ ಅಡೆತಡೆಯೂ ಇಲ್ಲದೆ ಸಾಗಿತು. ಯಾರಿಗೂ ಸಮಯದ ಪರಿವೆಯೇ ಇಲ್ಲದಂತಾಗಿತ್ತು. ಶ್ರೋತೃಗಳು ಆ ಗಾಯನ ಸೌರಭದಲ್ಲಿ ಮುಳುಗಿದ್ದರೆ ರಾಯರು ಭಾವೋದ್ರೇಕ ದಿಂದ ಹಾಡುತ್ತಿದ್ದರು. ಕೃಷ್ಣರಾಯರಂತೂ ಭಾವ ಸಮಾಧಿಯಲ್ಲಿ ಮೈಮರೆತಿದ್ದರು. ಅಂದೇ ಬಿಂದೂರಾಯರನ್ನು ಮಾನಸಿಕವಾಗಿ ತಮ್ಮ ಗುರುವೆಂದು ಸ್ವೀಕರಿಸಿ ಪೂಜ್ಯಭಾವನೆಯಿಂದ ಕಂಡರು. ಅಂದು ಬೇರು ಬಿಟ್ಟ ಗುರು-ಶಿಷ್ಯಸಂಬಂಧ ಕೊನೆಯ ತನಕವೂ ಅನೂಚಾನ ವಾಗಿ ಉಳಿದು ಬಿಡಿಸಲಾಗದ ಬೆಸುಗೆ ಹಾಕಿತ್ತು.

## ಜನವೇ? ಜಗವೇ?

ಬಿಂದೂರಾಯರ ಶಿಷ್ಯೆ ಗಮಕ ವಿದುಷಿ ಶಕುಂತಲಾಬಾಯಿ ಹಾಗೂ ಅವರ ಪತಿ ಬಿ. ಶ್ರೀ. ಪಾಂಡುರಂಗರಾಯರು ೧೯೫೫ರಲ್ಲಿ ಬೆಂಗಳೂರಿನ

ತಮ್ಮ ಮಕ್ಕಳ ಮಂಟಪಕ್ಕೆ ಬಿಂದೂರಾಯರನ್ನು, ಕೃಷ್ಣರಾಯರನ್ನು ಬರಮಾಡಿಕೊಂಡು ಬಿಂದೂರಾಯರ ಅಧ್ಯಕ್ಷತೆಯಲ್ಲಿ ಕೃಷ್ಣರಾಯರಿಗೆ ಸತ್ಕಾರ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಕೃಷ್ಣರಾಯರ ಶಿಷ್ಯ ವೃಂದ, ಅಭಿಮಾನಿಗಳ ಮಹಾಪೂರವೇ ಅಲ್ಲಿ ಹರಿದಿತ್ತು. ಅವರೆಲ್ಲರೆದುರಿಗೆ ಅಂದು ಕೃಷ್ಣರಾಯರು ಬಹಿರಂಗವಾಗಿ ಬಿಂದೂರಾಯರು ತಮ್ಮ ಗುರುಗಳೆಂದು ಘೋಷಿಸಿದರಂತೆ. ರಾಯರೂ ತಮಗೆ ಇಂಥ ಶಿಷ್ಯ ದೊರೆಕಿದ್ದಕ್ಕೆ ಉಬ್ಬಿ ಹೋದರಂತೆ. ಇದನ್ನು ಪಾಂಡುರಂಗರಾಯರು ತಮ್ಮ 'ಗಮಕ ಭಗೀರಥರು' ಪುಸ್ತಕದಲ್ಲಿ ಉಲ್ಲೇಖಿಸಿದ್ದಾರೆ.

ಇದಾದ ಒಂದೇ ವಾರಕ್ಕೆ ಪ್ರಸಿದ್ಧ ಕತೆಗಾರರೂ-ಸಾಹಿತಿಗಳೂ ಆಗಿದ್ದ ಕೆ. ಗೋಪಾಲ ಕೃಷ್ಣರಾಯರು ಬಿಂದೂರಾಯರನ್ನು ತಮ್ಮ ಮನೆಗೆ ಆಹ್ವಾನಿಸಿದ್ದರು. ಅಂದು ಅವರ ಸಮ್ಮುಖದಲ್ಲಿ ಕೃಷ್ಣರಾಯರ ವಾಚನ. ಕೃಷ್ಣರಾಯರು ಮಂಗಳಾಚರಣ ಪದ್ಯ ''ಶ್ರೀವನಿತೆಯರಸನೆ' ಯಿಂದ ಪ್ರಾರಂಭಿಸಿದರು. ಕೊನೆಯ ಸಾಲನ್ನು 'ಕಾವುದಾನತ ಜನವ ಗದುಗಿನ ವೀರನಾರಯಣ' ಎಂದು ಹಾಡಿದರು. ಅಷ್ಟೊತ್ತಿಗಾಗಲೇ ಬಿಂದೂರಾಯರ ಮುಖ ಸಿಟ್ಟಿನಿಂದ ಕೆಂಪಗಾಗಿತ್ತು. ಬಿಂದೂರಾಯರು ಕೃಷ್ಣರಾಯರಂತೆ ಸಂಯಮಿಗಳಲ್ಲ ಮಹಾಮುಂಗೋಪ ಸ್ವಭಾವದವರು. ಅಲ್ಲೆ ಎಲ್ಲರೆದುರಿಗೇ ರಾಯರನ್ನು ಜರೆದು 'ಏನಪ್ಪ ಬಹಿರಂಗವಾಗಿ ನನ್ನನ್ನು ಗುರುಗಳೆಂದು ಒಪ್ಪಿಕೊಂಡ ನೀವು ಪದ್ಯವನ್ನು ಹೀಗೆ ತಪ್ಪು ತಪ್ಪಾಗಿ ಓದುತ್ತೀರಲ್ಲ' ಎಂದು ಘರ್ಜಿಸಿದರು. ಇನ್ನೊಮ್ಮೆ ಸರಿಯಾಗಿ ಓದಿ ಎಂದೂ ಆಜ್ಞಾಪಿಸಿದರು. ಕೃಷ್ಣರಾಯರು ಬಹಳ ಎಚ್ಚರಿಕೆಯಿಂದ ಓದಿ ಮತ್ತೆ ಕಾವುದಾನತ ಜನವ ಎಂದೇ ಓದಿದರು. ಬಿಂದೂರಾಯರು ಹಲ್ಲುಮುಡಿ ಕಚ್ಚುತ್ತಾ ಅದು 'ಜನವ' ಅಲ್ಲ 'ಜಗವ' ಎಂದು ಓದಿ ಅಂತ ಕಿರುಚಿದರಂತೆ. ಆದರೆ ಪರಿಷ್ಕೃತ ಆವೃತ್ತಿಯಲ್ಲಿ ಇದು 'ಜನವ' ಎಂದಿರುವುದನ್ನು ಬಿಂದೂರಾಯರು ಸುತರಾಂ ಒಪ್ಪುತ್ತಿರಲಿಲ್ಲ. ಜನವ-ಜಗವ ಎರಡೂ ಸರಿ ಎನ್ನುವ ವಿದ್ವಾಂಸರೂ ಇದ್ದಾರೆ. ಅಂದೇನೊ ಕೃಷ್ಣರಾಯರು 'ಜಗವ' ಎಂದು ತಿದ್ದಿಕೊಂಡೇ ಓದಿದರೂ ಈ ಶಬ್ದಪ್ರಯೋಗದಲ್ಲಿ ಅವರಿಗೆ ತಪ್ಪೇನೂ ಕಾಣಿಸಲಿಲ್ಲ. ಆದರೂ ಯಾವ ಜಿಜ್ಞಾಸೆಗೂ ದಾರಿಯಾಗದಂತೆ ಚಾಕಚಕ್ಯತೆಯಿಂದ ಮೊದಲು 'ಕಾವುದಾನತ ಜಗವ' ಎಂದು ಓದಿ ಮತ್ತೆ 'ಜನವ' ಎಂದು ಪುನರಾವರ್ತಿಸುವ ಹವ್ಯಾಸವನ್ನಿಟ್ಟುಕೊಂಡರು. ಈಗಲೂ ಕೃಷ್ಣರಾಯರ ಶಿಷ್ಯಪರಂಪರೆಯಲ್ಲಿ ಈ ಸಂಪ್ರದಾಯ ಬೆಳೆದು ಬಂದಿರುವುದು ಗಮನಾರ್ಹ.

## ಕುವೆಂಪು-ಕೃಷ್ಣರಾಯರು

ವಿದ್ಯಾರ್ಥಿಯಾದಾಗಿನಿಂದಲೂ ಕೃಷ್ಣರಾಯರಲ್ಲಿ ಸ್ನೇಹ-ವಿಶ್ವಾಸವನ್ನು ಬೆಳೆಸಿಕೊಂಡಿದ್ದ ವ್ಯಕ್ತಿಗಳಲ್ಲಿ ರಾಷ್ಟ್ರಕವಿ ಕುವೆಂಪು (ಡಾ|| ಕೆ. ವಿ. ಪುಟ್ಟಪ್ಪನವರು) ಒಬ್ಬರು. ರಾಯರ ವಾಚನದ ವೈಖರಿಗೆ ಮಾರು ಹೋದದ್ದೇ ಅಲ್ಲದೆ ಅವರ ವಾಚನದ ಶೈಲಿಯನ್ನು 'ಹಾಡಿದನು ಗಮಕಿ' ಎಂಬ ತಮ್ಮ ಕವನದಲ್ಲಿ ರಸವತ್ತಾಗಿ ನಿರೂಪಿಸಿದ್ದಾರೆ. ಕೃಷ್ಣರಾಯರಿಗೂ ಪುಟ್ಟಪ್ಪನವರನ್ನು ಕಂಡರೆ ಅಮಿತ ವಿಶ್ವಾಸ ಪ್ರೇಮ. ಬಾಯಿ ತುಂಬಾ 'ನಮ್ಮ ಪುಟ್ಟಪ್ಪ' ಎಂದೇ ಕರೆಯುತ್ತಿದ್ದರು. ಅವರ ಸ್ನೇಹ ವಿಶ್ವಾಸ ಕೊನೆಯ ತನಕ ಅಚ್ಚಳಿಯದೆ ನಿಂತಿತ್ತು.

ಕುವೆಂಪುರವರು ಸರಳರಗಳೆಯಲ್ಲಿ 'ಚಿತ್ರಾಂಗದಾ' ಎಂಬ ಕಾವ್ಯ ರಚನೆ ಮಾಡಿದರು. ಇನ್ನೂ ಹಸ್ತಪ್ರತಿಯಲ್ಲಿರುವಾಗಲೇ ಇದನ್ನು ಕೃಷ್ಣರಾಯರ ಬಾಯಿಂದ ವಾಚಿಸಿ ಕೇಳಬೇಕೆಂಬ ಬಯಕೆ ಅವರಲ್ಲಿ ಉಂಟಾಯಿತು. ಕೃಷ್ಣರಾಯರಿದ್ದಿದ್ದು ದೂರದ ಕೃಷ್ಣಮೂರ್ತಿಪುರದಲ್ಲಿ. ಇವರ ಮನೆ ಒಂಟಿಕೊಪ್ಪಲಿ (ಈಗಿನ ವಾಣೀವಿಲಾಸ)ನಲ್ಲಿ. ತಮ್ಮ ಮನೆ 'ಉದಯರವಿ' ಯಲ್ಲಿ ರಾಯರ ವಾಚನ ಏರ್ಪಡಿಸಿದರು. ಪ್ರೊ|| ಟಿ. ಎಸ್. ವೆಂಕಣ್ಣಯ್ಯ ನವರು ವಿಶೇಷ ಆಹ್ವಾನಿತರು. ಅವರೂ ಕೃಷ್ಣರಾಯರ ನೆರೆಯಲ್ಲೇ ಇದ್ದವರು. ಇಬ್ಬರೂ ಉದಯರವಿಗೆ ಬಂದರು. ವಾಚನ ಸಾಗಿತು, ಸುಮಾರು ೬ ಘಂಟೆಯ ಹೊತ್ತಿಗೆ ಕಥೆಯ ಅರ್ಧಭಾಗ ಮುಗಿದಿತ್ತು. ವೆಂಕಣ್ಣಯ್ಯನವರಿಗೆ ಪೂರ್ಣ ವಾಗಿ ಕೇಳುವ ಹಂಬಲ. ತಡವಾದರೂ ಚಿಂತೆಯಿಲ್ಲವೆಂಬಂತೆ ರಾಯರನ್ನು ವಾಚನ ಮುಂದುವರಿಸು ವಂತೆ ಕೋರಿದರು. ತಮ್ಮ ಪಟ್ಟಶಿಷ್ಯ ಕುವೆಂಪುವಿನ ಕಾವ್ಯದ ರಸಾಸ್ವಾದನೆ ಯನ್ನು ಮಾಡಿದರು. ಕುವೆಂಪುವಿನ ಸಾಹಿತ್ಯ ಕೃಷ್ಣರಾಯರ ರಸಪೂರಿತ ಗಾಯನ 'ಕರ್ಣರಸಾಯನ'ವಾಯಿತು. ಚಿತ್ರಾಂಗದಾ ವಾಚನದ ಮೂಲಕ ರಾಯರು ಸರಳರಗಳೆಯೂ ಆ ರೀತಿಯ ವಾಚನಕ್ಕೆ ಒಪ್ಪುತ್ತದೆಯೆಂದು ತೋರಿಸಿಕೊಟ್ಟರು.

ಅಂತೆಯೇ ಅವರ 'ರಾಮಾಯಣದರ್ಶನಂ' (ಮಹಾಛಂದಸ್ಸು) ಕಾವ್ಯವನ್ನು ಸಹ ವಾಚನಮಾಡಿ ಅದೂ ಗಮಕಕ್ಕೆ ಒಗ್ಗುತ್ತದೆಂಬುದನ್ನು ರುಜುವಾತು ಪಡಿಸಿದರು ಕೃಷ್ಣರಾಯರು.

## ಬಿ.ಎಂ.ಶ್ರೀ ಪ್ರಶಂಸೆ

ಒಮ್ಮೆ ಪುಟ್ಟಪ್ಪನವರು ತಮ್ಮ ಹುಟ್ಟೂರಾದ ಕುಪ್ಪಳ್ಳಿಯಲ್ಲಿ ಸ್ವಾಮಿ ವಿವೇಕಾನಂದರ ಜಯಂತಿಯನ್ನು ಆಚರಿಸಿದರು. ಈ ಉತ್ಸವಕ್ಕೆ ಬಿ.ಎಂ.ಶ್ರೀ,

ಟಿ. ಎಸ್. ವೆಂಕಣ್ಣಯ್ಯ, ನಾ, ಕಸ್ತೂರಿ ಹಾಗೂ ಕೃಷ್ಣರಾಯರು ಅತಿಥಿಗಳಾಗಿ ಆಹ್ವಾನಿಸಲ್ಪಟ್ಟಿದ್ದರು. ಕುಪ್ಪಳ್ಳಿಗೆ ಹೋಗುವ ಮುನ್ನ ಸಮೀಪದ ದೇವಂಗಿಯಲ್ಲಿ, ಪುಟ್ಟಪ್ಪನವರ ಮಾವ ರಾಮೇಗೌಡರ ಮನೆಯಲ್ಲಿ ತಂಗಿದ್ದರು.

ದೇವಂಗಿಯ ಪ್ರಕೃತಿ ಸೌಂದರ್ಯದ ವೀಕ್ಷಣೆಗೆ ಬಿ. ಎಂ. ಶ್ರೀಯವರೂ ಕೃಷ್ಣರಾಯರೂ ಹೋಗುತ್ತಿದ್ದಾಗ ಶ್ರೀಯವರು ರಾಯರನ್ನು ಕುರಿತು ಭಾರತದಲ್ಲಿನ ರಸವತ್ತಾದ ಭಾಗ ಹಾಗು ಅವರಿಗಿಷ್ಟವಾದ ಪ್ರಸಂಗ ಯಾವುದು ಎಂದು ಪ್ರಶ್ನಿಸಿದರಂತೆ. ರಾಯರೂ ಅದಕ್ಕೆ ಹಲವಾರು ನಿದರ್ಶನಗಳೊಂದಿಗೆ ಸೂಕ್ತ ಉತ್ತರ ನೀಡಿದರಂತೆ. ಆಗ ಶ್ರೀಯವರು 'ಕೃಷ್ಣರಾಯರೇ ಇದುವರೆಗೂ ನಾನು ಎಷ್ಟೋ ಗಮಕಿಗಳ ವಾಚನಗಳನ್ನು ಕೇಳಿದ್ದೇನೆ. ಆದರೆ ಅದು ನಿಮಗೆ ಸಿದ್ಧಿಸಿದ ಹಾಗೆ ಯಾರಿಗೂ ಸಿದ್ಧಿಸಿಲ್ಲ' ಎಂದು ತಮ್ಮ ಭಾವನೆಯನ್ನು ವ್ಯಕ್ತಪಡಿಸಿದರಂತೆ. ಇದಕ್ಕಾಗಿ ತುಂಬು ಕೃತಜ್ಞತೆ ಸೂಚಿಸಿದ ರಾಯರು ಮುಂದೆ ಈ ವಿಷಯವನ್ನು ವೆಂಕಣ್ಣಯ್ಯನವರ ಕಿವಿಗೆ ಈ ವಿಷಯವನ್ನು ಹಾಕಿದಾಗ 'ಆತ ಮನಬಿಚ್ಚಿ ಮಾತನಾಡುವ ಸ್ವಭಾವದವರೇ ಅಲ್ಲ. ಅದು ನಿಮ್ಮ ಅದೃಷ್ಟ, ಅಷ್ಟೇ ಅಲ್ಲ, ಅನುಗ್ರಹ ಕೂಡ' ಎಂದು ಉದ್ಗರಿಸಿದರಂತೆ.

## ರಾಯರ ವಾಚನದ ವೈಖರಿ

ಕೃಷ್ಣರಾಯರು ಕೇವಲ ಗಮಕಿಗಳೇ ಆಗಿರದೆ ಉತ್ತಮ ವ್ಯಾಖ್ಯಾನ ಕಾರರೂ ಆಗಿದ್ದರು. ತಮ್ಮ ವಾಚನಕ್ಕೆ ತಾವೇ ವ್ಯಾಖ್ಯಾನಿಸುವ ಪರಿಪಾಠ ವನ್ನಿಟ್ಟುಕೊಂಡಿದ್ದರು. ಹಾಡಿಕೆಯಲ್ಲಿ ಅವರು ಬಳಸುತ್ತಿದ್ದ ರಾಗಗಳೆಲ್ಲವೂ ಘನರಾಗಗಳೇ. ಸಾಹಿತ್ಯದ ಭಾವಗಳು ಸಂಗೀತದ ಸೂಕ್ತ ರಾಗಗಳಲ್ಲಿ ಮಿಂಚಿ ರಸಿಕರನ್ನು ರಂಜಿಸುತ್ತಿತ್ತು.

'ಋಷಿಯಂತೆ ಸರಳ ಜೀವಿಯಾಗಿ, ಸಂಯಮಧನನಾಗಿ, ವ್ಯಾಸಂಗರೂಪದ ತಪಸ್ಸಿನಲ್ಲಿ ಮಗ್ನನಾಗಿ, ಕಾವ್ಯಯೋಗವನ್ನ ಸಾಧಿಸಿ ಪ್ರೇಯಸ್ಸಿಗಿಂತ ಶ್ರೇಯಸ್ಸಿಗೇ ಹೆಚ್ಚಾಗಿ ಗಮನಕೊಟ್ಟು, ತನ್ನ ಕಾವ್ಯ ಯೋಗ ದಿಂದಲೂ, ತನ್ನ ಸಾತ್ವಿಕ ಜೀವನದಿಂದಲೂ ಮಾಧುರ್ಯವನ್ನ, ತೇಜಸ್ಸನ್ನು ಹರಡುವವನಾವನೋ ಅವನು ರಸ ಋಷಿ; ಅವನ ವಾಣಿ ಅಮರವಾಣಿ' ಎಂಬ ಪ್ರೊ॥ ಸಿ. ಕೆ. ವೆಂಕಟರಾಮಯ್ಯನವರ ನುಡಿ ಕೃಷ್ಣರಾಯರಿಗೆ ಸಂಪೂರ್ಣ ಅನ್ವಯ.

ತಮ್ಮ ಗ್ರಂಥಪಾಲನ ಹುದ್ದೆಯನ್ನು ತಮ್ಮ ಗಮಕಕಲಾಪೋಷಣೆಗೆ ಸಂಪೂರ್ಣವಾಗಿ ಬಳಸಿಕೊಂಡ ರಾಯರು ಅಲ್ಲಿನ ಸಮಸ್ತ ಗ್ರಂಥಗಳ ಅಧ್ಯಯನ ನಡೆಸಿದರು. ಆಂಗ್ಲ, ಕನ್ನಡ, ತೆಲುಗು, ಸಂಸ್ಕೃತಗಳಲ್ಲಿ ಪ್ರೌಢಿಮೆಯನ್ನ ಸಾಧಿಸಿದರು. ಕನ್ನಡದಷ್ಟೇ ಪ್ರೌಢಿಮೆಯನ್ನು ಆಂಗ್ಲ ಭಾಷೆಯಲ್ಲೂ ಸಾಧಿಸಿದರು. ಅವರ ವ್ಯಾಖ್ಯಾನದಲ್ಲಿ ಭಾಷೆಗಳ ಬಳಕೆ ಆಂಗ್ಲ ಕವಿಗಳ ಸಾಹಿತ್ಯದ ತುಲನಾತ್ಮಕ ವಿವರಣೆ ಪುಂಖಾನುಪುಂಖವಾಗಿ ನಿರರ್ಗಳವಾಗಿ ಹೊಮ್ಮುತ್ತಿತ್ತು. ಆದರೆ ಕಾವ್ಯಭಾಗಕ್ಕೆ ರಸಪೋಷಣೆಗೆ ಎಂದೂ ಭಂಗವುಂಟಾಗುತ್ತಿರಲ್ಲಿಲ್ಲ. ಶಾರದೆ ಇವರ ನಾಲಿಗೆಯ ಮೇಲೆ 'ನಲಿದೊಲಿದು ನರ್ತಿಸುತ್ತಿದ್ದಳು'.

## ಭಾರತದ ಕೃಷ್ಣರಾಯರಾದದ್ದು

ಶ್ರೀಮದುತ್ತರಾದೀ ಮಠಾಧೀಶರಾಗಿದ್ದ ಶ್ರೀ ಶ್ರೀ ಸತ್ಯಧ್ಯಾನ ತೀರ್ಥ ಶ್ರೀಪಾದಂಗಳವರು ತಿರುಪತಿಯಲ್ಲಿ ಏರ್ಪಡಿಸಿದ್ದ ವಿದ್ವತ್ಸಭೆಗೆ ಕೃಷ್ಣರಾಯರನ್ನು ಆಹ್ವಾನಿಸಿದ್ದರು. ಕೃಷ್ಣರಾಯರ ವಾಚನವೆಂದರೆ ಅವರಿಗೆ ಕೇಳಲು ಅಮಿತೋತ್ಸಾಹ. ಅಲ್ಲಿನ ಎಲ್ಲಾ ವಿದ್ವಜ್ಜನರ ಮುಂದೆ ಹೆಮ್ಮೆಯಿಂದ ಶ್ರೀಗಳವರು 'ಇವನು ನಮ್ಮ ಹೆಮ್ಮೆಯ ಪುರಾಣಿಕ. ಈ ಹಿಂದೆ ಎಂದೂ ಇಂಥ ಒಂದು ಭಾರತ ವಾಚನವನ್ನು ನೀವು ಕೇಳಿರಲಿಕ್ಕಿಲ್ಲ. ಈತ ಕೇವಲ ಕೃಷ್ಣಗಿರಿ ಕೃಷ್ಣರಾಯನಲ್ಲ ಈತ ನಮ್ಮ 'ಭಾರತದ ಕೃಷ್ಣರಾಯ' ಎಂದೇ ಪರಿಚಯಿಸುತ್ತಿದ್ದರಂತೆ. ಶ್ರೀಗಳವರ ಬಾಯಿಂದ ಹೊರಟ ಈ ಮಾತು ಶಾಶ್ವತವಾಗಿ ನಿಂತು ಅವರು 'ಭಾರತದ ಕೃಷ್ಣರಾಯರು' ಎಂದೇ ಖ್ಯಾತ ರಾದರು. ಉದ್ಯೋಗ ಪರ್ವದಲ್ಲಿ ಬರುವ ಸಂಧಾನಪೂರ್ವದ ಪಾಂಡವರ ಅಭಿಪ್ರಾಯದ ಭಾಗವನ್ನು ಅಂದು ಕೃಷ್ಣರಾಯರು ಅಲ್ಲಿ ವಾಚನಕ್ಕೆ ಅಳವಡಿಸಿಕೊಂಡಿದ್ದರು. ಸಂಧಿಗೆ ಸಿದ್ಧರಾದ ತನ್ನ ಪತಿಗಳನ್ನು ಕುರಿತು ದ್ರೌಪದಿ 'ಯತಿಗಳಾದಿರಿ ನೀವು ರೋಷಚ್ಯುತರಲೇ ಬಳಿಕೇನು' ಎಂಬ ಪದ್ಯವನ್ನು ಹಾಡುತ್ತಾ ಶ್ರೀಗಳವರ ಕಡೆ ಬೆಟ್ಟು ಮಾಡಿ ಹಾವಭಾವ ಪ್ರದರ್ಶಿಸಿದಾಗ ಅವರು 'ಏನಂತ ತಿಳಿದಿ ನನ್ನ? ಸಮಯ ಬಂತಂದ್ರೆ ಈಗಲೂ ಈ ಕಾವಿಶಾಟಿ ಕಿತ್ತು ಕತ್ತಿ ಹಿಡಿದೇನು' ಎಂದು ಸಲಿಗೆಯಿಂದ ನುಡಿದರಂತೆ. ಇದನ್ನು ಆಗಾಗ್ಗೆ ನಮ್ಮ ತಂದೆಯವರ ಮುಂದೇ ಹೇಳುತ್ತಿದ್ದರು ರಾಯರು.

## ಅನಂತುವಿನ ಅಂತ್ಯ

ತಿರುಪತಿಯಿಂದ ಹಿಂತಿರುಗಿದ ರಾಯರಿಗೆ ಮನೆಯಲ್ಲಿ ಆಘಾತವೇ ಕಾದಿತ್ತು. ತಮ್ಮ ಪ್ರೀತಿಯ ಮಗ ಅನಂತು (ಪುಟ್ಟಕಿಟ್ಟಿ) ಪ್ಲೇಗಿಗೆ ತುತ್ತಾಗಿ

ಮರಣಾವಸ್ಥೆಯಲ್ಲಿದ್ದ. ರಾಯರು ಅನಂತುವಿನ ಬಳಿ ಕುಳಿತು ಅವನ ಹಣೆ ನೇವರಿಸಿದಾಗ ಆ ಹಿತಸ್ಪರ್ಶದಿಂದ ಎಚ್ಚರಗೊಂಡ ಅನಂತು 'ಬಂದೆಯಾ ಕಿಟ್ಟೂ ಮಾವ' ಎಂದು ತೊದಲುತ್ತಾ ಪಿಟೀಲು ನುಡಿಸುವಂತೆ ಕೇಳಿದನಂತೆ. ಅವರು ಪಿಟೀಲು ನುಡಿಸುತ್ತಿರುವಂತೇ ಅನಂತು ದಿಗಂತದಲ್ಲಿ ಲೀನವಾಗಿ ಬಿಟ್ಟ. ಈ ದುಃಖದಿಂದ ಚೇತರಿಸಿಕೊಳ್ಳಲಾಗದ ಕೃಷ್ಣರಾಯರು ಪಿಟೀಲನ್ನು ಬಿಟ್ಟರು. ಗಮಕದ ಕಡೆ ಹೆಚ್ಚು ಸಮಯ ತೊಡಗಿಸಿ ಗಮಕ ಕಲಾತಪಸ್ವಿಯೇ ಆದರು. ಅದರಲ್ಲಿ ಅಪಾರಸಿದ್ಧಿಯನ್ನು ಪಡೆದರು.

## ಗೋವಿಂದ ಪೈಗಳ ಸಮ್ಮುಖದಲ್ಲಿ

ರಾಷ್ಟ್ರಕವಿ ಮಂಜೇಶ್ವರ ಗೋವಿಂದ ಪೈಗಳು ಕೃಷ್ಣರಾಯರ ಅಭಿಮಾನಿಗಳಲ್ಲೊಬ್ಬರು. ರಾಯರ ವಾಚನವೆಂದರೆ ಅವರಿಗೆ ಎಲ್ಲಿಲ್ಲದ ವ್ಯಾಮೋಹ. ರಾಯರನ್ನು ಅನೇಕ ಬಾರಿ ಮಂಜೇಶ್ವರಕ್ಕೆ ಬರಮಾಡಿಕೊಂಡು ತಮ್ಮ ಮನೆಯಲ್ಲಿ, ಅಲ್ಲಿನ ಅನಂತೇಶ್ವರನ ಸನ್ನಿಧಿಯಲ್ಲಿ ವಾಚನ ಕಾರ್ಯಕ್ರಮಗಳನ್ನೇರ್ಪಡಿಸಿದ್ದಾರೆ. ಕುಮಾರವ್ಯಾಸ, ನರಹರಿ, ಮುದ್ದಣ, ರನ್ನ, ಪಂಪರ ಕಾವ್ಯಧಾರೆಯನ್ನೇ ಹರಿಸಿದ್ದಾರೆ ಇಲ್ಲಿ ರಾಯರು. ಜೊತೆಯಲ್ಲಿ ತಮ್ಮ ಅನೇಕ ಶಿಷ್ಯರನ್ನು ಕರೆದೊಯ್ದು ಅವರಿಗೂ ಉತ್ತೇಜನ ನೀಡಿದ್ದಾರೆ.

ಇದರಿಂದಾಗಿ ರಾಯರ-ಪೈಗಳ ಸ್ನೇಹ ಗಾಢವಾಗಿ ಬೆಳೆದು ಅವರನ್ನು ತೀರ ಸನಿಹಕ್ಕೆ ತಂದು ಬೆಸೆಯಿತು. ಸಾಮಾನ್ಯವಾಗಿ ಎಲ್ಲೂ ಹೋಗದ ಯಾರೊಡನೆಯೂ ಹೆಚ್ಚು ಬೆರೆಯದ ಗೋವಿಂದ ಪೈಗಳು ಮೈಸೂರಿಗೆ ಹೋಗಿ ಪ್ರಿಯಮಿತ್ರ ರಾಯರ ಕೃಷ್ಣಕೃಪ-ಕುಮಾರವ್ಯಾಸ ಗುರುಕುಲಕ್ಕೆ ಸೌಹಾರ್ದಭೇಟಿಯನ್ನಿತ್ತರು. ಮಂಜೇಶ್ವರದ ಅನಂತೇಶ್ವರನ ಸನ್ನಿಧಿಯಲ್ಲಿ ಕೃಷ್ಣರಾಯರು ಗೋವಿಂದ ಪೈಯವರ 'ಹೆಬ್ಬೆರಳು ಕೃತಿಯನ್ನ ವಾಚನ ಮಾಡಿದ್ದಾರೆ. ತಮ್ಮ ವ್ಯಾಖ್ಯಾನಿಕೆಯ ಪಾಂಡಿತ್ಯದಿಂದ ಗೋವಿಂದ ಪೈಯವರಿಗೇ ಕಗ್ಗಂಟಾಗಿದ್ದಂಥ ಕೆಲವು ಶಬ್ದಗಳಿಗೆ (ಉದಾ : ಮೆಟ್ರಿ-ಲೋಂಚನ) ವಿವರವಾಗಿ ಅರ್ಥೈಸಿದರಂತೆ. ತಮ್ಮ ಶಬ್ದಭಂಡಾರದಿಂದ ನುಣುಚಿಕೊಂಡಿದ್ದ ಈ ಪದಗಳಿಗೆ ವಿವರಣೆ ದೊರೆತದ್ದು ಪೈಯವರಿಗೆ ನಿಧಿ ದೊರೆತಷ್ಟು ಸಂತೋಷವಾಯಿತಂತೆ.

ಗೋವಿಂದ ಪೈಯವರ ಸೋದರಸೊಸೆ ಶ್ರೀಮತಿ ರಮಾಬಾಯಿ ಗಮಕಕಲೆಯ ಅಭ್ಯಾಸಕ್ಕಾಗಿಯೇ ದೀರ್ಘಾವದಿ ರಜೆ ಹಾಕಿ ಮೈಸೂರಿಗೆ ಬಂದು ಕುಮಾರವ್ಯಾಸ ಗುರುಕುಲ ವಾಸಿಯಾಗಿ ರಾಯರಿಂದ ಗಮಕ ಅಭ್ಯಾಸ ಮಾಡಿದ್ದಾರೆ. ಅಲ್ಲದೆ ಮೈಸೂರಿನ ಅನೇಕ ಮಹಿಳೆಯರು ಗಮಕ ಕಲಿಯುವಂತೆ ಉತ್ತೇಜಿಸಿದ್ದಾರೆ.

## 'ಕಂಠ ಅವರದ್ದಲ್ಲ - ನಮ್ಮ ಆಸ್ತಿ'

ಕೃಷ್ಣರಾಯರಿಗೆ ಬಹು ಹತ್ತಿರವಾದ ಮತ್ತಿಬ್ಬರು ಮಹನೀಯರೆಂದರೆ ಪ್ರೊ॥ ಟಿ. ಎಸ್. ವೆಂಕಣ್ಣಯ್ಯನವರು ಹಾಗೂ ಎಸ್. ವಿ. ರಂಗಣ್ಣನವರು. ವೆಂಕಣ್ಣಯ್ಯನವರ ಹೆಸರೆತ್ತಿದರೆ ಸಾಕು ರಾಯರ ಹೃದಯ ತುಂಬಿ ಬರುತ್ತಿತ್ತು. ರಾಯರಿಗೆ ಯಾವತ್ತೂ ವೆಂಕಣ್ಣಯ್ಯನವರ ಮನೆಯಲ್ಲಿ ರಾಜೋಪಚಾರ. ಅವಕಾಶ ಸಿಕ್ಕಾಗಲೆಲ್ಲಾ ರಾಯರಿಂದ ವಾಚನ.

**ಒಮ್ಮೆ ತುಮಕೂರಿನ ಇಂಟರ್‌ಮಿಡಿಯಟ್ ಕಾಲೇಜಿನಲ್ಲಿ ರಾಯರ ವಾಚನ - ರಾಘವಾಂಕನ ಜಯಂತಿ ಪ್ರಯುಕ್ತ. ವಾಚನದ ಭಾಗ ಹರಿಶ್ಚಂದ್ರ ಕಾವ್ಯದ ಒಂದು ರಸಘಟ್ಟ. ಶ್ರೋತೃಗಳ ಮನಮುಟ್ಟುವಂತೆ ತಮ್ಮ ಕಂಚಿನ ಕಂಠದಿಂದ ವಾಚನ ಮಾಡಿದರು. ಅಂದು ಮುಖ್ಯ ಅತಿಥಿಗಳಾಗಿ ಬಂದಿದ್ದ ವೆಂಕಣ್ಣಯ್ಯನವರು ತಮ್ಮ ಮಾತು ಆರಂಭಿಸಿದ್ದು ಹೀಗೆ. 'ಕೃಷ್ಣರಾಯರ ಕಂಚಿನ ಕಂಠ ಅವರದ್ದಲ್ಲ-ನಮ್ಮದು. ಅದನ್ನು ಜೋಪಾನವಾಗಿ ಕಾಪಾಡುವ ಜವಾಬ್ದಾರಿ ನಮಗೆ ಸೇರಿದ್ದು. ಅವರಿಗೆ ಮೊದಲು ಬಿಸಿ ಬಿಸಿಯಾಗಿ ಹಾಲು ಕೊಡಿ' ಎಂದರಂತೆ. ಅವರ ಆ ಸೌಜನ್ಯತೆಯನ್ನು ರಾಯರು ಎಂದೂ ಜ್ಞಾಪಿಸಿಕೊಳ್ಳುತ್ತಿದ್ದರು. 'ವೆಂಕಣ್ಣಯ್ಯ ನವರೆಂದರೆ ಸಾಕ್ಷಾತ್ ಧರ್ಮರಾಯ ನಂತೆ' ಎನ್ನುತ್ತಿದ್ದರು.**

## ರಾಯರ ವಾಚನದ ಮೋಡಿ

ಕೃಷ್ಣರಾಯರ ವಾಚನದ ಮೋಡಿಗೆ ಯಾರೇ ಸಿಗಲಿ ಮಂತ್ರ ಮುಗ್ಧ ರಾಗಲೇಬೇಕು. ಮೈಸೂರಿನ ಜೈನ ವಿದ್ಯಾರ್ಥಿನಿಲಯದಲ್ಲಿ ಬಿ.ಎಂ.ಶ್ರೀ ಯವರ ಅಧ್ಯಕ್ಷತೆಯಲ್ಲಿ ರಾಯರ ವಾಚನವಿತ್ತು. ಭಾಗ ಪಂಪನ ಆದಿಪುರಾಣದ ಒಂದು ಸನ್ನಿವೇಶ. ಅನಂತರ ಆಚಾರ್ಯರ ಭಾಷಣ. ವಾಚನದಲ್ಲಿ ತಲ್ಲೀನರಾದ ಆಚಾರ್ಯ ಶ್ರೀಯವರು 'ರಾಯರ ವಾಚನ ಮುಂದುವರೆಯಲಿ. ನಮ್ಮ ಭಾಷಣ ಎಂದೂ ಇದ್ದೇ ಇದೆ. ಇಂಥ ರಸಮಯ ಸನ್ನಿವೇಶ ದೊರೆಯುವುದು ದುರ್ಲಭ' ಎಂದರಂತೆ.

ಮೈಸೂರಿನ ಬಂಡಿಕೆರೆಯ ವೆಂಕಟರಮಣ ಸ್ವಾಮಿ ದೇವಾಲಯದಲ್ಲಿ ರಾಯರ ನಿತ್ಯವಾಚನ ಕಾರ್ಯಕ್ರಮ ಏರ್ಪಾಡಾಗಿತ್ತು. ಎಲ್ಲಾ ಕಾವ್ಯ ಗಳಿಂದಲೂ ಕೆಲವೊಂದು ರಸಘಟ್ಟಗಳನ್ನೇ ಆಯ್ದು ವಾಚನ ಮಾಡುತ್ತಿದ್ದರು. ಯಾವತ್ತೂ ಸಭೆ ಭರ್ತಿ. ಹೀಗೆ ಒಂದು ದಿನ ರಾಯರು ನರಹರಿಕವಿಯ

ತೊರವೆರಾಮಾಯಣದಿಂದ 'ಸೀತಾಪಹರಣ'ದ ಭಾಗ ವಾಚನ ಮಾಡುತ್ತಿದ್ದಾರೆ. ಕಾಂಚನ ಮೃಗರೂಪಿಯಾದ ಮಾರೀಚ ರಾಮಬಾಣಕ್ಕೆ ತುತ್ತಾಗಿ ಪ್ರಾಣಬಿಡುವಾಗ ರಾಮನ ದನಿಯನ್ನನುಕರಿಸಿ ''ಹಾ! ಸೀತೆ-ಹಾ! ಲಕ್ಷಣಾ'' ಎಂದು ಕೂಗುತ್ತಾ ನೆಲಕ್ಕುರುಳುತ್ತಾನೆ. ಆ ಕೂಗು ರಾಮನದೇ ಎಂಬ ಭ್ರಮೆಯಿಂದ ಸೀತೆ ಲಕ್ಷ್ಮಣನ ಬುದ್ಧಿಮಾತುಗಳನ್ನೂ ಅಲಕ್ಷಿಸಿ ಅವನನ್ನು ರಾಮನ ಬಳಿ ಅಟ್ಟುತ್ತಾಳೆ. ಇದೇ ಸಂದರ್ಭಕ್ಕೆ ಕಾದಿದ್ದ ರಾವಣ ಕಪಟ ಸನ್ಯಾಸಿ ವೇಷದಲ್ಲಿ ಬಂದು ಸೀತೆಯನ್ನ ಅಪಹರಿಸುತ್ತಾನೆ. ಈ ಚಿತ್ರವನ್ನು ನರಹರಿ ತನ್ನ ಕಾವ್ಯದಲ್ಲಿ ಈ ರೀತಿ ವರ್ಣಿಸಿದ್ದಾನೆ.

*ಶಿರದ ಮುಂಡನದಕ್ಷಮಾಲೆಯ। ಕರದ ದಂಡಕಮಂಡಲದ ಬಂ*
*ಧುರದ ಕಾಷಾಂಬರದ ಕೌಪೀನ ಕಳೆವರದ ।*
*ಶಿರದ ಶೂಲಿಯ ಸಟೆಯ ನಾಮ*
*ಜರೆಯ ಜರುಗಿದ ಬೆನ್ನಿನಲುಗುವ ।*
*ಸ್ಮರಣೆಯಲಿ ಮೈದೋರಿದನು ಮಾಯಾಮಹೀಸುತೆಗೆ ॥*

ಇದನ್ನು ಹಾಡುತ್ತಾ ರಾಯರು ಮೈಮರೆತಿದ್ದರು. ರಾಯರ ಗಾನಕ್ಕೆ ಪದ್ಯದ ಶಬ್ದಗಳು ನರ್ತಿಸುವಂತೆ ನುಡಿಯುತ್ತಿದ್ದವು. ಹಿರಿಯ ಶ್ರೋತೃ ವೊಬ್ಬರು 'ONCE MORE' ಎಂದು ಆವೇಶದಿಂದ ಕೂಗಿಬಿಟ್ಟರಂತೆ. ಆದರೆ ಮೈಮರೆತು ಕಥೆಯ ಪಾತ್ರಗಳಲ್ಲೇ ತಲ್ಲೀನರಾಗಿದ್ದ ರಾಯರಿಗೆ ಈ ಕೂಗು ಕೇಳಿಸಲೇ ಇಲ್ಲ. ಆ ಹಿರಿಯರು ಗಳಗಳನೆ ಅತ್ತುಬಿಟ್ಟರಂತೆ. ಈ ರೀತಿ ರಾಯರ ವಾಚನದ ಮೋಡಿಗೆ ಸಿಕ್ಕಿದವರು ನಿವೃತ್ತ ಪೋಲಿಸ್ ಅಧಿಕಾರಿ ಗಳಂತೆ. ಈ ವಿಚಾರವನ್ನು ರಾಯರ ಹಿರಿಯಮಗ ನಾಗರಾಜ ನನಗೆ ತಿಳಿಸಿದಾಗ ಆ ಶ್ರೋತೃವಿನಷ್ಟೇ ಭಾವುಕನಾಗಿದ್ದ.

ಹೀಗೆ ರಾಯರ ವಾಚನಕ್ಕೆ ಅದರ ಮೋಡಿಗೆ ಮರುಳಾದವರು ಅಂತಿಂಥವರಲ್ಲ. ರಾಘವಾಂಕನ ಹರಿಶ್ಚಂದ್ರ ಕಾವ್ಯದ 'ವಿಶ್ವೇಶ್ವರ ಸಾಕ್ಷಾತ್ಕರ' ದಲ್ಲಿ ಉಲ್ಲೇಖಿಸಿರುವಂತೆ 'ಅವರಿವರೆನ್ನಲೇಕೆ ಸರ್ವ ದೇವರು ಬಂದರು ಪಂಪಾ ವಿರೂಪಾಕ್ಷನೆಡೆಗೆ' ಎಂಬಂತೆ ಅವರಿವರೇನು ಎಲ್ಲ ವರ್ಗವೂ ರಾಯರ ವಾಚನ ಮಾಧುರ್ಯಕ್ಕೆ ತಲೆದೂಗುವವರೇ!

ರಾಯರು ಆಕಾಶವಾಣಿಯಲ್ಲಿ ನಡೆಸಿಕೊಡುತ್ತಿದ್ದ ಪ್ರತೀಗುರುವಾರದ ವಾಚನ ಕೇಳಲು ಶ್ರೋತೃವೃಂದ ಆ ಸಮಯಕ್ಕಾಗಿ ಕಾಯುತ್ತಿದ್ದರಂತೆ.

## ರಾಯರ ಹಾಸ್ಯಪ್ರಿಯತೆ

ಕೃಷ್ಣರಾಯರು ಜೀವನದಲ್ಲಿ ಸಿಹಿಗಿಂತ ಕಹಿಯನ್ನೇ ಹೆಚ್ಚು ಉಂಡವರಾದರೂ ಅವರ ಹಾಸ್ಯಪ್ರಿಯತೆಗೇನೂ ಕೊರತೆಯಿರಲಿಲ್ಲ. ಅಷ್ಟೇ

ರಸಿಕರು ಕೂಡ. ಇದನ್ನು ತಮ್ಮ ವಾಚನ ಸಂದರ್ಭದಲ್ಲಿ ಸಮಯೋಚಿತವಾಗಿ ಉಪಯೋಗಿಸಿಕೊಳ್ಳುತ್ತಿದ್ದರು. ಹಿರಿಯರಿಗೆ ಹಿರಿಯರಾಗಿ, ಮಕ್ಕಳಿಗೆ ಮಕ್ಕಳಾಗಿ ಅವರನ್ನು ಸಂಮೋಹಕತೆಗೆ ಒಳಪಡಿಸುವ ಚಾಕಚಕ್ಯತೆ ಅವರಲ್ಲಿತ್ತು.

ರಾಯರು ಯಾವಾಗ ಮಡಿಕೇರಿಗೆ ಬಂದರೂ ನಮ್ಮ ಮನೆಯಲ್ಲೇ ಅವರ ವಾಸ್ತವ್ಯ. ಒಮ್ಮೆ ಮಂಜೇಶ್ವರಕ್ಕೆ ಹೋಗಿದ್ದವರು ತಮ್ಮ ಕುಟುಂಬಸಮೇತ ಉಡುಪಿಯಾತ್ರೆ ಮುಗಿಸಿಕೊಂಡು ಸೀದಾ ಮಡಿಕೇರಿಗೆ ಬಂದು ನಮ್ಮ ಮನೆಯಲ್ಲಿ ತಂಗಿದ್ದರು. ಮನೆಯಲ್ಲೂ ಹುಡುಗರ ಪಾಳ್ಯ ಜೋರಾಗಿತ್ತು. ಸಂಜೆ ಎಲ್ಲರನ್ನೂ ಸೇರಿಸಿ ಒಂದು ಗೋಷ್ಠಿ ನಡೆಯಿತು. ಹಿರಿಯರಲ್ಲಿ ಕೃಷ್ಣರಾಯರು, ನಮ್ಮ ತಂದೆ ಹಾಗೂ ರಾಯರ ಶಿಷ್ಯ ನಂ. ಅಶ್ವತ್ಥನಾರಾಯಣ. ಹುಡುಗರಲ್ಲಿ ನಮ್ಮಗಳ ಜೊತೆ ಕೃಷ್ಣರಾಯರ ಮಕ್ಕಳು. ಮೊದಲಿಗೆ ನಮ್ಮೆಲ್ಲರ ಪ್ರತಿಭಾ ಪರೀಕ್ಷೆ. ಅನಂತರ ಹಿರಿಯರದ್ದು, ಕಡೆಯಲ್ಲಿ ರಾಯರ ವಾಚನ. ರಾಯರು ಅಂದು ಹುಡುಗರನ್ನು ರಂಜಿಸುವ ದೃಷ್ಟಿಯಲ್ಲೇ ವಾಚನ ಮಾಡಿದರು. ಕೆಲವು ಪ್ರಸಂಗಗಳನ್ನು ವಿಡಂಬನಾತ್ಮಕವಾಗಿ ವರ್ಣಿಸಿದರು. 'ಕೃಷ್ಣಸಂಧಾನ'ದ ಭಾಗದ ಪದ್ಯಗಳು. ಕೃಷ್ಣ ದುರ್ಯೋಧನನ ಆಸ್ಥಾನಕ್ಕೆ ಬಂದಾಗ ಅವನಿಗೆ ಆಸನ ತೋರಿಸುವ ರೀತಿ. ದುರ್ಯೋಧನನ ಅಹಂಕಾರವನ್ನೂ ತೋರಿಸಬೇಕು-ಮಕ್ಕಳಿಗೆ ರಂಜನೆಯೂ ಆಗಬೇಕು. ಇದನ್ನು ರಾಯರು ವರ್ಣಿಸಿದ್ದು ಹೀಗೆ :

*''ಗುರುನದೀಸುತಕೈಗೊಡಲು ಕೇ। ಸರಿಯ ಪೀಠಕೆ ದೇವ ಬಂದನು*
*ಕುರುಕುಲಾಗ್ರಣಿಗಳ ಸುಸನ್ಮಾನವನು ಕೈಗೊಳುತ ॥*

''ನೋಡ್ರಪ್ಪ ದುರ್ಯೋಧನ ಕೃಷ್ಣನನ್ನ ಹೇಗೆ ಕರೆದ ಗೊತ್ತೇ?''

'ಕಮಾನ್ ಕಮಾನ್ ಶ್ರೀಕೃಷ್ಣನೆ ಸಿಡೌನ್ ಸಿಡೌನ್ ಸಿಂಹಾಸನೇ' ಎಂದು ರಾಗವಾಗಿ ವರ್ಣಿಸಿ ಮಕ್ಕಳ ಗಮನ ಸೆಳೆಯುತ್ತಿದ್ದರು.

ಆಂಜನೇಯನಿಗೂ ಇಂಗ್ಲೀಷ್ ಬರ್ತಿತ್ತು ಲಂಕೇಲಿ ಭಾಷೆ ಬೇರೆ ಅಲ್ವೇ. ಅದಕ್ಕೆ ಆಂಜನೇಯ ತನ್ನ ಪರಿಚಯವನ್ನು ಹೀಗೆ ಮಾಡಿ ಕೊಂಡನಂತೆ- 'I am the son of famous Vayu; My name is Anjaneya: I am Rama's real Dootha-you hear the ugly Bhootha' ಎಂದು ವರ್ಣಿಸುತ್ತಿದ್ದರು.

ಕೃಷ್ಣರಾಯರ ಹಾಸ್ಯಪ್ರಜ್ಞೆಗೆ ಮತ್ತೊಂದು ಪ್ರಸಂಗವೆಂದರೆ ಸುಭದ್ರಾ ಪರಿಣಯ. ಇಲ್ಲಿ ಅರ್ಜುನ ಸನ್ಯಾಸಿವೇಷಧಾರಿಯಾಗಿ ದ್ವಾರಕೆಗೆ ಬಂದಿದ್ದಾನೆ. ಬಲರಾಮ ಅರ್ಜುನನ್ನು ಸನ್ಯಾಸಿಯೆಂದೇ ಭ್ರಮಿಸಿ ಅವನನ್ನು ಅರಮನೆಗೆ

ಅಹ್ವಾನಿಸುತ್ತಾನೆ. ಅರ್ಜುನ ವಿನಯವಾಗಿ ಈ ರೀತಿ ನುಡಿಯುತ್ತಾನೆ. ಇಲ್ಲಿ ಕುಮಾರವ್ಯಾಸನ ಸಾಲುಗಳು ಒಗಟಿನ ರೂಪದಲ್ಲಿ ತೋರುತ್ತದೆ.

'ನಾವು ಭಿಕ್ಷುಕರೆಮಗೆ ರಾಜ್ಯಗೃ
ಹಾವಲಂಬನವೇಕೆ ಶೈಲವ
ನಾವಳಿಗಳಲಿ ವಾಸಿಪೆವು ನಾವು.....'

ಸಾಮಾನ್ಯ ರೀತಿಯಲ್ಲಿ ಇದರ ಪದ ವಿಭಾಗ ಹೀಗೆ :

'ನಾವು ಭಿಕ್ಷುಕರು, ಎಮಗೆ ರಾಜ್ಯಗೃಹಾವಲಂಬನವೇಕೆ?
ಶೈಲವನಾವಳಿಗಳಲಿ ವಾಸಿಪೆವು ನಾವು....,

ಆದರೆ ಕೃಷ್ಣರಾಯರು ಅರ್ಥೈಸುವ ರೀತಿಯೇ ಬೇರೆ. ಇಲ್ಲಿ ಅರ್ಜುನ ಸನ್ಯಾಸಿಯೂ ಅಲ್ಲ, ಭಿಕ್ಷುಕನೂ ಅಲ್ಲ, ಕಾಡಿನಲ್ಲಿ ವಾಸಿಸುವವನೂ ಅಲ್ಲ. ಅಂದ ಮೇಲೆ ಇದರ ಪದ ವಿಭಾಗ ಹೀಗೆ :

ನಾವು ಭಿಕ್ಷುಕರೇ? ಎಮಗೆ ರಾಜ್ಯಗೃಹಾವಲಂಬನವು.
ಏಕೆ ಶೈಲವನಾವಳಿಗಳಲಿ ವಾಸಿಪೆವು ನಾವು?

ಬಹುಷಃ ಇಲ್ಲಿ ಕೃಷ್ಣರಾಯರು ಯೋಚಿಸಿದ ರೀತಿಯಲ್ಲಿ ಕುಮಾರವ್ಯಾಸನೂ ಯೋಚಿಸಿದ್ದನೋ ಇಲ್ಲವೊ ತಿಳಿಯದು. 'ಕವಿ ಕಾಣದ್ದನ್ನು ಗಮಕಿ ಕಂಡ' ಎಂಬ ಮಾತನ್ನು ರಾಯರು ಪುಷ್ಟೀಕರಿಸಿದರು.

ಇದು ಅವರ ವಾಚನದ ವೈಖರಿ! ಯಶಸ್ಸಿನ ಗುಟ್ಟು !!

## ಕಸ್ತೂರಿಯವರ ಹಾಸ್ಯಚಟಾಕಿ

ಶಿವಮೊಗ್ಗಾ ಕರ್ನಾಟಕ ಸಂಘದ ಸಭಾಂಗಣದಲ್ಲಿ ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸದ ಆರಂಭೋತ್ಸವ ಏರ್ಪಾಡಾಗಿತ್ತು. ಅನೇಕ ವಿದ್ವನ್ಮಣಿಗಳ ಭಾಷಣವಿತ್ತು. ಶಿವಮೊಗ್ಗಾ ಜನ ರಸಿಕರು. ಸಾಹಿತ್ಯಾಭಿಮಾನಿಗಳು. ಸಭೆ ಕಿಕ್ಕಿರಿದು ತುಂಬಿತ್ತು. ಮೈಸೂರಿನ ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ಪ್ರೊ॥ ಜೆ. ಸಿ. ರಾಲೋರವರ ಅಧ್ಯಕ್ಷತೆ. ಅಂದು ಕೃಷ್ಣರಾಯರಿಂದ ಮೊದಲಿಗೆ ಪ್ರಾರ್ಥನಾ ರೂಪದಲ್ಲಿ ಭಾರತದ ಮೊದಲ ಪದ್ಯಗಳ ವಾಚನ ಏರ್ಪಾಡಾಗಿತ್ತು. ಅನಂತರ ವಿದ್ವನ್ಮಣಿಗಳ ಭಾಷಣ.

ಸಮಯಕ್ಕೆ ಸರಿಯಾಗಿ ಕಾರ್ಯಕ್ರಮ ಆರಂಭವಾಯಿತು. ರಾಯರು ತಮ್ಮ ಕಂಚಿನಕಂಠದಿಂದ ಪ್ರಾರ್ಥನಾ ಪದ್ಯಗಳನ್ನು ವಾಚಿಸಿದರು. ಅವರ ಕಂಠ ಮಾಧುರ್ಯಕ್ಕೆ ಜನ ತಲೆದೂಗಿದರು. ಮೊದಲೇ ಶಿವಮೊಗ್ಗಾ ಜನ

ರಸಿಕರ ಪ್ರಿಯರು. ರಾಯರ ಈ ಪುಟ್ಟ ಕಾರ್ಯಕ್ರಮ ಅವರಿಗೆ ತೃಪ್ತಿ ನೀಡಲಿಲ್ಲ. ಜನ 'ನಮಗೆ ಭಾರತ ವಾಚನ ಬೇಕು. ಭಾಷಣಗಳು ಬೇಕಿಲ್ಲ. ಅವರಿಗೆ ಇನ್ನಷ್ಟು ಅವಕಾಶ ಕೊಡಿ' ಎಂದು ಘೋಷಣೆಗಳನ್ನು ಕೂಗಿದರು.

ಜನರ ವಿನಂತಿಗೆ ಸ್ಪಂಧಿಸಿದ ಅಧ್ಯಕ್ಷ ರಾಲೋರವರು ಸಭೆಗೆ ಸಮಾಧಾನ ಹೇಳಿ ತಮ್ಮ ನಿರ್ಣಯವನ್ನು ಈ ರೀತಿ ಘೋಷಿಸಿದರು.

**"As a chairperson of the house I suspend all the other programmes slated for the day. I humbly request Sri Krishna Rao to continue his recital, honouring the sentiments of the people, gathered here. I also apologise him for not arranging his full length programme"!**

ಈ ನಿರ್ಣಯವನ್ನು ಸಭೆ ಪ್ರಚಂಡ ಕರತಾಡನದಿಂದ ಸ್ವಾಗತಿಸಿತು. ರಾಯರು ಕುಮಾರವ್ಯಾಸ ಭಾರತದ ಉದ್ಯೋಗಪರ್ವದಲ್ಲಿನ 'ಕುಂತೀ ಕರ್ಣ'ದ ಪ್ರಸಂಗವನ್ನು ಬಹು ಹೃದಯಂಗಮವಾಗಿ ಹಾಡಿ ಜನ-ಮನವನ್ನು ಗೆದ್ದರು. ಈ ಸಂದರ್ಭದಲ್ಲಿ ಹಾಸ್ಯಬ್ರಹ್ಮ ನಾ. ಕಸ್ತೂರಿಯವರ ಭಾಷಣವೂ ಇತ್ತು. ಕಾವ್ಯವಾಚನದ ನಂತರ ಮಿತ್ರರೊಡನೆ ಮಾತನಾಡುತ್ತಾ ಹಾಸ್ಯವಾಗಿ ''ಸ್ವಾಮಿ ನಾಳೆಯಿಂದ ರಾಯರ ವಾಚನದ ಪ್ರಟಕಣೆ ಮೊದಲು ಕೊಟ್ಟು ನಂತರ ನಮ್ಮಿಂದ ಉಪನ್ಯಾಸ ಮಾಡಿಸಿ. ಯಾಕೇಂದ್ರೆ ಅವರ ವಾಚನದ ನಂತರ ನಮ್ಮ ಮಾತು ಕೇಳಕ್ಕೆ ಜನ ಇರಲ್ಲ. ರಾಯರು ಗುಂಪನ್ನ ಸೇರಿಸೋಕ್ಕೆ-ನಾವು ಚದುರಿಸಕ್ಕೆ ಎಂಬುದು ಇಂದು ಖಾತ್ರಿಯಾಯಿತು'' ಎಂದು ಚಟಾಕಿ ಹಾರಿಸಿದರಂತೆ. ಕಸ್ತೂರಿಯವರೂ ರಾಯರ ಆತ್ಮೀಯ ಅಭಿಮಾನಿಗಳಲ್ಲೊಬ್ಬರು.

## ರಾಯರ ಶಿಷ್ಯವೃಂದ

ಕೃಷ್ಣರಾಯರ ಶಿಷ್ಯವೃಂದ ಅಪಾರ. ಅವರ 'ಕುಮಾರವ್ಯಾಸ ಗುರುಕುಲ' ದಿಂದ ತಯಾರಾದ ಅನೇಕ ಗಮಕಿಗಳು ಇಂದು ರಾಷ್ಟ್ರವ್ಯಾಪೀ ಖ್ಯಾತಿ ಪಡೆದವರು. ಬಹುಷಃ ಯಾವ ಗಮಕಿಗೂ ಇಂಥ ಶಿಷ್ಯ ಪರಂಪರೆ ಇದುವರೆಗೆ ದೊರಕಿಲ್ಲವೆಂದೇ ನನ್ನ ಅನಿಸಿಕೆ. ಇವರ ಶಿಷ್ಯರುಗಳಲ್ಲಿ ಪ್ರಮುಖರೆಂದರೆ ಕೊಡಗಿನ ಮೈ.ಶೇ. ಅನಂತಪದ್ಮನಾಭರಾಯರು. ಪಂಡಿತ. ನಂ. ಅಶ್ವತ್ಥನಾರಾಯಣ, ಬಿ. ಎಸ್. ಎಸ್. ಕೌಶಿಕ್, ಗುಡಿಬಂಡೆ ರಾಮಾಚಾರ್,

ಅನ್ನಪೂರ್ಣಮ್ಮ ರಘುಪತಿಶಾಸ್ತ್ರಿ, ಗೌರಮ್ಮ ಶ್ರೀನಿವಾಸಮೂರ್ತಿ, ಆರ್. ಚಂದ್ರ, ಪಿ. ಎ. ಗಿರಿಧರ್, ಪಿ. ಸತ್ಯವತಿ, ಕಮಲಾರಾಮಕೃಷ್ಣ (ಗಮಕಿ ರಾಘವೇಂದ್ರರಾಯರ ಸೊಸೆ). ಗಮಕ-ವಾಚನ ಪ್ರವೀಣ ಶ್ಲೋಕಸಂಗೀತ ಕಳಲೆ ಸಂಪತ್ಕುಮಾರಾಚಾರ್ಯರು ಗಮಕ ದೀಕ್ಷೆ ಪಡೆದಿದ್ದು ಕೃಷ್ಣರಾಯರಿಂದಲೇ. ಅಂದಮೇಲೆ 'ಗಮಕ ಭಗೀರಥ'ರೆಂದೇ ಖ್ಯಾತರಾದ ಈ ಗಮಕತ್ರಯರು-ಬಿಂದೂರಾಯರು, ಕೃಷ್ಣರಾಯರು - ಸಂಪತ್ಕುಮಾರಾಚಾರ್ಯರು ಒಂದೇ ಗುರುಶಿಷ್ಯ ಪರಂಪರೆಗೆ ಸೇರಿದವರಾದರು.

ಅಲ್ಲದೆ ರಾಯರ ಮಕ್ಕಳಾದ ಕೃ. ಶ್ರೀನಿವಾಸ, ಕೃ. ರಾಮಚಂದ್ರ, ಕಮಲಾನಾರಾಯಣ್, ರತ್ನಾ ಹಾಗೂ ಶಾಂತ ತಂದೆಯ ಜಾಡಿನಲ್ಲೇ ವಾಚನ ಮಾಡುತ್ತಿದ್ದಾರೆ. ಹಿರಿಯ ಮಗ ನಾಗರಾಜ, ಕಿರಿಯಮಗ ಮುರಳೀಧರ ವ್ಯಾಖ್ಯಾನಕಾರರಾಗಿ, ಸಾಹಿತ್ಯೋಪಾಸಕರಾಗಿ ಹೆಸರು ಗಳಿಸಿದ್ದಾರೆ.

## ಚೌಡಯ್ಯನವರ ಉದ್ಗಾರ

ಪಿಟೀಲೆಂದರೆ ಚೌಡಯ್ಯ; ಚೌಡಯ್ಯನವರೆಂದರೆ ಪಿಟೀಲು! ಅಷ್ಟು ಸುವಿಖ್ಯಾತರು ತಿರುಮಕೂಡ್ಲು ಚೌಡಯ್ಯನವರು. ಬಿಡಾರಂ ಕೃಷ್ಣಪ್ಪನವರು ರಾಯರ ಪರಮಮಿತ್ರರು. ಅವರ ಗಾಯನಕ್ಕೆ ರಾಯರು ಪಿಟೀಲು ನುಡಿಸಿದ್ದೂ ಉಂಟು. ಕೃಷ್ಣರಾಯರ ಪರಿಚಯ ಚೌಡಯ್ಯನವರಿಗೂ ಇತ್ತು. ಅವರ ಪಿಟೀಲು ನುಡಿಸಾಣಿಕೆಯನ್ನು ಕೇಳಿದ್ದವರು. ಚೌಡಯ್ಯನವರು ವಿದ್ಯಾಪಕ್ಷಪಾತಿಗಳು. ರಾಯರು ವಾಚನದಲ್ಲಿ ಬಳಸುತ್ತಿದ್ದ ರಾಗಗಳು, ಹಾಡುತ್ತಿದ್ದ ರೀತಿ, ಚೌಡಯ್ಯನವರ ಮೇಲೆ ಮಹತ್ತರ ಪರಿಣಾಮ ಬೀರಿತು. ಅಲ್ಲದೆ ಅವರ ಪಿಟೀಲುವಾದನದ ನುಡಿಸಾಣಿಕೆಯ ಶೈಲಿಯೂ ಹಿಡಿಸಿತ್ತು. ರಾಯರ ವಾಚನಕ್ಕೆ ಅವರು ಪಿಟೀಲು ನುಡಿಸಿದ್ದಾಗಿಯೂ ಕೇಳಿದ್ದೇನೆ.

ಮುಂದೆ ರಾಯರ ಪ್ರೀತಿಯ ಕಣ್ಮಣಿ ಅನಂತುವಿನ ಅಕಾಲ ಮೃತ್ಯುವಿನ ನಂತರ ಅವನಿಗೆ ಅತ್ಯಂತ ಪ್ರಿಯವಾದ ಪಿಟೀಲನ್ನು ಬಿಟ್ಟು ರಾಯರು ಗಮಕದ ಕಡೆ ಹೆಚ್ಚು ವಾಲಿದರು. ಸಂಗೀತಕ್ಕೆ ದಕ್ಕ ಬೇಕಾದ ರಾಯರು ಪರಿಸ್ಥಿತಿಯ ಪ್ರಭಾವದಿಂದ ಗಮಕ ಕಲೆಯಲ್ಲಿ ಮಿಂಚಿದರು. ಇದನ್ನು ತಿಳಿದೊ ಏನೋ ಚೌಡಯ್ಯನವರು 'ಭಾರತ ಪುಸ್ತಕ ಹಿಡಿದ ರಾಯರು ಪಿಟೀಲನ್ನು ಬಿಟ್ಟು ನಮ್ಮನ್ನು ಬದುಕಿಸಿದರು' ಎಂದು ಉದ್ಗರಿಸಿದರಂತೆ.

## ಪ್ರಶಸ್ತಿ ಗೌರವ ಸತ್ಕಾರ

ಇಷ್ಟೆಲ್ಲ ವಿದ್ವತ್‌ಗಳಿಸಿ ಪಂಡಿತರ-ವಿದ್ವಜ್ಜನರ ಪ್ರಶಂಸೆಗೆ ಪಾತ್ರರಾದ ರಾಯರು ತಾವಾಗಿಯೇ ಎಂದೂ ಕೀರ್ತಿಗಾಗಿ ಬೆನ್ನಟ್ಟಿದವರಲ್ಲ. ಆದಕ್ಕಾಗಿ

ಕಾದವರೂ ಅಲ್ಲ. ಆದರೂ ಅದೇ ಅವರನ್ನ ಹುಡುಕಿಕೊಂಡು ಬರುವಂತಾಯಿತು.

ಆಚಾರ್ಯ ಡಿ.ವಿ.ಜಿ.ಯವರು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಗಮಕ ತರಗತಿಗಳನ್ನು ಆರಂಭಿಸಿದಾಗ ಮೊದಲು ಬಿಂದೂರಾಯರು ಶಿಕ್ಷಕರಾಗಿ ಕಾರ್ಯನಿರ್ವಹಿಸಿದ ಮೇಲೆ ಆ ಕಾರ್ಯವನ್ನು ರಾಯರು ನಿರ್ವಹಿಸಿದರು. ಅನೇಕ ಜಿಲ್ಲೆಗಳಲ್ಲಿ ಪ್ರತಿನಿಧಿಗಳನ್ನು ನೇಮಿಸಿ ಎಲ್ಲ ಕಡೆ ಗಮಕ ತರಗತಿಗಳು ಪ್ರಚಾರ ಕಾರ್ಯಗಳು ನಡೆಸುವಲ್ಲಿ ನೆರವಾದರು.

೧೯೫೩ರಲ್ಲಿ ಬೇಲೂರಿನಲ್ಲಿ ನಡೆದ ಸಾಹಿತ್ಯ ಸಮ್ಮೇಳನದ ಗಮಕ ಗೋಷ್ಠಿಯ ಅಧ್ಯಕ್ಷಪದವಿಯ ಗೌರವ ರಾಯರಿಗೆ ಸಂದಿತ್ತು. ಅಂದು ಅವರು ಮಾಡಿದ ಭಾಷಣದ ಕೆಲವು ಭಾಗಗಳು ಗಮಕಿಗೆ ಮಾರ್ಗದರ್ಶನವಾದುವು.

**'ರಸಿಕರ ಹೃತ್ಪಟಲದಲ್ಲಿ ಮೂಡಬೇಕಾದ ಕಾವ್ಯಕ್ಕೆ ಕವಿಯು ಎಷ್ಟು ಕಾರಣನೋ ಗಮಕಿಯೂ ಅಷ್ಟೇ ಕಾರಣ. ಕವಿಯ ತನ್ನ ಕಾವ್ಯ ಶಾರೀರವನ್ನು ಶಬ್ದಮೂರ್ತಿಯಲ್ಲಿ ಎರಕ ಹೊಯ್ದಿಡ ಬಲ್ಲವನಾದರೆ ಆ ಮೂರ್ತಿಗೆ ಉಸಿರೂದಿ ಜೀವಕಳೆ ತುಂಬಿ ಸಚೇತನಗೊಳಿಸುವನೆಂದರೆ ಗಮಕಿಯಲ್ಲದೆ ಮತ್ತಾರು? ಕಾವ್ಯ ವಿಷಯದಲ್ಲಿ ಕವಿಗೆ ಪಿತೃಪದವಿಯಾದರೆ ಗಮಕಿಗೆ ಸಂಜೀವನ ಶಕ್ತಿಯುಳ್ಳ ಬ್ರಹ್ಮಪದವಿ-ಆಡಿದ ಮಾತಿಗಿರುವ ಜೀವ ಬರೆದ ಶಬ್ದಕ್ಕೆ ಬಾರದು. ಕಿವಿಯಿಂದ ಕಿವಿಗೆ ಹೋಗಬೇಕು ರಸವನೀಂಟಿಸಬೇಕು ಆಗಲೇ ಕಾವ್ಯಜನ್ಮದ ಸಾರ್ಥಕ.'**

★ ★ ★

ಒಂದು ನಾದಬ್ರಹ್ಮ; ಇನ್ನೊಂದು ಶಬ್ದಬ್ರಹ್ಮ. ನಾದಬ್ರಹ್ಮನಾದ ಗಾಯಕ ನಾದೋಪಾಸಕ; ಶಬ್ದಬ್ರಹ್ಮನಾದ ಗಮಕಿ ಭಾವೋಪಾಸಕ. ಗಮಕಕಲೆಯಲ್ಲಿ ಸಾಹಿತ್ಯ ಮಾನವನಂತೆ, ಸಂಗೀತ ಅವನು ಧರಿಸುವ ಉಡುಪಿನಂತೆ.

★ ★ ★

ಸಾಹಿತ್ಯ ಜೀವ;ಸಂಗೀತ ದೇಹ.

ಗಮಕ ಕಲಾತಪಸ್ವಿಯ ಅಸ್ಖಲಿತವಾಣಿಯಿದು. ಸುವರ್ಣಾಕ್ಷರಗಳಲ್ಲಿ ಬರೆದಿಡುವಂಥಾದ್ದು.

ಇಂಥ ಮಹಾನ್ ಕಲಾತಪಸ್ವಿಯ ಸಾಧನೆಯನ್ನು ಗುರುತಿಸಿ ವಿಶಾಲ ಮೈಸೂರಿನ ಸಂಗೀತ ಸಾಹಿತ್ಯ ಅಕಾಡೆಮಿ ೧೯೬೧ರಲ್ಲಿ ಪ್ರಶಸ್ತಿ ನೀಡಿ

ರಾಯರನ್ನ ಗೌರವಿಸಿತು. ಸರ್ಕಾರ ಕಲಾವಿದರಿಗೆ ನೀಡುವ ಗೌರವ ಮಾಸಾಶನವನ್ನು ನೀಡಿ ತನ್ನ ಘನತೆಯನ್ನು ಹೆಚ್ಚಿಸಿಕೊಂಡಿತು. ಇನ್ನು ಸಂಘ ಸಂಸ್ಥೆಗಳು, ಮಠಾಧಿಪತಿಗಳು 'ಭಾರತದ ಕೃಷ್ಣರಾಯರ'ನ್ನು ಕರೆಸಿ ಗೌರವಿಸಿರುವುದು ಅಪಾರ.

## ರಾಯರ ಕೊನೆಯ ದಿನಗಳು

ಕೃಷ್ಣರಾಯರು ತಮ್ಮ ವೃದ್ಧಾಪ್ಯದ ದಿನಗಳನ್ನು ಹೆಚ್ಚಾಗಿ ತಮ್ಮ ಮಕ್ಕಳ ಮನೆಯಲ್ಲಿ ಕಳೆದರು. ಎರಡನೇ ಮಗ ಶ್ರೀನಿವಾಸ ಗುಲ್ಬರ್ಗಾದಲ್ಲಿದ್ದಾಗ್ಗೆ ಕೆಲವು ಕಾಲ ಅಲ್ಲಿ ತಂಗಿದ್ದರು. ಹಿರಿಯ ಪುತ್ರ ನಾಗರಾಜ ಸಿಕಂದರಾಬಾದಿನಲ್ಲಿದ್ದಾಗ ಅಲ್ಲಿಯೂ ಕೆಲ ಸಮಯವಿದ್ದು ಅನಂತರ ಬೆಂಗಳೂರಿನಲ್ಲಿ ಕಿರಿಯಪುತ್ರರಾದ ರಾಮಚಂದ್ರ-ಮುರಳೀಧರನ ಜೊತೆಯಲ್ಲಿ ಯಶವಂತಪುರದ 'ಕೃಷ್ಣಕೃಪ'ದಲ್ಲಿದ್ದರು. ಕೊನೆಯ ದಿನಗಳಲ್ಲಿ ವಯೋಧರ್ಮಕ್ಕನುಗುಣವಾಗಿ ಅವರ ಆರೋಗ್ಯ ಕ್ಷೀಣಿಸಿತ್ತು. ಜೀವನ ಸಂಧ್ಯೆಯಲ್ಲಿದ್ದ ರಾಯರನ್ನು ನಾನು ನೋಡಲಾಗಲಿಲ್ಲ. ಆಗ್ಗೆ ನಾನು ಮುಂಬೈನಲ್ಲಿ ನೌಕರಿಯಲ್ಲಿದ್ದೆ. ನನ್ನ ತಂದೆಯವರು ನನಗೆ ಬರೆಯುತ್ತಿದ್ದ ಪ್ರತೀ ಪತ್ರದಲ್ಲೂ ಅವರ ಬಗ್ಗೆ ಬರೆಯುತ್ತಲೇ ಇದ್ದರು.

೧೯೬೬ರ ಸೆಪ್ಟಂಬರ್ ೧ ರಂದು ಗುರುವಾರ ರಾಯರು ಯಾರ ನೆರವೂ ಇಲ್ಲದೆ 'ದೂರ್ವಾಸಾತಿಥ್ಯ'ದ ಭಾಗ ವಾಚನ ಮಾಡಿದರಂತೆ. ಆ ವಯಸ್ಸಿನಲ್ಲೂ ಅಷ್ಟು ಭಾವುಕರಾಗಿ ಹಾಡಿದರಂತೆ. ಬಹುಷಃ ಅವರಿಗೆ ತಿಳಿದಿತ್ತೋ ಏನೊ ಅದೇ ಅವರ ಕಡೆಯ ಸೇವೆಯೆಂದು. ಮನಃಪೂರ್ವಕವಾಗಿ ತಮ್ಮ ಆರಾಧ್ಯಮೂರ್ತಿ ವೀರನಾರಾಯಣನಿಗೆ ಭಕ್ತಿಯ ನಮನಗಳನ್ನ ಅರ್ಪಿಸಿದರು.

ಸೆಪ್ಟಂಬರ್ ೪. ರಾಯರನ್ನು ಕಾಣಲು ಗಮಕಿ ರಾಘವೇಂದ್ರರಾಯರು ಬಂದಿದ್ದರು. ಲೋಕಾಭಿರಾಮವಾಗಿ ಅದೂ-ಇದೂಂತ ಮಾತನಾಡುತ್ತಾ ರಾಯರು ಬಹಿರ್ದೆಶೆಗಾಗಿ ಎದ್ದು ಬಚ್ಚಲು ಮನೆಯ ಕಡೆ ಹೋದರು. ಆಗ ಜೊತೆಯಲ್ಲಿದ್ದವನು ರಾಮಚಂದ್ರ ಮಾತ್ರ. ಬಚ್ಚಲು ಮನೆಯಲ್ಲಿ ಆಯ ತಪ್ಪಿ ಬಿದ್ದರಾಯರನ್ನು ಶೈತ್ಯೋಪಚಾರ ಮಾಡಿದ ರಾಮಚಂದ್ರ ಹಾಸಿಗೆಯ ಬಳಿ ಕರೆತಂದಾಗ ಚಾಪೆ ಹಾಕುವಂತೆ ಸನ್ನೆ ಮಾಡಿದರಂತೆ. ಅದರಲ್ಲಿ ಮಲಗಿ ಎದುರಿಗಿದ್ದ ಭವ್ಯಮೂರ್ತಿ ವೀರನಾರಾಯಣನಿಗೆ ಕೈಮುಗಿದು ಕಣ್ಣುಮುಚ್ಚಿದರು ರಾಯರು. ಇನ್ನೂ ಉಸಿರಾಡುತ್ತಿದ್ದ ರಾಯರನ್ನು ನಗರದ ಬೌರಿಂಗ್ ಆಸ್ಪತ್ರೆಗೆ ಸೇರಿಸಲಾಯಿತು. ಎರಡು ದಿನ

ಜೀವನ್ಮರಣದಲ್ಲಿ ತೊಯ್ದಾಡಿದ ಜೀವ ದಿನಾಂಕ ೬ರಂದು ಅನಂತದಲ್ಲಿ ಲೀನವಾಯಿತು.

ಗಮಕ ಕಲಾಭಿಮಾನಿಗಳ ಆರಾಧ್ಯಮೂರ್ತಿ 'ಭಾರತದ ಕೃಷ್ಣರಾಯರು' ತಮ್ಮ ಆರಾಧ್ಯಮೂರ್ತಿ ಗದುಗಿನ ವೀರ ನಾರಾಯಣನಲ್ಲಿ ಲೀನವಾದರು. ಮಕ್ಕಳ-ಮನೆಮಂದಿಯ ಆರಾಧ್ಯ ದೈವ 'ಕಿಟ್ಟೂಮಾವ' ಇನ್ನಿಲ್ಲವಾದರು. ಅವರ ಕಂಚಿನ ಕಂಠದ ನಾದದ ಸದ್ದಡಗಿದ್ದರೂ ಅವರ ಮಕ್ಕಳ ಕಂಠದಿಂದ ಶಿಷ್ಯಪರಂಪರೆಯ ಕಂಠದಿಂದ ಈಗಲೂ ಮೊಳಗುತ್ತಿದೆ. ಅದು ಅನಂತ ವಾಗಿದೆ. ಕವಿ ಕುವೆಂಪು ಹೇಳಿದ ಮಾತು ಈಗಲೂ ಕಿವಿಯಲ್ಲಿ ಮೊಳಗುತ್ತಿದೆ :

'ಹಾಡಿದನು ಗಮಕಿ
ನಾಡು ನಲಿದುದು ರಸದಕಡಲಿನಲಿ ಧುಮುಕಿ'

ನಾಡನ್ನು ಗಮಕದ ರಸದ ಕಡಲಿನಲ್ಲಿ ತೇಲಿಸಿದರು ರಾಯರು ಕುಮಾರವ್ಯಾಸನಾವೇಶ ವಾಣಿಯನ್ನು ಮೊಳಗಿಸಿದರು.

ನಮ್ಮ ತಂದೆಯಿಂದ ರಾಯರ ನಿಧನದ ವಾರ್ತೆ ಮುಂಬಯಿಯಲ್ಲಿದ್ದ ನನಗೆ ತಿಳಿಯಿತು. ಆಗ ಅಲ್ಲಿ ಶ್ರದ್ಧಾಂಜಲಿ ರೂಪವಾಗಿ ಅವರ ಕುರಿತು ಎರಡು ಸಾಲು ಬರೆಯಲು ಪ್ರಯತ್ನಿಸಿದೆ. ಸಾಧ್ಯವಾಗಲಿಲ್ಲ.

ಮತ್ತೆ ನಾನು ಬೆಂಗಳೂರಿಗೆ ವರ್ಗವಾಗಿ ಬಂದ ಮೇಲೆ ಅವರ ಕುರಿತು ಲೇಖನವನ್ನು ಆಂಗ್ಲ ಭಾಷೆಯಲ್ಲಿ ಬರೆಯುವ ಯೋಗವೊದಗಿತ್ತು. ಆ ಮೂಲಕ ಗಮಕಯೋಗಿಗೆ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸಿದೆ.

# ಕಳಲೆ ಸಂಪತ್ಕುಮಾರಾಚಾರ್ಯರು

## ಗಮಕ ವಿದ್ವಾನ್, ಶ್ಲೋಕ ಸಂಗೀತ

# ಕಳಲೆ ಸಂಪತ್ಕುಮಾರಾಚಾರ್ಯರು

೧೯೪೩. ನವರಾತ್ರಿ ಹಬ್ಬದ ಸಡಗರ ಎಲ್ಲೆಲ್ಲೂ. ಮಡಿಕೇರಿಯಲ್ಲಿ ನಮ್ಮ ಮನೆಯಲ್ಲಿ ಬೊಂಬೆ ಕೂಡಿಸಿದ್ದರು. ಮರದಿಂದ ಮಾಡಿದ ದೊಡ್ಡ ನಿಲುಗೌರಿಗೆ ಸರಸ್ವತಿ ಅಲಂಕಾರ ಮಾಡಿ ಕೈಯಲ್ಲಿ ವೀಣೆ ನುಡಿಸುವಂತೆ ಕೂಡಿಸಿದ್ದರು. ಬೆಳಿಗ್ಗೆಯೇ ಮನೆಯಲ್ಲಿ ನಮ್ಮ ತಂದೆಯವರು ಹೇಳುತ್ತಿದ್ದರು 'ಇಂದು ಸಂಜೆ ಬೆಂಗಳೂರಿನಿಂದ ಸಂಪತ್ಕುಮಾರಾಚಾರ್ಯರೆಂಬುವರು ದಂಪತೀ ಸಮೇತರಾಗಿ ಬರುತ್ತಿದ್ದಾರೆಂದು'. ಕೇಳಿದ್ದಷ್ಟೆ ಮತ್ತೆ ಆ ವಿಷಯ ನನಗೆ ಮರೆತೇ ಹೋಗಿತ್ತು.

ಸಂಜೆ ನಾನು ಮನೆಗೆ ಬಂದಾಗ ಒಂದು ವಿಚಿತ್ರಕಾದಿತ್ತು. ನನ್ನ ತಂಗಿ ಪದ್ಮಿನಿ ಎಲ್ಲೂ ಕಾಣಲಿಲ್ಲ. ಬೆಳ್ಳಗೆ ದಂತದ ಬೊಂಬೆಯಂತಿದ್ದ ಮನೆ ತುಂಬಾ ಚಟುವಟಿಕೆಯಿಂದ ಓಡಾಡುತ್ತಿದ್ದ ಹುಡುಗಿ ಕಾಣಲಿಲ್ಲ. ನಮ್ಮ ತಾಯಿಯಾದರೂ ಸರಸ್ವತೀ ಪೂಜೆಯ ಪ್ರಯುಕ್ತ ನೆರೆ ಹೊರೆಯವರನ್ನು ಅರಸಿನ ಕುಂಕುಮಕ್ಕೆ ಕರೆಯಲು ಹೋಗಿದ್ದರು. ಅಜ್ಜಿ ಒಳಗೆಲ್ಲೋ ಕೆಲಸದಲ್ಲಿ ಮಗ್ನರಾಗಿದ್ದರು. ತಂದೆಯವರು ಮಹಡಿಯ ಮೇಲೆ ಯಾರೊಡನೆಯೋ ಮಾತನಾಡುತ್ತಿದ್ದರು.

ಬೊಂಬೆ ಕೂಡಿಸಿದ್ದ ಹಜಾರದ ಚಾಪೆಯ ಮೇಲೆ ಮುತ್ತೈದೆ ಯವರೊಬ್ಬರು ಕುಳಿತು ಅಲಂಕರಿಸಿದ್ದ ನಿಲು ಗೌರಿಯನ್ನೇ ಹಸನ್ಮುಖರಾಗಿ ನೋಡುತ್ತಾ ಕುಳಿತಿದ್ದರು. ಆ ಹೊತ್ತಿಗೆ ಹೊರಗೆ ಹೋಗಿದ್ದ ನಮ್ಮ ತಾಯಿಯವರೂ ಬಂದರು. ಬಂದವರೇ ಕುಳಿತಿದ್ದಾಕೆಯನ್ನು ಉದ್ದೇಶಿಸಿ 'ತುಂಬಾ ಕಾಯಿಸಿಬಿಟ್ಟೆನೇನೋ ಕ್ಷಮಿಸಿ' ಎಂದರು. ಆಕೆ ನಗುತ್ತಾ 'ಏನಿಲ್ಲ ನನಗೆ ಸಮಯ ಹೋದದ್ದೇ ತಿಳಿಯಲಿಲ್ಲ. ಸರಸ್ವತಿ ಅಲಂಕಾರ ತುಂಬಾ ಚೆನ್ನಾಗಿದೆ ಅಲ್ವಾ' ಎಂದು ಆ ಕಡೆ ಮಾರ್ಮಿಕವಾಗಿ ನೋಡಿದರು. ನಾವೂ ಆ ಕಡೆ ನೋಡಿದೆವು ಅರೆ! ಮರದ ನಿಲು ಗೌರಿ ಅಳ್ಳಾಡುತ್ತಿದೆ !! ಕಣ್ಣು ಮಿಟುಕಿಸುತ್ತಾ ನಗುತ್ತಿದೆ !! ಏನಾಶ್ಚರ್ಯ? ಬಂದಾಕೆ 'ಹೇಗಿದ್ದಾಳೆ ಸರಸ್ವತಿ' ಎಂದರು. ಅದು ಅವರದೇ ಕೆಲಸ. ನನ್ನ ತಂಗಿ ಪುಟ್ಟ ಹುಡುಗಿ ಐದು

ವರ್ಷದ ಬಾಲೆ. ಬಂದಾಕೆ ಅವಳನ್ನು ರಮಿಸಿ ಒಪ್ಪಿಸಿ ತಾವೇ ಖುದ್ದಾಗಿ ಸರಸ್ವತಿ ಅಲಂಕಾರ ಮಾಡಿ ಅಲ್ಲಿ ಕೂರಿಸಿದ್ದರು! ನಮ್ಮ ತಾಯಿಯ ಆಶ್ಚರ್ಯದ ಉದ್ಗಾರ ಕೇಳಿದ ನಮ್ಮ ತಂದೆ ಬಂದಿದ್ದ ಗೆಳೆಯರು ಕೆಳಗಿಳಿದು ಬಂದು ನೋಡಿದರು. ವಿಷಯ ತಿಳಿಯಿತು. ಬಂದಿದ್ದ ಅತಿಥಿಗಳು ಬೇರೆ ಯಾರು ಅಲ್ಲ, ಬೆಳಿಗ್ಗೆ ನಮ್ಮ ತಂದೆಯವರು ಹೇಳುತ್ತಿದ್ದ ಸಂಪತ್ಕುಮಾರಾಚಾರ್ಯರು. ಯಾವ ಸಂಕೋಚವೂ ಇಲ್ಲದೆ ಬಹಳ ಪತ್ತಿರದವರಂತೆ ಹುಡುಗಿಗೆ ಅಲಂಕಾರ ಮಾಡಿದವರು ಅವರ ಪತ್ನಿ ಸೀತಮ್ಮ. ಮಡಿಕೇರಿ ವೇದಾಂತ ಸಂಘದಲ್ಲಿ ಮರುದಿನ ಸಂಜೆ ಅವರ ವಾಚನ ಕಾರ್ಯಕ್ರಮವಿತ್ತು.

ಸಂಪತ್ಕುಮಾರಾಚಾರ್ಯರದು ಭವ್ಯ ಆಕೃತಿ. ಆ ಆಕೃತಿಗೆ ತಕ್ಕಂಥ ಬೃಹತ್ ಕಂಠ. ಮಾಲಗಣ್ಣು. ನಮ್ಮ ತಂದೆಯವರೊಡನೆ ಮಾತನಾಡುತ್ತಿದ್ದರೆ ದೃಷ್ಟಿ ನಮ್ಮ ಕಡೆ ಇದ್ದಂತಿರುತ್ತಿತ್ತು.

ಮಾರನೇ ದಿನ ಬೆಳಿಗ್ಗೆ ನಮ್ಮ ತಂದೆಯವರು ಕಚೇರಿಗೆ ಹೊರಟಿದ್ದವರು ಬಂದವರನ್ನು ರಾಜಾಸೀಟಿಗೆ ಕರೆಯೊಯ್ಯುವಂತೆ ನನಗೆ ತಿಳಿಸಿದರು. ಆಚಾರ್ಯರಿಗೆ ಮಕ್ಕಳಿರಲಿಲ್ಲ. ಹಾಗಾಗಿ ಬೇರೆ ಮಕ್ಕಳನ್ನು ಕಂಡರೆ ಅವರಿಗೆ ತುಂಬು ವಾತ್ಸಲ್ಯ. ನನಗೆ ಆಗ ೮ ವರ್ಷ. ನನ್ನ ತಂಗಿಗೆ ೫. ನಮ್ಮ ಅಣ್ಣ ಆಗ ಮೈಸೂರಿನಲ್ಲಿ ನಮ್ಮ ತಾತನ ಮನೆಯಲ್ಲಿದ್ದ. ಸರಿ ನಾನು ಅವರನ್ನು ಕರೆದುಕೊಂಡು ಹೊರಟೆ. ಆಚಾರ್ಯರದ್ದು ಭವ್ಯಾಕೃತಿ ಅದಕ್ಕೆ ತಕ್ಕಂತೆ ವೇಷಭೂಷಣ. ಕರೀ ಲಾಂಗ್ ಕೋಟು, ಪೇಟ ಧರಿಸಿ ನನ್ನ ಕೈ ಹಿಡಿದುಕೊಂಡು ಹೊರಟರು. ಅವರ ಕೋಟಿನಲ್ಲಿ ಏನೋ ವಾಸನೆ-ಕರಿದ ಪದಾರ್ಥದ್ದು! 'ದಾರಿ ತೋರಿಸು ಹೊರಡೋಣ' ಎಂದು ಸಪತ್ನೀಕರಾಗಿ ನಡೆದರು.

ಹೋಗುತ್ತಾ ದಾರಿಯಲ್ಲಿ ಓಂಕಾರೇಶ್ವರನ ಭವ್ಯದೇವಸ್ಥಾನ, ಪಕ್ಕದಲ್ಲಿದ್ದ ವೇದಾಂತ ಸಂಘವನ್ನು ತೋರಿಸಿ ಅಲ್ಲಿಯೇ ಸಂಜೆ ಅವರ ವಾಚನ ಎಂದು ತೋರಿಸಿದೆ. ಅಲ್ಲಿಂದ ರಾಜಾಸೀಟಿಗೆ ಹೋದೆವು. ಗಾಳಿ ಮನೆಯ ಪಕ್ಕದಲ್ಲಿದ್ದ ಕಲ್ಲು ಬೆಂಚಿನ ಮೇಲೆ ಕುಳಿತೆವು. ಆಚಾರ್ಯರು ಜೇಬಿಗೆ ಕೈಹಾಕಿ 'ಕೋ' ಎಂದು ಒಂದು ಪೊಟ್ಟಣವನ್ನು ಕೊಟ್ಟರು. ಪೊಟ್ಟಣದ ತುಂಬಾ ಕರಿದ ತಿಂಡಿ. ತಿನ್ನು ಎಂದು ತಾವೂ ಬಾಯಿಗೆ ಹಾಕಿಕೊಂಡರು. ಅಲ್ಲಿನ ಪ್ರಕೃತಿ ಸೌಂದರ್ಯವನ್ನು ನೋಡುತ್ತಾ ಅದರಲ್ಲೇ ಲೀನವಾದರು. ಸುಮಾರು ಹತ್ತು ಘಂಟೆಯಾದರೂ ಎದುರಿನ ಬೆಟ್ಟದ ಸಾಲುಗಳಲ್ಲಿ ಮಂಜು ಮುಸುಕಿ ಮಸುಕು ಮಸುಕಾಗಿ ಕಾಣಿಸುತ್ತಿತ್ತು. ಬೆಟ್ಟಗಳ ಮೇಲೆ ಮೋಡಗಳು ಹಾದು ಹೋಗುತ್ತಿದ್ದವು. ಕೆಳಗೆ ಪ್ರಪಾತದಂತೆ ಕಾಣುವ ಕಾಡುಗುಡ್ಡಗಳ

ಸಮೂಹ ಆದರ ಮಧ್ಯೆ ಹಾವಿನಂತೆ ಡೊಂಕು ಡೊಂಕಾಗಿ ಹರಿಯುವ ರಸ್ತೆ. ಇಂಥ ಸೌಂದರ್ಯವನ್ನು ವೀಕ್ಷಿಸುತ್ತಿದ್ದ ಆಚಾರ್ಯರು ಇದ್ದಕ್ಕಿದ್ದಂತೆ ಉಚ್ಚಕಂಠದಿಂದ ಹಾಡಲು ಮೊದಲು ಮಾಡಿದರು. ಡಿ.ವಿ.ಜಿ. ಯವರ 'ನಡೆದು ನೋಡು ಕೊಡಗಿನ ಬೆಡಗಂ' ಎಂಬ ಮಾತು ನೆನಪಿಗೆ ಬಂದಿರಬೇಕು. ವಿ.ಸೀ. ಯವರ ಗೀತೆ-

'ನಿನ್ನ ನಾಡೀ ನಾಡು ನಿನ್ನ ಮಕ್ಕಳು ನಾವು
ಎಮ್ಮನ್ನು ನೀ ನಡೆಸು ದಿಗ್ವಿಜಯಕೆ...'

ಪುಂಖಾನುಪುಂಖನಾಗಿ ಹೊರಟಿತು ಅವರ ಕಂಠದಿಂದ ಆ ಗಾನ. ಬಹುಷಃ ಕೊಡಗಿನ ಜನ ಯೋಧರೆಂಬುದು ಅವರಿಗೆ ತಿಳಿದಿರಬೇಕು. ಅದಕ್ಕೇ ಆ ಹಾಡನ್ನು ಹಾಡಿರಬೇಕು. ಏನು ಆ ಕಂಠ! ಏನು ಆ ಭಾವುಕತೆ! ಆ ಕಂಠದಿಂದ ಹೊರಟಗಾನ ಕೆಳಗೆ ಪ್ರಪಾತದ ರಸ್ತೆಯಲ್ಲಿ ಹೋಗುತ್ತಿದ್ದ ಬಸ್ಸಿನ ಪ್ರಯಾಣಿಕರಿಗೂ ಕೇಳಿಸಿರಬಹುದು. ಹಂಸಾನಂದಿ (ಆಗ ನಾವು ಅದನ್ನು 'ಸೋಹನಿ' ಎನ್ನುತ್ತಿದ್ದೆವು) ರಾಗ ಆ ಗೀತೆಗೆ ಬಹಳವಾಗಿ ಹೊಂದಿತ್ತು. ಅದನ್ನು ಆಸ್ವಾದಿಸಿದ ನಾನು ಆ ಹಾಡನ್ನು ಅಲ್ಲೇ ಕಲಿತೆ. ಹೀಗೆ ನಾನು ಮೊದಲ ಬಾರಿಗೆ ಸಂಪತ್ಕುಮಾರಾಚಾರ್ಯರನ್ನು ಕಂಡೆ.

ಅಂದು ಸಂಜೆ ಅವರ ವಾಚನ ವೇದಾಂತ ಸಂಘದಲ್ಲಿ. ಅವರನ್ನು ಪರಿಚಯಿಸಿದ ನಂತರ ನಮ್ಮ ತಂದೆಯವರು ತಾವೇ ಶೃತಿ ಹಾಕಲು ಕುಳಿತರು. ಉದ್ಯೋಗ ಪರ್ವದ ಹತ್ತನೆಯ ಸಂಧಿ 'ಕುಂತೀಕರ್ಣ'ದ ಭಾಗ. ಕೃಷ್ಣನ ಭೇದೋಪಾಯ. ಕರ್ಣನಿಗೆ ಕೃಷ್ಣ ಅವನ ಜನ್ಮವೃತ್ತಾಂತವನ್ನು ತಿಳಿಸಿ ಅನೇಕ ಆಮಿಷಗಳನ್ನೊಡುತ್ತಾನೆ. ಕರ್ಣ ದುಃಖಿಸುತ್ತಾನೆ. ಒಳಗೊಳಗೆ ತೊಳಲಾಡುತ್ತಾನೆ. ಕಾನಡ ರಾಗದಲ್ಲಿ ಆಚಾರ್ಯರು 'ಕೊರಳಸೆರೆ ಹಿಗ್ಗಿದವು ದೃಗುಜಲ/ ಪುರವಣಿಸಿ ಕಡುನೊಂದನಕಟಾ ಕುರುಪತಿಗೆ ಕೇಡಾದುದೆಂದನು ತನ್ನ ಮನದೊಳಗೆ'.... ಹಾಡುತ್ತಿದ್ದಾರೆ.

ಆ ಪದ್ಯದ ಸೊಗಸಿಗೆ, ಮೈಮರೆತು ಆಚಾರ್ಯರು ಹಾಡುತ್ತಿದ್ದ ಭಾವುಕತೆಗೆ ಶ್ರೋತೃಗಳ ಕೊರಳ ಸೆರೆಯೂ ಬಿಗಿದಿತ್ತು. ಮಂತ್ರ ಮುಗ್ಧರಾಗಿದ್ದರು ಜನ. ಕೊನೆಯ ಮಂಗಳ ಪದ್ಯ 'ವೇದ ಪುರುಷನ' ಕೇಳಿದಾಗಲೇ ಎಲ್ಲರಿಗೂ ಎಚ್ಚರ. ಆ ಪದ್ಯವನ್ನ ಸಂಪತ್ಕುಮಾರಾಚಾರ್ಯರ ಬಾಯಲ್ಲೇ ಕೇಳಬೇಕು. ಅದರಲ್ಲೂ '....ಮಾತುಳನ ಮಾವನನತುಳ ಭುಜಬಲದಿ ಕಾದಿಗೆಲಿದನ-ಭೀಮನ' ಎನ್ನುವಾಗ ಅವರ ಕಂಠದ ನರನಾಡಿಗಳೂ ಉಬ್ಬಿ ಆ ಸ್ವರದಲ್ಲಿಯೇ ಭೀಮನ ಚಿತ್ರವನ್ನು ತೋರಿಸುವ ರೀತಿ ಇದುವರೆಗೂ ಯಾರಿಗೂ ಸಾಧಿಸಿಲ್ಲವೆನ್ನಬಹುದು. ಆದರೆ ಅದೇ

ಜಾಡನ್ನು ಹಿಡಿದು ಅವರೊಡನೇ ಕೂತು ಅದನ್ನು ಅಭ್ಯಸಿಸಿ ಹಾಡುತ್ತಿದ್ದರು ನಮ್ಮ ತಂದೆ-ಅನಂತಪದ್ಮನಾಭರಾಯರು. ಆ ಧ್ವನಿ ಸಂವರ್ಧನೆ ಮತ್ತಾರಿಗೂ ಬರಲಿಲ್ಲ. ಇದರಿಂದ ಅವರನ್ನು ಗುರುಸ್ಥಾನದಲ್ಲಿ ಕಂಡರು ನಮ್ಮ ತಂದೆಯವರು.

ಅದಾದ ಮರುದಿನ ವೀರಾಜಪೇಟೆಯಲ್ಲಿ ಅವರ ಕಾರ್ಯಕ್ರಮ ಏರ್ಪಾಡಾಗಿತ್ತು. ಆಚಾರ್ಯರ ಪತ್ನಿಯ ಬಲವಂತದಿಂದ ನಾವೂ ನಮ್ಮ ತಾಯಿಯವರೂ ಜೊತೆಯಲ್ಲಿ ಹೋಗುವಂತಾಯಿತು. ಅಲ್ಲಿ ಆಚಾರ್ಯರು ವಾಚನದ ನಂತರ ವೀ. ಸೀ. ಯವರ ಮತ್ತೊಂದು ಗೀತೆ 'ಕಣ್ತುಂಬ ನೋಡೆಮ್ಮ ಹರಸು ತಾಯಿ-ಭಾರತ ಭಾಗ್ಯೇಶ್ವರೀ' ಎಂಬ ಕವನವನ್ನು ಹಾಡಿದರು. ಆಗ ಸ್ವಾತಂತ್ರ್ಯಾಂದೋಲನದ ಕಾಲ. ಆ ಹಾಡಿಕೆ ಸಮಯೋಚಿತವಾಗಿತ್ತು. 'ಭಾರತ ಭಾಗ್ಯೇಶ್ವರೀ ಜೈಯೆಂಬ ಜಯ ಘೋಷ ಕೇಳಾ' ಎಂದು ಹಾಡಿದಾಗ ಆ ಧ್ವನಿ ಏರಿಸಿ ಹಾಡಿದ ರೀತಿ ದೆಹಲಿಯ ಕುಂಪಣಿ ಸರಕಾರದ ಅಧಿಕಾರಿಗಳ ಕಿವಿಗೂ ಮುಟ್ಟಿರಬಹುದು. ಅಂಥ ಕಂಚಿನ ಕಂಠ ಅವರದು. ಎಲ್ಲೆಲ್ಲೂ ಸ್ವಾತಂತ್ರ್ಯಗೀತೆಯನ್ನು ಹಾಡಿ ಆಂದೋಲನಕ್ಕೆ ಉತ್ತೇಜಿಸುತ್ತಿದ್ದ ಆಚಾರ್ಯರು ದೇಶಕ್ಕೆ ಸ್ವಾತಂತ್ರ್ಯ ಬಂದಿದ್ದನ್ನು ನೋಡಲೇ ಇಲ್ಲ. ಅದಕ್ಕೆ ಮುನ್ನವೇ ಭಗವಂತನ ಪಾದ ಸೇರಿಬಿಟ್ಟರು.

ಆಚಾರ್ಯರು ನಮ್ಮೂರಿಗೆ ಬಂದು ಹೋಗಿ ಸುಮಾರು ಎರಡು ವರ್ಷ ಕಳೆದಿರಬಹುದು. ಒಂದು ದಿನ ಮಧ್ಯಾಹ್ನ ಊಟಕ್ಕೆ ಬಂದ ನಮ್ಮ ತಂದೆಯವರು 'ಸಂಪತ್ಕುಮಾರಾಚಾರ್ಯರು ಹೋಗಿಬಿಟ್ಟರಂತೆ ಕಣೆ' ಎಂದು ನಮ್ಮ ತಾಯಿಯವರಿಗೆ ಹೇಳುತ್ತಿದ್ದರು. ಆ ದಿನವಿಡೀ ಏನೋ ಒಂದು ದೊಡ್ಡ ಆಸ್ತಿ ಕಳಕೊಂಡವರಂತೆ ಅವರು ತುಂಬಾ ವಿಮನಸ್ಕರಾಗಿದ್ದರು. ಸಂಜೆ ಅವರು ಹಾಡುತ್ತಿದ್ದ ರೀತಿಯಲ್ಲೇ ಕೆಲವು ಪದ್ಯಗಳನ್ನು ಹಾಡಿ ತಮ್ಮ ಗುರುವಿಗೆ ಅಶ್ರುಕಾಣಿಕೆ ನೀಡಿ ಮನಸ್ಸನ್ನು ಸ್ಥಿರತೆಗೆ ತಂದರು. ಹೀಗೆ ಗಮಕ ಕ್ಷೇತ್ರದಲ್ಲಿ ಬೃಹನ್ಮೂರ್ತಿಯಾಗಿ, ಕೆಲವೇ ವರ್ಷಗಳಲ್ಲಿ ಕೀರ್ತಿ ಶಿಖರವನ್ನೇರಿ ಗಮಕ ಭಗೀರಥರಲ್ಲೊಬ್ಬರೆನಿಸಿ ಭಗವಂತನ ಪಾದಾರವಿಂದ ಸೇರಿದ ಸಂಪತ್ಕುಮಾರಾಚಾರ್ಯರ ಜೀವನವೂ ಒಂದು ವಿಧದಲ್ಲಿ ಏರು ಪೇರೇ.

## ಆಚಾರ್ಯರ ಬಾಲ್ಯ, ವಿದ್ಯಾಭ್ಯಾಸ

ಕುಪ್ಪ!

ಆಚಾರ್ಯರ ಮನೆಯಲ್ಲಿ ಅವರನ್ನು ಕರೆಯುತ್ತಿದ್ದುದು ಹಾಗೆ! ಕುಪ್ಪ ಎಂದು. ಸಂಬಂಧಿಗಳು, ಅವರ ಚಿಕ್ಕಂದಿನ ಒಡನಾಡಿಗಳೂ ಸಹ ಆತ್ಮೀಯವಾಗಿ ಕರೆಯುತ್ತಿದ್ದುದು 'ಕುಪ್ಪ' ಎಂದೇ.

ಹುಟ್ಟಿದ ಮಗನಿಗೆ ಲಕ್ಷಣವಾಗಿ 'ಸಂಪತ್ಕುಮಾರ' ಎಂದೇ ಹೆಸರನ್ನಿಟ್ಟಿದ್ದರು ತಂದೆ-ತಾಯಿಗಳು. 'ಕುಪ್ಪ' ಅಡ್ಡ ಹೆಸರು-ಕಾರಣ ಕಸದ ಕುಪ್ಪೆಯಂತೆ ಮಗ ಹೇಗೋ ದೀರ್ಘಾಯುವಾಗಲಿ ಎಂದು ಆಶಿಸಿದ ತಾಯಿತಂದೆಯರು ಮಗನನ್ನು ಆತ್ಮೀಯವಾಗಿ ಕುಪ್ಪ ಎಂದರು. ಅದೇ ರೂಢಿನಾಮವಾಯಿತು.

ಆಚಾರ್ಯರು ಕಳಲೆ ಮನೆತನಕ್ಕೆ ಸೇರಿದವರು. ಅವರ ಹಿರಿಯರು ನಂಜನಗೂಡು ತಾಲೂಕಿನ ಕಳಲೆ ಗ್ರಾಮಕ್ಕೆ ಸೇರಿದವರು. ವ್ಯವಸಾಯ, ಬಿಡುವಿನ ವೇಳೆಯಲ್ಲಿ ವೈದಿಕ ವೃತ್ತಿ. ಕಾಲಕ್ರಮದಲ್ಲಿ ಅಲ್ಲಿದ್ದ ಚೂರು-ಪಾರು ಭೂಮಿಯನ್ನು ಮಾರಿಕೊಂಡು ಮೈಸೂರು ನಗರಕ್ಕೆ ಬಂದು ಅಲ್ಲಿನ ಅಗ್ರಹಾರವೊಂದರಲ್ಲಿ ನೆಲೆಸಿದ್ದರು. ಹೆಸರಿಗೆ ಮಾತ್ರ ಕಳಲೆ ಉಳಿದು ಕೊಂಡಿತ್ತು. ಹಾಗಾಗಿ ಇವರು ಕಳಲೆ ಸಂಪತ್ಕುಮಾರಾಚಾರ್ ಎಂದೇ ಕರೆದುಕೊಳ್ಳುತ್ತಿದ್ದರು.

ಕಳಲೆ ಗುಂಜಾ ಗೋಪಾಲಾಚಾರ್-ರಂಗಮ್ಮ ದಂಪತಿಗಳ ದ್ವಿತೀಯ ಪುತ್ರ ಸಂಪತ್ಕುಮಾರಾಚಾರ್. ಹಿರಿಯವಳು ಮಗಳು ಲಕ್ಷ್ಮಮ್ಮ. ಆಚಾರ್ಯರ ನಂತರ ಮತ್ತೊಬ್ಬ ಮಗ ಕೆ. ಜಿ. ಶ್ರೀನಿವಾಸನ್, ಕಡೆಯ ಮಗಳು ರಾಜಲಕ್ಷ್ಮಿ.

ಗೋಪಾಲಾಚಾರ್ಯರು ಅಂದಿನ ಮೈಸೂರು ಸಂಸ್ಥಾನದ ಸರಕಾರದಲ್ಲಿ ನೌಕರಿ ಮಾಡುತ್ತಿದ್ದರು. ಆದಾಯ ಇಲಾಖೆ ಗುಮಾಸ್ತರಾಗಿದ್ದಾಗಲೇ ನಿವೃತ್ತಿಗೆ ಮುಂಚೆಯೇ ಕಣ್ಣುಮುಚ್ಚಿದರು. ಆಗ ಮಗ ಸಂಪತ್ಕುಮಾರನಿಗೆ ೧೦-೧೧ ವಯಸ್ಸಿರಬಹುದು. ಅಕ್ಕ ಲಕ್ಷ್ಮಮ್ಮನಿಗೆ ಲಗ್ನವಾಗಿತ್ತು. ತಾಯಿ-ತಮ್ಮ-ತಂಗಿ ಇವರ ಪೋಷಣೆಯ ಭಾರ ಈ ಪುಟ್ಟ ಬಾಲಕನ ಮೇಲೆ ಬಿತ್ತು. ತಾಯಿ ರಂಗಮ್ಮ ಸಾಧ್ವಿ, ಧೈರ್ಯದಿಂದ ಮಕ್ಕಳ ಪೋಷಣೆಯ ಭಾರವನ್ನು ಹೊತ್ತರು.

ಬಾಲಕ 'ಕುಪ್ಪ' ದೇವರನ್ನು ನಂಬಿದ. ಅವನ ಪಾದಗಳನ್ನು ಗಟ್ಟಿಯಾಗಿ ಹಿಡಿದ. ಭೀಷ್ಮನ ನುಡಿಯಂತೆ 'ದೇವನಾಮದ ಜೊಡು ನಮ್ಮನು ಕಾವುದೈ.... ನಾಮಧಾರಿಗಳು ಅತುಳ ಬಲರು' ಎಂಬ ಮಾತನ್ನು ಬಲವಾಗಿ ನಂಬಿದ.

ಹುಡುಗನಿಗೆ ದೈವದತ್ತವಾಗಿ ಬಂದು ಕೂಡಿತ್ತು ಅವನ ಕಂಠಶ್ರೀ. ಅದನ್ನೇ ತನ್ನ ಸಾಂಸಾರಿಕ ವ್ಯವಹರಣೆಗೆ ಮೂಲಧನವನ್ನಾಗಿಸಿಕೊಂಡ. ಹಲವಾರು ದಾಸಕೃತಿಗಳು ಹಾಡಲು ಬರುತ್ತಿತ್ತು. ಇನ್ನಷ್ಟು ಹಾಡುಗಳನ್ನು ಕಲಿತು ಕಂಠ ಮಾಡಿಕೊಂಡ. ಭಾವಪೂರ್ಣವಾಗಿ ಹಾಡುವುದನ್ನು ಅಭ್ಯಸಿಸಿದ. ಇದೇ ಅವನ ಜೀವನಕ್ಕೆ ದಾರಿಯಾಯಿತು. ಉಂಛವೃತ್ತಿಯ ಮೊರೆ ಹೊಕ್ಕ ಹುಡುಗ ಕುಪ್ಪ.

ಪ್ರತಿ ಮುಂಜಾನೆ ಹೊತ್ತು ಹುಟ್ಟುವ ಮುಂಚೆಯೇ ಎದ್ದು ಪ್ರಾತರ್ವಿಧಿಗಳನ್ನೇ ತೀರಿಸಿ ಸ್ನಾನ-ಸಂಧ್ಯಾದಿಗಳನ್ನು ಮಾಡಿ-ತನಗೆ ತಿಳಿದವರ ಮನೆಗಳಿಗೆ ಹೋಗಿ ಭಾವ ಪೂರ್ಣವಾಗಿ ತನ್ನ ಸಿರಿ ಕಂಠದಿಂದ ದೇವರ ನಾಮಗಳನ್ನು ಹಾಡುತ್ತಿದ್ದ. ಮನೆ ಮಂದಿಯೆಲ್ಲರೂ ಆ ಬಾಲವೃದ್ಧರಾದಿಯಾಗಿ ತನ್ಮಯರಾಗಿ ಕುಳಿತು ಹಾಡು ಕೇಳುತ್ತಿದ್ದರು. ಹುಡುಗ ಉಪಾದಾನಕ್ಕೆಂದು ತಂದಿದ್ದ ಪಾತ್ರೆಯಲ್ಲಿ ಅಕ್ಕಿ-ಧಾನ್ಯಗಳನ್ನು ಸುರಿಯುತ್ತಿದ್ದರು. ಕೆಲವರು ಇನ್ನಷ್ಟು ಹಾಡು ಹೇಳಿಸಿ ತೃಪ್ತಿಯಾಗುವಷ್ಟು ಕೇಳಿ ತೋಚಿದಷ್ಟು ದುಡ್ಡು ಕೊಡುತ್ತಿದ್ದರು. ಮಾಡಿದ ತಿಂಡಿಗಳನ್ನು ಬೊಗಸೆ ತುಂಬಾ ನೀಡುತ್ತಿದ್ದರು. ಹುಡುಗನ ವರ್ಚಸ್ಸು- ಹಾಡುವಿಕೆಯನ್ನು ಕೇಳಿ ಎಲ್ಲರೂ ಬಾಯ್ತುಂಬ ಹರಸುವವರೇ. ಹೀಗೆ ಹಿರಿಯ ಆಶೀರ್ವಾದ ಹೊತ್ತು ಆ ದಿನದ ಸಂಪಾದನೆಯನ್ನೇ ತಾಯಿಯ ಮುಂದಿಡುತ್ತಿದ್ದ. ಬಂದ ವರಮಾನದಲ್ಲಿ ಮುಚ್ಚಟೆಯಾಗಿ ಸಂಸಾರ ತೂಗಿಸುತ್ತಿದ್ದರು ರಂಗಮ್ಮ. ಆಕೆ ಸದ್ಗುಣಿ ಕಷ್ಟ ಸಹಿಷ್ಣು. ಮಕ್ಕಳನ್ನು ಅಕ್ಕರೆಯಿಂದ ಇದ್ದುದರಲ್ಲೇ ತೃಪ್ತಿಯಾಗುವಂತೆ ಸಾಕಿದರು. ತಾಯಿಯ ಈ ಎಲ್ಲ ಗುಣಗಳೂ ಮಗನಿಗೆ ಬಂದಿತ್ತು. ಅಲ್ಲದೆ ಆತ ಸ್ವಾಭಿಮಾನಿಯಾಗಿ ಆತ್ಮವಿಶ್ವಾಸವನ್ನು ಬೆಳೆಸಿಕೊಂಡಿದ್ದ. ಜೊತೆ ಜೊತೆಯಲ್ಲೇ ಹೇಗೋ ಶಾಲೆಗೆ ಹೋಗುತ್ತಾ ಪ್ರಾಥಮಿಕ ವಿದ್ಯಾಭ್ಯಾಸವನ್ನು ಮುಗಿಸಿ ಪ್ರೌಢ ವಿದ್ಯಾಭ್ಯಾಸಕ್ಕಾಗಿ ಶಾರದಾ ವಿಲಾಸ ಪ್ರೌಢಶಾಲೆ ಸೇರಿದ. ಅಲ್ಲಿಂದಲೇ ಹುಡುಗ 'ಕುಪ್ಪ'ನ ಜೀವನ ಚಕ್ರ ಬದಲಾಯಿಸಿತು.

## ಶಿಕ್ಷಕರ ಪ್ರೋತ್ಸಾಹ-ಉತ್ತೇಜನ

ಸಂಪತ್ಕುಮಾರಾಚಾರ್ಯ ಶಾರದಾವಿಲಾಸ ಶಾಲೆಗೆ ಸೇರಿದಾಗ ಡಾ|| ಕೆ. ಆರ್. ರಾಮಸ್ವಾಮಿಯವರು ಅಲ್ಲಿನ ಪ್ರಾಧ್ಯಾಪಕರಾಗಿದ್ದರು. ಅಲ್ಲದೆ ನಾಟಕಕಾರರಾಗಿ 'ದಾನಶೂರಕರ್ಣ' ನಾಟಕವನ್ನು ನಾಟಕ ಕಂಪನಿಯೊಂದಕ್ಕೆ ಬರೆದು ಕೊಟ್ಟಿದ್ದ ಎಂ. ಎಸ್. ರಾಮಸ್ವಾಮಿಯವರು ಸಹ ಅಲ್ಲಿನ ಅಧ್ಯಾಪಕವರ್ಗದಲ್ಲಿದ್ದರು. ಈ ರಾಮಸ್ವಾಮಿದ್ವಯರು ಸಂಪತ್ಕುಮಾರನ ಕಂಠಶ್ರೀಗೆ ಮಾರು ಹೋದವರು. ಶಾಲೆಯಲ್ಲಿ ಯಾವುದೇ ಸಮಾರಂಭ-ಉತ್ಸವಗಳಾಗಲೀ ಸಂಪತ್ಕುಮಾರಾಚಾರ್ಯರ ಹಾಡು ಇರಲೇಬೇಕು. ಅಷ್ಟೆ ಅಲ್ಲ ರಂಗಭೂಮಿಯ ಹವ್ಯಾಸೀ ಕಲಾವಿದರಾಗಿದ್ದ ಇವರು ತಮ್ಮ ನಾಟಕಗಳಲ್ಲಿ ಬರುತ್ತಿದ್ದ ಸಂಗೀತ ಪ್ರಧಾನವಾದ ಪಾತ್ರಗಳನ್ನು ಆಚಾರ್ಯರಿಗೆ ಕೊಡುತ್ತಿದ್ದರು. ಸುಪ್ತವಾಗಿದ್ದ ಹುಡುಗನ ಪ್ರತಿಭೆ ವಿಕಸಿಸಲು ಅನುವು ಮಾಡಿಕೊಟ್ಟರು. ಎಂ. ಎಸ್. ರಾಮಸ್ವಾಮಿಯವರು ತಮ್ಮ

‘ಯಮರಾಯ ವಿಜಯ’, ‘ವಿದ್ಯಾರಣ್ಯವಿಜಯ’ ನಾಟಕಗಳಲ್ಲಿ ಪ್ರಮುಖ ಪಾತ್ರಗಳನ್ನಿತ್ತು ಕಂದ ವೃತ್ತಗಳನ್ನು ಹಾಡಲು ಉತ್ತಮ ಅವಕಾಶ ಕಲ್ಪಿಸಿಕೊಟ್ಟು ಉತ್ತೇಜನ ನೀಡಿದರು.

‘ತಾಪತ್ರಯ’ ಅಯ್ಯಂಗಾರ್ ಎಂದೇ ಪ್ರಸಿದ್ಧರಾಗಿದ್ದ ಹಾಗೂ ನಾಟಕರತ್ನ ವರದಾಚಾರ್ಯರನ್ನೇ ಅನುಕರಣೆ ಮಾಡುವುದರಲ್ಲಿ ಸಿದ್ಧ ಹಸ್ತರೆನಿಸಿದ್ದ ಕೆ. ಕೃಷ್ಣಸ್ವಾಮಿ ಅಯ್ಯಂಗಾರ್ ಶಾರದಾವಿಲಾಸ ಹೈಸ್ಕೂಲಿನ ಮತ್ತೊಬ್ಬ ಅಧ್ಯಾಪಕರು. ಅಲ್ಲದೆ ಡಾ|| ವಿ. ಸೀತಾರಾಮಯ್ಯನವರೂ (ವಿ.ಸೀ) ಸಹ ಅಲ್ಲಿ ಉಪಾಧ್ಯಾಯ ವೃತ್ತಿಯಲ್ಲಿದ್ದರು. ಇವರೆಲ್ಲರೂ ಬಾಲಕ ಸಂಪತ್ಕುಮಾರನಿಗೆ ತಮ್ಮ ಶಕ್ತಿ ಮೀರಿ ಪ್ರೋತ್ಸಾಹ ನೀಡಿದ ಗಣ್ಯರು. ಶಾರದಾವಿಲಾಸ ಪ್ರೌಢಶಾಲೆಯ ಕಲಾವಿಲಾಸಿ ಸಂಘ ಸಂಸರ ‘ವಿಗಡ ವಿಕ್ರಮರಾಯ’ ನಾಟಕವನ್ನು ಅಭಿನಯಿಸಿದಾಗ ಸಂಪತ್ಕುಮಾರಾಚಾರ್ಯರು ಬೊಮ್ಮರಸ ಪಂಡಿತನ ಪಾತ್ರವಹಿಸಿ ನಾಟಕಕ್ಕೆ ಹೆಚ್ಚಿನ ಶೋಭೆ ನೀಡಿದರಂತೆ.

## ಆಚಾರ್ಯರ ನಟನಾ ಸಾಮರ್ಥ್ಯ

ಆಚಾರ್ಯರು ಶಾರದಾವಿಲಾಸ ಹೈಸ್ಕೂಲಿನಲ್ಲಿ ವ್ಯಾಸಂಗ ಮಾಡುತ್ತಿದ್ದ ಕಾಲದಲ್ಲಿ ಅವರಲ್ಲಿದ್ದ ಕಲೆಗಾಗಿ ಸ್ನೇಹ ಬಯಸುತ್ತಿದ್ದ ಹಲವಾರು ಸಹಪಾಠಿಗಳಲ್ಲಿ ವೈಣಿಕ ವಿದ್ವಾನ್ ಎಲ್. ರಾಜಾರಾಯರೊಬ್ಬರು, ವೀಣೆ ಶೇಷಣ್ಣನವರ ನೇರ ಶಿಷ್ಯರಾಗಿದ್ದ ವೀಣೆ ಲಕ್ಷ್ಮಣರಾವ್ ಅವರ ಮಕ್ಕಳು ರಾಜಾರಾಯರು. ಈ ಹೊತ್ತಿಗಾಗಾಲೇ ವೀಣೆ-ಹಾಡುಗಾರಿಕೆ ಎರಡರಲ್ಲೂ ಸಾಕಷ್ಟು ಪಾಂಡಿತ್ಯಗಳಿಸಿದ್ದರೂ ವೃತ್ತಿ ಮಾತ್ಸರ್ಯಕ್ಕೆಡೆಗೊಡದೆ ಆಚಾರ್ಯರ ಸ್ನೇಹ ಹಸ್ತ ಬಯಸಿದ ವಿಶಾಲ ಹೃದಯರು. ವಿದ್ಯಾಭ್ಯಾಸ ಮುಗಿದ ಮೇಲೂ ಇವರ ಸ್ನೇಹಕ್ಕೆ ಎಂದೂ ಚ್ಯುತಿಬರಲಿಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಪ್ರಯೋಗಿಸಿದ ‘ವಸಂತಸೇನೆ’ ನಾಟಕದಲ್ಲಿ ಇಬ್ಬರದೂ ಪಾತ್ರವಿತ್ತು. ರಾಜಾರಾಯರು ಚಾರುದತ್ತನಾದರೆ ಆಚಾರ್ಯರು ಶಕಾರನಾಗಿ ಪಾತ್ರ ವಹಿಸಿದ್ದರು. ಈ ಹೊತ್ತಿಗಾಗಲೇ ಆಚಾರ್ಯರು ಗಮಕ ಕಲೆಯ ಉತ್ತುಂಗ ಶಿಖರಕ್ಕೇರಿದ್ದರೆ ರಾಜಾರಾಯರು ವೈಣಿಕ ವಿದ್ವಾಂಸರಾಗಿ ವಿಜೃಂಭಿಸಿದ್ದರು. ಒಬ್ಬರು ಸಂಗೀತ ವಿದ್ವಾಂಸರು ಮತ್ತೊಬ್ಬರು ಅದ್ವಿತೀಯ ಗಮಕಿಗಳು. ಅಂದಮೇಲೆ ಕೇಳಬೇಕೆ. ಕಂದ ವೃತ್ತಗಳ ಪೈಪೋಟಿಯೋ ಪೈಪೋಟಿ. ಅದ್ಭುತವಾದ ಅಭಿನಯ. ಪ್ರೇಕ್ಷಕರಿಗೆ ರಸದೌತಣ! ‘ವಸಂತ ಸೇನಾ’ ನಾಟಕ-ಚಲನ ಚಿತ್ರಗಳಲ್ಲಿ ಅಭಿನಯಿಸಿದ ಸುಬ್ಬಯ್ಯನಾಯ್ಡು -ನಾಗೇಂದ್ರರಾಯರ ಜೋಡಿ ಈ ಜೋಡಿಯ ಮುಂದೆ ಸಪ್ಪೆ ಎಂದು ಪ್ರೇಕ್ಷಕರು ಉದ್ಗರಿಸಿದರಂತೆ.

ಹುಡುಗನಾಗಿದ್ದಾಗಿನಿಂದಲೂ ಆಚಾರ್ಯರು ದೈವ ಭಕ್ತರು. ಅಷ್ಟೇ ಅಲ್ಲ ಆಚಾರ್ಯ ನಿಷ್ಠರು ಕೂಡ. ಗ್ರಹಣ - ಸಂಕ್ರಮಣ ಪುಣ್ಯದಿನಗಳಲ್ಲಿ ಮೈಸೂರಿನಿಂದ ಪಶ್ಚಿಮ ವಾಹಿನಿಗೆ ಕಾಲು ನಡಿಗೆಯಲ್ಲಿ ಹೋಗಿ ಪಿತೃಗಳಿಗೆ ತರ್ಪಣ ನೀಡಿ ಮೈಸೂರಿಗೆ ವಾಪಸಾಗುತ್ತಿದ್ದರಂತೆ.

ಮೈಸೂರಿನ ಕಾರಂಜಿ ಕೆರೆಯ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಪ್ರತಿ ಶನಿವಾರ ನಡೆಯುವ ಭಜನಾ ಗೋಷ್ಠಿಯಲ್ಲಿ ಆಚಾರ್ಯರದ್ದೇ ಪ್ರಮುಖ ಪಾತ್ರ. ಅಲ್ಲಿ ಅವರು ಹಾಡುವ ದೇವರ ನಾಮಗಳನ್ನು ಕೇಳಲೆಂದೇ ಭಕ್ತಾದಿಗಳು ಬರುತ್ತಿದ್ದರಂತೆ.

ಕಲೋಪಾಸಕರಾಗಿದ್ದ ಆಚಾರ್ಯರು ವಿದ್ಯಾಭ್ಯಾಸದಲ್ಲೂ ಅಷ್ಟೇ ನಿಷ್ಠರಾಗಿದ್ದವರು. ಓದು-ಪಾಠಗಳನ್ನು ಎಂದೂ ಉಪೇಕ್ಷೆ ಮಾಡಿದವರಲ್ಲ. ಸಂಸ್ಕೃತವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು ವ್ಯಾಸಂಗ ಮುಂದುವರಿಸಿದರು. ಶಾರದಾ ವಿಲಾಸ ಪ್ರೌಢಶಾಲೆಯಲ್ಲಿ ಪ್ರೌಢ ವಿದ್ಯಾಭ್ಯಾಸ ಮುಗಿಸಿ ಮುಂದೆ ಉನ್ನತ ಶಿಕ್ಷಣಕ್ಕಾಗಿ ಮೈಸೂರಿನ ಮಹಾರಾಜ ಕಾಲೇಜು ಸೇರಿದರು.

## ಮತ್ತೊಬ್ಬ ಗಮಕಿಯ ಉದಯ

ಆಚಾರ್ಯರು ಮಹಾರಾಜ ಕಾಲೇಜಿಗೆ ಸೇರಿ ಇತಿಹಾಸ, ಅರ್ಥಶಾಸ್ತ್ರ ಹಾಗೂ ರಾಜಕೀಯ ಶಾಸ್ತ್ರಗಳನ್ನು ತಮ್ಮ ಐಚ್ಛಿಕ ವಿಷಯವಾಗಿ ಆಯ್ದುಕೊಂಡರು. ಪ್ರಸಿದ್ಧ ಅರ್ಥಶಾಸ್ತ್ರಜ್ಞ ಎನ್. ಎಸ್. ಸುಬ್ಬರಾಯರು, ಪ್ರೊ|| ಡಿಸೋಜಾರವರು ಹಾಗೂ ಆಚಾರ್ಯ ಬಿ. ಎಂ. ಶ್ರೀಕಂಠಯ್ಯನವರು ಆಗ ಇವರಿಗೆ ವಿದ್ಯಾಗುರುಗಳು. ಪ್ರಸಿದ್ಧ ಗಮಕಿ ಭಾರತದ ಕೃಷ್ಣರಾಯರು ಅಲ್ಲಿನ ಮುಖ್ಯ ಗ್ರಂಥಪಾಲಕರು.

ಕರ್ನಾಟಕ ಸಂಘ ಕಾಲೇಜಿನ ವಾರ್ಷಿಕೋತ್ಸವದ ಅಂಗವಾಗಿ ಅನೇಕ ಸ್ಪರ್ಧೆಗಳನ್ನು ಹಮ್ಮಿಕೊಂಡಿದ್ದು ಅದರಲ್ಲಿ ಭಾರತ ವಾಚನವೂ ಸೇರಿತ್ತು. ಈಗಾಗಲೇ ನಾಟಕಗಳಲ್ಲಿ ಕಂದ ವೃತ್ತಗಳನ್ನು ಹಾಡಿ ಅಭ್ಯಾಸವಿದ್ದು, ದೇವರ ನಾಮಗಳ ಬಲದಿಂದ ಶುದ್ಧ ಸಾಹಿತ್ಯೋಚ್ಚಾರಣೆ, ರಾಗಜ್ಞಾನ ಪಡೆದಿದ್ದ ಆಚಾರ್ಯರಿಗೆ ಭಾರತ ವಾಚನ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಹಂಬಲ ವಾಯಿತು. ಅಲ್ಲದೆ ನಾಟಕ ಶಿರೋಮಣಿ ವರದಾಚಾರ್, ಅಭಿನಯ ವಿಶಾರದ ಜಿ. ನಾಗೇಶ ರಾಯರಂಥ ಮಹಾನ್ ಕಲಾವಿದರು ಹಾಡುವ ರೀತಿಯನ್ನು ಅನುಕರಿಸುವುದರಲ್ಲಿ ಸಾಕಷ್ಟು ರೀತಿಯಲ್ಲಿ ಸಫಲರಾಗಿದ್ದರು. ಆಗ ಅವರಿಗೆ ಗೋಚರಿಸಿದವರು ಭಾರತದ ಕೃಷ್ಣರಾಯರು. ಈಗಾಗಲೇ

ಕಾಲೇಜಿನಲ್ಲಿ ಇತರ ಕಡೆಗಳಲ್ಲಿ ಅವರ ವಾಚನಗಳನ್ನು ಕೇಳಿದ್ದರೂ ಆಚಾರ್ಯರ ಮನಸ್ಸು ಆ ಕಡೆ ಹರಿದಿರಲಿಲ್ಲ. ಈಗ ಆ ಸಂಧರ್ಭ ಉಪಯೋಗಿಸಿಕೊಂಡು ಕೃಷ್ಣರಾಯರನ್ನು ಆಶ್ರಯಿಸಿದರು, ಮಾರ್ಗದರ್ಶನ ನೀಡಬೇಕೆಂದು ವಿನಂತಿಸಿಕೊಂಡರು.

ಗಮಕ ಕಲಾಕ್ಷೇತ್ರದಲ್ಲಿ ಕೃಷ್ಣರಾಯರು ಸುಪ್ರಸಿದ್ಧರು. ಅಷ್ಟೇ ವಿನಯಶೀಲರು. ಆಚಾರ್ಯರ ಮನವಿಯನ್ನು ಸಂತೋಷದಿಂದ ಒಪ್ಪಿಕೊಂಡ ರಾಯರು ಅವರು ಸ್ಪರ್ಧೆಗೆ ಆಯ್ದುಕೊಂಡಿರುವ ಭಾಗ ಯಾವುದೆಂದು ವಿಚಾರಿಸಿ ಅವರ ಮುಂದೆ ವಾಚಿಸುವಂತೆ ಕೋರಿದರು. ಆಚಾರ್ಯರು ಉದ್ಯೋಗ ಪರ್ವದ ಹತ್ತನೇ ಸಂಧಿ 'ಭೇದೋಪಾಯ'ದ ಭಾಗವನ್ನು ಅವರ ಮುಂದೆ ವಾಚನ ಮಾಡಿದರು. ಗಮಕ ಶೈಲಿಗೆ ಹೊಂದುವಂತೆ ಹಲವಾರು ಕಡೆ ತಿದ್ದಿ ಹೇಳಿಸಿ ರಾಯರು ಆಚಾರ್ಯರನ್ನು ಹುರಿದುಂಬಿಸಿದರು.

ಸ್ಪರ್ಧೆಯ ದಿನ ಆಚಾರ್ಯರು ತಮ್ಮ ಉಚ್ಚಕಂಠದಿಂದ ''ಸೆಣಸುವಘಟರ ಗಂಡ ಸಮರಾಂಗಣ ಕಮಲ ಭೇರುಂಡಾದಿನಮಣಿಯ ಮಗನುದ್ದಂಡ ಕರ್ಣನ ಕಂಡಳಾ ಕುಂತಿ....' ಎಂದು ಆರಂಭಿಸಿದಾಗ ಇಡೀ ಸಭೆಯೇ ಸಂಮೋಹನಕ್ಕೊಳಗಾದರಂತೆ. ಅಂದ ಮೇಲೆ ಕೇಳಬೇಕೆ! ಬಹುಮಾನ ಇವರಿಗೇ ಕಟ್ಟಿಟ್ಟ ಬುತ್ತಿಯಾಯಿತು. ಪ್ರಥಮ ಹಂತದಲ್ಲೇ ಅದ್ಭುತ ವಿಜಯ ಸಾಧಿಸಿದರು. ಕರ್ಣಾಟಕ ಗಮಕ ಪ್ರಪಂಚದಲ್ಲಿ ಮತ್ತೊಬ್ಬ ಗಮಕಿಯ ಉದಯವಾಯಿತು. ಗಮಕ ಕಲೆಗೆ ಭಾರತದ ಕೃಷ್ಣರಾಯರೇ ಇವರ ಆದಿ ಗುರುಗಳೆನಿಸಿದರು. ಇಂಥ ಒಬ್ಬ ಶೋಭಾಯಮಾನ ಗಮಕಿಯ ಉದಯಕ್ಕೆ ಕಾರಣರಾದ ಹೆಗ್ಗಳಿಕೆ ಮಹಾರಾಜ ಕಾಲೇಜಿನ ಕರ್ಣಾಟಕ ಸಂಘಕ್ಕೆ ಸಲ್ಲಬೇಕು.

## ವೃತ್ತಿ ಜೀವನಕ್ಕೆ ಬೆಂಗಳೂರಿಗೆ

ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ತಮ್ಮ ಪದವಿ ಪರೀಕ್ಷೆಯನ್ನು ಮುಗಿಸಿ ಬಿ.ಎ. ಪದವೀಧರರಾದ ಆಚಾರ್ಯರು ವೃತ್ತಿ ಜೀವನವನ್ನು ಆರಂಭಿಸುವ ಸಲುವಾಗಿ ಬೆಂಗಳೂರಿಗೆ ವಲಸೆ ಬಂದರು. ಅಲ್ಲಿನ ಎಸ್.ಎಲ್.ಎನ್. ಪ್ರೌಢಶಾಲೆಯಲ್ಲಿ ಅಧ್ಯಾಪಕರಾಗಿ ತಮ್ಮ ವೃತ್ತಿಜೀವನ ಆರಂಭಿಸಿದರು.

ಸಂಪತ್ಕುಮಾರಾಚಾರ್ಯರನ್ನು ಬಹಳ ಹತ್ತಿರದಿಂದ ನೋಡಿದ ಅವರೊಡನೆ ವ್ಯಾಸಂಗಮಾಡಿ ಸಹಪಾಠಿಗಳಾಗಿದ್ದ ಮತ್ತೋರ್ವ ಗಮಕಿ

ಎಸ್. ನಾಗೇಶರಾಯರು ಸಂಪತ್ಕುಮಾರಾಚಾರ್ಯರ ಗಮಕ ಪ್ರೌಢಿಮೆ ಯನ್ನು ಕಂಡೇ ಅವರ ಸ್ನೇಹ ಬೆಳೆಸಿದರಂತೆ. ಅವರು ತಮ್ಮ ನೆನಪಿನ ಸಂಚಿಯಿಂದ ಆಚಾರ್ಯರ ವ್ಯಕ್ತಿತ್ವವನ್ನು ಬಣ್ಣಿಸುವುದು ಹೀಗೆ. ಕಾಲೇಜಿಗೆ ನಾಗೇಶರಾಯರು ಸೇರಿದ ಆರಂಭದಲ್ಲಿ ಒಂದು ಸಭೆ. ಅಂದು ಸ್ವಾಗತ ಗೀತೆ ಹಾಡಲು ಬಂದ ವಿದ್ಯಾರ್ಥಿ - ಎತ್ತರವಾದ ಆಳು, ದಪ್ಪಗಿನ ಮೂಗು ತುಟಿ - ಮಾಲಗಣ್ಣು, ಹಾಕಿದ್ದುದು ಹರಕು ಶರಟು - ಒಂದು ಕೊಳೆಯಾದ ಗಾಂಧಿ ಟೋಪಿ, ಹಣೆಯಲ್ಲಿ ಮೂರು ನಾಮ. ಬಹುಶಃ ಬಿಳೀನಾಮದ ದೆಸೆಯಿಂದ ತಲೆಯ ಮೇಲಿನ ಟೋಪಿ ಮಸಕಾಗಿ ಕೊಳೆಯಂತೆ ಕಂಡಿರ ಬಹುದು. ಆತ ಗಂಟಲು ಸರಿಮಾಡಿಕೊಂಡು ಹುಯಿಲಗೋಳ ನಾರಾಯಣ ರಾಯರ ''ಉದಯವಾಗಲಿ ನಮ್ಮ ಚೆಲುವ ಕನ್ನಡನಾಡು'' ಗೀತೆಯನ್ನು ಮೋಹನ ರಾಗದಲ್ಲಿ ಮನಮೋಹಕವಾಗಿ ಹಾಡಿದರಂತೆ. ರಾಯರು ಪಕ್ಕದ ವಿದ್ಯಾರ್ಥಿಯನ್ನು ವಿಚಾರಿಸಿದಾಗ ಆತನೇ ಸಂಪತ್ಕುಮಾರಾಚಾರ್ಯ ನೆಂತಲೂ, ಭಾರತವಾಚನ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ ಪಡೆದವ ರೆಂತಲೂ ತಿಳಿಯಿತು. ನಾಗೇಶರಾಯರಿಗೂ ಭಾರತ ಓದುವ ಹವ್ಯಾಸ ವಿದ್ದುದರಿಂದ ಇಬ್ಬರ ಸ್ನೇಹಕ್ಕೆ ಅದೇ ಬೆಸುಗೆಯಾಯಿತು. ರಾಯರ ಪ್ರಕಾರ ಆಚಾರ್ಯರದ್ದು ಸಿಂಹಕಂಠ!

ಮುಂದೆ ಓದು ಮುಗಿದ ನಂತರ ನಾಗೇಶರಾಯರೂ ಬೆಂಗಳೂರಿನಲ್ಲಿ ವೃತ್ತಿ ಹಿಡಿದು ಸರಕಾರಿ ನೌಕರರಾದರು. ಮತ್ತೆ ನಗರದಲ್ಲಿ ಇಬ್ಬರ ಮಿಲನ. ಗೆಳೆತನ ಮುಂದುವರಿಯಿತೆಂದು ಆಚಾರ್ಯರನ್ನು ಸದಾ ಸ್ಮರಿಸುವ ನಾಗೇಶರಾಯರು ತಮ್ಮ ನೆನಪಿನ ಸಂಚಿಯಿಂದ ಆಚಾರ್ಯರ ಬಗ್ಗೆ ಒಂದೊಂದೇ ವಿಷಯ ತೆಗೆಯುತ್ತಾರೆ.

ಅವರ ವಾಚನ ವೈಖರಿಯನ್ನು ತಿಳಿಸುವ ನಾಗೇಶರಾಯರು ಅವರ ಕಂಠದಿಂದ ಹೊರಹೊಮ್ಮುವ ಕುಂತೀ ಕರ್ಣ, ಅಕ್ಷಯಾಂಬರ, ಸೀತಾಪರಿತ್ಯಾಗ ವಾಚನಗಳನ್ನು ಕೇಳಿದಾಗ ಕಣ್ಣೀರಿಡದವರಿಲ್ಲ. ಹಾಗೇ ಸುಧನ್ವನ ಕಾಳಗ ಓದಿದನೆಂದರೆ ಪರದೆಗಳೂ ಕಲಿಗಳಾಗ ಬೇಕು. ಹಾಗಿತ್ತು ಅವರ ವಾಚನದ ವೈಖರಿ. ಧ್ವನಿವರ್ಧಕದ ಸಹಾಯವಿಲ್ಲದೇ ಓದುತ್ತಿದ್ದ ಆಚಾರ್ಯರು ಸಾವಿರ ಜನದ ಸಭೆಗೆ ಓದುವಷ್ಟೇ ಆಸಕ್ತಿಯಲ್ಲಿ ನಾಲ್ಕು ಜನರಿದ್ದ ಕಡೆಯೂ ಓದುತ್ತಿದ್ದರು. ಇದು ದೇಹಾರೋಗ್ಯದ ಮೇಲೆ ಮಹತ್ತರ ಪರಿಣಾಮ ಬೀರುತ್ತಿತ್ತು ಎಂದೂ ಕಂಠಕ್ಕೆ ವಿರಾಮ ಕೊಟ್ಟವರಲ್ಲ. ಹೊಟ್ಟೆಗೂ ಅಷ್ಟೇ ಸದಾ ಏನಾದರೂ ಕುರುಕುತ್ತಲೇ ಇರಬೇಕು. ಕೆಲವು ಸಲವಂತೂ ದಿನಕ್ಕೆ ಎರಡು ಮೂರುಕಡೆ ವಾಚನ ಮಾಡಿದ್ದೂ ಉಂಟು.

ಬಿ.ಎ. ಪದವಿ ಗಳಿಸಿ ಬೆಂಗಳೂರಿನಲ್ಲಿ ಅಧ್ಯಾಪಕ ವೃತ್ತಿ ಹಿಡಿದ ಆಚಾರ್ಯರು ಮುಂದೆ ಶಿಕ್ಷಕರಿಗೆ ಅಗತ್ಯವೆನಿಸಿದ ಬಿ. ಟಿ. ಪದವಿಯನ್ನು ಗಳಿಸಿ ಕಳಲೆ ಸಂಪತ್ಕುಮಾರಾಚಾರ್ಯ ಬಿ.ಎ., ಬಿ.ಟಿ. ಎನಿಸಿದರು. ಆದರ್ಶ ಅಧ್ಯಾಪಕರೆನಿಸಿ ವಿದ್ಯಾರ್ಥಿಗಳ ಮನೋಧರ್ಮವನ್ನು ಚೆನ್ನಾಗಿ ಅರ್ಥ ಮಾಡಿಕೊಂಡು ಪಾಠ ಮಾಡುವ ಪರಿಪಾಠವಿತ್ತು ಆಚಾರ್ಯರಲ್ಲಿ.

ಆಚಾರ್ಯರು ಬೆಂಗಳೂರಿಗೆ ಬಂದ ಹೊಸತರಲ್ಲಿ ಅವರ ಹೆಸರನ್ನು ಕೇಳಿದವರು, ಮೈಸೂರಿನಲ್ಲಿ ಅವರ ವಾಚನ ಕೇಳಿದ್ದವರು ಆಚಾರ್ಯರು ಬೆಂಗಳೂರಿಗೆ ಬಂದಿದ್ದಾರಂತೆ ಎಂಬ ಪ್ರಚಾರದೊಂದಿಗೆ ಅಲ್ಲಿ ಅನೇಕ ಕಾರ್ಯಕ್ರಮಗಳನ್ನು ಏರ್ಪಡಿಸಿದರು. ಅನಂತರ ಅವರಿಗೆ ಬಿಡುವೇ ಇಲ್ಲದಷ್ಟು ಕಾರ್ಯಕ್ರಮಗಳು ನಡೆಯಿತು. ಎಲ್ಲೆಲ್ಲೂ ಸಂಪತ್ಕುಮಾರಾಚಾರ್ಯರ ಕುರಿತ ಪ್ರಶಂಸೆಯ ಮಾತೇ.

ಕುಮಾರವ್ಯಾಸ ತನ್ನ ಕಾವ್ಯದ ಬಗ್ಗೆ ಹೇಳಿಕೊಂಡಿರುವ -

''ಕವಿ ಕುಮಾರವ್ಯಾಸ ಸೂಕ್ತದ, ಸವೆಯದಮೃತವ
ನೊಲಿದೊಲಿದು ಸು
ಶ್ರವಣದಲಿ ಕುಡಿ ಕುಡಿದು ಪದವಿಯ ಪಡೆವುದಿ ಲೋಕ''

ಎಂಬ ಮಾತನ್ನು ಸಾರ್ಥಕಪಡಿಸಿದರು. ಕುಮಾರವ್ಯಾಸ ಭಾರತಾಮೃತವನ್ನು ರಸಿಕರು ತೃಪ್ತಿಪಡುವಷ್ಟು ಉಣಬಡಿಸಿದರು.

ಸಂಪತ್ಕುಮಾರಾಚಾರ್ಯರ ಸಹಪಾಠಿಗಳೂ ಮಿತ್ರರೂ ಆಗಿದ್ದ ಪ್ರಸಿದ್ಧ ವೈಣಿಕ ಎಲ್. ರಾಜಾರಾಯರು ಕೇವಲ ವೀಣಾವಾದಕರೇ ಆಗಿರದೆ ಉತ್ತಮ ಗಮಕಿಗಳೂ ಆಗಿದ್ದರು. ಇದು ಬಹಳಷ್ಟು ಜನಕ್ಕೆ ತಿಳಿದಿಲ್ಲ. ಕಾಲೇಜು ವಿದ್ಯಾರ್ಥಿಯಾಗಿದ್ದಾಗ ವಾರ್ಷಿಕೋತ್ಸವದ ಸ್ಪರ್ಧೆಗಳಲ್ಲಿ ಭಾರತವಾಚನಕ್ಕಾಗಿ ಅನೇಕ ಬಹುಮಾನಗಳನ್ನು ಗಿಟ್ಟಿಸಿದ ಕಲಾವಿದ.

ಒಮ್ಮೆ ಆಚಾರ್ಯರ ಭಾರತವಾಚನವನ್ನು ರಾಜಾರಾಯರು ತಮ್ಮ ಮನೆಯಲ್ಲಿ ಏರ್ಪಡಿಸಿದ್ದರು. ಯಥಾ ಪ್ರಕಾರ ಆಚಾರ್ಯರ 'ಮಾಸ್ಟರ್ ಪೀಸ್' ಕುಂತೀ-ಕರ್ಣದ ಭಾಗ. ಇಲ್ಲಿ ಕೆಲವೊಂದು ಹಿಂದೂಸ್ತಾನೀ ರಾಗಗಳನ್ನು ಅಳವಡಿಸಿಕೊಂಡು ವಾಚನ ಮಾಡಿದರು. ಆಚಾರ್ಯರು ತನ್ಮಯರಾಗಿ ತದೇಕ ಚಿತ್ತದಿಂದ ಹಾಡುತ್ತಿದ್ದರೆ ರಾಜಾರಾಯರು ಭಾವಪೂರಿತರಾಗಿ ಮೈಮರೆತಿದ್ದರು. ವಾಚನ ಮುಗಿದ ಮೇಲೆ ಕೇವಲ ಎರಡು ದಿನದ ಹಿಂದೆ ಮದುವೆ ಮನೆ ಕಚೇರಿಯೊಂದರಲ್ಲಿ ತಮಗೆ ಲಭಿಸಿದ್ದ ಐದು ಬೆಟ್ಟಗಲದ ಜರತಾರಿ ಅಂಚಿನ ಶಲ್ಯವನ್ನು ತಂದು ಆಚಾರ್ಯರಿಗೆ

ಹೊದಿಸಿದರಂತೆ. ಗುಣಕ್ಕೆ ಮಾತ್ಸರ್ಯವಿಲ್ಲ. ತಾವು ವಿದ್ಯಾಪಕ್ಷಪಾತಿಗಳು ಎಂಬುದನ್ನು ರಾಜಾರಾಯರು ಇಲ್ಲಿ ತೋರಿಸಿಕೊಟ್ಟರು.

## ಗಮಕಕ್ಕೆ ವಿನೂತನ ಪ್ರಯೋಗ

ಇನ್ನೊಂದು ವಿಚಾರವೆಂದರೆ ಗಮಕಕ್ಕೆ ಹಿಂದೂಸ್ತಾನೀ ರಾಗಗಳನ್ನು ಅಳವಡಿಸಿ ಹಾಡುವ ಸಂಪ್ರದಾಯವನ್ನು ಪ್ರಥಮ ಬಾರಿಗೆ ತಂದವರು ಆಚಾರ್ಯರು. ಇದೇ ಸಂಪ್ರದಾಯವನ್ನು ಬೆಳೆಸಿಕೊಂಡು ಬಂದವರು ಕೊಡಗಿನ ಮೈ. ಶೇ. ಅನಂತ ಪದ್ಮನಾಭರಾಯರು - ಅಂದರೆ ನಮ್ಮ ತೀರ್ಥ ರೂಪರು. ಕರ್ನಾಟಕದ ಮೈಸೂರು ಪ್ರಾಂತದಲ್ಲಿ ಮಾತ್ರ ಪ್ರಚಲಿತವಿದ್ದಷ್ಟು ಈ ಕಲೆ ಉತ್ತರ ಭಾಗದಲ್ಲಿ ಇರಲಿಲ್ಲ. ಬಿಂದೂರಾಯರ ಶಿಷ್ಯರೆನಿಸಿದ್ದ ಗುರುರಾವ್ ದೇಶಪಾಂಡೆ, ಕೃಷ್ಣರಾವ್ ಹಲಸಗಿ ಮುಂತಾದವರನ್ನು ಬಿಟ್ಟರೆ ಹೇಳಿಕೊಳ್ಳುವಂತಹ ಗಮಕಿಗಳಿರಲಿಲ್ಲ. ಆದರೆ ಆ ಕಡೆ ಹಿಂದೂಸ್ತಾನಿ ಸಂಗೀತದ ಒಲವು ಜಾಸ್ತಿ. ಅಲ್ಲದೆ, ಮಲ್ಲಿಕಾರ್ಜುನ ಮನ್ಸೂರ್, ಬಸವರಾಜ ರಾಜಗುರು, ಅರ್ಜುನ ಸಾ ನಾಕೂಡ್, ಭೀಮಸೇನ ಜೋಶಿ, ಗಂಗೂಬಾಯಿ ಹಾನಗಲ್ಲ, ಗುರುರಾವ್ ದೇಶಪಾಂಡೆಯವರಂತಹ, ಸವಾಯ್ ಗಂಧರ್ವ, ಕುಮಾರ ಗಂಧರ್ವರಂತಹ ಉಸ್ತಾದರನ್ನು ನಾಡಿಗೆ ನೀಡಿದ ಭಾಗ.

ಅಂಥ ಸ್ಥಳಗಳಲ್ಲಿ ಗಮಕ ಕಲೆಗೆ ಪ್ರಚಾರ ಸಿಗಬೇಕಾದರೆ ಹಿಂದೂಸ್ತಾನೀ ಸಂಗೀತ-ರಾಗಗಳ ಬಳಕೆ ಅಗತ್ಯ ಎಂದು ಮನಗಂಡ ಆಚಾರ್ಯರು ಅದನ್ನೂ ತಕ್ಕ ಮಟ್ಟಿಗೆ ಅಭ್ಯಸಿಸಿ ಆ ರಾಗಗಳ ಹಿತ-ಮಿತ ಪ್ರಯೋಗವನ್ನು ಕಾವ್ಯವಾಚನಕ್ಕೂ ಅಳವಡಿಸಿ ಅದರಲ್ಲಿ ಯಶಕಂಡವರು. ಆಚಾರ್ಯರ ಪ್ರಧಾನ ಶಿಷ್ಯರೆನಿಸಿದ್ದ ಟಿ. ಜಯರಾಯರು ಹಾಗೂ ಎಂ. ಎಸ್. ಚಂದ್ರಶೇಖರಯ್ಯನವರು ತಕ್ಕ ಮಟ್ಟಿಗೆ ಈ ಸಂಪ್ರದಾಯ ವನ್ನನುಸರಿಸುತ್ತಿದ್ದರು.

## ದೇವರನಾಮ, ಭಾವಗೀತೆಗಳು

ಸಾಹಿತ್ಯ ಶುದ್ಧವಾಗಿ, ಭಾವಪೂರಿತವಾಗಿ ದೇವರನಾಮಗಳನ್ನು ಹಾಡುವುದರಲ್ಲಿ ಸಿದ್ಧಹಸ್ತರೆನಿಸಿದ್ದ ಆಚಾರ್ಯರು ಭಾವಗೀತೆಗಳನ್ನು ಸಹ ಅಷ್ಟೇ ಭಾವಪೂರ್ಣವಾಗಿ ಹಾಡುವಲ್ಲಿ ಪಾಂಡಿತ್ಯ ಹೊಂದಿದ್ದರು. ಆಗಿನ ಕಾಲಕ್ಕೆ ಈ ಭಾವಗೀತೆಗಳಿಗೆ ಈಗಿನಂತೆ ವಿಶೇಷವಾಗಿ ವಾದ್ಯವೃಂದಗಳ ಸಹಾಯವಿರಲಿಲ್ಲ ಅಗತ್ಯವೂ ಇರಲಿಲ್ಲ. ಕೇವಲ ಒಂದು ತಂಬೂರಿ ಶ್ರುತಿಯೊಂದಿಗೆ ಭಾವಗೀತೆಗಳನ್ನು ಹಾಡುವ ಪರಿಪಾಠವಿತ್ತು.

ಗುಡಿ ಬಂಡೆ ರಾಮಾಚಾರ್ಯರು ಇದೇ ಸಂಪ್ರದಾಯ ಬೆಳೆಸಿ ಕೊಂಡಿದ್ದವರು. ಡಿ.ವಿ.ಜಿ.ಯವರ 'ನಿವೇದನ', ವನಸುಮ, ಮಾಸ್ತಿಯವರ ಕವಿತೆಗಳು, ವೀ.ಸೀಯವರ ನಿನ್ನ ನಾಡೀ ನಾಡು, ಹರಸು ತಾಯೆ, ಮನೆ ತುಂಬಿಸುವ ಹಾಡು, ಬಿ.ಎಂ.ಶ್ರೀಯವರ ಕರುಣಾಳು ಬಾ ಬೆಳಕೆ, ಹುಯಿಲಗೋಳರ ಉದಯವಾಗಲಿ ಒಂದೇ ಎರಡೇ ಎಲ್ಲವೂ ಆಚಾರ್ಯ ಕಂಠದಿಂದ ಲಾಸ್ಯವಾಡುತ್ತಿದ್ದರೆ ಅವರ ಕಂಠದಿಂದ ಹೊರಟ ಸ್ವಾತಂತ್ರ್ಯ ಗೀತೆಗಳು ನಮ್ಮನ್ನು ಗುಲಾಮರನ್ನಾಗಿ ಮಾಡಿಕೊಂಡ ಕೆಂಪು ಮುಖದ ಫರಂಗಿಗಳ ರಕ್ತ ಹೆಪ್ಪುಕಟ್ಟಿಸುವಂತಿತ್ತು. ಷಂಡನಲ್ಲಿ ಕೆಚ್ಚು ಮೂಡಿಸುವ ಸ್ಫೂರ್ತಿ ಇರುತ್ತಿತ್ತು.

## ಮನೆ ತುಂಬಿಸುವ ಹಾಡು

ವೀ.ಸೀಯವರ ಮನೆ ತುಂಬಿಸುವ ಹಾಡು ಇಂದು ಎಲ್ಲ ಮದುವೆ ಮನೆಗಳಲ್ಲೂ 'ಸಂಪ್ರದಾಯ ಗೀತೆ'ಯಾಗಿ ಬಿಟ್ಟಿದೆ. ಇದಕ್ಕೆ ಕಾರಣ ಆಚಾರ್ಯರು. ಅವರ ಬಾಯಲ್ಲಿ ನುಡಿದ ಆ ಹಾಡಿನ ಭಾವುಕತೆ ಇನ್ನಾರ ಬಾಯಲ್ಲೂ ಸಿದ್ಧಿಸಲಿಲ್ಲ. ಅವರ ಬಾಯಲ್ಲಿ ನುಡಿದ "ಎಮ್ಮ ಮನೆಯಂಗಳದಿ ಬೆಳೆದೊಂದ ಹೂವನ್ನು ನಿಮ್ಮ ಮಡಿಲೊಳಗಿಡಲು ತಂದಿರುವೆವು" "....ಹೆತ್ತವರ ಮನೆಗಿಂದು ಹೊರಗಾದೆ ನೀ ಮಗಳೆ" ಎನ್ನುವಾಗ ಆಚಾರ್ಯರು ತಮ್ಮನ್ನ ತಾವೇ ಮೈಮರೆಯುತ್ತಿದ್ದರು. ತಮ್ಮ ಮಗಳನ್ನೇ ಕಳಿಸುತ್ತಿರುವೆನೊ ಎನ್ನುವ ರೀತಿಯಲ್ಲಿ ಕಣ್ಣೀರು ತಾನೇ ತಾನಾಗಿ ಹರಿಯು ತ್ತಿತ್ತು. ಸಂತೋಷದಿಂದ ನಲಿದಾಡುತ್ತಿದ್ದ ಮದುವೆ ಮನೆಯನ್ನೇ ದುಃಖದ ಕಡಲಲ್ಲಿ ತೇಲಿಸಿ ಬಿಡುತ್ತಿದ್ದರು. ಕಡೆಗೆ ದುಃಖಕ್ಕೆ ಕಾರಣವಾಗುವ ಹಾಡನ್ನು ಮದುವೆ ಮನೆಗಳಲ್ಲಿ ಹಾಡುವುದನ್ನೇ ಬಿಟ್ಟರಂತೆ. ಯಾರಾದರು ಇವರನ್ನು ಆಹ್ವಾನಿಸಿ ಬಲವಂತವಾಗಿ ಹಾಡಿಸಿದರೆ ಯಾರೂ ಕಣ್ಣೀರು ಹಾಕಬಾರದು ಎಂದು ಕಟ್ಟಳೆಯನ್ನೇ ವಿಧಿಸಿ-ಕಣ್ಣೀರು ಹಾಕಿದರೆ ಹಾಡುವುದನ್ನೇ ನಿಲ್ಲಿಸುವುದಾಗಿ ಭಾಷೆ ತೆಗೆದುಕೊಳ್ಳುತ್ತಿದ್ದರು ಎಂಬ ಉಲ್ಲೇಖವಿದೆ.

## ಮಹಾರಾಜರ ಸಮ್ಮುಖದಲ್ಲಿ ಪ್ರತಿಭಾಪ್ರದರ್ಶನ

ಆಚಾರ್ಯರಿಗೆ ಆಳುವ ಮಹಾಪ್ರಭುಗಳಾಗಿದ್ದ ನಾಲ್ವಡಿ ಕೃಷ್ಣರಾಜ ಒಡೆಯರ ಸಮ್ಮುಖದಲ್ಲಿ ತಮ್ಮ ಗಮಕ ಕಲಾ ಪ್ರದರ್ಶನ ನೀಡುವ ಉತ್ಕಟಾಂಕ್ಷೆ ಬೆಳೆದು ಬಂದಿತ್ತಾದರೂ ಸಂದರ್ಭವೊದಗಿ ಬಂದಿರಲಿಲ್ಲ. ಅದುವರೆಗೂ ಯಾವ ಗಮಕಿಗೂ ಅವಕಾಶ ದೊರೆತಿರಲಿಲ್ಲ. ಅಂಥ ಸಂದರ್ಭವೂ ಒದಗಿ ಬಂದದ್ದು ಆಚಾರ್ಯರ ಅದೃಷ್ಟ.

ಕನ್ನಡ ಸಾಹಿತ್ಯ ಪರಿಷತ್ತಿನ ಬೆಳ್ಳಿ ಹಬ್ಬ ೧೯೪೦ರಲ್ಲಿ. ಆ ಹೊತ್ತಿಗೆ ಆಚಾರ್ಯರು ಪರಿಷತ್ತು ನಡೆಸುತ್ತಿದ್ದ ಗಮಕ ತರಗತಿಗಳ ಅಧ್ಯಾಪಕರಾಗಿ ಸೇವೆಸಲ್ಲಿಸುತ್ತಿದ್ದರು. ಬಿಂದೂರಾಯರು, ಕೃಷ್ಣರಾಯರ ನಂತರ ಆಚಾರ್ಯರಿಗೆ ಈ ಅವಕಾಶ ಲಭಿಸಿತ್ತು. ನಗರದ ಸರ್ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ರಜತೋತ್ಸವದ ಉದ್ಘಾಟನೆ ಆಳುವ ಪ್ರಭುಗಳಾದ 'ರಾಜರ್ಷಿ' ನಾಲ್ವಡಿ ಕೃಷ್ಣಭೂಪರಿಂದ.

ಆಚಾರ್ಯರ ಪ್ರಾರ್ಥನೆಯಿಂದಲೇ ಸಭಾಕಲಾಪ ಆರಂಭ. ಆಚಾರ್ಯರ ಕಂಠಶ್ರೀ ಯಿಂದ ಹೊರಹೊಮ್ಮಿದ ಗಾನಸುಧೆಗೆ ಪ್ರಸನ್ನವದನರಾದ ಪ್ರಭುಗಳು ಗಂಭೀರವಾಗಿ ಆಚಾರ್ಯರ ಕಡೆ ನೋಡಿದರಂತೆ. ಅದಕ್ಕೇ ಕಾಯುತ್ತಿದ್ದರೋ ಎನ್ನುವಂತೆ ಆಚಾರ್ಯರು ಭಕ್ತಿಯಿಂದ 'ಇದು ತಮಗೆ ಅರ್ಪಿತ' ಎನ್ನುವ ರೀತಿಯಲ್ಲಿ ಕೈಮುಗಿದರಂತೆ. ಪ್ರಭುಗಳ ಆಸ್ಥಾನದಲ್ಲಿಯೇ ಹಾಡಿದಷ್ಟು ಸಂತೃಪ್ತಿ ಅವರಲ್ಲಿ ಮೂಡಿತಂತೆ. ಬಹುಷಃ ಪ್ರಭುಗಳು ಇನ್ನಷ್ಟು ಕಾಲ ಜೀವಿಸಿದ್ದರೆ ಆಚಾರ್ಯರ ಆಸೆ ನೆರವೇರುತ್ತಿತ್ತೇನೊ. ಉತ್ಸವ ನಡೆದ ಕೆಲವೇ ದಿನಗಳಲ್ಲಿ - ಪ್ರಭುಗಳು ಕೊನೆಯುಸಿರೆಳೆದರು. ಸಾಹಿತ್ಯ-ಸಂಗೀತ-ಕಲಾಲೋಕಕ್ಕೆ ಇದು ಭರಿಸಲಾಗದ ನಷ್ಟವೆನಿಸಿತು.

## ಗಮಕ ವಿದ್ವಾನ್ : ಶ್ಲೋಕ ಸಂಗೀತ

ಗಮಕ ಕಲಾಕ್ಷೇತ್ರದಲ್ಲಿ ಸಂಪತ್ಕುಮಾರಾಚಾರ್ಯರ ಕೀರ್ತಿ ಉತ್ತುಂಗ ಶಿಖರಕ್ಕೇರಿತು. ರಾಜ್ಯದ ಮೂಲೆ ಮೂಲೆಗಳಿಂದಲೂ ಅವರಿಗೆ ಕರೆಬರ ತೊಡಗಿತು. ಮದರಾಸಿನ ಆಕಾಶವಾಣಿಯಿಂದಲೂ ಅವರ ಭಾರತವಾಚನ, ದೇವರನಾಮಗಳ ಪ್ರಸಾರವಾಯಿತು. 'ದಿ ಮ್ಯೂಸಿಕಲ್ ಪ್ರೊಸೆಸ್ ಲಿಮಿಟೆಡ್' ಎಂಬ ಸಂಸ್ಥೆ ಆಚಾರ್ಯರ ಭಾರತಾವಾಚನದ ಧ್ವನಿ ಮುದ್ರಿಕೆಯನ್ನು ಬಿಡುಗಡೆಮಾಡಿತು. ಅಲ್ಲದೆ ವೀ.ಸಿ. ಯವರ ರಚನೆ 'ನಿನ್ನನಾಡೀನಾಡು'; 'ಕಾಯಬೇಕೆನ್ನಗೋಪಾಲ' (ಕಾಪಿ); 'ಸ್ಮರಿಸೆನೊ ನಿನ್ನನು' (ಯಮನ್) ದಾಸರ ಕೃತಿಗಳನ್ನು ಇವರ ಕಂಠಶ್ರೀಯ ಮೂಲಕ ಧ್ವನಿ ಮುದ್ರಿಸಿದ ಕೀರ್ತಿ ಈ ಸಂಸ್ಥೆಗೇ ಸೇರಿದ್ದು. ಇದಕ್ಕೆ ಕಾರಣಕರ್ತರು ಲೋಕಸೇವಾ ನಿರತರೆನಿಸಿದ್ದ ಶ್ರೀ ಕೃಷ್ಣಯ್ಯ ಸೆಟ್ಟರು. ಅಷ್ಟೇ ಅಲ್ಲ ಆಚಾರ್ಯರು ಚಲನಚಿತ್ರರಂಗಕ್ಕೂ ಪ್ರವೇಶಿಸಲು ಇವರು ಶ್ರಮಿಸಿದರು. ಕೃಷ್ಣಯ್ಯಸೆಟ್ಟರು ಇವರ ಗೌರವಾರ್ಥ ಒಂದು ಮಹಾಸಭೆ ಕೂಡಿಸಿ ಆಚಾರ್ಯರನ್ನು ಬೆಳ್ಳಿತಟ್ಟೆ, ಶಾಲುಗೌರವದೊಂದಿಗೆ ಸತ್ಕರಿಸಿ 'ಗಮಕ ವಿದ್ವಾನ್ ಶ್ಲೋಕ ಸಂಗೀತ' ಎಂಬ ಬಿರುದು ನೀಡಿ ಸನ್ಮಾನಿಸಿದ್ದಾರೆ. ಆಚಾರ್ಯರ ಅಭಿಮಾನಿಗಳು

ಕಾದಂಬರೀ ಸಾರ್ವಭೌಮ-ಕುಮಾರವ್ಯಾಸನ ಅವಿಚ್ಛಿನ್ನ ಅಭಿಮಾನಿ ಡಾ॥ ಅನಕೃ ನೇತೃತ್ವದಲ್ಲಿ ಆಚಾರ್ಯರಿಗೆ ಸ್ವರ್ಣಪದಕ ನೀಡಿ ಗೌರವಿಸಿದ್ದಾರೆಂದು 'ಗಮಕ ಭಗೀರಥರು' ಪುಸ್ತಕದಲ್ಲಿ ಆಚಾರ್ಯರ ಬಗ್ಗೆ ಬರೆಯುತ್ತಾ ತಿಳಿಸಿದ್ದಾರೆ ಪಾಂಡುರಂಗರಾಯರು.

## ಗಮಕ ಕಲಾಸಂಘ

ಗಮಕ ಕಲೆಯ ಬೆಳವಣಿಗೆಗಾಗಿ 'ಗಮಕ ಕಲಾ ಸಂಘ' ಎಂಬ ಸಂಸ್ಥೆಯನ್ನು ಆಚಾರ್ಯರು ಸ್ಥಾಪಿಸಿ ಇದಕ್ಕೆ ಆಚಾರ್ಯ ಬಿ.ಎಂ.ಶ್ರೀಯವರನ್ನು ಅಧ್ಯಕ್ಷರನ್ನಾಗಿಯೂ, ಎಂ. ರಾಮಕೃಷ್ಣರಾಯರನ್ನು ಮತ್ತು ಡಿ. ಆರ್. ರಾಮಯ್ಯನವರನ್ನು ಗೌರವ ಕಾರ್ಯದರ್ಶಿಗಳನ್ನಾಗಿ ಮಾಡಿ ತಾವು ಸಂಚಾಲಕರಾಗಿ ಗಮಕ ಕಲೆಯ ಅಭಿವೃದ್ಧಿಗಾಗಿ ದುಡಿದಿದ್ದಾರೆ.

## ಚಲನಚಿತ್ರಕ್ಕೆ

ಮದರಾಸಿನ ಚಲನಚಿತ್ರ ಸಂಸ್ಥೆಯೊಂದು ಲಕ್ಷ್ಮೀಶನ ಜೈಮಿನಿ ಭಾರತವನ್ನು ಆಧರಿಸಿ 'ಮಯೂರಧ್ವಜ' ಎಂಬ ಚಿತ್ರ ತಯಾರಿಸಿ ಸಂಪತ್ಕುಮಾರಾಚಾರ್ಯರನ್ನೇ ನಾಯಕನ ಭೂಮಿಕೆಗೆ ಆಯ್ದುಕೊಂಡಿದ್ದರು. ಬೆಂಗಳೂರಿನ 'ಮೆಜಸ್ಟಿಕ್' ಚಿತ್ರಮಂದಿರದಲ್ಲಿ ಪ್ರದರ್ಶನ ಕಂಡಿತಂತೆ. ಈ ಚಿತ್ರದ ಯಶಸ್ಸಿನಿಂದ ಚಲನಚಿತ್ರದ ಅಂದಿನ ಪ್ರಖ್ಯಾತ ಗಾಯಕರೆನ್ನಿಸಿದ ಎಸ್. ಜಿ. ಕಿಟ್ಟಪ್ಪ. ಸುಂದರಾಂಬಾಳ್, ಹೊನ್ನಪ್ಪ ಭಾಗವತರ್, ತ್ಯಾಗರಾಜ ಭಾಗವತರ್ ಸಾಲಿಗೆ ಆಚಾರ್ಯರೂ ಸೇರಿದರು.

## ಆಚಾರ್ಯರ ಭೀಮಸೇನ ಪ್ರವೃತ್ತಿ

ಆಚಾರ್ಯರು ಯಾವತ್ತು ತಮ್ಮ ದೇಹಕ್ಕೆ, ಕಂಠಕ್ಕೆ ಯಾವ ರೀತಿಯ ಪೋಷಣೆಯನ್ನು ಮಾಡಿದವರಲ್ಲ. ಬಾಯಿ ಚಪಲ ಜಾಸ್ತಿ. ಯಾವುದೇ ತಿಂಡಿ ತೀರ್ಥಕೊಟ್ಟರೂ ಅಪಥ್ಯವೆನಿಸಿದರೂ ನಿಸ್ಸಂಕೋಚವಿಲ್ಲದೇ ತಿಂದು ಬಿಡುತ್ತಿದ್ದರು. ಭೀಮಸೇನನಿಗೆ 'ನವವಿಷವುದರ ದೀಪನ ಚೂರ್ಣ'ವೆನಿಸಿದಂತೆ ಎಲ್ಲ ಪದಾರ್ಥಗಳೂ ಇವರ ಜಠರಾಗ್ನಿಯಲ್ಲಿ ಬೆಂದು ಹೋಗುತ್ತಿದ್ದುವು. ಮಸಾಲೆದೋಸೆ ಪ್ರಿಯರಾದ ಆಚಾರ್ಯರು ಹೊಟೇಲಿನಲ್ಲಿ ತಿಂದದ್ದು ಸಾಲದೆ ಪೊಟ್ಟಣ ಕಟ್ಟಿಸಿಕೊಂಡು ತಮ್ಮ ಕೋಟಿನ ಜೇಬಿನಲ್ಲಿಟ್ಟುಕೊಂಡು ತಿರುಗುತ್ತಿದ್ದರಂತೆ. ಅವರಿಗೆ ತುಂಬ ಹತ್ತಿರದವರಾಗಿದ್ದ ನಮ್ಮ ತಂದೆಯವರು ಹೇಳುತ್ತಿದ್ದರು.

ಇವರ ಈ ಭೀಮಸೇನ ಪ್ರವೃತ್ತಿಯನ್ನು ಬಕಾಸುರನಂತೆ ತಿನ್ನುವುದನ್ನು ನೋಡಿದ ಇವರ ಗೆಳೆಯರ ಗುಂಪು ಒಮ್ಮೆ ಇವರಿಗೆ ತಾವು ಕೊಟ್ಟ ತಿಂಡಿಗಳನ್ನು ತಿಂದು ವಾಚನಮಾಡುವಂತೆ ಸವಾಲೆಸೆದರಂತೆ. ಸವಾಲನ್ನು ಸ್ವೀಕರಿಸಿದ ಆಚಾರ್ಯರು ಅವರು ಕೊಟ್ಟ ಪುಳಿಯೋಗರೆ, ಜಿಲೇಬಿ, ಹಸಿಶುಂಠಿ ಹಾಕಿದ ಮಜ್ಜಿಗೆಯನ್ನು ಅವರು ಬಡಿಸಿದಷ್ಟು ತಿಂದು 'ಢರ್' ಎಂದು ತೇಗಿ ವಾಚನ ಆರಂಭಿಸಿದರಂತೆ. ಭಾಗ ಯಾವುದು ಗೊತ್ತೇ ದೂರ್ವಾಸಾತಿಥ್ಯ. ಅಲ್ಲಿಯಂತೆ ಇವರಿಗೆ 'ಕೊರಳಿಗಡರುವ ಹೊಟ್ಟೆ'ಯಾಗದೇ ಹುಳಿತೇಗು ಬರದೆ ಎಲ್ಲವೂ ಜೀರ್ಣವಾಗಿ 'ಯಾವ ಅಡಚಣೆಯೂ ಇಲ್ಲದಂತೆ ಸುಮಾರು ಒಂದೂವರೆ ಘಂಟೆಗಳ ಕಾಲ ವಾಚನ ಅವ್ಯಾಹತವಾಗಿ ಸಾಗಿ ಸವಾಲೆಸೆದವರು ಸೋತು ತಲೆ ತಗ್ಗಿಸುವಂತೆ ಮಾಡಿದ ಸಾಹಸಿ ಆಚಾರ್ಯರು.

## ಗಮಕಿಯ ಅಸ್ತಂಗತ

ಸಂಪತ್ಕುಮಾರಾಚಾರ್ಯರು ಗಮಕ ಕಲಾಕ್ಷೇತ್ರದಲ್ಲಿ ಮೇರುಸದೃಶರಾಗಿ ಮೆರೆದರೂ ಅವರ ಅಂತರ್ಯದಲ್ಲಿದ್ದ ಕೊರಗು ಮಾತ್ರ ನಿವಾರಿಸಲಾಗದ್ದು. ಪುತ್ರಸಂತಾನದಿಂದ ವಂಚಿತರಾದದ್ದು. ಎರಡು ಮಕ್ಕಳು ಹುಟ್ಟಿದರೂ ಕಣ್ಣು ಬಿಡುವ ಮೊದಲೇ ಸಾವನ್ನಪ್ಪಿದವು. ಇದೇ ಚಿಂತೆಯಲ್ಲಿ ಪತ್ನಿ ಸೀತಮ್ಮ ಮಾನಸಿಕ ಅಸ್ವಸ್ಥತೆಯಿಂದ ಬಳಲುತ್ತಿದ್ದರು. ಇದರಿಂದ ಆಚಾರ್ಯರ ಮನಸ್ಸು ಡೋಲಾಯಮಾನವಾಗಿತ್ತು. ಮಕ್ಕಳೆಷ್ಟು? ಎಂದು ಯಾರಾದರೂ ಪ್ರಶ್ನಿಸಿದರೆ ಸಿಡಿಮಿಡಿಗೊಳ್ಳುತ್ತಿದ್ದರು. ಇದೇ ಕೊರಗಿನಿಂದ ಆಚಾರ್ಯರು ಹಣ್ಣಾಗಿದ್ದರು. ಸ್ವಲ್ಪ ಮಟ್ಟಿನ ದೇಹಾಲಸ್ಯದಿಂದ ಬಳಲುತ್ತಿದ್ದರು. ಹೀಗಿದ್ದರೂ ಕೂಡ ವಾಚನ ಕಾರ್ಯಕ್ರಮ ನಡೆಸುತ್ತಿದ್ದರು.

ಮದರಾಸಿಗೆ ಅವರು ಪ್ರವಾಸ ಮಾಡಿ ಅಲ್ಲಿ ವಾಚನ ಕಾರ್ಯಕ್ರಮ - ಚಲನಚಿತ್ರ 'ಮಯೂರಧ್ವಜ' ಚಿತ್ರದಲ್ಲಿ ಪಾತ್ರವಹಿಸಿ ಹಿಂದಿರುಗಿದ ನಂತರ ಅವರ ಆರೋಗ್ಯ ಬಿಗಡಾಯಿಸಿತ್ತು. ಇದೇ ಸಮಯದಲ್ಲಿ ಗಮಕಿ ಎಂ. ರಾಘವೇಂದ್ರರಾಯರು ಆಚಾರ್ಯರನ್ನು ನೋಡಲು ಹೋಗಿದ್ದಾಗ ಅವರು ಸಂಪತ್ಕುಮಾರಾಚಾರ್ಯರೆಂದು ಹೇಳಲು ಸಾಧ್ಯವೆನಿಸದಷ್ಟು ಇಳಿದು ಹೋಗಿ ಭವ್ಯಾಕೃತಿಯ ವ್ಯಕ್ತಿ ಗುಬ್ಬಚ್ಚಿಯಂತಾಗಿದ್ದರು. ರಾಯರಿಗೆ ಆಚಾರ್ಯರನ್ನು ನೋಡಿ ಕರುಳು ಹಿಂಡಿ ಮಾತನಾಡದೆ ಮೂಕರಾದರಂತೆ. ವಿಚಾರಿಸಲಾಗಿ ಮದರಾಸಿಗೆ ಚಿತ್ರೀಕರಣಕ್ಕಾಗಿ ಆಗಾಗ್ಗೆ ಹೋಗಿಬರಬೇಕಾದ್ದು ಅಲ್ಲಿನ ಹವ ಅವರಿಗೆ ಒಗ್ಗದೆ ಹೀಗೆ ಅನಾರೋಗ್ಯ ಪೀಡಿತರಾದರಂತೆ. ರಾಘವೇಂದ್ರರಾಯರು ಅವರಿಗೆ ಧೈರ್ಯಹೇಳಿ ಹಿಂದಿರುಗಿದರು. ಅವರು

ಹಿಂದಿರುವಾಗ ಆಚಾರ್ಯರು ಅವರನ್ನೇ ಮತ್ತೆ ಕರೆದು ಅವರ ಧೈರ್ಯದ ಮಾತಿಗೆ ಕೃತಜ್ಞತೆ ಸೂಚಿಸುತ್ತಾ- 'ರಾಘವೇಂದ್ರರಾವ್ ನನ್ನ ಅಂತರಂಗವನ್ನು ನಿಮ್ಮ ಮುಂದೆ ಬಿಚ್ಚಿ ಹೇಳುತ್ತಿದ್ದೇನೆ, ನನ್ನ ಕಾಲ ಮುಗೀತು. ನಿಮ್ಮಂತೆ ನಾನೂ ಮೈಸೂರಿನ ಗಮಕಿ. ಮೈಸೂರಿನ ಗಮಕಿಗಳ ಪರಂಪರೆಯಿಂದ ಈಗ ಬೆಂಗಳೂರಿನಲ್ಲಿ ಕರ್ನಾಟಕದಲ್ಲಿ ಬೆಳೆದಿರುವ ಪ್ರೇಮಿಗಳ ಸಂಖ್ಯೆಯನ್ನೂ, ಯೋಗ್ಯರಾದ ಶಿಷ್ಯರನ್ನೂ ಬೆಳೆಸಿ ತಯಾರು ಮಾಡುವುದು ನಿಮ್ಮ ಭಾರ. ನೀವು ಮಾಡುತ್ತೀರೆಂಬ ನಂಬಿಕೆ ನನಗಿದೆ' ಎಂಬ ಭರವಸೆಯನ್ನು ವ್ಯಕ್ತಪಡಿಸಿದರೆಂದು ಶ್ರೀರಾಘವೇಂದ್ರರಾಯರು ತಮ್ಮ 'ಕಲೆಯ ಕಾಣಿಕೆ'ಯಲ್ಲಿ ಉಲ್ಲೇಖಿಸಿದ್ದಾರೆ. ರಾಘವೇಂದ್ರರಾಯರೂ ಅವರಿಗೆ ಆಶ್ವಾಸನೆ ನೀಡಿದರಂತೆ.

ಈ ಮಾತುಕತೆ ನಡೆದ ಕೆಲವು ದಿನಗಳಲ್ಲೇ ಆಚಾರ್ಯರ ಸ್ಥಿತಿ ಚಿಂತಾಜನಕವಾಗಿ ಅವರನ್ನ ಆಸ್ಪತ್ರೆಗೆ ಸೇರಿಸಿದರು. ಎಸ್.ಎಸ್.ಎನ್. ಶಾಲೆಯ ಅಧ್ಯಾಪಕ ವರ್ಗದವರೆಲ್ಲರೂ ಆಚಾರ್ಯರನ್ನು ನೋಡಲು ಹೋಗಿದ್ದುದಾಗಿಯೂ ಅಂದು (೫-೧೨-೧೯೪೫) ಶ್ರೀಮನ್ನಾರಾಯಣ ಸ್ಮರಣೆ ಮಾಡುತ್ತಾ ಎಲ್ಲರನ್ನೂ ನೋಡುತ್ತಲೇ ಇಹಲೋಕ ತ್ಯಜಿಸಿದರು ಆಚಾರ್ಯರು.

'ಕಣ್ತುಂಬ ನೋಡೆಮ್ಮ ಹರಸು ತಾಯಿ ಭಾರತ ಭಾಗ್ಯೇಶ್ವರೀ ಜೈ' ಎಂದು ಸ್ವಾತಂತ್ರ್ಯಗೀತೆಯನ್ನು ಉಚ್ಚಕಂಠದಿಂದ ಹಾಡುತ್ತಿದ್ದ ಗಮಕ ಕಲಾಕೋವಿದ ಗಮಕ ಭಗೀರಥ ಕಳಲೆ ಸಂಪತ್ಕುಮಾರಾಚಾರ್ಯರು ರಾಷ್ಟ್ರಕ್ಕೆ ಸ್ವಾತಂತ್ರ ಬರುವುದಕ್ಕೆ ಮೊದಲೇ ಅಸ್ತಂಗತರಾದರು. ಆಚಾರ್ಯರು ದಿವಂಗತರಾದರು. ಅವರ ಕಾವ್ಯವಾಚನ, ಅವರ ವ್ಯಕ್ತಿತ್ವ ಗಮಕಕಲಾ ಕ್ಷೇತ್ರದಲ್ಲಿ ಇನ್ನೂ ಅಜರಾಮರವಾಗಿಯೇ ಇದೆ.

ಕಸದ ಕುಪ್ಪೆಯಂತೆ ದೀರ್ಘಾಯುವಾಗಲಿ ತಮ್ಮ ಮಗ ಎಂದು ಹಾರೈಸಿದರು ಮಾತಾಪಿತೃಗಳು; ಹಾಗಾಗಿ ಮಗನನ್ನು 'ಕುಪ್ಪ'ನೆಂದೇ ಕರೆದರು. ಆದರೆ ಮಗ ಅಲ್ಪಾಯುವಾಗಿ ತನ್ನ ೪೫ನೆಯ ವಯಸ್ಸಿನಲ್ಲೇ ಗಮಕ ಲೋಕವನ್ನು ಬರಡಾಗಿಸಿ ಇಹಲೋಕದಿಂದ ಪರಲೋಕಕ್ಕೆ 'ಕುಪ್ಪ'ಳಿಸಿಬಿಟ್ಟ.

ಆರ್ಚಾರ ಮರಣವಾರ್ತೆಯನ್ನು ಕೇಳಿದ ಅಣ್ಣ ಮಾಸ್ತಿಯವರು ತಮ್ಮ ಜೀವನ ಪತ್ರಿಕೆಯ ಸಂಪಾದಕೀಯದಲ್ಲಿ ಆಚಾರ್ಯರಿಗೆ ಈ ರೀತಿ ಅಶ್ರುತರ್ಪಣ ಅರ್ಪಿಸಿದ್ದಾರೆ.

"ಸಂಪತ್ಕುಮಾರಾಚಾರ್ಯರ ಕಂಠ ಅಪೂರ್ವಕೋಟಿಯದು. ಅವರ ಸಂಗೀತಜ್ಞಾನ ಅಸಾಧಾರಣವಾದದ್ದು. ಅವರ ಕಾವ್ಯಪರಿಶ್ರಮ ಅಭ್ಯಾಸದಿಂದ ಪ್ರೌಢವಾದದ್ದು. ಅವರ ಕಾವ್ಯಗಾಯನ ಚತುರತೆ, ಪ್ರಯೋಗಶೀಲತೆ, ಲಕ್ಷ್ಯಸಾಧಕ ಆದದ್ದು. ಇಂಥ ಪ್ರಚಂಡ ಕಲಾ ಸೇವಕ ಮಧ್ಯಮಯಸ್ಸು ದಾಟುವ ಮುನ್ನವೇ ತೀರಿಕೊಂಡದ್ದು ನಮ್ಮ ದುರದೃಷ್ಟ. ಆದ ನಷ್ಟ ಆಗಲಾಗಿ ಕನ್ನಡಿಗರು ಈ ತರುಣ ಕಲಾಸೇವಕನನ್ನು ನೆನೆದು ಕಣ್ಣೀರು ಹಾಕಿ ಭಗವಂತನ ಸನ್ನಿಧಿಯಲ್ಲಿ ಈ ಎಳೆಯ ಜೀವಕ್ಕೆ ಸದ್ಗತಿಯನ್ನು ಕೋರಬೇಕು.

-'ಜೀವನ', ಸಂಪಾದಕೀಯ

'ಸಂಪತ್ಕುಮಾರಾಚಾರ್ಯ ಮರೆಯಾದ. ಆತನ ಹೆಸರಿನ ಹಿಂದೆ 'ದಿವಂಗತ' ಎಂಬ ಶಬ್ದ ಸೇರಿಸಲು ನನ್ನ ಮನಸ್ಸು ಇನ್ನು ಒಪ್ಪದು. ಆತನ ದನಿಯು ಕನ್ನಡದ ಗಾಳಿಯಲ್ಲಿ ಬೆರೆತು ಕಿವಿಯಲ್ಲಿ ಮೊಳಗುತ್ತಿರುವವರೆಗೂ ಆತನು 'ದಿವಂಗತ'ನಲ್ಲ.'

-ಎಸ್. ನಾಗೇಶರಾವ್

ಅಗಲಿದ ಗೆಳೆಯನಿಗೆ ನೀಡಿದ ಅಶ್ರುತರ್ಪಣ ('ಜೀವನ'ದಲ್ಲಿ)

---



## ಗಮಕ ವಿದ್ವಾನ್
# ಕೊಡಗಿನ ಮೈ. ಶೇ. ಅನಂತ ಪದ್ಮನಾಭರಾಯರು

ಗಮಕ ಕಲಾಕ್ಷೇತ್ರದಲ್ಲಿ ಗಮಕ ಭಗೀರಥರೆಂದೇ ಖ್ಯಾತರಾದ ಭಾರತ ಬಿಂದೂರಾಯರು, ಕೃಷ್ಣಗಿರಿ ಕೃಷ್ಣರಾಯರು ಮತ್ತು ಕಳಲೆ ಸಂಪತ್ಕುಮಾರಾ ಚಾರ್ಯರನ್ನು ಬಿಟ್ಟರೆ ಇದೇ ಸಾಲಿಗೆ ಸೇರುವ ಮತ್ತೊಬ್ಬ ಗಮಕಿಯೆಂದರೆ ಕೊಡಗಿನ ಮೈ. ಶೇ. ಅನಂತಪದ್ಮನಾಭರಾಯರು. ಅಲ್ಲದೆ ಈ ಭಗೀರಥ ರೆಲ್ಲರ ಶಿಷ್ಯರಾಗಿ ಈ ಮೂವರ ಶೈಲಿಗಳನ್ನೂ ರೂಢಿಸಿಕೊಂಡು ಹಾಡುತ್ತಿದ್ದ ಏಕೈಕ ಗಮಕಿಯೆಂದರೆ ಅನಂತಪದ್ಮನಾಭರಾಯರು - ಅಂದರೆ ನನ್ನ ತೀರ್ಥರೂಪರು.

ಕೊಡಗು ಜಿಲ್ಲೆಯ ಮಡಿಕೇರಿಯಲ್ಲಿದ್ದ ನನ್ನ ತಂದೆಯವರು ಗಮಕದ ಕಡೆ ವಾಲಿದ್ದೂ ಒಂದು ರೀತಿಯ ಆಕಸ್ಮಿಕವೇ! ಸ್ವಲ್ಪ ಮಟ್ಟಿಗೆ ಸಂಗೀತಜ್ಞಾನ ವಿದ್ದು ಉತ್ತಮ ಕಂಠವನ್ನು ಹೊಂದಿದ್ದರಾಯರು ಅವರ ತಂದೆಯವರು ಹಾಡುತ್ತಿದ್ದ ದೇವರ ನಾಮಗಳಿಂದ ಪ್ರಭಾವಿತರಾಗಿ ಅದರ ಸಹಾಯದಿಂದ ಕೀರ್ತನ ಕಲೆ ಅಂದರೆ ಹರಿಕತೆಯನ್ನು ಮಾಡುತ್ತಿದ್ದರು.

೧೯೩೨ರಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಮಡಿಕೇರಿಯಲ್ಲಿ ತನ್ನ ೧೮ನೇ ಸಾಹಿತ್ಯ ಸಮ್ಮೇಳನವನ್ನು ನಡೆಸಿದಾಗ ಆಚಾರ್ಯ ಡಿ. ವಿ. ಗುಂಡಪ್ಪನವರು ಸಮ್ಮೇಳನಾಧ್ಯಕ್ಷರಾಗಿದ್ದರು. ಅಲ್ಲಿ ಮೂರುದಿನಗಳ ಕಾಲವೂ ಕಳಲೆ ಸಂಪತ್ಕುಮಾರಾಚಾರ್ಯರ ಭಾರತವಾಚನ, ಕವಿತಾವಾಚನ, ದೇವರನಾಮ ಗಳ ಕಾರ್ಯಕ್ರಮವಿತ್ತು. ಅವರ ಕಂಠಶ್ರೀಗೆ, ಅವರ ಭಾರತವಾಚನ ವೈಖರಿಗೆ ಮಾರುಹೋದ ರಾಯರು ಹರಿಕತೆಯನ್ನು ಬಿಟ್ಟರು. ಗಮಕದ ಕಡೆಗೆ ವಾಲಿದರು. ಆಚಾರ್ಯರನ್ನು ತಮ್ಮ ಗುರುವಾಗಿ ಮಾನಸಿಕವಾಗಿ ಸ್ವೀಕರಿಸಿ ದರು. ಹೀಗೆ ಕೊಡಗಿನಲ್ಲೊಂದು ಗಮಕದ ತಾರೆಯ ಉದಯವಾಯಿತು.

ರಾಯರು ಕೊಡಗಿನ ಅನಂತಪದ್ಮನಾಭರಾಯರೆಂದೇ ಪ್ರಸಿದ್ಧ ರಾದರೂ ಮೂಲತಃ ಅವರು ಕೊಡಗಿನವರೇನಲ್ಲ. ಮೇಲುಕೋಟೆಯವರು. ಅಲ್ಲಿನ ಬೀಗಮುದ್ರೆ ವಂಶಸ್ಥರು.

ರಾಷ್ಟ್ರಕೂಟರ ಆಳ್ವಿಕೆಯನಂತರ ಯವನರ ಆಳ್ವಿಕೆಯ ದಬ್ಬಾಳಿಕೆಯನ್ನು ಸಹಿಸಲಾರದೆ ದಕ್ಷಿಣದೇಶಕ್ಕೆ ಅರುವತ್ತು ಮಾಧ್ವಕುಟುಂಬಗಳು ವಕ್ಕಲು ಬಂದವು. ಇವುಗಳ ಪೈಕಿ ಗೌತಮ ಗೋತ್ರದ ಕುಟುಂಬವೊಂದು ಕವಲೊಡೆದು ಒಂದು ತಮಿಳುನಾಡಿಗೆ ವಲಸೆಹೋಗಿ ಅಲ್ಲಿನ ತಂಜಾವೂರು ಸಂಸ್ಥಾನ ಸೇರಿ ಅಲ್ಲಿನ ಬೀಗಮುದ್ರೆವಂಶಸ್ಥರಾದರು. ಆ ವಂಶದಲ್ಲಿ ಬಂದವರು ಮಂತ್ರಾಲಯ ಪ್ರಭುಗಳಾದ ಶ್ರೀರಾಘವೇಂದ್ರತೀರ್ಥರು. ಮತ್ತೊಂದು ಕುಟುಂಬ ಮೈಸೂರು ಸಂಸ್ಥಾನದ ಮೇಲುಕೋಟೆಗೆ ಬಂದು ಅಲ್ಲಿಯ ಚೆಲುವನಾರಾಯಣನ ಆರಾಧಕರಾಗಿ ಬೀಗಮುದ್ರೆ ವೃತ್ತಿ ಹಿಡಿದರು. ಆ ವಂಶದಲ್ಲಿ ಬಂದವರೇ ಅನಂತಪದ್ಮನಾಭರಾಯರು. ಅಂದರೆ ಮಂತ್ರಾಲಯ ಪ್ರಭುಗಳೂ ಮತ್ತು ರಾಯರೂ ಒಂದೇ ಗೋತ್ರಜರಾಗಿ ಬೀಗಮುದ್ರೆ ವಂಶಕ್ಕೆ ಸೇರಿದವರು. ಮೂಲತಃ ಒಂದೇ ಕುಟುಂಬದವರು. ಇದು ಬೆಳಕಿಗೆ ಬಂದಿದ್ದು ಇತ್ತೀಚೆಗೆ. ಸಂಜನಗೂಡಿನ ಶ್ರೀರಾಘವೇಂದ್ರಮಠದ ಪ್ರಮುಖರಾದ ಆಚಾರ್ಯರಾಜಾ ಎಸ್. ಗುರುರಾಜಾಚಾರ್ಯರನ್ನು ಒಮ್ಮೆ ಭೇಟಿಯಾಗಿ ಸಂದರ್ಶನ ನಡೆಸಿದಾಗ ಅವರು ತಮ್ಮ 'ಷಾಷ್ಟಿಕವಂಶ ಪ್ರದೀಪಿಕೆ'ಯನ್ನು ಅವಲೋಕಿಸಿ ಈ ವಿಷಯ ತಿಳಿಸಿದರು.

ನಮ್ಮ ತಾತ ಎಂ. ಎಸ್. ಶೇಷಗಿರಿರಾಯರು ಇದ್ದದ್ದು ಮೈಸೂರಿನಲ್ಲಿ. ಇವರನ್ನು ಎಲ್ಲರೂ ಕಲ್ಲೀರಾಯರೆಂದೇ ಕರೆಯುತ್ತಿದ್ದರು. ಇವರಿಗೊಬ್ಬ ಅಣ್ಣ ಗುಂಡೂರಾಯರು. ಹುಟ್ಟಿದ ಮಕ್ಕಳೆಲ್ಲಾ ಕಣ್ಮುಚ್ಚಿದಾಗ ಈ ಎರಡು ಹುಡುಗರು ಕಲ್ಲು-ಗುಂಡಿನಂತೆ ಬೆಳೆಯಲಿ ಎಂದು ಹಿರಿಯರು ಆಶೀರ್ವದಿಸಿ ತಿಪ್ಪೆಗೆ ಎಸೆದು ತಂದರಂತೆ. ಅದಕ್ಕೆ ಇಬ್ಬರನ್ನೂ ಕಲ್ಲಪ್ಪ-ಗುಂಡಪ್ಪ ಎಂದು ಕರೆದರಂತೆ. ಈ ಕಲ್ಲಪ್ಪನ ವಂಶೀಯರೇ ನಾವು. ಗುಂಡಪ್ಪನವರ ಮೊಮ್ಮಕ್ಕಳು ಚನ್ನಪಟ್ಟಣದಲ್ಲಿದ್ದಾರೆ.

## ಕೊಡಗಿಗೆ ವಲಸೆ

ಆಗ್ಗೆ ಕೊಡಗು ಪ್ರತ್ಯೇಕ ಸಂಸ್ಥಾನವಾಗಿದ್ದು ಹಾಲೇರಿ ವಂಶಸ್ಥರ ಆಳ್ವಿಕೆಯಲ್ಲಿತ್ತು. ಅಲ್ಲಿನ ರಾಜರು ಕೊಡಗಿಗೆ ವಲಸೆ ಬಂದ ಬ್ರಾಹ್ಮಣ ಕುಟುಂಬಗಳಿಗೆ ಉಂಬಳಿ ನೀಡಿ ಆಶ್ರಯ ನೀಡುತ್ತಿದ್ದರು. ಹಾಗೆ ಬಂದ ನಾಲ್ಕಾರು ಮಾಧ್ವಕುಟುಂಬಗಳ ಪೈಕಿ ಶೇಷಗಿರಿರಾಯರೂ ಒಬ್ಬರು. ಈ ಹೊತ್ತಿಗಾಗಲೇ ಅವರಿಗೆ ಮೂವರು ಮಕ್ಕಳಿದ್ದರು ರಾಯರೂ ಸೇರಿದಂತೆ. ಆಗ ರಾಯರಿಗೆ ಸುಮಾರು ಎಂಟು ವರ್ಷವಿರಬಹುದು.

ನನ್ನ ತಂದೆಯವರು ಹುಟ್ಟಿದ್ದು ೧೯೧೩ನೇ ಇಸವಿ ಸೆಪ್ಟಂಬರ್ ೬ರಂದು ಮೈಸೂರಿನಲ್ಲಿ. (ಭಾದ್ರಪದ ಶುದ್ಧ ಪೌರ್ಣಮಿ). ಅನಂತ ಚತುರ್ದಶಿ ವ್ರತ ಸಾಂಗವಾಗಿ ನಡೆದು ಪೌರ್ಣಮಿದಿನ ಪುತ್ರೋತ್ಸವವಾದ್ದರಿಂದ ಮಗುವಿಗೆ 'ಅನಂತಪದ್ಮನಾಭ'ನೆಂದೇ ನಾಮಕರಣವಾಯಿತು. ಮೈಸೂರಿನ ದಳವಾಯಿ ಶಾಲೆಯಲ್ಲಿ, ಪ್ರಾಥಮಿಕ ವಿದ್ಯಾಭ್ಯಾಸ ಆರಂಭ. ಅಂತರ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನಲ್ಲಿ ಪ್ರೌಢಶಿಕ್ಷಣ.

ಮಡಿಕೇರಿಯಲ್ಲಿ ಸಬ್ ರಿಜಿಸ್ಟ್ರಾರ್ ಹುದ್ದೆಯಲ್ಲಿದ್ದ ಶೇಷಗಿರಿ ರಾಯರು ಇದ್ದದ್ದು ಬ್ರಾಹ್ಮಣರ ಕೇರಿಯಲ್ಲಿ. ಆಗ ಅಲ್ಲಿನ ಪ್ರತಿಷ್ಠಿತ ವ್ಯಕ್ತಿಗಳೆನಿಸಿದ್ದ ಲಾಯರ್ ಸುಬ್ಬರಾಯರು. ಆಚೆಬೀದಿ ಚನ್ನಿಗರಾಯರು, ವೆಂಕಟಾದ್ರಿಶ್ಯಾಮರಾಯರು ಮುಂತಾದವರು ಶೇಷಗಿರಿರಾಯರ ಸಮಕಾಲೀನರು. ಎಲ್ಲರೂ ರಾಜಾಸೀಟ್ ಬಳಿಯಿದ್ದ ಅಡ್ವೊಕೇಟ್ ಕೃಷ್ಣರಾಯರ ಮನೆಯಲ್ಲಿ ಭಜನೆಗೆ ಸೇರುತ್ತಿದ್ದರು. ರಾಯರು ದೇವರನಾಮಗಳನ್ನು ಸುಶ್ರಾವ್ಯವಾಗಿ ಹಾಡುತ್ತಿದ್ದರು. ವೆಂಕಟಾದ್ರಿಶ್ಯಾಮರಾಯರು ಸ್ವತಃಕವಿಗಳೂ, ಗಾಯಕರೂ ನಟರೂ ಆಗಿದ್ದವರು. ಈ ಭಜನೆಗೆ ಸೇರುತ್ತಿದ್ದ ಹುಡುಗರ ಪಾಳ್ಯದಲ್ಲಿ ಲಾಯರ್ ಸುಬ್ಬರಾಯರ ಮಗ ಶ್ಯಾಮ, ನಮ್ಮ ತಂದೆ, ಅವರ ಗೆಳೆಯರುಗಳಾದ ಬಿ. ಕೆ. ಸುಬ್ಬರಾಯರು, ಜೋಶಿ ಸಹೋದರರಾದ ದತ್ತೂರಾವ್ ಹಾಗೂ ದಾಮೋದರರಾವ್ ಇರುತ್ತಿದ್ದರು. ಬಿ. ಕೆ. ಸುಬ್ಬರಾಯರು ಅಲ್ಪಸ್ವಲ್ಪ ಸಂಗೀತ ಕಲಿತಿದ್ದರು. ಹರಿಕತೆ ಮಾಡುವುದನ್ನು ರೂಢಿಸಿಕೊಂಡಿದ್ದರು. ನಮ್ಮ ತಂದೆ ಹರಿಕತೆ ಮಾಡಲು ಇವರೇ ಸ್ಫೂರ್ತಿ. ದತ್ತೂರಾವ್ ಹಾಗೂ ದಾಮೋದರ ಜೋಶಿಯವರು ಮೂಲತಃ ಮರಾಠಿಯವರಾಗಿದ್ದು ಅಭಂಗಗಳನ್ನು ಬಹುಸುಶ್ರಾವ್ಯವಾಗಿ ಹಿಂದೂಸ್ತಾನೀ ಶೈಲಿಯಲ್ಲಿ ಹಾಡುತ್ತಿದ್ದರು. ವೆಂಕಟಾದ್ರಿಶ್ಯಾಮರಾಯರು ಈ ಹುಡುಗರನ್ನ ಕೂಡಿಸಿ ಹಾಡುಗಳನ್ನು ಹೇಳಿಕೊಡುವುದು, ತಾವು ರಚಿಸಿದ ಅನೇಕ ನಾಟಕಗಳನ್ನು ಈ ಹುಡುಗರ ಕೈಲಿ ಆಡಿಸಿ ಹುರಿದುಂಬಿಸುತ್ತಿದ್ದರು. ಈ ಗುಂಪಿನಲ್ಲಿ ಶ್ಯಾಮರಾಯರ ಮೊಮ್ಮಗ ಇತ್ತೀಚೆಗೆ ನಿಧನರಾದ ಕೆ. ವೆಂಕಟಗಿರಿಯವರೂ ಇರುತ್ತಿದ್ದರು. ಆಗೆಲ್ಲ ಹೆಚ್ಚಾಗಿ ಆಡುತ್ತಿದ್ದುದು ಪೌರಾಣಿಕ ನಾಟಕಗಳು. ಅದರ ಪ್ರಭಾವದಿಂದ ನಮ್ಮ ತಂದೆಯವರು ಹರಿಕತೆ ಮಾಡುವುದನ್ನೂ ಅಭ್ಯಾಸ ಮಾಡಿದ್ದರು. ಅವರ ಮೊದಲ ಹರಿಕತೆ ೧೯೨೪ರಲ್ಲಿ ಮಡಿಕೇರಿಯ ವೇದಾಂತ ಸಂಘದಲ್ಲಿ ನಡೆಯಿತು.

## ಸಾಹಿತ್ಯಾಸಕ್ತಿ

ನಮ್ಮ ತಂದೆ ವಿದ್ಯಾರ್ಥಿದೆಸೆಯಲ್ಲಿದ್ದಾಗಲೇ ಸಾಹಿತ್ಯದ ಕಡೆಗೂ ಆಸಕ್ತಿ ವಹಿಸಿದ್ದರು. ಆಗಾಗ್ಗೆ ಸಣ್ಣ ಕಥೆ, ಕವನಗಳನ್ನು ಗೀಚುತ್ತಿದ್ದು ಅದನ್ನು

ಗೋಪ್ಯವಾಗಿಡುತ್ತಿದ್ದರು. ಈ ಸಾಹಿತ್ಯಾಸಕ್ತಿ ಇವರಲ್ಲಿ ಮೂಡಲು ಹುರಿದುಂಬಿಸಿದವರೆಂದರೆ ಅವರ ಮತ್ತೊಬ್ಬ ಆತ್ಮೀಯ ಗೆಳೆಯ ಬಿ. ಟಿ. ಗೋಪಾಲಕೃಷ್ಣ (ಕಥೆಗಾರ್ತಿ ಗೌರಮ್ಮನ ಪತಿ) ಹಾಗೂ ಹೆಸರಾಂತ ಕಾಫಿಪ್ಲಾಂಟರ್ ಗುಂಡುಕುಟ್ಟಿ ಮಂಜನಾಥಯ್ಯನವರು. ಇವರೂ ನಮ್ಮ ತಂದೆಯ ಸಹಪಾಠಿಗಳು. ಆದರೆ ಈ ಗೋಪ್ಯತೆ ಬಹಳ ಕಾಲ ಉಳಿಯಲಿಲ್ಲ. ಪ್ರಕಟವಾಯಿತು. ಅದಕ್ಕೆ ಕಾರಣ 'ಕವಿಶಿಷ್ಯ' ಪಂಜೆ ಮಂಗೇಶರಾಯರು.

ಸುಮಾರು ೧೯೨೨ರಲ್ಲಿ ಪಂಜೆಯವರು ಶಾಲಾ ಇನ್ಸ್‌ಪೆಕ್ಟರ್ ಹುದ್ದೆಯಿಂದ ಬಡ್ತಿಹೊಂದಿ ಮಡಿಕೇರಿ ಸೆಂಟ್ರಲ್ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದರು. ಆ ಕಾಲಕ್ಕೆ ಬಹುಷಃ ಇವರು ಪ್ರಥಮ ಭಾರತೀಯರು ಆ ಹುದ್ದೆಗೆ. ಇವರ ನಂತರ ಸಿ. ಎಂ. ರಾಮರಾಯರು, ಬಿ. ಎಸ್. ಕುಶಾಲಪ್ಪ ಮುಂತಾದವರು ಆ ಅಧಿಕಾರಕ್ಕೆ ಬಂದ ಭಾರತೀಯರು. ಪಂಜೆಯವರು ಮುಖ್ಯೋಪಾಧ್ಯಯರಾಗಿ ಬಂದ ಕಾಲಕ್ಕೆ ನಮ್ಮ ತಂದೆಯವರು ಅವರ ವಿದ್ಯಾರ್ಥಿ. ಹತ್ತನೇ ತರಗತಿಯಲ್ಲಿ.

ಮುಖ್ಯೋಪಾಧ್ಯಾಯರಾದವರು ಹತ್ತನೇ ತರಗತಿಯ ವಿದ್ಯಾರ್ಥಿಗಳಿಗೆ ಆಂಗ್ಲ ಭಾಷೆ ಬೋಧಿಸುವ ಪರಿಪಾಠ ಮೊದಲಿನಿಂದ ಬಂದ ಸಂಪ್ರದಾಯ. ಕಾರಣ ಹೆಚ್ಚಿನಂಶ ಆಂಗ್ಲರೇ ಆ ಹುದ್ದೆಗೆ ನೇಮಕವಾಗುತ್ತಿದ್ದುದು. ಪಂಜೆಯವರು ಅಧಿಕಾರ ವಹಿಸಿಕೊಂಡ ಕ್ಷಣದಲ್ಲೇ ಈ ಸಂಪ್ರದಾಯಕ್ಕೆ ತಡೆಹಾಕಿ ತಾವು ಕನ್ನಡ ಬೋಧನೆಯನ್ನು ಮಾಡಲು ಆರಂಭಿಸಿದರು. ಹಾಡಲು ಬರುತ್ತಿದ್ದ ಹುಡುಗರನ್ನು ಗುರುತಿಸಿ ಅವರಿಂದ ಕನ್ನಡ ಪಠ್ಯಪುಸ್ತಕದಲ್ಲಿನ ಕಾವ್ಯಭಾಗಗಳನ್ನು ಹಾಡಿಸಿ- ತಾವೂ ಹಾಡಿ ಉತ್ತೇಜಿಸುತ್ತಿದ್ದರು. ರಾಯರಲ್ಲಿ ಸುಪ್ತವಾಗಿದ್ದ ಸಂಗೀತ ಈ ಮೂಲಕ ಬೆಳಕಿಗೆ ಬಂತು. ಇವರ ಕಂಠ, ಹಾಡುವ ರೀತಿ ಪಂಜೆಯವರಿಗೆ ಹಿಡಿಸಿತು. ಅವರಿಗೆ ಇನ್ನೂ ಹೆಚ್ಚಿನ ಸ್ಫೂರ್ತಿ ನೀಡಿದರು. ಶಾಲಾಸಮಯದ ನಂತರ ತಮ್ಮ ಮನೆಯಲ್ಲೋ ರಾಜಾಸೀಟಿನ ಒಂದು ಕೊನೆಯಲ್ಲೋ ಕುಳಿತು ಅವರಿಗೆ ತಾಲೀಮು ಕೊಡುತ್ತಿದ್ದರು. ಜೊತೆ ಜೊತೆಯಲ್ಲಿಯೇ ಪ್ರಬಂಧ, ಕವನ ಮೊದಲಾದವುಗಳನ್ನು ಬರೆಯಲು ಸೂಚಿಸುತ್ತಿದ್ದರು. ಹೀಗೆ ರಾಯರಲ್ಲಿದ್ದ ಸುಪ್ತ ಪ್ರತಿಭೆ ಬೆಳಕಿಗೆ ಬರಲು ಪಂಜೆಯುವರು ರೂವಾರಿಗಳಾದರು. ಇವರ ಮೊಟ್ಟ ಮೊದಲ ಕೃತಿ 'ಕಲಿಪ್ರಭುತ್ವ' ಸಾಧ್ವಿಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಯಿತು.

## ರಾಯರ ಸಂಸಾರ

ಶೇಷಗಿರಿರಾಯರದ್ದು ತೀರ ಸಾಮಾನ್ಯ ದರ್ಜೆಯ ಕುಟುಂಬ. ಉಂಬಳಿಯ ಆಸೆಯಿಂದ ಕೊಡಗಿಗೆ ಬಂದರೂ ಇವರಿಗೇನೂ ದಕ್ಕಲಿಲ್ಲ.

ಸರ್ಕಾರಿ ನೌಕರಿ ದೊರೆಯಿತಷ್ಟೆ. ಹಾಗಾಗಿ ಹಿಡಿದ ನೌಕರಿ ಬಿಟ್ಟರೆ ಆದಾಯಕ್ಕೆ ಬೇರೇನೂ ಆಸ್ತಿ-ಪಾಸ್ತಿಯಿರಲಿಲ್ಲ. ಇದ್ದದ್ದು ಬಾಡಿಗೆ ಮನೆಯಲ್ಲಿ. ಸಂಸಾರವೂ ಬೆಳೆದಿತ್ತು.

ನಮ್ಮ ತಂದೆಯ ನಂತರ ಮತ್ತೆ ಒಂದು ಗಂಡು. ನಾಲ್ವರು ಹೆಣ್ಣು ಮಕ್ಕಳು ಹುಟ್ಟಿದ್ದರು. ಜೊತೆಗೆ ನಮ್ಮ ಅಜ್ಜಿಯ ತಾಯಿಯವರೂ ಇಲ್ಲೆ ಬಂದು ಸೇರಿದ್ದರು. ಇವರೆಲ್ಲರ ಪೋಷಣೆ ರಾಯರ ಸಂಬಳದಲ್ಲೇ ನಡೆಯಬೇಕಿತ್ತು.

ನಮ್ಮ ತಂದೆಯವರು ಹತ್ತನೇ ತರಗತಿಗೆ ಬಂದಾಗಲೇ ತಾತನವರಿಗೆ ನಿವೃತ್ತಿಯಾಗಿತ್ತು. ಬರುತ್ತಿದ್ದ ಪಿಂಚಣಿ ಹಣ ಏನಕ್ಕೂ ಸಾಲುತ್ತಿರಲಿಲ್ಲ. ಸಂಸಾರ ನಿರ್ವಹಣೆ ದುರ್ಭರವಾಗಿತ್ತು. ಇದರಿಂದ ನಮ್ಮ ತಂದೆ ಕೆಲವೊಂದು ಪಾಠದ ಮನೆಗಳನ್ನು ಗೊತ್ತು ಮಾಡಿಕೊಂಡು ಬಂದ ವರಮಾನದಲ್ಲಿ ಸಂಸಾರ ನಿರ್ವಹಣೆಗೆ ನೆರವಾಗುತ್ತಿದ್ದರು. ಮುಂದೆ ಕೆಲಸ ದೊರೆಯಲು ಅನುಕೂಲವಾಗುವಂತೆ 'ಸೆಕ್ರೆಟೇರಿಯಲ್ ಕೋರ್ಸ್' ಅನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡು ಅದರಲ್ಲಿ ಉತ್ತಮ ದರ್ಜೆಯಲ್ಲಿ ತೇರ್ಗಡೆ ಹೊಂದಿದರು.

ರಾಯರು ಎಸ್.ಎಸ್.ಎಲ್.ಸಿ. ಪಾಸಾಗುವ ಹೊತ್ತಿಗೆ ನಮ್ಮ ತಾತ ನಿಧನರಾದರು. ಸಂಸಾರದ ಜವಾಬ್ದಾರಿ ಇವರ ಮೇಲೆ ಸಂಪೂರ್ಣವಾಗಿ ಬಿತ್ತು. ಇದ್ದ ಒಬ್ಬ ತಮ್ಮನಿಗೆ ವಿದ್ಯೆ ಹತ್ತಲಿಲ್ಲ. ನಾಲ್ಕನೇ ತರಗತಿಗೆ ಬರುವ ಹೊತ್ತಿಗೇ ಓದಿಗೆ ವಿದಾಯ ಹೇಳಿದ. ರಾಯರು ತಮ್ಮ ಗೆಳೆಯರಾಗಿದ್ದ ಸಿ. ಎಂ. ಪೂಣಚ್ಚನವರು ನಡೆಸುತ್ತಿದ್ದ ಅಂಬಿಕಾ ಪ್ರೆಸ್‌ನಲ್ಲಿ ತಮ್ಮನನ್ನು ಸೇರಿಸಿದರು. ಕೆಲಸದಲ್ಲಿ ಚುರುಕಿದ್ದ ಹುಡುಗ ಮುಂದೆ ಪೂಣಚ್ಚನವರ ಬಲಗೈಯಾದ- ಪೂಣಚ್ಚನವರು ಸ್ವಾತಂತ್ರ್ಯ ಚಳುವಳಿಗೆ ಧುಮುಕಿ ಸೆರೆಮನೆ ಸೇರಿದಾಗ ನಮ್ಮ ಚಿಕ್ಕಪ್ಪನೇ ಪ್ರೆಸ್ಸಿನ ಜವಾಬ್ದಾರಿ ವಹಿಸಿಕೊಳ್ಳುತ್ತಿದ್ದು ಕೊನೆಯವರೆಗೂ ದುಡಿದರು. ಈ ಪೂಣಚ್ಚನವರೆ ಮುಂದೆ ಕೊಡಗಿನ ಮುಖ್ಯಮಂತ್ರಿಯಾಗಿ ಮೈಸೂರು ರಾಜ್ಯದ ಕಾಮಗಾರಿ ಮಂತ್ರಿಯಾಗಿ ಮುಂದೆ ಕೇಂದ್ರ ಮಂತ್ರಿಯೂ ಆಗಿ ಮಧ್ಯಪ್ರದೇಶದ ರಾಜ್ಯಪಾಲರೂ ಆಗಿದ್ದರು.

ನಾಲ್ವರು ತಂಗಿಯರಿಗೂ ಬಹುಕಷ್ಟದಿಂದ ಮದುವೆ ಮಾಡಿದರು. ದೊಡ್ಡ ಸಂಸಾರಕ್ಕೆ ರಾಯರ ಸಂಪಾದನೆ ಎಳ್ಳಷ್ಟು ಸಾಲುತ್ತಿರಲಿಲ್ಲ. ಉಡಲು ಸೀರೆಯಿಲ್ಲದೆ ಹರಕು ಕೋರಿಯನ್ನುಡುತ್ತಿದ್ದ ತಾಯಿಯವರನ್ನು (ನಮ್ಮ ಅಜ್ಜಿ) ಕಂಡಾಗ ರಾಯರ ಕರುಳು ಹಿಂಡುತ್ತಿತ್ತು. ಇಂಥ ಸಂಕಟದಲ್ಲಿ ಆತ್ಮಹತ್ಯೆಗೆ ಪ್ರಯತ್ನಿಸಿದ್ದೂ ಉಂಟು. ಈ ದುಃಖ ಜಂಜಾಟ ಮರೆಯಲು

ಗಾಯನದ ಮೊರೆ ಹೊಕ್ಕರು. ಏಕಾಂತವಾಗಿ ಮೈಮರೆತು ಹಾಡುತ್ತಿದ್ದರು. ಅದೇ ಅವರ ಜೀವನಾಡಿಯಾಯಿತು. ಇಂಥ ಸಮಯದಲ್ಲಿ ಅವರ ಜೊತೆಯಲ್ಲಿದ್ದು ಸಾಂತ್ವನ ನೀಡುತ್ತಿದ್ದವರು ಗೆಳೆಯರಾದ ಸುಬ್ಬರಾಯರು ಮತ್ತು ಬಿ. ಟಿ. ಗೋಪಾಲಕೃಷ್ಣ. ಇದೇ ಸಾಲದೆಂಬಂತೆ ಒಬ್ಬತಂಗಿ ಮನೆ ತಪ್ಪಿ ವಿಧವೆಯಾಗಿ ಅಣ್ಣನನ್ನೇ ಆಶ್ರಯಿಸಿದರು ಮೂರು ತಿಂಗಳ ಮಗುವಿನೊಂದಿಗೆ. ಆ ಮಗುವನ್ನು ತಮ್ಮ ಹಿರಿಯ ಮಗನಂತೆ ಬೆಳೆಸಿದರು.

## ಕನ್ನಡ ಶೀಘ್ರಲಿಪಿ ತರಬೇತಿ

ಸರ್ಕಾರಿ ವಲಯದಲ್ಲಿ ನಮ್ಮ ತಾತ ಶೇಷಗಿರಿರಾಯರು ಸಾಕಷ್ಟು ಹೆಸರು ಮಾಡಿದ್ದರು. ಅವರ ಹೆಸರಿನ ಪ್ರಭಾವದಿಂದ ರಾಯರಿಗೆ ಅಬಕಾರಿ ಇಲಾಖೆಯಲ್ಲಿ ಗುಮಾಸ್ತನ ಹುದ್ದೆ ದೊರೆಯಿತು. ತಮ್ಮ ಇಪ್ಪತ್ತೈದನೇ ವಯಸ್ಸಿನಲ್ಲಿ ರಾಯರು ಲಗ್ನವಾದರು. ರಾಯರ ಭಾವನ ತಮ್ಮನ ಮಗಳು. ಕೋಲಾರ ಜಿಲ್ಲೆಯ ತೇಕಹಳ್ಳಿ ಮನೆತನದ ಹುಡುಗಿ. ಹೆಸರು ಲಕ್ಷ್ಮೀದೇವಿ. ಹೆಸರಿಗೆ ತಕ್ಕಂತೆ ಈಕೆ ಸಾಕ್ಷಾತ್ ಲಕ್ಷ್ಮೀದೇವಿಯೇ-ಅತ್ಯಂತ ಸಹನಾಮೂರ್ತಿ. ಈಕೆಯ ಕೈಹಿಡಿದ ಮೇಲೆ ರಾಯರ ಆರ್ಥಿಕ ಪರಿಸ್ಥಿತಿ ತಕ್ಕಮಟ್ಟಿಗೆ ಸುಧಾರಿಸಿತೆನ್ನಬಹುದು. ಅನ್ನಪೂರ್ಣೇಶ್ವರಿಯಾಗಿ ರಾಯರ ಮನೆ-ಮನಗಳನ್ನು ತುಂಬಿದರು. ಮೂವರು ಗಂಡು, ಎರಡು ಹೆಣ್ಣು ಮಕ್ಕಳಿಗೆ ಜನ್ಮವಿತ್ತರು.

ಇದೇ ಸಂದರ್ಭದಲ್ಲಿ ರಾಯರ ಪ್ರತಿಭೆ-ಅದರಲ್ಲೂ ಶೀಘ್ರಲಿಪಿಕಾರರಾಗಿ-ಗುರುತಿಸಿದ ಸರಕಾರದವರು, ಕನ್ನಡ ಶೀಘ್ರಲಿಪಿ ತರಬೇತಿಗಾಗಿ ಅವರನ್ನು ತಮಿಳುನಾಡಿನ ವೆಲ್ಲೂರಿಗೆ ಕಳುಹಿಸಿದರು. ಅಲ್ಲಿ ಗೌಡಸಾರಸ್ವತ ಬ್ರಾಹ್ಮಣರೂ ಕನ್ನಡಿಗರೂ ಆಗಿದ್ದ ಅಪ್ಪಾಜಿರಾಯರೆಂಬುವರು ಇವರ ಗುರುಗಳು. ವೆಲ್ಲೂರಿನಲ್ಲಿದ್ದಾಗ ಇವರನ್ನು ಮಗನಂತೆ ನೋಡಿಕೊಂಡರು. ಅಲ್ಲಿದ್ದಾಗ ರಾಯರು ಅವಕಾಶ ಸಿಕ್ಕಿದಾಗಲ್ಲೆಲ್ಲ ಅನೇಕ ಸಂಗೀತ ದಿಗ್ಗಜಗಳ - ಮಹಾರಾಜಪುರಂ ವಿಶ್ವನಾಥೈಯ್ಯರ್, ಕಾರೈಕುಡಿ ಸಾಂಬಶಿವ ಅಯ್ಯರ್, ಮುಸರಿ ಸುಬ್ರಹ್ಮಣ್ಯ ಅಯ್ಯರ್, ಚಿತ್ತೂರು ಸುಬ್ರಹ್ಮಣ್ಯಪಿಳ್ಳೆ ಮುಂತಾದವರ ಸಂಗೀತ ಕೇಳುವ ಸುಯೋಗ ದೊರಕಿತು. ಅವರ ಅನೇಕ ಧ್ವನಿ ಮುದ್ರಿಕೆಗಳನ್ನು ಕೊಂಡರು. ಮುಂದೆ ಆ ಧ್ವನಿ ಮುದ್ರಿಕೆಗಳನ್ನು ಹಾಕಿಕೊಂಡು ಜೊತೆ ಜೊತೆಯಾಗಿ ಅಭ್ಯಾಸಮಾಡುತ್ತಿದ್ದು ತಮ್ಮ ಸಂಗೀತಜ್ಞಾನವನ್ನು ರೂಢಿಸಿಕೊಂಡರು.

ತರಬೇತಿಯಿಂದ ಹಿಂದಿರುಗಿದ ರಾಯರಿಗೆ ಕೂಡಲೇ ಬಡ್ತಿ ದೊರೆತು ಪೋಲಿಸ್ ಇಲಾಖೆಯಲ್ಲಿ ವರದಿಗಾರರಾಗಿ ನೇಮಕ. ಮುಂದೆ ಅದೇ

ಇಲಾಖೆಯ 'ಹೆಡ್ಮುನ್ಶಿ' (Head clerk) ಪದವಿ. ಅಲ್ಲಿಂದ ಇವರ ಜೀವನ ಚಕ್ರವೇ ಬದಲಾಯಿಸಿತು.

ಇದೇ ಸಮಯದಲ್ಲಿ (೧೯೩೨) ಸಾಹಿತ್ಯ ಸಮ್ಮೇಳನ ನಡೆದು ಅಲ್ಲಿ ನಡೆದ ಕಳಲೆ ಸಂಪತ್ಕುಮಾರಾಚಾರ್ಯ ಗಮಕವಾಚನದ ಶೈಲಿಗೆ ಮಾರುಹೋದರು ರಾಯರು. ಗಮಕ ಕಲೆಯ ಮೊರೆ ಹೊಕ್ಕರು. ಅದೇ ಅವರ ಜೀವನಾಡಿಯಾಯಿತು. ಸಂಪತ್ಕುಮಾರಾಚಾರ್ಯರು ಕೊಡುತ್ತಿದ್ದ ಧ್ವನಿ ಘಾತ (Volume)ವನ್ನು ಅಭ್ಯಸಿಸಿ ಅದರಂತೆ ಹಾಡಲು ಯತ್ನಿಸುತ್ತಿದ್ದರು. ಅವರ ಶೈಲಿಯಲ್ಲಿಯೇ ಧ್ವನಿ ಎತ್ತರಿಸಿ ಹಾಡುತ್ತಿದ್ದರು. ಆದರೆ ಅವರ ಶೈಲಿಯನ್ನು ಇವರು ಅನುಕರಿಸುತ್ತಿದ್ದರೇ ಹೊರತು ಆಚಾರ್ಯರ ಪರಿಚಯ ಇವರಿಗಾಗಿರಲಿಲ್ಲ. ಮುಂದೆ ಯಾವುದೋ ಕಾರ್ಯನಿಮಿತ್ತ ಬೆಂಗಳೂರಿಗೆ ಹೋಗಿದ್ದಾಗ ಅಂದರೆ ಸುಮಾರು ಎಂಟು ವರ್ಷಗಳ ನಂತರ ಅಲ್ಲಿ ಪರಿಚಯವಾಗಿ ಮತ್ತೊಮ್ಮೆ ಮಡಿಕೇರಿಗೆ ಆಹ್ವಾನಿಸಿದ್ದರು.

ವೆಂಕಟಾದ್ರಿಶ್ಯಾಮರಾಯರು ತಮ್ಮ ಕೊನೆಯ ದಿನಗಳಲ್ಲಿ ರಾಯರನ್ನ ಕರೆದು ತಮ್ಮಲ್ಲಿದ್ದ ಒಂದು ಪೆಟ್ಟಿಗೆ ತಂಬೂರಿಯನ್ನು ನೀಡಿದ್ದರು. ಅದು ರಾಯರ ಅಭ್ಯಾಸದಲ್ಲಿ ಶೃತಿಗೆ ಸಾಧನ ವಾಯಿತು. ಪ್ರತಿದಿನ ಸಂಜೆ ತಮ್ಮ ತಾಯಿಯನ್ನು ಕೂಡಿಸಿಕೊಂಡು ತಮಗೆ ತಿಳಿದ ರೀತಿಯಲ್ಲಿ ಕುಮಾರವ್ಯಾಸ ಭಾರತದ ವಾಚನ ಮಾಡಲು ಆರಂಭಿಸಿದರು.

ಕನ್ನಡ ಸಾಹಿತ್ಯ ಸಮ್ಮೇಳನ ಮಡಿಕೇರಿಯಲ್ಲಿ ನಡೆದ ಸಂದರ್ಭದಲ್ಲಿ ಅದರಲ್ಲಿ ಸಕ್ರಿಯವಾಗಿ ಪಾಲ್ಗೊಂಡು ಯುವ ಕಾರ್ಯಕರ್ತನಾಗಿ ಓಡಾಡುತ್ತಿದ್ದ ರಾಯರು ಅಧ್ಯಕ್ಷರಾಗಿದ್ದ ಡಿ.ವಿ.ಜಿ. ಯವರ ಕಣ್ಣಿಗೆ ಬಿದ್ದರು. ಡಿ. ವಿ. ಜಿ. ಯವರಿಗೂ ಇಂಥ ಯುವಕರ ಅವಶ್ಯಕತೆಯಿತ್ತು. ಸಮ್ಮೇಳನದ ಖರ್ಚಿನಲ್ಲಿ ಉಳಿಕೆಯಾದ ಹಣವನ್ನು ತೊಡಗಿಸಿ ಮಡಿಕೇರಿಯಲ್ಲೊಂದು 'ಕರ್ನಾಟಕ ಸಂಘ' ಸ್ಥಾಪಿಸಿದರು. ಹಿರಿಯರಾದ ಸಿ. ಎಂ. ರಾಮರಾಯರು, ಯು. ಆರ್. ಶೆಣೈ ಹಾಗೂ ಓಡ್ಲೆಮನೆ ಆತ್ಮಾರಾಮ ಶಾಸ್ತ್ರಿಗಳನ್ನು ಕಾರ್ಯಕರ್ತರನ್ನಾಗಿ ನೇಮಿಸಿ ರಾಯರನ್ನು ಯುವಕಾರ್ಯಕರ್ತರನ್ನಾಗಿಸಿದರು. ಹೀಗೆ 'ಕೊಡಗು ಕರ್ನಾಟಕದ ಸಂಘ' ಸ್ಥಾಪಿತವಾಯಿತು. ೧೯೩೪ರಲ್ಲಿ ರಾಯರು ಅದರ ಅಧಿಕೃತ ಕಾರ್ಯದರ್ಶಿಯಾದರು. ಕನ್ನಡ ಸಾಹಿತ್ಯ ಪರಿಷತ್ತಿನ ಆಜೀವ ಸದಸ್ಯರೂ ಆಗಿ ಮುಂದೆ ಕಾರ್ಯಕಾರೀ ಸಮಿತಿಗೆ ಬಂದು ಕೊಡಗು ಜಿಲ್ಲಾ ಪ್ರತಿನಿಧಿಯೂ ಆದರು.

ಈ ಹೊತ್ತಿಗೆ ರಾಯರ ಸಾಹಿತ್ಯಕೃಷಿ ಸತತವಾಗಿ ನಡೆದು ಅನೇಕ ಕೃತಿಗಳ ರಚನೆಯಾಗಿತ್ತು. ತಮ್ಮ ಜೀವನದ ಕೆಲವು ಅನುಭವಗಳು ಕಥಾರೂಪವಾಗಿ ರೂಪುಗೊಂಡಿತ್ತು. ಹರಿಕತೆಯಲ್ಲೂ ಸಾಕಷ್ಟು ಪರಿಣತಿ ಗಳಿಸಿದ್ದ ರಾಯರು 'ಜಡಭರತಾಖ್ಯಾನ' ಎಂಬ ಕಥಾ ಕೀರ್ತನ ರಚನೆಯನ್ನು ಮಾಡಿದ್ದು ೧೯೨೪ರಲ್ಲಿ ಪ್ರಕಟನೆಯನ್ನೂ ಕಂಡಿತ್ತು.

೧೯೩೦ರಲ್ಲಿ 'ಮಹಾತ್ಮಾಕಬೀರ್' ಎಂಬ ಕಾವ್ಯವನ್ನು ಭಾಮಿನಿ ಷಟ್ಪದಿಯಲ್ಲಿ ರಚಿಸಿದರು. ಇದು ಚಾಮರಾಜನಗರದ 'ಕಾದಂಬರೀ ಸಂಗ್ರಹ'ದಲ್ಲಿ ಅಚ್ಚಾಯಿತು. ೧೯೩೩ರಲ್ಲಿ 'ಎರಡು ಕುಸುಮಗಳು' ಎಂಬ ಶೀರ್ಷಿಕೆಯಡಿಯಲ್ಲಿ 'ಶ್ರೀರಾಮಲೀಲಾ' ಮತ್ತು 'ಪುಟ್ಟಕಿಟ್ಟನ ಗುಟ್ಟು' ಎಂಬ ಲೇಖನಗಳು ಕ್ರಮವಾಗಿ ಜಯಕರ್ನಾಟಕ ಹಾಗೂ ಮುಂಬೈನ ಪ್ರಬೋಧಕ ಪತ್ರಿಕೆಗಳಲ್ಲಿ ಪ್ರಕಟಗೊಂಡವು. ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ ಇವನ್ನು ವಿಮರ್ಶಿಸಿದೆ.

**ರಾಯರು ಸರ್ಕಾರೀ ಸೇವೆಯಲ್ಲಿದ್ದ ಕಾಲದಲ್ಲಿ ತಮ್ಮ ನಿಸ್ಪೃಹತೆಗಾಗಿ ಉತ್ತಮ ಹೆಸರು ಪಡೆದಿದ್ದವರು. ಆಗ ಬ್ರಿಟಿಷರ ಆಳ್ವಿಕೆಯ ಕಾಲ. ಕೊಡಗು ಮದರಾಸು ಅಧಿಪತ್ಯಕ್ಕೆ ಒಳಪಟ್ಟಿತ್ತು. ಜೊತೆಗೆ 'ಸ್ವಾತಂತ್ರ್ಯ ಹೋರಾಟ' ಚಳುವಳಿ ತೀವ್ರವಾಗಿದ್ದ ಕಾಲ. ಯಾವ ಸಾಹಿತ್ಯ ಚಟುವಟಿಕೆಗೂ ಆಸ್ಪದವಿರಲಿಲ್ಲ. ಸರ್ಕಾರೀ ನೌಕರರಂತೂ ಯಾವುದೇ ವಿಧವಾದ ಸಾಂಸ್ಕೃತಿಕ ಚಟುವಟಿಕೆಯಲ್ಲಾಗಲೀ ಸಾಹಿತ್ಯ ರಚನೆಯಲ್ಲಾಗಲೀ ಭಾಗಗೊಳ್ಳುವಂತಿರಲಿಲ್ಲ. ಆದರೂ ರಾಯರ ಸಾಹಿತ್ಯ ಕೃಷಿ ಗುಪ್ತವಾಗೇ ನಡೆಯಿತು. 'ಕಲ್ಕಿ', 'ಕಪ್ಪಣ್ಣ ಕವಿ', 'ರಘುಪತಿ' ಮುಂತಾದ ಕಾವ್ಯನಾಮಗಳಲ್ಲಿ ಹೊರಬರುತ್ತಿತ್ತು.**

## ಅನೇಕ ಸಾಹಿತ್ಯ ದಿಗ್ಗಜಗಳ ಸಂಪರ್ಕ

ರಾಯರು ಕೊಡಗು ಕರ್ನಾಟಕ ಸಂಘದ ಕಾರ್ಯದರ್ಶಿಯಾದ ಮೇಲೆ ಕೊಡಗಿನಲ್ಲಿ ಕನ್ನಡದ ಬೆಳವಣಿಗೆಗೆ ವಿಶೇಷ ಇಂಬುದೊರೆಯಿತು. ಪ್ರತಿ ವರ್ಷ 'ವಸಂತ ಸಾಹಿತ್ಯೋತ್ಸವ' ನಡೆಸುವುದು ಒಂದು ಸಂಪ್ರದಾಯವಾಯಿತು. ಮಡಿಕೇರಿಯ ಆಂಜನೇಯ ದೇವಸ್ಥಾನದಲ್ಲಿ ನಡೆಯುವ 'ರಾಮೋತ್ಸವ' ಸಂದರ್ಭದಲ್ಲಿ ಅನೇಕ ಗಮಕಿಗಳು, ಕಥಾ ಕೀರ್ತನಕಾರರು ಪಾಲ್ಗೊಳ್ಳುವಂತಾಯಿತು. ವೇದಾಂತ ಸಂಘದಲ್ಲಿ ನಡೆಯುವ ನವರಾತ್ರಿ ಉತ್ಸವದಲ್ಲೂ ಗಮಕ-ಕೀರ್ತನೆಗಳು ವಿಜೃಂಭಿಸಿದವು. ಇದಕ್ಕೆಲ್ಲ ರಾಯರೇ

ಸೂತ್ರಧಾರಿ. ಆಚಾರ್ಯ ಬಿ.ಎಂ.ಶ್ರೀಯಿಂದ ಹಿಡಿದು ಜಿ. ಎಸ್. ಶಿವರುದ್ರಪ್ಪನವರವರೆಗೆ ಅಂದರೆ ೧೯೬೦ರ ತನಕ - ಕೊಡಗಿಗೆ ಬರದ ಸಾಹಿತಿಗಳಿಲ್ಲ. ಕೊಡಗಿನ ಬಗ್ಗೆ ಬರೆಯದ ಕವಿಗಳಿಲ್ಲ. 'ನಡೆದು ನೋಡು ಕೊಡಗಿನ ಬೆಡಗಂ' ಎಂದರು ಡಿ.ವಿ.ಜಿ.ಯವರು. ರಾಜರತ್ನಂರವರು 'ಮಡಿಕೇರಿಯಲ್ಲಿ ಮಂಜ್'ನ ಜೊತೆಗೆ 'ಬೆಡಗಿ ಪೂವಮ್ಮ'ನನ್ನು ತಂದರು. ಬಿ. ಎಸ್. ರಾಮಾಚಾರ್ಯರು ಕಾವೇರಿಯನ್ನ 'ಹೊನಲರಾಣಿ'ಯನ್ನಾಗಿ ಮಾಡಿ ಹಾಡಿದರು. ಅಲ್ಲದೆ ಕೊಡಗಿನ ಇತರ ತಾಲ್ಲೂಕುಗಳಾದ ವೀರಾಜಪೇಟೆ, ಸೋಮವಾರಪೇಟೆಗಳಲ್ಲೂ ಕರ್ನಾಟಕ ಸಂಘ ಸ್ಥಾಪಿಸಿ, ಗಮಕಿಗಳಾದ ಕೃಷ್ಣರಾಯರು, ಸಂಪತ್ಕುಮಾರಾಚಾರ್ಯರು, ಎಂ. ರಾಘವೇಂದ್ರರಾಯರಂಥವರನ್ನು ಕರೆಸಿ ಭಾರತವಾಚನ ಮಾಡಿಸಿ ಗಮಕಕಲೆಯ ಬೆಳವಣಿಗೆಗೆ ಕಾರಣರಾದರು. ಸಾಹಿತ್ಯೋತ್ಸವಗಳನ್ನು ನಡೆಸಲು ನೆರವಾದರು.

## ತುಲಸೀರಾಮಾಯಣ ರಚನೆ

ಆದರೆ ರಾಯರ ಕಾವ್ಯಗಾಯನ ಕಲೆಯ ಅಭ್ಯಾಸ ಸತತವಾಗಿ ನಡೆಯುತ್ತಿದ್ದರೂ ಆದಕ್ಕೆ ಸರಿಯಾದ ಮಾರ್ಗದರ್ಶನ ಸಿಗದೇ ತಮ್ಮದೇ ಆದ ಶೈಲಿಯಲ್ಲಿ ಹಾಡುತ್ತಿದ್ದರು. ಕಾವ್ಯವಾಚನದ ಪ್ರಭಾವ ಕುಮಾರವ್ಯಾಸನ ಕಾವ್ಯಪ್ರೌಢಿಮೆಯ ಶೈಲಿ ಇವರ ಮೇಲೆ ಸಾಕಷ್ಟು ಪರಿಣಾಮ ಬೀರಿ ೧೯೩೫ರಲ್ಲಿ ಗೋಸ್ವಾಮಿ ತುಲಸೀದಾಸಕೃತ 'ಶ್ರೀರಾಮಚರಿತಮಾನಸ'ದ ಕನ್ನಡದ ಅವತರಣಿಕೆ ರೂಪುಗೊಂಡಿತು. ಇದರ ರಚನೆ ಕುರಿತು ಎರಡು ಮಾತು ಹೇಳಲೇಬೇಕು.

ರಾಯರ ಅಂತರಂಗ ಗೆಳೆಯ ಬಿ. ಎಸ್. ಶ್ರೀನಿವಾಸ ಮೂರ್ತಿ ಪಿ.ಡಬ್ಲ್ಯೂ.ಡಿ. ಇಲಾಖೆಯಲ್ಲಿ ಕೆಲಸದಲ್ಲಿದ್ದರು. ಇವರ ತಂದೆ ಬಿ. ಶಾಮಣ್ಣನವರು. ಬೆಟ್ಟದಪುರದ ಸಂಕೇತಿಗಳು. ಶಾಮಣ್ಣನವರು ವೃತ್ತಿಯಿಂದ ಆಡೀಟರ್. ಕೊಡಗಿನ ಸಾಕಮ್ಮನೇ ಮೊದಲಾದವರ ಅನೇಕ ಕಾಪಿ ತೋಟ ಗಳ ಆದಾಯ-ಖರ್ಚಗಳ ಲೆಕ್ಕಪರಿಶೋಧನೆ ಇವರೇ ಮಾಡುತ್ತಿದ್ದುದು. ಜೊತೆಗೆ ಅಪ್ಪಟ ಗಾಂಧೀವಾದಿ. ಮಹಾತ್ಮಾ ಗಾಂಧೀಜೀಯವರ ನೇರ ಸಂಪರ್ಕ ಹೊಂದಿದ್ದವರು. ಸಂಗೀತಪ್ರಿಯರು. ಮಕ್ಕಳಿಗೂ ಸಂಗೀತ ಕಲಿಸಿದ್ದರು. ಮಗ ಶ್ರೀನಿವಾಸಮೂರ್ತಿ ಹಾರ್ಮೋನಿಯಂ ನುಡಿಸುತ್ತಿದ್ದರು. ನಮ್ಮ ತಂದೆಯವರ ವಾಚನ - ಹರಿಕತೆಗೆ ಅನೇಕ ಬಾರಿ ಪಕ್ಕವಾದ್ಯ ನುಡಿಸಿದ್ದಾರೆ. ಇವರು ಇತ್ತೀಚೆಗೆ ಮದರಾಸಿನಲ್ಲಿ ನಿಧನ ಹೊಂದಿದರು.

ಸಂಗೀತಪ್ರಿಯರಾದ ಶಾಮಣ್ಣನವರು ಪ್ರತಿ ನವರಾತ್ರಿ ಒಂಭತ್ತು ದಿನಗಳ ಕಾಲ ತಮ್ಮ ಮನೆಯಲ್ಲೇ ರಾಮೋತ್ಸವ ನಡೆಸಿ ಮೈಸೂರಿನ ಅನೇಕ ಸಂಗೀತ ವಿದ್ವಾಂಸರನ್ನು ಕರೆಸಿ ಕಚೇರಿ ಮಾಡಿಸುತ್ತಿದ್ದರು. ಮೈಸೂರು ವಾಸುದೇವಾಚಾರ್ಯರೇ ಮುಂತಾದ ಆಸ್ಥಾನ ವಿದ್ವಾಂಸರೂ ಇಲ್ಲಿ ಬಂದು ಹಾಡಿದ್ದಾರೆ. ಕೊನೆಯದಿನ ರಾಯರ 'ರಾಮಪಟ್ಟಾಭಿಷೇಕ' ಘಟ್ಟದ ವಾಚನದೊಂದಿಗೆ ಉತ್ಸವ ಮುಕ್ತಾಯವಾಗುತ್ತಿತ್ತು. ರಾಯರೆಂದರೆ ಶಾಮಣ್ಣನವರಿಗೆ ಅಮಿತ ವಿಶ್ವಾಸ. ಅವರು ಕೊಡಗು ಬಿಟ್ಟ ಮೇಲೂ ಮಡಿಕೇರಿಗೆ ಬಂದಾಗಲೆಲ್ಲ ನಮ್ಮ ಮನೆಯಲ್ಲೇ ತಂಗುತ್ತಿದ್ದರು. ಹೀಗೇ ಒಂದು ಸಂದರ್ಭದಲ್ಲಿ ರಾಯರ ವಾಚನ ಕೇಳಿದ ಶಾಮಣ್ಣನವರಿಗೆ ಒಂದು ಯೋಚನೆ ಹೊಳೆಯಿತು. ಅದನ್ನ ರಾಯರ ಮುಂದಿಟ್ಟರು-

'ಅನಂತಾ ನೀನು ಈಗ ಒಂದು ಕೆಲಸ ಮಾಡಬೇಕು-ತುಲಸೀದಾಸರ ಹಿಂದೀ ರಾಮಾಯಣ 'ರಾಮಚರಿತಮಾನಸ'ವನ್ನು ಕನ್ನಡದಲ್ಲಿ ಬರೆಯಬೇಕು'' ಎಂದರು.

ರಾಯರು ತಬ್ಬಿಬ್ಬಾಗಿ 'ಅಲ್ಲಾ ಶಾಮಣ್ಣೋರೇ, ನನಗೆ ಹಿಂದೀ ಭಾಷಾಜ್ಞಾನವೇ ಇಲ್ಲ. ಸಂಸ್ಕೃತ ಪರಿಚಯವೂ ಇಲ್ಲ. ಹೀಗಿರೋವಾಗ ನಾನು ಈ ಸಾಹಸಕ್ಕೆ ಕೈ ಹಾಕಲು ಸಾಧ್ಯವೇ'

**'ನೋಡೋ ಇಲ್ಲಿ ಭಾಷಾಜ್ಞಾನ ಮುಖ್ಯವಲ್ಲ ಕಾವ್ಯರಚನಾ ಶಕ್ತಿ ಮುಖ್ಯ. ಅದು ನಿನ್ನಲ್ಲಿ ಸುಪ್ತವಾಗಿದೆ. ನಿನ್ನ ಕಾವ್ಯರಚನಾ ಕೌಶಲದ ಬಗ್ಗೆ ನನಗೆ ನಂಬಿಕೆಯಿದೆ. ನೀನು ಸಂಕಲ್ಪಿಸು ಉಳಿದದ್ದನ್ನು ರಾಮ ನೋಡಿಕೊಳ್ತಾನೆ' ಎಂದು ಹುರಿದುಂಬಿಸಿದರು.**

ಹೀಗೆ ಹೇಳಿದ ಶಾಮಣ್ಣನವರು ಸುಮ್ಮನೆ ಕೂಡಲಿಲ್ಲ. ಅವರಿಗೆ ಹಿಂದೀಭಾಷೆಯ ಪರಿಚಯ ಚೆನ್ನಾಗಿತ್ತು. ಪ್ರತಿದಿನ ರಾಯರನ್ನ ಕೂಡಿಸಿ ಕೊಂಡು ಐದ್ವೈದು ಶ್ಲೋಕಗಳನ್ನು ಓದಿ ಅರ್ಥವಿವರಿಸುತ್ತಿದ್ದರು. ಅದನ್ನು ಟಿಪ್ಪಣಿ ಮಾಡಿಕೊಂಡು ಶಾಮಣ್ಣನವರ ಅರ್ಥವಿವರಣೆ ಗ್ರಹಿಕೆಯಿಂದ ಕಾವ್ಯ ರಚಿಸಿದರು. ಭಾಮಿನಿ-ವಾರ್ಧಕ ಷಟ್ಪದಿಗಳನ್ನೊಳಗೊಂಡು ಈ ಕಾವ್ಯ ಒಂದು ಬೃಹತ್ಸಂಪುಟವಾಗಿ ೨,೫೦೦ ಪದ್ಯಗಳ ಗ್ರಂಥವಾಯಿತು.

ಇದು ಮುಗಿಯುವುದಕ್ಕೂ ನಾನು ಹುಟ್ಟುವುದಕ್ಕೂ ಎರಡೇ ದಿನದ ವ್ಯತ್ಯಾಸವಂತೆ. ೧೯೩೫ರ ಅಕ್ಟೋಬರ್ ಮುವತ್ತೊಂದರಂದು ಇದರ ರಚನೆ ಜಯದೋಪಾದಿಯಲ್ಲಿ ಮುಗಿಯಿತಂತೆ. ನವೆಂಬರ್ ೩ರಂದು ನನ್ನ ಜನನವಾಯಿತು. ಹಾಗಾಗಿ ನನಗೆ 'ಜಯರಾಮ' ಎಂಬ ಹೆಸರನ್ನಿಟ್ಟರಂತೆ. ಇದನ್ನು ತಂದೆಯವರ ಬಾಯಿಂದಲೇ ಕೇಳಿದ್ದೇನೆ.

ಆಚಾರ್ಯ ಡಿ. ವಿ. ಜಿ. ಯವರು ಈ ಕಾವ್ಯವನ್ನು ಅವಲೋಕಿಸಿ ತಮ್ಮ ಮುನ್ನುಡಿಯಲ್ಲಿ 'ರಾಯರಿಗೆ ಕುಮಾರವ್ಯಾಸನ ವರಪ್ರಸಾದ' ಸಂಪೂರ್ಣವಾಗಿ ದೊರೆತಿದೆ' ಎಂದು ಪ್ರಶಂಸೆ ವ್ಯಕ್ತ ಪಡಿಸಿದ್ದಾರೆ. ೧೯೫೦ರಲ್ಲಿ ಇದಕ್ಕೆ ಪ್ರತಿಷ್ಠಿತ 'ದೇವರಾಜ ಬಹದ್ದೂರ್ ದತ್ತಿ' ಪ್ರಶಸ್ತಿಯೂ ಲಭಿಸಿತು.

## ಕೃಷ್ಣರಾಯರಿಂದ ಶಿಷ್ಯಸ್ವೀಕಾರ

ಇದು ರಚನೆಯಾದ ಕೆಲವೇ ದಿನಗಳಲ್ಲಿ ಮಡಿಕೇರಿಯ ಸಾಹಿತ್ಯೋತ್ಸವೊಂದಕ್ಕೆ ಕನ್ನಡದ ಅಶ್ವಿನೀ ದೇವತೆಗಳಲ್ಲೊಬ್ಬರೆನಿಸಿದ್ದ ಪ್ರೊ|| ಟಿ. ಎಸ್. ವೆಂಕಣ್ಣಯ್ಯನವರು ಆಗಮಿಸಿದರು. ಅವರೊಂದಿಗೆ 'ಭಾರತದ ಕೃಷ್ಣರಾಯ'ರೆಂದೇ ಪ್ರಸಿದ್ಧರಾಗಿದ್ದ ಕೃಷ್ಣಗಿರಿ ಕೃಷ್ಣರಾಯರೂ ಆಗಮಿಸಿದ್ದರು. ಕೃಷ್ಣರಾಯರ ಹೆಸರನ್ನು ನಮ್ಮ ತಂದೆಯವರು ಕೇಳಿದ್ದರೇ ಹೊರತು ಅವರ ವಾಚನ ಕೇಳುವ ಸುಯೋಗ ಬಂದಿರಲಿಲ್ಲ. ಆಗ ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದ ಸಿ. ಎಂ. ರಾಮರಾಯರ ಮನೆಯಲ್ಲಿ ಇವರ ವಾಸ್ತವ್ಯ. ಅವರ ಮನೆಯ ಹಿಂದೆಯೇ ನಮ್ಮ ಮನೆಯಿತ್ತಂತೆ. ನನಗೆ ನೆನಪಿಲ್ಲ. ನಮ್ಮ ತಂದೆಯವರಲ್ಲಿ ಸಾಕಷ್ಟು ಪ್ರತಿಭೆ ಇದ್ದರೂ ಹರಿಕಥೆ ಮಾಡಿ ಅನುಭವ ವಿದ್ದರೂ ಬಹಿರಂಗವಾಗಿ ಹಾಡಲು ಸಂಕೋಚಿಸುವ ಪ್ರವೃತ್ತಿಯಿತ್ತು. ಮನೆಯಲ್ಲಿ ತಮ್ಮಷ್ಟಕ್ಕೆ ತಾವೇ ಹಾಡಿಕೊಳ್ಳುತ್ತಿದ್ದರು.

ಸಾಹಿತ್ಯೋತ್ಸವದಲ್ಲಿ ಕೃಷ್ಣರಾಯರ ವಾಚನವೂ ಇತ್ತು. ಅದನ್ನು ಕೇಳಿದ ತಂದೆಯವರು ಅವರ ವಾಚನದ ವೈಖರಿಯನ್ನು ಬಹುವಾಗಿ ಮೆಚ್ಚಿಕೊಂಡಿದ್ದರು. ಉದ್ಯೋಗ ಪರ್ವದ ಒಂದು ಘಟ್ಟ. ಮಾರನೇ ದಿನ ಬೆಳಿಗ್ಗೆ ಆ ಪದ್ಯಗಳನ್ನು ಇವರು ತಮ್ಮ ಮನೆಯಲ್ಲಿ ಹೇಳಿಕೊಳ್ಳುತ್ತಿದ್ದರು. ಅದೇ ಹೊತ್ತಿಗೆ ಕೃಷ್ಣರಾಯರು ಬಹಿರ್ದೆಸೆಗೆ ಹೊರಟಿದ್ದರು. ರಾಯರು ಹಾಡುತ್ತಿದ್ದ ಪದ್ಯಗಳು ಇವರ ಕಿವಿಗೆ ಬಿತ್ತು. ತಮ್ಮ ಕೆಲಸ ಮರೆತು ಅದನ್ನೆ ಆಲಿಸುತ್ತಾ ನಿಂತರು. ತಾವು ಹಿಂದಿನ ದಿನ ಹಾಡಿದ ಪದ್ಯಗಳು! ಅದೇ ಶೈಲಿ, ಕಂಠವೂ ಇಂಪಾಗಿತ್ತು. ಆಶ್ಚರ್ಯದಿಂದ ಕೃಷ್ಣರಾಯರು ರಾಮರಾಯರನ್ನು ವಿಚಾರಿಸಲಾಗಿ ಅವರು ಇವರನ್ನು ಪರಿಚಯಿಸಿದರು, ತಂದೆಯವರ ಸಮಗ್ರ ವಿಷಯವನ್ನು ತಿಳಿದ ಕೃಷ್ಣರಾಯರು ಅವರ ತುಲಸೀ ರಾಮಾಯಣದ ಹಸ್ತಪ್ರತಿಯನ್ನು ಅವಲೋಕಿಸಿದರು. ಅಂದು ರಾತ್ರಿ ಮಡಿಕೇರಿಯ ಆಂಜನೇಯನ ಸನ್ನಿಧಿಯಲ್ಲಿ ಅವರ ವಾಚನವಿತ್ತು. ಅಂದು ಕೃಷ್ಣರಾಯರು 'ತುಲಸೀರಾಮಾಯಣ'ದಿಂದ ರಾಮಜನನದ ಭಾಗವನ್ನು ವಾಚನ ಮಾಡಿದರು. ಅಲ್ಲಿಯೇ ರಾಯರನ್ನು ತಮ್ಮ ಶಿಷ್ಯನನ್ನಾಗಿ ಸ್ವೀಕರಿಸಿದರು. ಹೀಗೆ ನಮ್ಮ ತಂದೆಯವರ ಗಮಕ ಕಲೆಯ ಉನ್ನತಿಗೆ - ಗುರುಗಳೂ -

ಮಾರ್ಗದರ್ಶಕರೂ ಆದರು ಕೃಷ್ಣರಾಯರು. ಆದರೆ ಕೃಷ್ಣರಾಯರು ಮೈಸೂರಿನಲ್ಲಿ - ರಾಯರು ಮಡಿಕೇರಿಯಲ್ಲಿ! ಪಾಠ? ಅದಕ್ಕೂ ದಾರಿಯಾಯಿತು. ವಾರದಲ್ಲಿ ಒಂದು ದಿನ ರಾಯರು ಮೈಸೂರಿಗೆ ಮತ್ತೊಂದು ವಾರ ಕೃಷ್ಣರಾಯರು ಮಡಿಕೇರಿಗೆ. ಹೀಗೆ ಸಾಗಿತು ಪಾಠ. ಗಮಕ ಕಲೆಯ ಔನ್ನತ್ಯಕ್ಕೆ ಸೂಕ್ತ ಮಾರ್ಗದರ್ಶನವಾಯಿತು. ಜೊತೆ ಜೊತೆಯಲ್ಲೇ ಕಾವ್ಯರಚನಾ ಕಾರ್ಯವೂ ಮುಂದುವರೆಯಿತು.

## ಕಳಲೆ ಸಂಪತ್ಕುಮಾರಾಚಾರ್ಯರ ಸಂಪರ್ಕ

ಅನಂತಪದ್ಮನಾಭರಾಯರ 'ಕಾವ್ಯಗಾಯನ ಕಲೆ' ಅವರ ಗಾಯನಕ್ಕೆ ಸೀಮಿತವಾಗಬಾರದು. ಸಾಕಷ್ಟು ಪ್ರಮಾಣದಲ್ಲಿ ಪ್ರಚಾರವಾಗಬೇಕು. ಹಾಗಾಗಲು ಸಾಕಷ್ಟು ಶಿಷ್ಯರನ್ನು ತಯಾರುಮಾಡಬೇಕು ಎಂಬ ಕೃಷ್ಣರಾಯರ ಸಲಹೆಗೆ ಸ್ಪಂಧಿಸಿದ ತಂದೆಯವರು ೧೯೩೭ರಲ್ಲಿ ಮನೆಯಲ್ಲೇ ಗಮಕ ತರಗತಿ ಆರಂಭಿಸಿದರು. ಇಬ್ಬರು ವಿದ್ಯಾರ್ಥಿಗಳೂ ದೊರೆತರು. ಒಬ್ಬರು ರಾಜಲಕ್ಷ್ಮಿ (ಈಕೆ ಮುಳಿಯ ತಿಮ್ಮಪ್ಪಯ್ಯನವರ ಮಗ ಮುಳಿಯ ಕೇಶವಭಟ್ಟರ ಪತ್ನಿ) ಮತ್ತೊಬ್ಬರು ಆರ್. ರಾಜ (ಚೌಡಯ್ಯನವರ ಸಮಕಾಲೀನರಾಗಿದ್ದ ಪಿಟೀಲು ವಿದ್ವಾಂಸ ರಾಮಕೃಷ್ಣನಾಯುಡು ಅವರ ಮಗ- ಬೆಂಗಳೂರು ಕಾಫೀಮಂಡಲಿಯಲ್ಲಿ ಅಧಿಕಾರಿಯಾಗಿದ್ದರು. ಇತ್ತೀಚೆಗೆ ನಿಧನರಾದರು.) ಕನ್ನಡ ಸಾಹಿತ್ಯ ಪರಿಷತ್ತು ಇದಕ್ಕೆ ಮನ್ನಣೆ ನೀಡಿ ಪರೀಕ್ಷೆಗಳನ್ನು ನಡೆಸಲು ಅನುಮತಿ ನೀಡಿತು. ಇದಕ್ಕೆ ಪರೀಕ್ಷಕರಾಗಿ ಬಂದಾಗಲೇ ನಾನು ಕೃಷ್ಣರಾಯರನ್ನು ನೋಡಿದ್ದು ಅವರ ಮುಂದೆ ಹಾಡಿದ್ದು.



ಈಗಾಗಲೇ ಪರಿಷತ್ತಿನ ಕಾರ್ಯಕಾರೀ ಸಮಿತಿಯಲ್ಲಿದ್ದ ನಮ್ಮ ತಂದೆಯವರು ಮೀಟಿಂಗಿಗಾಗಿ ಆಗಾಗ ಬೆಂಗಳೂರಿಗೆ ಹೋಗುತ್ತಿದ್ದರು. ಹೀಗೊಮ್ಮೆ ಹೋಗಿದ್ದಾಗ ಅಲ್ಲಿ ಅವರಿಗೆ ಸಂಪತ್ಕುಮಾರಾಚಾರ್ಯರ ಭೇಟಿಯಾಗುವ ಅವಕಾಶ ದೊರೆಯಿತು. ಮಡಿಕೇರಿಯ ಸಮ್ಮೇಳನದಲ್ಲಿ ಆಚಾರ್ಯರ ವಾಚನ ಕೇಳಿದ್ದ ತಂದೆಯವರು ಈಗ ಅವರ ಪರಿಚಯ ಲಭಿಸಿದ್ದರಿಂದ ಉಬ್ಬಿ ಹೋದರು. ಮಡಿಕೇರಿಗೆ ಆಹ್ವಾನಿಸಿದರು.

ಅವರ ಆಹ್ವಾನವನ್ನು ಸ್ವೀಕರಿಸಿದ ಆಚಾರ್ಯರು ಮಡಿಕೇರಿಗೆ ೧೯೪೩ರಲ್ಲಿ ಆಗಮಿಸಿ ಮಡಿಕೇರಿ-ವೀರಾಜಪೇಟೆಗಳಲ್ಲಿ ವಾಚನ ಕಾರ್ಯಕ್ರಮಗಳನ್ನು ನೀಡಿದ್ದೇ ಅಲ್ಲದೆ ವೀರ, ರೌದ್ರರಸಗಳನ್ನೂ ಹಾಡುವಾಗ ಅವರು ಮಾಡುತ್ತಿದ್ದ 'ಧ್ವನಿ ವರ್ಧನೆ'ಯ ಗುಟ್ಟನ್ನು ತೋರಿಸಿ ಕೊಟ್ಟರು. ಅದನ್ನು ಅಭ್ಯಸಿಸಿದ ರಾಯರು ಸಂಪತ್ಕುಮಾರಾಚಾರ್ಯರ ಶೈಲಿಯನ್ನು ಅನುಕರಿಸುವಲ್ಲಿ ಯಶಸ್ವಿಯಾದರು.

ಮುಂದೆ ಆಚಾರ್ಯರು ಬೆಂಗಳೂರಿನ ನ್ಯಾಷನಲ್ ಹೈಸ್ಕೂಲಿನಲ್ಲಿ ರಾಯರ ವಾಚನವನ್ನು ಏರ್ಪಡಿಸಿ ಬೆಂಗಳೂರಿನ ಜನತೆಗೆ ರಾಯರ ವಾಚನದ ಸಾಮರ್ಥ್ಯವನ್ನು ಪರಿಚಯಿಸಲು ಕಾರಣರಾದರು.

೧೯೪೨ರಲ್ಲಿ ಆರಂಭವಾದ ಗಮಕ ತರಗತಿಗಳು ೧೯೬೦ರವರೆಗೂ ಅಂದರೆ ನಾವು ಕೊಡಗು ಬಿಡುವವರೆಗೂ ಅವ್ಯಾಹತವಾಗಿ ಸಾಗಿ ಸುಮಾರು ೧೦೦ಕ್ಕೂ ಮಿಕ್ಕಿ ಶಿಷ್ಯಸಮೂಹ ಭಾರತವಾಚನವನ್ನು ಕಲಿತರು. ಪರೀಕ್ಷಕರಾಗಿ ಬಂದ ಅನೇಕ ಗಮಕಿಗಳ ವಾಚನಗಳನ್ನು ಏರ್ಪಡಿಸಿ ಅವರ ಕಾವ್ಯವಾಚನ ಸೌರಭವನ್ನು ಜನತೆಗೆ ಉಣಿಸಿದ ರಾಯರನ್ನು ಕೊಡಗಿನ ಜನ 'ಭಾರತ ವಾಚನ ಸ್ವಾಮಿ' ಎಂದೇ ಕರೆದರು. ಅಲ್ಲಿ ಅದು 'ಭಾರತ ವಾಚನ'ವೆಂಬ ಕಲೆಯಾಯಿತು.

ಗಮಕ ಕ್ಷೇತ್ರದ ಅನೇಕ ದಿಗ್ಗಜಗಳು ಮಡಿಕೇರಿಗೆ ಬಂದಿದ್ದಾರೆ. ಕೃಷ್ಣರಾಯರು, ಸಂಪತ್ಕುಮಾರಾಚಾರ್ಯರಲ್ಲದೆ, ಗಮಕಿ ರಾಘವೇಂದ್ರ ರಾಯರು, ರಾಜಮ್ಮ ಕಲ್ಲೊಳಿಮಠ, ಬಿ. ಶಿವಮೂರ್ತಿಶಾಸ್ತ್ರೀ, ಮಂಡ್ಯ ಶೇಷಗಿರಿರಾಯರು, ಎಂ. ಎಸ್. ಚಂದ್ರಶೇಖರಯ್ಯ, ಹೆಚ್. ಕೆ. ರಾಮಸ್ವಾಮಿ, ನಂ. ಅಶ್ವತ್ಥನಾರಾಯಣ, ಶಕುಂತಲಾಬಾಯಿ ಪಾಂಡುರಂಗ ರಾವ್ ಅಲ್ಲದೆ ಸಾಹಿತಿಗಳಾದ ಪ್ರೊ. ಕೆ. ವೆಂಕಟರಾಮಪ್ಪ, ಸಂಪದ್ಗಿರಿರಾವ್, ಎಸ್. ವಿ. ಪರಮೇಶ್ವರ ಭಟ್ಟ, ಸಿ. ಕೆ. ನಾಗರಾಜ ರಾವ್, ಹೆಚ್. ಕೆ. ರಂಗನಾಥ್, ಎ. ಎನ್. ಮೂರ್ತಿರಾವ್, ಗುಡಿಬಂಡೆ ರಾಮಾಚಾರ್ ಅಲ್ಲದೆ ಡಾ|| ರಾಳ್ಳಪಳ್ಳಿ ಅಂತಕೃಷ್ಣಶರ್ಮ ಮುಂತಾದವರು ಆಗಮಿಸಿ ನಮ್ಮ ಅತಿಥಿಗಳಾಗಿದ್ದರು.

## ರಾಯರ ಸಹಧರ್ಮಿಣಿ

ಇಲ್ಲಿ ನಮ್ಮ ತಾಯಿ ಲಕ್ಷ್ಮೀದೇವಮ್ಮನ ಬಗ್ಗೆ ಎರಡು ಮಾತು ಬರೆಯ ದಿದ್ದರೆ ಅಪಚಾರವಾಗುತ್ತದೆ. ನಮ್ಮ ತಂದೆಯವರು ಕೊಡಗಿನಲ್ಲಿದ್ದಷ್ಟು ಸಮಯವೂ ಅತಿಥಿ ಸತ್ಕಾರಕ್ಕೆ ಎತ್ತಿದಕೈ. ಅವರದ್ದು ಕೊಡುಗೈ. ದೇಹಿ ಎಂದವರಿಗೆ ನಾಸ್ತಿಯನ್ನದೆ ಏನಿರುತ್ತೋ ಅದನ್ನು ಕೊಟ್ಟು ಬಿಡುತ್ತಿದ್ದರು. ಹಾಗಂತ ಅಂಥ ಸ್ಥಿತಿವಂತರೇನಾಗಿರಲಿಲ್ಲ. ಇದಕ್ಕೊಂದು ಸಣ್ಣ ನಿದರ್ಶನ. ನಾನೇ ಕಣ್ಣಾರೆ ಕಂಡದ್ದು. ನಮ್ಮ ಮನೆಗೆ ಬೆಂಗಳೂರಿನ ದಾಸರೊಬ್ಬರು ಪ್ರತೀ ಶ್ರಾವಣಮಾಸ ಬರುತ್ತಿದ್ದರು. ಬರುತ್ತಿದ್ದ ದೇವರನಾಮಗಳನ್ನೆಲ್ಲಾ ಹಾಡಿ ತಣಿಸುತ್ತಿದ್ದರು. ದಾಸರಂತೆ ವೇಷಧರಿಸಿ ಮನೆ ಮನೆಗೆ ಹೋಗು ತ್ತಿದ್ದರು. ಒಮ್ಮೆ ಇವರ ಮಗಳ ಲಗ್ನ ನಿಶ್ಚಯವಾಯಿತು, ಮನೆಗೆ ಬಂದ ದಾಸರು ವಿಷಯ ತಿಳಿಸಿ ಸಹಾಯ ಯಾಚಿಸಿದರು. ಕಾಕತಾಳೀಯದಂತೆ ಹಿಂದಿನ ಸಂಜೆಯಷ್ಟೇ ತಂದೆಯವರು ಹೊಸ ಕೋಟೊಂದನ್ನು ಹೊಲಿಸಿ ತಂದಿದ್ದರು. ಅದನ್ನು ತಂದು, ವರನಿಗೆ ಕೊಡಿ ಎಂದು ದಾನಮಾಡಿಯೇ ಬಿಟ್ಟರು.

ಮತ್ತೊಂದು ನಿದರ್ಶನ ಸಾಹಿತಿ 'ಭಾರತೀಸುತ'ರದ್ದು. 'ಭಾರತೀಸುತ' ಎಂದೇ ಖ್ಯಾತರಾದ ಎಸ್. ಆರ್. ನಾರಾಯಣ ಆಗಿನ ಕಾಲಕ್ಕೆ ಶಾಲೆ ಯೊಂದರಲ್ಲಿ ಕನ್ನಡ ಅಧ್ಯಪಕರಾಗಿದ್ದರು. ಅವರದೂ ಬಡಕುಟುಂಬವೇ. ಅವರು ಬರೆದ ಪುಸ್ತಕಗಳನ್ನೂ ಅಚ್ಚು ಹಾಕಿಸಲು ಧನಸಂಗ್ರಹಣೆಗಾಗಿ ಹೊರಟರು. ನಮ್ಮ ಮನೆಗೇ ಮೊದಲು ಬಂದರು. ಇವರಿಂದಲೇ ವಂತಿಗೆ ಆರಂಭವಾದರೆ ಅದೇ ಘನಾಶೀರ್ವಾದ ಎಂಬ ನಂಬಿಕೆ ಅವರಿಗೆ. ತಂದೆಯವರು ತಮ್ಮ ಪರ್ಸ್ ತೆಗೆದಾಗ ಅದರಲ್ಲಿದ್ದುದು ಕೇವಲ ಎಂಟಾಣೆಯ ಬಿಲ್ಲೆ ಮಾತ್ರ.

'ನೋಡಯ್ಯ ನಾರಾಯಣ ನನ್ನ ಬಳಿಯಿರುವುದು ಇಷ್ಟೇ. ಇದನ್ನು ಹೇಗೆ ಕೊಡಲಯ್ಯ' ಎಂದಾಗ 'ಇದರ ಆರಂಭದಿಂದ ನನ್ನ ಕೆಲಸ ಹಗುರ ವಾಗುತ್ತದೆ ಆಶೀರ್ವಾದ ಮಾಡಿಕೊಡಿ' ಎಂದು ಅದನ್ನು ಪಡೆದರು. ಆ ದಿನವೇ ಅವರಿಗೆ ಪುಸ್ತಕದ ಅಚ್ಚಿನ ಖರ್ಚು ಹುಟ್ಟಿ ಹೋಯಿತಂತೆ.

ಹೀಗೆ ಕೊಡಲು ಇಂಥದ್ದೇ ಇಷ್ಟೇ ಇರಬೇಕೆಂದಿರಲಿಲ್ಲ. ಅವರಿಗೆ ಮನೆಯಲ್ಲೇ ಒಪ್ಪೊತ್ತಿನ ಊಟಕ್ಕೆ ಹತ್ತಾರು ಜನರಿರುತ್ತಿದ್ದರು. ಜೊತೆಗೆ ಕೆಲವು ವಾರದ ಹುಡುಗರು. ಅಲ್ಲದೆ ಯಾವ ಮುನ್ಸೂಚನೆಯೂ ಇಲ್ಲದೆ ಬರುವಂಥ ಆಗಂತುಕರು-ನೆಂಟರು. ಮಡಿಕೇರಿಗೆ ಯಾರೇ ಬರಲಿ ಅವರಿಗೆ ನಮ್ಮ ಮನೆಯೇ ಆಶ್ರಯ.

ರಾಯರು ಇಲ್ಲದಿರಲಿ-ಇಲ್ಲದಿರಲಿ ಬಂದವರನ್ನು ಆದರಾತಿಥ್ಯಗಳಿಂದ ಸತ್ಕರಿಸಿ ಸದಾ ಹಸನ್ಮುಖಿಯಾಗಿ - ಕಷ್ಟವೊ, ಕಾರ್ಪಣ್ಯವೊ - ಯಾವುದನ್ನೂ ತೋರಿಸಿಕೊಳ್ಳದೆ, ರಾಯರ ಮನಸ್ಸಿನಂತೆ - ಅವರಿಗೂ ಅಸಮಾಧಾನವಾಗದ ರೀತಿಯಲ್ಲಿ ಬಂದಂಥ ಕ್ಲಿಷ್ಟ ಪರಿಸ್ಥಿತಿಗಳನ್ನು ಸುಧಾರಿಸುತ್ತಿದ್ದರು. ರಾಯರಿಂದಲೇ 'ಈಕೆ ನನ್ನ ಮನೆಯ ಅನ್ನಪೂರ್ಣೇಶ್ವರಿ' ಎಂದು ಕರೆಸಿಕೊಂಡು ಊರಿಗೇ 'ಅತ್ತೆ' ಎನಿಸಿಕೊಂಡರು. ಕಾರಣ ನಾವೆಲ್ಲರೂ ನಮ್ಮ ತಂದೆ ತಾಯಿಯನ್ನು 'ಮಾವ-ಅತ್ತೆ' ಎಂದೇ ಕರೆಯುತ್ತಿದ್ದುದು.

ತಾಯಿಯವರದ್ದು ಸಣ್ಣಧ್ವನಿ. ತುಂಬಾ ಇಂಪಾಗಿ ಹಾಡುತ್ತಿದ್ದರು. ಅವರಿಗೋಸ್ಕರವಾಗಿ ತಂದೆಯವರು ಸ್ವತಃ ಅನೇಕ ಹಸೆಕರೆದ ಹಾಡುಗಳನ್ನು ರಚಿಸಿಕೊಟ್ಟಿದ್ದರು. ಆದರೂ ಅವರು ಹಾಡುವುದನ್ನು ಮಾತ್ರ ಕೇಳಿರಲಿಲ್ಲ. ತಂದೆಯವರು ಗಮಕ ಪಾಠ ಮಾಡುತ್ತಿದ್ದ ವೇಳೆಯಲ್ಲಿ ಮರೆಯಲ್ಲಿ ಕುಳಿತು ಕೇಳಿ ಗುಪ್ತವಾಗಿ ತಾವೂ ಅಭ್ಯಸಿಸುತ್ತಿದ್ದರು. ಅಲ್ಲದೆ ಅನೇಕ ಹಿರಿಯ ಮಹಿಳೆಯರಿಗೆ ತಾವು ಕಲಿತ ಭಾಗಗಳನ್ನು ಹೇಳಿಕೊಟ್ಟು ಗಮಕದ ಗುರುಗಳೂ ಆಗಿದ್ದರು.

ಅವರು ಹಾಡುತ್ತಿದ್ದುದನ್ನೇ ಕೇಳಬೇಕೆಂಬ ಬಯಕೆಯಿಂದ ತಂದೆಯವರು ಎಷ್ಟೋ ಬಾರಿ ಕಚೇರಿಯಿಂದ ಬೇಗ ಬಂದು ಮರೆಯಲ್ಲೇ ಕೇಳಿ ಆನಂದಿಸಿದ್ದೂ ಇದೆ.

ನಮ್ಮದು ಅವಿಭಕ್ತ ಕುಟುಂಬ. ರಾಯರು - ಪತ್ನಿ ನಾಲ್ಕು ಜನ ಮಕ್ಕಳು - ನಮ್ಮ ಅಣ್ಣ ಶೇಷಗಿರಿರಾವ್, ನಾನು, ನನ್ನ ತಂಗಿ ಪದ್ಮಿನಿ ಹಾಗೂ ನಾಗೇಂದ್ರ ಅಲ್ಲದೆ ತಂಗಿ - ತಮ್ಮ ಅವರ ಮಕ್ಕಳು. ಎಲ್ಲರೂ ಒಂದೇ ಪಂಕ್ತಿಯಲ್ಲಿ ಊಟಕ್ಕೆ ಕೂರಬೇಕು. ನಮ್ಮ ಅಜ್ಜಿ ನರಸಮ್ಮ ಇಷ್ಟು ಜನರಿಗೂ ಅಡುಗೆ ಮಾಡಿ ತಮಗೆ ಬೇರೆ ತೆಗೆದಿಟ್ಟುಕೊಂಡು ಸೊಸೆಗೆ ಬಡಿಸಲು ಬಿಡುತ್ತಿದ್ದರು. ನಮ್ಮ ಅಮ್ಮ ಬಡಿಸಲು ನಿಂತರೆ ಎಲ್ಲರಿಗೂ ಒಂದು ತುತ್ತು ಜಾಸ್ತಿ ಹೋಗುತ್ತಿತ್ತೇ ಹೊರತು ಅತೃಪ್ತಿಗೆ ಅವಕಾಶವೇ ಇಲ್ಲ. ತಮ್ಮ ಮಕ್ಕಳು - ಬೇರೆಯವರು ಎಂಬ ತಾರತಮ್ಯವೇ ಇಲ್ಲದಂತೆ ಉಪಚರಿಸುತ್ತಿದ್ದುದು ಅವರ ದೊಡ್ಡ ಗುಣ. ಮೂವರು ಸೊಸೆಯರಿಗಂತೂ ಈಕೆ ಸಾಕ್ಷಾತ್ - ಮಾತೃಸ್ವರೂಪರು - ಪೂಜ್ಯರು.

ತಂದೆಯವರು ನಮಗೆ ಸಂಗೀತ-ಗಮಕ ಎರಡೂ ಕ್ಷೇತ್ರಗಳಲ್ಲಿ ಶಿಕ್ಷಣ ನೀಡಿದ್ದರು. ಅಣ್ಣ ಶೇಷಗಿರಿಗೆ ದೈವದತ್ತವಾಗಿ ಬಂದ ಫಲುಕು -ಗಮಕಗಳು-ಇಂಪಿನ ಗಾಯನ. ರಾಗಾಲಾಪನೆ ಮಾಡುವುದರಲ್ಲಿ ಎತ್ತಿದ ಕೈ. ನನ್ನದು ಎತ್ತರದ ಕಂಠ. ಗಮಕಕ್ಕೆ ಹೇಳಿ ಮಾಡಿಸಿದಂತಿತ್ತು. ಸಂಗೀತಕ್ಕೆ ಕೊಂಚ

ಮಾಧುರ್ಯ ಕಡಿಮೆ. ನಮ್ಮಿಬ್ಬರಿಗೂ ಚಕ್ರಕೊಡಿ ನಾರಾಯಣಶಾಸ್ತ್ರಿ ಹಾಗೂ ವೈ. ಎನ್. ಶ್ರೀನಿವಾಸ ಮೂರ್ತಿಯವರಲ್ಲಿ ಸಂಗೀತ ಶಿಕ್ಷಣ. ಇಬ್ಬರೂ 'ಮಡಿಕೇರಿ ಸಹೋದರ'ರಾಗಿ ಯುಗಳ ಗಾಯನ ಮಾಡುತ್ತಿದ್ದೆವು.

ಮಗಳು ಪದ್ಮಿನಿ ಸಹ ಸಂಗೀತ - ಗಮಕ ಕಲಿತು ಎರಡನ್ನೂ ರೂಢಿಸಿ ಕೊಂಡು ಈಗ ಕುಶಾಲನಗರದಲ್ಲಿದ್ದು ಕೆಲವು ಶಿಷ್ಯರನ್ನು ತಯಾರು ಮಾಡಿದ್ದಾಳೆ.

ಕೊನೆಯ ಮಗ ನಾಗೇಂದ್ರ. ತಂದೆ-ತಾಯಿಗಳ ಪ್ರೀತಿಯ ಪುತ್ರ. ನಮ್ಮೆಲ್ಲರಿಗೂ ಅಚ್ಚುಮೆಚ್ಚಿನ ತಮ್ಮ. ಇವನ ವಿದ್ಯಾಭ್ಯಾಸವೆಲ್ಲ ಶಿವಮೊಗ್ಗಾದಲ್ಲಿ. ಸ್ವಪ್ರಯತ್ನದಿಂದ ಮುಂದೆ ಬಂದವನು. ನಮ್ಮಿಬ್ಬರ ಹಾಡಿಕೆಯೇ ಇವನಿಗೆ ಸ್ಫೂರ್ತಿ. ಒಳ್ಳೆಯ ಗೌಳ ಶರೀರ. ಮಾಧುರ್ಯ ಯುಕ್ತ ಗಾಯನ. ಗಮಕ-ಸುಗಮ ಸಂಗೀತದಲ್ಲಿ ಸಾಕಷ್ಟು ಪರಿಣತಿ ಈಗ 'ಮಡಿಕೇರಿ ನಾಗೇಂದ್ರ'ನಾಗಿ ಖ್ಯಾತನಾಗಿದ್ದಾನೆ.

## ಗಮಕ ಕಲೆಯ ಪ್ರಚಾರ

ರಾಯರ ಗಮಕ ಕಲೆಯ ಪ್ರಚಾರ ವಿಪುಲವಾದುದು. ಕೇವಲ ಕೊಡಗು ಜಿಲ್ಲೆ ಮಾತ್ರವಲ್ಲದೆ ಹತ್ತಿರದ ದಕ್ಷಿಣ ಕನ್ನಡ, ಅಲ್ಲದೆ ಕಾಸರಗೋಡು, ಮಂಜೇಶ್ವರ ಹಾಗೂ ರಾಜ್ಯದ ಅನೇಕ ಭಾಗಗಳಲ್ಲಿ ಸಂಚರಿಸಿ ಕಾವ್ಯ ವಾಚನದೊಂದಿಗೇ ಗಮಕ ಕಲೆಯ ವೈಶಿಷ್ಟ್ಯದ ಬಗ್ಗೆ ಬೆಳಕು ಚೆಲ್ಲಿದ್ದಾರೆ. ಹರಪನಹಳ್ಳಿ, ರಬಕವಿ ಸಾಹಿತ್ಯ ಸಮ್ಮೇಳನಗಳಲ್ಲಿ ಪಾಲ್ಗೊಂಡು ಗಮಕ ಕಲೆಯ ಬಗ್ಗೆ ಸೋದಾಹರಣ ನೀಡಿದ್ದಾರೆ. ವರಕವಿ ದ. ರಾ. ಬೇಂದ್ರೆಯವರಿಗೆ ಇವರ ವಾಚನವೆಂದರೆ ಅಚ್ಚುಮೆಚ್ಚು. ತಮ್ಮ ೫೦ನೇ ಹುಟ್ಟುಹಬ್ಬದ ಸಂದರ್ಭದಲ್ಲಿ ಧಾರವಾಡದ ತಮ್ಮ ಮನೆಯಲ್ಲೇ ಅಲ್ಲದೆ ಇತರ ಕಡೆಗಳಲ್ಲೂ ವಾಚನ ಏರ್ಪಡಿಸಿ ಉತ್ತೇಜಿಸಿದ್ದಾರೆ.

೧೯೬೭ರಲ್ಲಿ ಬಿಜಾಪುರದಲ್ಲಿ ಸುಮಾರು ೬ ತಿಂಗಳ ಕಾಲ ಗಮಕ ತರಗತಿಯನ್ನು ನಡೆಸಿದ್ದಾರೆ. ಅಲ್ಲಿನ 'ಸಂದರ್ಶನ' ಪತ್ರಿಕೆಯ ಸಂಪಾದಕರಾಗಿದ್ದ ವಿ. ಬಿ. ನಾಯಕರ ಮನವಿಯಂತೆ ಕನ್ನಡ ಸಾಹಿತ್ಯ ಪರಿಷತ್ತು ಇವರನ್ನು ಅಲ್ಲಿಗೆ ಕಳಿಸಿತ್ತು. ಹಿಂದೂಸ್ತಾನೀ ರಾಗಗಳ ಕಡೆಗೆ ಹೆಚ್ಚಿನ ಒಲವಿದ್ದ ರಾಯರು ಅಲ್ಲಿ ಅದಕ್ಕೆ ಹೊಂದುವಂತಹ ಮುಖ್ಯವಾಗಿ ಭೈರವಿ, ದೇಶ್, ತಿಲಕ್ ಕಾಮೋದ್, ಭೀಂಪಲಾಸ ಮುಂತಾದ ರಾಗಗಳನ್ನು ಅಳವಡಿಸಿ ಪಾಠ ಹೇಳಿಕೊಡುತ್ತಿದ್ದುದು ಗಮನಾರ್ಹ ಅಂಶ. ಮಂಜೇಶ್ವರದ ಗೋವಿಂದ ಪೈಗಳು ಇವರನ್ನು ತಮ್ಮಲ್ಲಿಗೆ ಬರಮಾಡಿಕೊಂಡು ಅನೇಕ ಕಾರ್ಯಕ್ರಮಗಳನ್ನು ಕೇಳಿ ಸಂತೋಷಪಟ್ಟಿದ್ದಾರೆ.

ಭಿಲಾಯಿ (ಮಧ್ಯಪ್ರದೇಶ) ನಾಗಪೂರ (ಮಹಾರಾಷ್ಟ್ರ) ಮೊದಲಾದ ಸ್ಥಳಗಳಲ್ಲಿ ಕಾವ್ಯಗಾಯನದ ಮೂಲಕ ಮಧ್ವಚರಿತೆ- ಹಾಗೂ ಅವರ ತತ್ವಗಳನ್ನು ಪ್ರಚಾರಮಾಡಿದ ಹೆಗ್ಗಳಿಕೆ ರಾಯರದ್ದು. ಮೈಸೂರು ಆಕಾಶವಾಣಿ ಯಿಂದಲೂ ಇವರ ವಾಚನ ಹಲವಾರು ವರ್ಷಗಳ ಕಾಲ ಪ್ರಸಾರವಾಗಿದೆ.

೧೯೫೮ರಲ್ಲಿ ಸರಕಾರೀ ಸೇವೆಯಿಂದ ನಿವೃತ್ತರಾದ ಮೇಲೆ ತಮ್ಮ ಸಂಪೂರ್ಣ ಸಮಯವನ್ನು ಗಮಕ ಕಲಾರಾಧನೆಗಾಗಿ ಮತ್ತು ಸಾಹಿತ್ಯ ಸೇವೆಗಾಗಿ ಮೀಸಲಿಟ್ಟರು ರಾಯರು. ರನ್ನನ ಗದಯುದ್ಧವನ್ನು ತಮ್ಮ ತುಂಬು ಕಂಠದಿಂದ ವಾಚಿಸುವಲ್ಲಿ ಸಿದ್ಧಹಸ್ತರೆನಿಸಿದ್ದರು.

ಒಮ್ಮೆ ಆಚಾರ್ಯ ಡಿ. ಎಲ್. ಎನ್. ನರಸಿಂಹಾಚಾರ್ಯರು ತೀ. ನಂ. ಶ್ರೀಕಂಠಯ್ಯನವರು ಸಂಪಾದಿಸಿದ್ದ ರನ್ನನ ಗದಾಯುದ್ಧ ಪ್ರತಿಯಮ್ಮ ಅವಲೋಕಿಸುತ್ತಿದ್ದರಂತೆ. ಅದನ್ನು ನೋಡುತ್ತಿದ್ದ ಹಾಗೆ ಅವರಿಗೆ ಇದನ್ನು ಅಂತಪದ್ಮನಾಭರಾಯರ ಸಿರಿಕಂಠದಿಂದ ಕೇಳಬೇಕೆನಿಸಿ ಮೈಸೂರಿನಿಂದ ನೇರವಾಗಿ ಮಡಿಕೇರಿಗೆ ಬಂದರು. ಅಂದೂ ಎಲ್ಲೂ ಇಲ್ಲದಂಥ ಮಳೆ. ಇದರ ಅರಿವಿಲ್ಲದೆ ಆಚಾರ್ಯರು ನೆನೆದುಕೊಂಡೇ ಬಂದರು. ಮನೆಯಲ್ಲಿ, ನಾನು ಮತ್ತು ತಾಯಿಯವರು ಮಾತ್ರವಿದ್ದೆವು. ತಂದೆಯವರು ಕಚೇರಿಯಿಂದ ಇನ್ನೂ ಬಂದಿರಲಿಲ್ಲ. ಮಳೆಯಿಂದ ತೊಯ್ದ ಆಚಾರ್ಯರು ಬಂದಿದ್ದು 'ನೀರೊಳಗಿರ್ದುಂ ಬೆಮರ್ದಂ ಉರಗಪತಾಕಂ' ಎಂಬ ಪ್ರಸಂಗವನ್ನು ಆಲಿಸಲು. ಆದರೆ ಇವರು ಬೆವರುತ್ತಿರಲಿಲ್ಲ, ಛಳಿಯಿಂದ ನಡುಗುತ್ತಿದ್ದರು. ನಮ್ಮ ತಂದೆ ಬಂದ ನಂತರ ಅವರು ಬಂದಿದ್ದ ಉದ್ದಿಶ್ಯ ತಿಳಿಯಿತು. ಬಿಸಿ ಬಿಸಿ ಅಡುಗೆ ತಯಾರಿ ನಡೆಯಿತು. ಊಟವಾದ ಮೇಲೆ ರಾತ್ರಿ ಒಂಭತ್ತಕ್ಕೆ ವಾಚನ ಆರಂಭವಾಯಿತು. ವಾಚಕರು ತಂದೆಯವರು ಶ್ರೋತೃಗಳು ಆಚಾರ್ಯರು. ಸಮಯ ಹೋದದ್ದೇ ತಿಳಿಯಲಿಲ್ಲ. ಡಿ.ಎಲ್.ಎನ್. ಅವರು ಭಾವಸಮಾಧಿಯಲ್ಲಿದ್ದರು-ಸಂತೃಪ್ತರಾಗಿದ್ದರು. ಬೆಳಿಗ್ಗೆಯೇ ಮೈಸೂರಿಗೆ ಹೊರಟರು. ಊರು ಸೇರಿದ ತಕ್ಷಣ ಅವರು ಪರಿಷ್ಕರಿಸಿದ ಕುಮಾರವ್ಯಾಸ ಭಾರತದ ಹಳೆಯ ಆವೃತ್ತಿಯೊಂದನ್ನು ರಾಯರ ಉಪಯೋಗಕ್ಕಾಗಿ ಕಳುಹಿಸಿಕೊಟ್ಟರು. ಮುಂದೆ ರಾಯರು ಬರೆದ ಸುಮಾರು ೭,೫೦೦ ಪದ್ಯಗಳನ್ನೊಳಗೊಂಡ ಮಹಾಭಾರತದ ಅಷ್ಟಪರ್ವಗಳ ಹಸ್ತಪ್ರತಿ ಗಳನ್ನು ನೋಡಿ ಅವಲೋಕಿಸಿ ಮುನ್ನುಡಿ ಬರೆಯುವುದಾಗಿ ತಿಳಿಸಿದ್ದರು. ಆದರೆ ಆ ಕಾರ್ಯ ಕೈಗೂಡಲಿಲ್ಲ. ಮುನ್ನುಡಿ ಬರೆಯುವ ಮೊದಲೇ ಆಚಾರ್ಯರು ಕಣ್ಣುಮುಚ್ಚಿದರು.

ರಾಷ್ಟ್ರಕವಿ ಕುವೆಂಪುರವರು ರಾಯರ ವಾಚನವನ್ನು ಕೇಳಿ ಆನಂದಿಸಿ 'ಕೃಷ್ಣರಾಯರ ಅನುಗ್ರಹ ನಿಮ್ಮ ಮೇಲೆ ಸಂಪೂರ್ಣ ಇದೆ. ನೀವು ಕೇವಲ ಗಾಯಕರಲ್ಲ ಕೊಡಗಿನ ಕೋಗಿಲೆ' ಎಂದು ಹುರಿದುಂಬಿಸಿದ್ದಾರೆ.

## ರಾಯರ ಕೃತಿಗಳು

ರಾಯರು ಕೇವಲ ಒಬ್ಬ ಗಮಕಿಯಾಗಿ, ಒಬ್ಬ ಕಲಾವಿದನಾಗಿ ಮಾತ್ರ ಮೆರೆಯಲಿಲ್ಲ. ಒಬ್ಬ ಸಮರ್ಥ ಆಡಳಿತಗಾರರಾಗಿಯೂ ಹೆಸರು ಗಳಿಸಿದರು. ಅಷ್ಟೇ ಅಲ್ಲ. ಒಬ್ಬ ಪ್ರಕಾಂಡ ಸಾಹಿತಿಯಾಗಿ ಕನ್ನಡ ಸಾರಸ್ವತ ಲೋಕದಲ್ಲಿ ಮೆರೆದರು. ಸಾಹಿತ್ಯಕ್ಷೇತ್ರದಲ್ಲಿ ಅವರು ಕೈಯಾಡಿಸಿದ ಪ್ರಕಾರಗಳು, ಕಥೆ, ಕವನ, ಪ್ರಬಂಧ, ವಿಮರ್ಶೆ, ನಾಟಕವೇ ಅಲ್ಲದೆ ಬೃಹತ್ಕಾವ್ಯಗಳನ್ನು ರಚನೆ ಮಾಡಿದ ಹೆಗ್ಗಳಿಕೆ ಅವರದ್ದು.

'ಕಾವೇರಿ ಕಥಾಮೃತಮ್' ಸರಳ ರಗಳೆಯಲ್ಲಿ ರಚಿತವಾದ ಒಂದು ಕಿರುಕಾವ್ಯ. ಇದನ್ನು ಅವಲೋಕಿಸಿದ ಹಿರಿಯ ಸಾಹಿತಿ ಮುಳಿಯ ತಿಮ್ಮಪ್ಪಯ್ಯನವರು ಪ್ರಶಂಸಾತ್ಮವಾದ ಮುನ್ನುಡಿಯನ್ನು ಬರೆದಿದ್ದಾರೆ. ಇದೇ ಸರಳರಗಳೆಯಲ್ಲಿ ರಚಿತವಾದ ಮತ್ತೆರಡು ಕಿರುಹೊತ್ತಿಗೆಗಳೆಂದರೆ 'ಶ್ರೀರಾಮಕೃಷ್ಣಪರಮಹಂಸ' (ನಂತರ ಇದನ್ನು ಗಮಕ ರೂಪಕವಾಗಿ ಪರಿವರ್ತಿಸಿದರು) ಮತ್ತು 'ಕರ್ಣ' (ಇದಕ್ಕೆ ಆಚಾರ್ಯ ಬಿ.ಎಂ. ಶ್ರೀಯವರು ಮುನ್ನುಡಿ ಕೃಪೆಮಾಡಿದ್ದಾರೆ. ಅಲ್ಲದೆ ಇದು ಮದರಾಸು ವಿಶ್ವವಿದ್ಯಾಲಯದ ಪದವಿ ತರಗತಿಗೆ ಪಠ್ಯಪುಸ್ತಕವಾಗಿತ್ತು). 'ಶೃಂಗಿಯಶಾಪ' (ಕಾವ್ಯನಾಟಕ) ಇದನ್ನು ತಮ್ಮ ಶಿಷ್ಯರ ಕೈಯಲ್ಲಿ ರಂಗಭೂಮಿಯ ಮೇಲೆ ಪ್ರಯೋಗವನ್ನೂ ಮಾಡಿಸಿದ್ದಾರೆ. ಇಂದು ಪ್ರಸಿದ್ಧ ವಿಮರ್ಶಕ, ವಿಜ್ಞಾನಶಾಸ್ತ್ರದಲ್ಲಿ ಹೆಸರು ಮಾಡಿರುವ ಜಿ. ಟಿ. ನಾರಾಯಣರಾವ್ ಶೃಂಗಿಯ ಪಾತ್ರವಹಿಸಿದ್ದರು. ಅಲ್ಲದೆ ರಾಯರ ಮತ್ತೊಬ್ಬ ಪ್ರೀತಿಯ ಶಿಷ್ಯ ಕೆ. ಕೆ. ಆರ್. ರಾವ್ (ಇವರು ಭಾರತೀಯ ರೈಲ್ವೇ ಸರ್ವಿಸ್‌ನಲ್ಲಿ ಉನ್ನತ ಅಧಿಕಾರಿಯಾಗಿದ್ದು ನಿವೃತ್ತರಾಗಿ ಈಗ ಮೈಸೂರಿನಲ್ಲಿದ್ದಾರೆ) ಜನಮೇಜಯನ ಪಾತ್ರವಹಿಸಿದ್ದರು. ದೇವಮ್ಮಾಜಿ ಎಂಬ ಐತಿಹಾಸಿಕ ನಾಟಕ ಮೈಸೂರು ಆಕಾಶವಾಣಿಯಿಂದ-ಪ್ರೊ॥ ನಟೇಶ್ ಅವರು ನಿರ್ದೇಶಕರಾಗಿದ್ದಾಗ-ಪ್ರಸಾರ ಮಾಡಲ್ಪಟ್ಟಿತ್ತು. ಮತ್ತೊಂದು ಸಾಮಾಜಿಕ ನಾಟಕ 'ಶವಸಂಸ್ಕಾರ' ಬೆಂಗಳೂರಿನ ಚೇತನಾ ಎಂಬ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಿತ್ತು. ಮಾಸ್ತಿಯವರ 'ಜೀವನ' ಪತ್ರಿಕೆಯಲ್ಲಿ ರಾಯರು ಕೊಡಗಿನ ಇತಿಹಾಸಕ್ಕೆ ಸಂಬಂಧಿಸಿದ ಅನೇಕ ಲೇಖನಗಳನ್ನು ಬರೆದಿದ್ದಾರೆ. ಮಾಸ್ತಿಯವರು 'ಚಿಕವೀರೇಂದ್ರರಾಜ' ಕಾದಂಬರಿ ಬರೆಯಲು ಈ ಲೇಖನಗಳೇ ಸ್ಫೂರ್ತಿ. ಅಲ್ಲದೆ ಅವರು ಆ ಕಾದಂಬರಿ ಬರೆಯುವ ಸಂದರ್ಭದಲ್ಲಿ ಅನೇಕ ಮಾಹಿತಿಗಳಿಗಾಗಿ ನಮ್ಮ ಮನೆಯಲ್ಲೇ ತಂಗಿದ್ದರು. ಕೊಡಗಿನಲ್ಲಿ ರಾಜಮನೆತನಕ್ಕೆ ಸೇರಿದ ಅನೇಕ ಅರಮನೆಗಳ ವೀಕ್ಷಣೆ, ಇತರ ಅವಶೇಷಗಳನ್ನು ನೋಡಲು ಕೊಡಗು ಸರಕಾರ ಅವರಿಗೆ ಸಕಲ ವ್ಯವಸ್ಥೆಗಳನ್ನು ಒದಗಿಸಿತು. ಇತ್ತೀಚೆಗೆ ನಿಧನರಾದ

ಪ್ರೊ॥ ಚಿ. ನ. ಮಂಗಳಾ ಅವರ ತಂದೆ ದಿ॥ ಸಿ. ನರಸಿಂಹಮೂರ್ತಿಯವರು ಆಗ ಕೊಡಗಿನ ಮುಖ್ಯ ಕಾರ್ಯದರ್ಶಿಯಾಗಿ ಸೇವೆಯಲ್ಲಿದ್ದರು. ಮಾಸ್ತಿಯವರನ್ನು ಆಗ ನಾನೇ ನಾಲ್ಕು ನಾಡು ಅರಮನೆಗೆ ಕರೆದೊಯ್ದಿದ್ದೆ. ಈ ಗ್ರಂಥಕ್ಕೆ ಅವರಿಗೆ ಜ್ಞಾನಪೀಠ ಪ್ರಶಸ್ತಿ ಬಂದಾಗ ಈ ವಿಷಯವನ್ನು ಮೊದಲು ನಮ್ಮ ತಂದೆಯವರಿಗೆ ತಿಳಿಸುವ ಸೌಜನ್ಯವನ್ನು ತೋರಿದರು ಮಾಸ್ತಿಯವರು.

ಇದಲ್ಲದೆ ಕಾದಂಬರಿಕಾರ ಸಾಹಿತಿ ನಿರಂಜನ ಅವರು ತಮ್ಮ ಕಾದಂಬರಿ ಕಲ್ಯಾಣಸ್ವಾಮಿ ಹಾಗೂ ಸ್ವಾಮಿ ಅಪರಂಪಾರಗಳನ್ನು ಬರೆಯುವ ಸಮಯದಲ್ಲಿ ಹಲವುದಿನ ನಮ್ಮ ಮನೆಯಲ್ಲಿ ತಂಗಿದ್ದು ಕೊಡಗಿನ ಇತಿಹಾಸದ ಬಗ್ಗೆ ಮಾಹಿತಿಗಳನ್ನು ಸಂಗ್ರಹಿಸಿದರು.

ಕತೆಗಾರರಾಗಿಯೂ ರಾಯರ ರಚನಾಶಕ್ತಿ ಮಿಂಚಿತ್ತು. 'ದೊಡ್ಡಂಚಿನ ಸೀರೆ', 'ನಮ್ಮದಲ್ಲ', 'ಅಯ್ಯೋಭೂತ', 'ನೆಗಡಿನಾಗಣ್ಣ', 'ಕಲಾವಿದ', 'ಹೆಡ್ಮನ್ನಿ', (ಅವರು ಪೊಲೀಸ್ ಇಲಾಖೆಯಲ್ಲಿ ಈ ಪದವಿಯಲ್ಲಿದ್ದಾಗಿನ ಅನುಭವಗಳ ವಿಡಂಬನಾತ್ಮಕ ಕಥೆ), 'ಗೋಪೂಮದುವೆ' (ಕತೆಗಾರ್ತಿ ಗೌರಮ್ಮನ ಮದುವೆ ತಮ್ಮ ಗೆಳೆಯ ಗೋಪಾಲಕೃಷ್ಣನೊಡನೆ ಆದಾಗ ಬರೆದದ್ದು), ಮೊದಲಾದ ಕತೆಗಳು ಕತೆಗಾರ, ಕಥಾವಳಿ, ಉಷಾ, ಜಯಕರ್ನಾಟಕ ಜೀವನ ಮೊದಲಾದ ನಿಯತಕಾಲಿಕಗಳಲ್ಲಿ ಪ್ರಕಟವಾಗಿವೆ. 'ಪರಿಷತ್ಪತ್ರಿಕೆ', 'ಕನ್ನಡ ನುಡಿ'ಗಳಲ್ಲಿ ಅನೇಕ ವಿಮರ್ಶಾತ್ಮಕ ಲೇಖನಗಳೂ ಪ್ರಕಟವಾಗಿವೆ. 'ಕಾಣಿಕೆ', 'ಶ್ರೀರಾಘವೇಂದ್ರ ಗುರುಕೀರ್ತನಮಾಲಾ' ಕೀರ್ತನ ಸಂಗ್ರಹ; 'ಬೃಂದಾವನ' ಎಂಬ ಕವನ ಸಂಗ್ರಹ, ಅಲ್ಲದೆ, ಬೃಹತ್ಕಾವ್ಯಗಳಾಗಿ ಕನ್ನಡ ತುಲಸೀರಾಮಾಯಣ, ಶ್ರೀಕೃಷ್ಣಚರಿತಾಮೃತಮ್ (ವಾರ್ಧಕ); 'ಶ್ರೀಮನ್ಮಧ್ವಚರಿತಮಾನಸ' (ಕೆ. ಸಂಪದ್ಗಿರಿರಾಯರ ಮುನ್ನುಡಿಯೊಂದಿಗೆ) ವಾರ್ಧಕಷಟ್ಪದಿಯ ಬೃಹತ್ಕಾವ್ಯಗಳು. 'ವಿಶ್ವಾಮಿತ್ರ' ಇವರ ಕೊನೆಯ ರಚನೆ.

## ಮಹಾಭಾರತದ ಅಷ್ಟಪರ್ವಗಳ ರಚನೆ

೧೯೫೮ರಲ್ಲಿ ಸರಕಾರೀ ಸೇವೆಯಿಂದ ನಿವೃತ್ತರಾದ ಮೇಲೆ ೧೯೬೦ರವರೆಗೂ ಮಡಿಕೇರಿಯಲ್ಲೇ ನಿವೃತ್ತ ಜೀವನ ನಡೆಸಿದ ರಾಯರು ತಮ್ಮ ಹಿರಿಯಮಗ ಶೇಷಗಿರಿಗೆ ಶಿವಮೊಗ್ಗಾದ ಅರಣ್ಯ ಇಲಾಖೆಗೆ ವರ್ಗವಾದ ಪ್ರಯುಕ್ತ ಮಡಿಕೇರಿ ಬಿಟ್ಟು ಶಿವಮೊಗ್ಗಾಕ್ಕೆ ಬಂದರು. ಆ ಕಾಲಕ್ಕೆ ಅಲ್ಲಿ ಇವರ ನಿಕಟ ಪರಿಚಯದವರೆಂದರೆ ರಾಜ್ಯಸಭೆಯ ಸಭಾಪತಿಗಳಾಗಿದ್ದ ಎಸ್. ವಿ. ಕೃಷ್ಣಮೂರ್ತಿರಾಯರು ಹಾಗೂ ನಾಟಕಕರ್ತೃ ಪರ್ವತವಾಣಿಯವರು. ಅವರೂ ಸಹ ಅಲ್ಲಿನ ಅರಣ್ಯ ಇಲಾಖೆಯಲ್ಲಿ ಉನ್ನತ ಹುದ್ದೆಯಲ್ಲಿದ್ದರು.

೧೯೬೦ರಲ್ಲಿ ಇವರು ಮಡಿಕೇರಿ ಬಿಟ್ಟಾಗ ಕೊಡಗಿನ ಜನತೆ ಈ 'ಭಾರತವಾಚನ ಸ್ವಾಮಿ'ಯನ್ನು ಬಿಡಲಾರದೆ ಬೀಳ್ಕೊಟ್ಟರು. ಕೊಡಗಿನಿಂದ ಕನ್ನಡದ ಉಸಿರೇ ಹೊರಟು ಹೋಗುತ್ತಿದೆಯೆಂದು ಮರುಗಿದರು. ಅಲ್ಲಿನ ಜನ ಇವರಿಗೊಂದು ಸತ್ಕಾರ ಸಮಾರಂಭ ಏರ್ಪಡಿಸಿ ೧೦೦೦ ರೂ. ನಿಧಿ ಸಮರ್ಪಿಸಿ ಹಾರ್ದಿಕವಾಗಿ ಬೀಳ್ಕೊಟ್ಟರು.

ರಾಯರು ಶಿವಮೊಗ್ಗಾದಲ್ಲಿದ್ದ ಕಾಲದಲ್ಲಿ ಪ್ರತಿದಿನ ಬೆಳಿಗ್ಗೆ ಅಲ್ಲಿನ ಕೋಟೆ ಆಂಜನೇಯನ ಸನ್ನಿಧಿಯಲ್ಲಿ 'ಸುಪ್ರಭಾತ'ವನ್ನು ಹಾಡುವ ಸಂಪ್ರದಾಯ ವನ್ನಿಟ್ಟುಕೊಂಡಿದ್ದರು. ಇವರ ಕವಿತಾರಚನಾಸಾಮರ್ಥ್ಯವನ್ನು ಮನಗಂಡಿದ್ದ ಅಲ್ಲಿನ ಪ್ರಧಾನ ಅರ್ಚಕರೂ ಸಂಸ್ಕೃತ ವಿದ್ವಾಂಸರೂ ಆಗಿರುವ ವೇ॥ ಬ್ರ॥ ನರಸಿಂಹಮೂರ್ತಿ ಅಯ್ಯಂಗಾರರು ರಾಯರಿಗೆ ಮಹಾಭಾರತದ ಅಷ್ಟಪರ್ವವನ್ನು ರಚಿಸುವಂತೆ ಸೂಚಿಸಿ 'ಇದು ಕೇವಲ ನಮ್ಮ ಸಲಹೆಯಲ್ಲ, ನಮ್ಮ ಆರಾಧ್ಯಮೂರ್ತಿ ಶ್ರೀಮದಾಂಜನೇಯಸ್ವಾಮಿಯ ಸಂಕಲ್ಪ ಅದನ್ನು ನನ್ನ ಬಾಯಿಂದ ನುಡಿಸಿದ್ದಾನೆ. ಆದ್ದರಿಂದ ನೀವು ಕಾರ್ಯಪ್ರವೃರ್ತರಾಗಿ' ಎಂದರಂತೆ.

ರಾಯರೂ ಇದಕ್ಕೆ ಸ್ಪಂಧಿಸಿದರು. ತಮ್ಮ ಆರಾಧ್ಯಮೂರ್ತಿ ಗದುಗಿನ ವೀರನಾರಾಯಣನನ್ನು ಆರಾಧಿಸಿ ಕುಮಾರವ್ಯಾಸನಷ್ಟೇ ನಿಷ್ಠೆಯಿಂದ ದಿನಕ್ಕೆ ಇಂತಿಷ್ಟು ಪದ್ಯಗಳಂತೆ ಕಾವ್ಯರಚನೆ ಆರಂಭಿಸಿಯೇ ಬಿಟ್ಟರು. ಹಿಡಿದ ಲೇಖನಿ ನಿಲ್ಲಲಿಲ್ಲ. ಬರವಣಿಗೆ ಸಾಂಗವಾಗಿ ನೆರವೇರಿ ಕೇವಲ ಒಂದೇ ವರ್ಷದ ಅವಧಿಯಲ್ಲಿ ಸುಮಾರು ೭,೫೦೦ ಪದ್ಯಗಳನ್ನೊಳಗೊಂಡ ಬೃಹತ್ಕಾವ್ಯವನ್ನು ರಚಿಸಿದರು.

> ಕುಮಾರವ್ಯಾಸನ ದಶ ಪರ್ವಗಳ ನಂತರ ಉಳಿದ ಎಂಟು ಪರ್ವಗಳನ್ನು ವಿಜಯನಗರದ ಆಸ್ಥಾನದಲ್ಲಿದ್ದ ತಿಮ್ಮಣ್ಣ ಕವಿ ರಚಿಸಿದ್ದರೂ ಅದು ಕುಮಾರವ್ಯಾಸನ 'ಭಾರತ ಕಥಾಮಂಜರಿ' ಯಷ್ಟು ಪ್ರಚಾರ ಕಾಣಲಿಲ್ಲ. ಅವನ ನಂತರ ರಚಿತವಾದ ಬೃಹತ್ಕಾವ್ಯ ವೆಂದರೆ ಇದೊಂದೇ. ಇದನ್ನು ಅವಲೋಕಿಸಿ 'ಮುನ್ನುಡಿ'ಗಾಗಿ ಪ್ರೊ॥ ಡಿ.ಎಲ್.ಎನ್. ಅವರನ್ನು ಆಶ್ರಯಿಸಿದರು. ಆದರೆ ಅವರು ತಮ್ಮ ಕೆಲಸ ಪೂರೈಸುವ ಮೊದಲೇ ಹರಿಪಾದ ಸೇರಿಬಿಟ್ಟರು. ಈಗಲೂ ಈ ಬೃಹತ್ಕಾವ್ಯ ಇನ್ನೂ ಹಸ್ತಪ್ರತಿಯಲ್ಲೇ ಇದೆ. ಅಚ್ಚು ಕಂಡಿಲ್ಲ.

## ರಾಯರ ಶಿಷ್ಯವರ್ಗ

ರಾಯರ ಶಿಷ್ಯವರ್ಗದಲ್ಲಿ ಪ್ರಮುಖರೆಂದರೆ ಕೊಡಗಿನ ದೈನಿಕ 'ಶಕ್ತಿ' ಪತ್ರಿಕೆಯ ಸಂಪಾದಕ ಬಿ. ಎಸ್. ಗೋಪಾಲಕೃಷ್ಣ, ಪ್ರಮೀಳಾ ವೆಂಕೋಬ ರಾವ್, ಕರ್ನಾಟಕ ಸರಕಾರದ ಅಡ್ವೊಕೇಟ್ ಜನರಲ್ ಆಗಿದ್ದ ದಿ. ಮುತ್ತಣ್ಣ

ನವರ ಪತ್ನಿ ಪಿ. ಡಿ. ಭೋಜಮ್ಮ, ದಿ॥ ಕೋಟೇರ ಮೇದಪ್ಪ (ಈತ ಈಗ ಕೆಲವೇ ವರ್ಷಗಳ ಹಿಂದೆ ನೆಲಸಮವಾದ ಗಂಗರಾಮ್ ಕಟ್ಟಡದಡಿ ಸಿಕ್ಕ ಭೂಗತನಾಗಿಬಿಟ್ಟ) ಹಾಗೂ ಅವನ ಸಹೋದರರು, ಈಗ ಅಮೇರಿಕದಲ್ಲಿ ನೆಲೆಸಿರುವ ಮಂಜುಳಾ ಅನಂತಪದ್ಮನಾಭನ್, ವಿದ್ವಾನ್ ಟಿ. ಕೇಶವಭಟ್ಟ, ಡಿ. ಚಂದ್ರಯ್ಯ ಅಲ್ಲದೆ ರಾಯರ ಮಕ್ಕಳು. ಖ್ಯಾತ ಖಗೋಳಶಾಸ್ತ್ರಜ್ಞ ಜಿ. ಟಿ. ನಾರಾಯಣರಾವ್ ಮತ್ತು ಎಸ್. ಆರ್. ನಾರಾಯಣ (ಭಾರತೀಸುತ) ಸಾಹಿತ್ಯಕ್ಷೇತ್ರದಲ್ಲಿ ರಾಯರ ಮಾರ್ಗದರ್ಶನ ಪಡೆದಿದ್ದಾರೆ.

## ಇವರ ಇತರ ಚಟುವಟಿಕೆಗಳು

ರಾಯರು ಕೊಡಗು ಕರ್ನಾಟಕ ಸಂಘದ ಸ್ಥಾಪಕರಲ್ಲೊಬ್ಬರೂ, ಅದರ ಕಾರ್ಯದರ್ಶಿ, ಉಪಾಧ್ಯಕ್ಷರಾಗಿದ್ದುದಲ್ಲದೆ, ಮಡಿಕೇರಿ ಶ್ರೀಮದಾಂಜನೇಯ ದೇವಸ್ಥಾನದ ಶ್ರೀ ರಾಮೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿಯಾಗಿ ಅವರು ಅಲ್ಲಿದ್ದಷ್ಟು ಕಾಲವೂ ದುಡಿದಿದ್ದಾರೆ. ಇವರಿಗೆ ಇಲ್ಲಿ ಜೊತೆ ಜೊತೆಯಾಗಿ ನಿಂತು ಸಹಕರಿಸಿದವರೆಂದರೆ ಕೊಡಗಿನ ಕಾನೂನು ಪಾಲನ ಕಾರ್ಯದರ್ಶಿಯಾಗಿದ್ದ ಎಂ. ಎನ್. ಗುಂಡೂರಾಯರು. ಇವರೂ ಇಂದು ತಮ್ಮ ೯೪ನೇ ವಯಸ್ಸಿನಲ್ಲೂ ಈ ಸಂಸ್ಥೆಯ ಪದಾಧಿಕಾರಿಗಳಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಮಡಿಕೇರಿ ವೇದಾಂತ ಸಂಘದ ಕಾರ್ಯದರ್ಶಿ ಉಪಾಧ್ಯಕ್ಷರೂ ಆಗಿದ್ದರು.

ಕೊಡಗು ಸರ್ಕಾರದಿಂದ ಸ್ಥಾಪಿಸಲ್ಪಟ್ಟ ಸಂಗೀತ ನಾಟಕ ಅಕಾಡೆಮಿಯ ಸ್ಥಾಪಕ ಕಾರ್ಯದರ್ಶಿಯಾಗಿದ್ದಾಗ ಇವರಿಗೆ ಸಂಗೀತಕಲಾನಿಧಿ ಮೈಸೂರು ಟಿ. ಚೌಡಯ್ಯನವರ ನಿಕಟ ಸಂಪರ್ಕವುಂಟಾಯಿತು. ಚೌಡಯ್ಯನವರ ಮೂಲಕ ಅಕಾಡೆಮಿ ಉದ್ಘಾಟನಾ ಕಚೇರಿಗಾಗಿ ಹೆಸರಾಂತ ಗಾಯಕ ಮಣಕಾಲ್ ರಂಗರಾಜನ್ ಹಾಗೂ ಮದರಾಸು ಕಣ್ಣನ್ (ಮೃದಂಗವಾದಕ) ಅವರನ್ನು ಕರೆಸಿದ್ದರು. ಅದೇ ಸಂದರ್ಭದಲ್ಲಿ ರಾಯರ ಕಾವ್ಯವಾಚನವನ್ನು ಕೇಳಿದ ಚೌಡಯ್ಯನವರು ಮೆಚ್ಚುಗೆ ಸೂಚಿಸಿ ಮತ್ತೊಂದು ಸಂದರ್ಭದಲ್ಲಿ ಅವರ ವಾಚನಕ್ಕೆ ಪಕ್ಕವಾದ್ಯವಾಗಿ ಪಿಟೀಲು ನುಡಿಸಿದರು. ಚೌಡಯ್ಯನವರು ಈ ರೀತಿ ಗಮಕಕ್ಕೆ ಪಿಟೀಲು ನುಡಿಸಿದ ವಿದ್ವಾಂಸರೆಂದರೆ ಒಬ್ಬರು ಕೃಷ್ಣಗಿರಿ ಕೃಷ್ಣರಾಯರು ಮತ್ತೊಬ್ಬರು ನಮ್ಮ ತಂದೆ. ಅಂದರೆ ರಾಯರು.

ಕೇಂದ್ರ ಸರಕಾರ ಕೊಡಗು ಇತಿಹಾಸ ಸಂಶೋಧನಾ ಸಮಿತಿಯೊಂದನ್ನು ರಚಿಸಿದಾಗ ಅದಕ್ಕೂ ನಮ್ಮ ತಂದೆಯವರನ್ನೇ ಕಾರ್ಯದರ್ಶಿಯನ್ನಾಗಿ ನೇಮಿಸಿತ್ತು. ಆದರೆ ಈ ಸಮಿತಿ ತನ್ನ ಕಾರ್ಯಚಟುವಟಿಕೆ ಆರಂಭಿಸುವ ಮೊದಲೇ ರಾಜ್ಯವಿಭಜನೆಯಾಗಿ ಕೊಡಗು ಮೈಸೂರು ರಾಜ್ಯದಲ್ಲಿ ವಿಲೀನವಾಯಿತು. ಹಾಗಾಗಿ ಆ ಕೆಲಸ ಅಲ್ಲಿಗೇ ನಿಂತಿತು.

ಇದಲ್ಲದೆ ಮಡಿಕೇರಿಯಲ್ಲಿ ಯಾವುದೇ ಉತ್ಸವ-ಸಮಾರಂಭ ಕೊನೆಗೆ ಯಾರದೇ ಅಂತ್ಯಯಾತ್ರೆಯಲ್ಲೂ ರಾಯರ ಪಾತ್ರ ಇರಲೇ ಬೇಕಿತ್ತು.

## ಗೌರವ ಪ್ರಶಸ್ತಿಗಳು

೧೯೭೭ರಲ್ಲಿ ಕರ್ನಾಟಕ ಸರಕಾರದಿಂದ ಗಮಕಕಲಾಸೇವೆಗಾಗಿ ಸಾಹಿತ್ಯ ಕಾಡೆಮಿಯಿಂದ ಪ್ರಶಸ್ತಿ, ಮಡಿಕೇರಿ ವೇದಾಂತ ಸಂಘ ಹಾಗೂ ರಾಮೋತ್ಸವ ಸಮಿತಿ ವತಿಯಿಂದ ಗೌರವಪೂರ್ವಕ ಸನ್ಮಾನ. ಅಲ್ಲದೆ ಸರಕಾರ ನೀಡುತ್ತಿದ್ದ ಕಲಾವಿದರ ಮಾಸಿಕ ಗೌರವಧನ ಇವರಿಗೂ ಲಭಿಸಿತ್ತು.


ಬೆಂಗಳೂರಿನ ಕರ್ನಾಟಕ ಗಾನಕಲಾಪರಿಷತ್ತು, ಶ್ರೀ ತ್ಯಾಗರಾಜ ಗಾನಸಭಾ, ಶ್ರೀರಾಘವೇಂದ್ರಾಶ್ರಮ ಮುಂತಾದ ಪ್ರತಿಷ್ಠಿತ ಸಂಸ್ಥೆಗಳು ಇವರನ್ನು ಗೌರವಿಸಿ ಸನ್ಮಾನಿಸಿವೆ. ವ್ಯಾಸರಾಜ ಮಠಾಧೀಶರಾದ ಶ್ರೀ ಶ್ರೀ ವಿದ್ಯಾಪಯೋನಿಧಿತೀರ್ಥ ಸ್ವಾಮಿಗಳವರು ರಾಯರನ್ನು ಮಠ ಮರ್ಯಾದೆ ಗೌರವಗಳೊಂದಿಗೆ ಸನ್ಮಾನಿಸಿದ್ದಾರೆ.

ಮಡಿಕೇರಿಗೆ ಗೌರವಪೂರಿತ ಆಹ್ವಾನದ ಮೇರೆಗೆ ಆಗಮಿಸಿದ್ದ ಮೈಸೂರಿನ ಒಡೆಯರಾಗಿದ್ದ ಶ್ರೀ ಜಯಚಾಮರಾಜವೊಡೆಯರ ಸಮ್ಮುಖ ದಲ್ಲಿ ಮೈಸೂರರಸರ ಪರಂಪರೆಯ ಕುರಿತು ರಚಿಸಿದ ಗೀತೆಯನ್ನು ರಾಯರೇ ಹಾಡಿದಾಗ ಒಡೆಯರು ತಮ್ಮ ಪ್ರಶಂಸೆ ವ್ಯಕ್ತಪಡಿಸಿದರು.

ಕರ್ನಾಟಕ ಗಮಕ ಕಲಾಪರಿಷತ್ತಿನ ಸ್ಥಾಪಕ ಸದಸ್ಯರಾಗಿದ್ದ ರಾಯರನ್ನು ಪರಿಷತ್ತು ತನ್ನ ಅಖಿಲ ಕರ್ನಾಟಕ ಪ್ರಥಮ ಗಮಕ ಸಮ್ಮೇಳನದ ಅಧ್ಯಕ್ಷ ಪದವಿಯನ್ನು ನೀಡಿ ಗೌರವಿಸಿ ತನ್ನ ಘನತೆಯನ್ನು ಹೆಚ್ಚಿಸಿಕೊಂಡಿದೆ.

ಹೀಗೆ ಗಮಕ ಸಾಹಿತ್ಯ, ಸಮಾಜ ಸೇವೆಗಳಲ್ಲಿ ತಮ್ಮನ್ನೇ ತೊಡಗಿಸಿ ಕೊಂಡಿದ್ದ ಅನಂತಪದ್ಮನಾಭರಾಯರು ೧೯೮೩ರಲ್ಲಿ ತೀವ್ರಪಾರ್ಶ್ವವಾಯು ವಿಗೆ ತುತ್ತಾದರು. ಅಲ್ಲಿಂದ ಮುಂದೆ ಅವರು ಚೇತರಿಸಿಕೊಳ್ಳಲಿಲ್ಲವಾದರೂ ಮನೆಯಲ್ಲೇ ಓಡಾಡಿಕೊಂಡಿದ್ದು ತಮ್ಮ ಕೈಲಾದ ಮಟ್ಟಿಗೆ ಸಾಹಿತ್ಯರಚನೆ, ಗಮಕ ಸೇವೆ ಮಾಡುತ್ತಿದ್ದರು. ೧೯೮೭ ನವೆಂಬರ್‌ನಲ್ಲಿ ಮತ್ತೊಮ್ಮೆ ಪಾರ್ಶ್ವವಾಯು ತಗುಲಿತು. ದಿನಾಂಕ ೨೯ರಂದು ಭಾನುವಾರ ಸಂಜೆ ಇಹಲೋಕ ವ್ಯಾಪಾರ ಮುಗಿಸಿದರು.

ಗಮಕಲೋಕದ ಧ್ರುವತಾರೆಯೊಂದು ಅಸ್ತಂಗತವಾಗಿ ಅನಂತದಲ್ಲಿ ಲೀನವಾಯಿತು.



# ಶ್ರೀ ಮಾಲೂರು ಟಿ. ವೆಂಕಟಪ್ಪನವರು

ನನಗೆ ಶ್ರೀ ಮಾಲೂರು ವೆಂಕಟಪ್ಪನವರ ಪರಿಚಯವಾದದ್ದು ಇತ್ತೀಚೆಗೆ. ಅಂದರೆ ಕರ್ನಾಟಕ ಗಮಕ ಕಲಾ ಪರಿಷತ್ತು ಅಸ್ತಿತ್ವಕ್ಕೆ ಬಂದ ಮೇಲೆ.

ಕರ್ನಾಟಕ ಗಮಕ ಕಲಾ ಪರಿಷತ್ತು ಅಧಿಕೃತವಾಗಿ ಅಸ್ತಿತ್ವಕ್ಕೆ ಬಂದಿದ್ದು ೧೯೮೭ರ ಅಕ್ಟೋಬರ್ ೨ ರಂದು. ಅಂದು ನಡೆದ ಆರಂಭೋತ್ಸವದ ಸಮಾವೇಶಕ್ಕೆ ಅನೇಕ ಹಿರಿಯ ಕಿರಿಯ ಗಮಕಿಗಳು ಸಾಹಿತಿಗಳ ಮಹಾಪೂರವೇ ಹರಿದಿತ್ತೆನ್ನಬಹುದು. ಒಂದು ಕಡೆ ನಾನು ಹಾಗೂ ಸಾಹಿತಿ ಜಿ. ವರದರಾಜರಾವ್ ಮಾತನಾಡುತ್ತಾ ನಿಂತಿದ್ದೆವು. ಅಲ್ಲಿಗೆ ಬಂದ ನಮ್ಮ ತಂದೆಯವರೂ ಮಾತಿಗೆ ಕೂಡಿಕೊಂಡು ನನ್ನನ್ನು ತೋರಿಸಿ 'ಇವನು ಯಾರೂಂತ ಗೊತ್ತಾಯ್ತೆ' ಎಂದಾಗ ವರದರಾಜರು ಹಾಸ್ಯವಾಗಿ ''ಇದೇನು ಹೀಗೆ ಕೇಳ್ತೀರಿ, ಇದು ಬಿಂಬ ಅದು ಪ್ರತಿಬಿಂಬ'' ಎಂದು ನಮ್ಮಿಬ್ಬರನ್ನು ತೋರಿಸಿ ನಕ್ಕರು. ನಮ್ಮ ಮೂವರ ದೃಷ್ಟಿ ಪಕ್ಕದಲ್ಲೇ ನಿಂತು ನಮ್ಮೆಡೆಯೇ ನೋಡುತ್ತಿದ್ದ ವ್ಯಕ್ತಿಯ ಮೇಲೆ ಬಿತ್ತು. ಒಳ್ಳೆ ಭವ್ಯವಾದ ಆಕೃತಿ;ಶುಭ್ರವಾದ ಬಿಳಿ ಕಚ್ಚೆಪಂಚೆ;ಕತ್ತು ಮುಚ್ಚುವ ಕೋಟು, ಹಣೆಯಲ್ಲಿ ತ್ರಿಪುಂಡ್ರ ತಲೆಯ ಮೇಲೆ ಅಂಚುರಹಿತ ಬಿಳಿ ರುಮಾಲು. ಇಡೀ ಸಭಾಭವನದಲ್ಲೇ ಎದ್ದು ಕಾಣುವಂಥ ವ್ಯಕ್ತಿತ್ವ. ನಮಗ್ಯಾರಿಗೂ ಅವರ ಪರಿಚಯ ಸಾಕಷ್ಟಿರಲಿಲ್ಲ. ಕಾಲೇಜು ಪ್ರಾಧ್ಯಾಪಕರಾಗಿ ಅಲ್ಲಲ್ಲಿ ಸುತ್ತಾಡಿದ್ದ ವರದರಾಜಾರಾಯರಿಗೆ ಅವರ ಪರಿಚಯವಿತ್ತು. ಅವರನ್ನೂ ಮಾತಿಗೆ ಕರೆದರು. ಅವರ ಪರಿಚಯ ತಿಳಿಸಿದರು. ''ಇವರು ವೆಂಕಟಪ್ಪ ಅಂತ. ಮಾಲೂರಿನವರು. ಬಹುಮುಖ ಪ್ರತಿಭೆಯ ಕಲಾವಿದ''ಎಂದು ತಿಳಿಸಿ ನಮ್ಮನ್ನೂ ಅವರಿಗೆ ಪರಿಚಯಿಸಿದರು. ವೆಂಕಟಪ್ಪನವರು ನಮ್ಮ ತಂದೆಯವರನ್ನುದ್ದೇಶಿಸಿ ''ತಮ್ಮ ಹೆಸರು ಕೇಳಿದ್ದೆ ನೋಡಿರಲಿಲ್ಲ. ಇಂದು ನೋಡುವ ಸುಯೋಗವೊದಗಿತು'' ಎಂದು ಅತಿ ಸೌಜನ್ಯದಿಂದ ನುಡಿದರು. ಹೀಗೆ ನನಗೂ ಸಹ ಅವರ ಪರಿಚಯವಾಯಿತು. ಮುಂದೆ ಈ ಪರಿಚಯ ಅತ್ಯಂತ ನಿಕಟವಾಗಿ ನಮ್ಮನ್ನು ತುಂಬಾ ಹತ್ತಿರಕ್ಕೆ ತಂದು ನಿಲ್ಲಿಸಿತು.

ಅನಂತರದಲ್ಲಿ ಅವರು ಕೋಲಾರ ಜಿಲ್ಲಾ ಪ್ರತಿನಿಧಿಯಾಗಿ ಗಮಕ ಕಲಾ ಪರಿಷತ್ತಿನ ಕಾರ್ಯಕಾರಿಣಿಯಲ್ಲಿ ಆಯ್ಕೆಯಾಗಿ ಬಂದ ಮೇಲೆ ಅವರ

ಬಹುಮುಖ ಪ್ರತಿಭೆಯ ಪರಿಚಯವಾಯಿತು. ಗಮಕ ಕಲಾ ಪರಿಷತ್ತಿಗೆ ಒಂದು ಸೂಕ್ತವಾದ ಚಿಹ್ನೆಯ ಅವಶ್ಯಕತೆ ಬಿದ್ದಾಗ್ಗೆ ಅದಕ್ಕೆ ಸೂಕ್ತ ವಿನ್ಯಾಸವನ್ನು ಹಾಕಿಕೊಟ್ಟವರು ವೆಂಕಟಪ್ಪನವರೇ. ಚಿತ್ರಕಲೆ, ಗಮಕ, ಸಂಗೀತ (ಗಾಯನ ಹಾಗೂ ಮೃದಂಗ ವಾದಕರಾಗಿ), ನಟನೆ, ಕವಿ ಹೀಗೆ ಬಹುಮುಖ ಹವ್ಯಾಸವುಳ್ಳ ಕಲಾವಿದರೆನಿಸಿದ್ದವರು ವೆಂಕಟಪ್ಪನವರು.

ಕೋಲಾರ ಜಿಲ್ಲೆಯಲ್ಲಿ ಗಮಕಕಲೆ ವ್ಯಾಪಕವಾಗಿ ಪಸರಿಸಲು ಕಾರಣರಾದವರು ವೆಂಕಟಪ್ಪನವರು. ತಮ್ಮ ಹುಟ್ಟೂರಾದ ಮಾಲೂರೇ ಅವರ ಕಾರ್ಯಕ್ಷೇತ್ರವಾಯಿತು. ಕೋಲಾರ ಜಿಲ್ಲಾ ಗಮಕ ಸಮ್ಮೇಳನವನ್ನು ಒಮ್ಮೆ ಮುಳಬಾಗಿಲಿನಲ್ಲಿ ಮತ್ತೊಮ್ಮೆ ಮಾಲೂರಿನಲ್ಲಿ ನಡೆಸಿದ ಹಿರಿಮೆ ಇವರದ್ದು. ಕೈವಾರದಲ್ಲಿ ನಡೆದ ಸಮ್ಮೇಳನಕ್ಕೆ ಇವರನ್ನೇ ಅಧ್ಯಕ್ಷರನ್ನಾಗಿ ಅವಿರೋಧವಾಗಿ ಚುನಾಯಿಸಲಾಗಿತ್ತು. ಆದರೆ ಸಮ್ಮೇಳನ ನಡೆಯುವ ಮೊದಲೇ ಅವರು ಹರಿಪಾದ ಸೇರಿದರು. ಹಾಗಾಗಿ ಆ ತೆರವಾದ ಸ್ಥಾನವನ್ನು ಜಿಲ್ಲೆಯ ಮತ್ತೊಬ್ಬ ಗಮಕಿ, ಗುಡಿಬಂಡೆ ರಾಮಾಚಾರ್ಯರು ತುಂಬಿದರು.

೧೯೯೦ರಲ್ಲಿ ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಕರ್ನಾಟಕ ಗಾನ ಕಲಾ ಪರಿಷತ್ತಿನ ೨೧ನೆಯ ಸಂಗೀತ ವಿದ್ವಾಂಸರ ಸಮ್ಮೇಳನ ನಡೆದಿತ್ತು. ಹೆಸರಾಂತ ವಾದ್ಯ ತಯಾರಕ ಹಾಗೂ ಪಿಟೀಲು ವಿದ್ವಾಂಸ ಎ. ವೀರಭದ್ರಯ್ಯನವರು ಸಮ್ಮೇಳನಾಧ್ಯಕ್ಷರಾಗಿದ್ದರು.

ಈ ಸಮ್ಮೇಳನ ಸಂಪೂರ್ಣವಾಗಿ 'ಕನಕದಾಸರ' ಹರಿದಾಸ ಸಾಹಿತ್ಯಕ್ಕೇ ಮೀಸಲಾಗಿದ್ದು ಕನಕದಾಸರ ವ್ಯಕ್ತಿತ್ವ, ಸಾಹಿತ್ಯ, ಕೃತಿಗಳ ವಿಚಾರ ಸಂಕಿರಣ, ಕಾವ್ಯವಾಚನ, ಗಮಕ ರೂಪಕ ಹೀಗೆ ಹತ್ತು ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು.

ಕನಕದಾಸರ 'ನಳ ಚರಿತ್ರೆ'ಯ ಆಯ್ದ ಭಾಗದಿಂದ ವಾಚನ ಮಾಡುವ ಅವಕಾಶ ನನಗೆ ಲಭಿಸಿತ್ತು. ಈ ಕಾರ್ಯಕ್ರಮದ ನಂತರ ಕನಕದಾಸರ ಉತ್ಕೃಷ್ಟ ಕಾವ್ಯ 'ರಾಮಧಾನ್ಯಚರಿತೆ'ಯ ಗಮಕ ರೂಪಕವಿತ್ತು. ನಾನು ಹಿಂದಿನ ದಿನವೇ ಮೈಸೂರಿಗೆ ಹೋಗಿದ್ದೆ. ವೆಂಕಟಪ್ಪನವರೂ ಬಂದಿದ್ದರು. ನನ್ನನ್ನು ಕಂಡವರೇ ಓಡೋಡಿ ಬಂದರು. ''ಜಯರಾಮರಾಯರೇ ನಿಮ್ಮಿಂದ ಒಂದು ಉಪಕಾರವಾಗಬೇಕು. ನಾಳೆ ನಡೆಯಲಿರುವ ಗಮಕ ರೂಪದಲ್ಲಿ ತಾವು ಪಾಲ್ಗೊಳ್ಳಬೇಕು'' ಎಂದಾಗ ನನಗೇ ಆಶ್ಚರ್ಯವಾಯಿತು. ''ಇದೇನು ವೆಂಕಟಪ್ಪನೋರೇ ತಮಾಷೆ ಮಾಡ್ತಿದೀರಾ ದಿಢೀರ್ ಅಂತ 'ಸಡನ್ ಶಾಕ್' ಕೊಡ್ತಿದೀರಲ್ಲ! ರೂಪಕ ಅಂದ್ರೇನು ಹುಡುಗಾಟವೇ ಸರಿಯಾದ ಅಭ್ಯಾಸವಿಲ್ಲದೇ ವೇದಿಕೆ ಹತ್ತೋದು ಹ್ಯಾಗೆ'' ಎಂದಾಗ ''ನೀವು ಸಮರ್ಥರೀತಿಯಲ್ಲಿ ನಿಭಾಯಿಸ್ತೀರಿ ಅನ್ನೋ ಭರವಸೆ ನನಗೆ ಇರೋದ್ರಿಂದ್ಲೇ

ನಿಮಗೆ ಈ ಜವಾಬ್ದಾರಿ ವಹಿಸ್ತಿದೀನಿ ಖಂಡಿತಾ ಇಲ್ಲಾನ್ಬೇಡಿ'' ಅಂದ್ರು. ನಾನು ಅವರ ಮೇಲಿದ್ದ ಗೌರವದಿಂದ ಒಪ್ಪಿ ಭಾಗವಹಿಸಿದೆ. ಕಾರ್ಯಕ್ರಮವೂ ಚೆನ್ನಾಗಿಯೇ ಆಯಿತು. ಇದರಿಂದಾಗಿ ನನ್ನ ವೆಂಕಟಪ್ಪನವರ ಸ್ನೇಹದ ಬೆಸುಗೆ ಇನ್ನೂ ಹತ್ತಿರಕ್ಕೆ ಬೆಸೆಯಿತು.

ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಗಮಕ ಕಲೆಯನ್ನು ತನ್ನ ವ್ಯಾಪ್ತಿಗೆ ತೆಗೆದುಕೊಂಡಾಗ ಪಂ|| ಶೇಷಾದ್ರಿ ಗವಾಯಿಗಳು ಅದರ ಅಧ್ಯಕ್ಷರಾಗಿದ್ದರು. ಗಮಕ ಕಲೆಯ ಪ್ರಶಸ್ತಿಗಾಗಿ ಗಮಕ ಕಲಾ ಪರಿಷತ್ತಿನ ಅಧ್ಯಕ್ಷರಾದ ಜಿ. ನಾರಾಯಣ ಅವರು ಅಕಾಡೆಮಿಗೆ ಮೂರು ಹೆಸರುಗಳನ್ನು ಸೂಚಿಸಿದ್ದರು. ಅದರಲ್ಲಿ ಮಾಲೂರು ವೆಂಕಟಪ್ಪನವರ ಹೆಸರೂ ಸೇರಿತ್ತು. ಪ್ರಶಸ್ತಿ ಆಯ್ಕೆಯ ಸಭೆ ನಡೆಯುತ್ತಿದ್ದಾಗ ಅದರ ಅಧ್ಯಕ್ಷರು ದೂರವಾಣಿಯ ಮೂಲಕ ನನ್ನ ಸಂಪರ್ಕ ಪಡೆದು ಮೂವರಲ್ಲಿ ಪ್ರಶಸ್ತಿಗೆ ಯಾರನ್ನ ಆಯ್ಕೆ ಮಾಡಬಹುದು ಎಂದು ಕೇಳಿದಾಗ ನಾನು ವೆಂಕಟಪ್ಪನವರ ಹೆಸರನ್ನೇ ಸಮರ್ಥಿಸಿದೆ. ಹಾಗಾಗಿ ಆ ವರ್ಷವೇ ವೆಂಕಟಪ್ಪನವರಿಗೆ ಪ್ರಶಸ್ತಿ ಲಭಿಸಿತು.

## ಜನನ, ಬಾಲ್ಯ ಮತ್ತು ವಿದ್ಯಾಭ್ಯಾಸ

ವೆಂಕಟಪ್ಪನವರಿಗೆ ಈ ಎಲ್ಲ ಕಲೆಗಳು ಕರಗತವಾಗಲು ಅವರ ಬಹುಮುಖ ಪ್ರತಿಭೆಯ ಜೊತೆಗೆ ಅವರ ಕುಟುಂಬದ ಪರಿಸರ. ಸಂಸ್ಕಾರ ಬಲವೂ ಕಾರಣವೆನ್ನಬಹುದು.

ವೆಂಕಟಪ್ಪನವರ ಹಿರಿಯರೂ ಕಲಾರಂಗದಲ್ಲಿ ಅಪಾರ ಸೇವೆ ಸಲ್ಲಿಸಿದವರು. ಇವರ ತಾತ ಹನುಮಯ್ಯನವರು ಯಕ್ಷಗಾನ ಕಲಾವಿದರಾಗಿದ್ದು ಭಾಗವತಿಕೆಯಲ್ಲಿ ಪ್ರಾವೀಣ್ಯತೆಯನ್ನು ಪಡೆದಿದ್ದವರು.

ತಂದೆ ಪ್ರಖ್ಯಾತ ಹರಿದಾಸರಾಗಿದ್ದು ಗಂಧರ್ವಾಂಶ ಸಂಭೂತರೆಂದೇ ಪ್ರಸಿದ್ಧಿ ಹೊಂದಿದ್ದ ಹೆಚ್. ತಿಮ್ಮಯ್ಯದಾಸರು. ಇವರು ಕೀರ್ತನಕಾರರಾಗಿದ್ದುದಲ್ಲದೆ ಉತ್ತಮ ನಟನಾ ಸಾಮರ್ಥ್ಯವನ್ನು ಪಡೆದಿದ್ದು ಮಾಲೂರಿನ ವೀರಭದ್ರಪ್ಪನವರ ನಾಟಕ ಸಂಸ್ಥೆಯ ಪ್ರಮುಖ ನಟ ವರ್ಗದಲ್ಲಿದ್ದವರು. ಹಾಗಾಗಿ ವೆಂಕಟಪ್ಪನವರಿಗೆ ಹುಟ್ಟಿನಿಂದಲೇ ಕಲೆ ರಕ್ತಗತವಾಗಿ ಬಂದಿತ್ತು.

ಬಾಲ್ಯದಿಂದಲೇ ತಬಲ, ಮೃದಂಗ ನುಡಿಸುವುದರಲ್ಲಿ ಆಸಕ್ತಿ ತೋರುತ್ತಿದ್ದ ವೆಂಕಟಪ್ಪನವರನ್ನು ಗಮನಿಸಿದ ತಂದೆ ತಾಯಿಗಳು, ಅದಕ್ಕೆ ತಕ್ಕ ವ್ಯವಸ್ಥೆಯನ್ನು ಮಾಡಿದ್ದರಲ್ಲದೆ ಕಲಾರಾಧನೆ ಕೇವಲ ಹವ್ಯಾಸವಾಗಬಲ್ಲುದೇ ಹೊರತು ಉದರಂಭರಣಕ್ಕೆ ಹೆಚ್ಚಿನ ಸಹಾಯವಾಗಲಾರದೆಂದು ಮನಗಂಡು ಅವರಿಗೆ ಲೌಕಿಕ ವಿದ್ಯಾಭ್ಯಾಸದಲ್ಲೂ ತಕ್ಕ ಶಿಕ್ಷಣಕ್ಕೆ ದಾರಿ

ಮಾಡಿದರು. ಮಾಲೂರಿನಲ್ಲೇ ತಮ್ಮ ಎಲ್. ಎಸ್. ಮುಗಿಸಿದ ವೆಂಕಟಪ್ಪನವರು ಮುಂದಿನ ವಿದ್ಯಾಭ್ಯಾಸಕ್ಕಾಗಿ ಬೆಂಗಳೂರಿಗೆ ಬರಬೇಕಾಯಿತು. ಕಾರಣ ಮಾಲೂರಿನಲ್ಲಿ ಪ್ರೌಢಶಿಕ್ಷಣ ವ್ಯವಸ್ಥೆಯಿರಲಿಲ್ಲ. ಬೆಂಗಳೂರಿನ ವೆಸ್ಲಿಯನ್ ಪ್ರೌಢಶಾಲೆಯಲ್ಲಿ 'ಸ್ಕೂಲ್ ಫೈನಲ್' ಮುಗಿಸಿದ ವೆಂಕಟಪ್ಪನವರು ಮುಂದೆ ವಿಜ್ಞಾನ ಶಾಸ್ತ್ರದ ಪದವೀಧರರಾದರು.

ಇಷ್ಟಾದರೂ ತಮ್ಮ ಲಯವಾದನ ಅಭ್ಯಾಸವನ್ನು ಬಿಡದೇ ಮಾಡುತ್ತಿದ್ದರು. ಅಲ್ಲದೆ ಕಾಲೇಜು ವ್ಯಾಸಂಗದ ಅವಧಿಯಲ್ಲಿ ವಿಶ್ವವಿದ್ಯಾನಿಲಯದ ಯೂನಿಯನ್ ವಾದ್ಯವೃಂದದಲ್ಲಿ ಮೃದಂಗ ವಾದಕರಾಗಿ ಸೇರಿಕೊಂಡರು.

ಆ ಸಂದರ್ಭದಲ್ಲಿಯೇ ಇವರಿಗೆ ವೈಣಿಕ ವಿದ್ವಾಂಸರೂ ಉತ್ತಮ ಗಾಯಕರೂ ಆಗಿದ್ದ ಗಾನಕಲಾಭೂಷಣ ವೀಣಾ ಎಲ್. ರಾಜಾರಾಯರ ಸ್ನೇಹ ದೊರೆತು ಅವರ ಮಾರ್ಗದರ್ಶನದಲ್ಲಿ ಶಾಸ್ತ್ರೀಯ ಸಂಗೀತದಲ್ಲಿ ಗಾಯನ ಮತ್ತು ಮೃದಂಗವಾದನದಲ್ಲಿ ಹೆಚ್ಚಿನ ಪ್ರಾವೀಣ್ಯತೆಯನ್ನು ಪಡೆದರು.

ವಿದ್ಯಾರ್ಥಿಯಾಗಿದ್ದಾಗ ಪ್ರಸಿದ್ಧ ಸಾಹಿತಿಗಳೆನಿಸಿದ್ದ ಸಿ. ಕೆ. ವೆಂಕಟರಾಮಯ್ಯನವರ ಮಹಾಭಾರತ, ರಾಮಾಯಣಗಳಲ್ಲಿನ ಪಾತ್ರಗಳ ಕುರಿತ ಭಾಷಣಗಳಿಂದ ಹಾಗೂ ಆಚಾರ್ಯ ಬಿ.ಎಂ.ಶ್ರೀಯವರ ರನ್ನನ ಗದಾಯುದ್ಧದ ಬಗ್ಗೆ ನಡೆದ ವಿಚಾರ ಸಂಕಿರಣಗಳಿಂದ ಪ್ರಭಾವಿತರಾಗಿ ಗಮಕ ಕಲೆಯ ಕಡೆ ಗಮನ ಹರಿಸಿದರು. ತಂದೆ ತಿಮ್ಮಯ್ಯದಾಸರು ಹರಿಕಥಾ ವಿದ್ವಾಂಸರಾಗಿದ್ದು ಗಮಕ ವಾಚನದಲ್ಲಿ ಸಾಕಷ್ಟು ಅನುಭವ ಹೊಂದಿದ್ದವರು. ತಂದೆಯವರ ಮಾರ್ಗದರ್ಶನದಲ್ಲಿ ಗಮಕ ವಾಚನ ಆರಂಭಿಸಿ ಮುಂದೆ ಕಳಲೆ ಸಂಪತ್ಕುಮಾರಾಚಾರ್, ಹು. ಮ. ರಾಮಾರಾಧ್ಯ, ಗಮಕಿ ಎಂ. ರಾಘವೇಂದ್ರರಾವ್ ಹಾಗೂ ಶಕುಂತಲಾಬಾಯಿ ಪಾಂಡುರಂಗರಾವ್ ಮುಂತಾದ ಗಮಕ ದಿಗ್ಗಜಗಳ ವಾಚನಗಳನ್ನು ಕೇಳಿ ಅವರಿಂದ ಸ್ಫೂರ್ತಿ-ಮಾರ್ಗದರ್ಶನ ಪಡೆದು ಗಮಕ ಕಲೆಯಲ್ಲೂ ಉತ್ತಮ ಪಾಂಡಿತ್ಯ ವನ್ನು ಸಿದ್ಧಿಸಿಕೊಂಡರು.

ಜೊತೆ ಜೊತೆಯಲ್ಲೇ ಸಾಹಿತ್ಯಾಭ್ಯಾಸವನ್ನು ಮಾಡಿದ ವೆಂಕಟಪ್ಪನವರು ಉತ್ತಮ ಸಾಹಿತಿಗಳ ಸಾಲಿಗೂ ಸೇರಿದರು. ಇದಕ್ಕೆ ಇವರಿಗೆ ಸ್ಫೂರ್ತಿ ದೊರೆತದ್ದು ಕವಿವರ್ಯ-ಗೇಯ ನಾಟಕಕಾರ ಪು. ತಿ. ನರಸಿಂಹಾಚಾರ್ಯ ರಿಂದ. ೧೯೩೩ರಿಂದ ೧೯೪೪ರವರೆಗೆ ಮೈಸೂರು ರಾಜ್ಯಸೇನಾದಳದ ಪ್ರಧಾನ ಕಚೇರಿಯಲ್ಲಿ ಅಧಿಕಾರದಲ್ಲಿದ್ದ ಪು.ತಿ.ನ. ಅವರ ಕೈಕೆಳಗೆ ಗುಮಾಸ್ತರಾಗಿ ಸೇವೆ ಸಲ್ಲಿಸಿದ ವೆಂಕಟಪ್ಪನವರಿಗೆ ಪು.ತಿ.ನ. ಸಾಹಿತ್ಯಕ್ಷೇತ್ರದ ಗುರುಸ್ವರೂಪ ರೆನಿಸಿದರು.

ಸೇನೆಯಲ್ಲಿ ಸೇರಿಕೊಂಡ ತಮ್ಮ ಏಕೈಕ ಪುತ್ರ ೧೯೪೦ರಲ್ಲಿ ಆರಂಭವಾದ ಎರಡನೇ ಜಾಗತಿಕ ಸಮರದ ಸಮಯದಲ್ಲಿ ಮಿಲಿಟರಿ ಕಚೇರಿಯಲ್ಲಿ ದುಡಿಯುವುದನ್ನು ಇಷ್ಟಪಡದ ಕಾರಣ ಹಿರಿಯರ ಆದೇಶ 'ದಂತೆ ಕೆಲಸಕ್ಕೆ ರಾಜೀನಾಮೆ ನೀಡಿದರು. ಮುಂದೆ ಭಾರತ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪಾಲ್ಗೊಂಡು ಗಾಂಧೀಜೀಯವರ ಅಹಿಂಸಾ ಮಾರ್ಗದಲ್ಲಿ ತಮ್ಮನ್ನು ತೊಡಗಿಸಿಕೊಂಡರು.

ಕೋಲಾರ ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯ ವ್ಯವಸ್ಥಾಪಕ ಕಾರ್ಯದರ್ಶಿಯಾಗಿ ೧೯೪೧ರಿಂದ ೧೯೪೬ರವರೆಗೂ ಸೇವೆ ಸಲ್ಲಿಸಿ ೧೯೪೬ರಲ್ಲಿ ತಂದೆ ತಿಮ್ಮಯ್ಯದಾಸರು ಕೈಲಾಸವಾಸಿಗಳಾದ್ದರಿಂದ ತಮ್ಮ ಕೆಲಸವನ್ನು ಬಿಟ್ಟು ಮಾಲೂರಿನಲ್ಲಿ ಬಂದು ನೆಲಸಿದರು. ಅಂದಿನಿಂದ ತಮ್ಮ ಎಲ್ಲ ಕಾರ್ಯ ಚಟುವಟಿಕೆಗಳಿಗೆ ಮಾಲೂರನ್ನೇ ಕಾರ್ಯಕ್ಷೇತ್ರವನ್ನಾಗಿ ಮಾಡಿಕೊಂಡರು ವೆಂಕಟಪ್ಪ.

೧೯೪೦ರಲ್ಲಿ ಗೃಹಸ್ಥ ಧರ್ಮಕ್ಕೆ ಕಾಲಿಟ್ಟ ವೆಂಕಟಪ್ಪನವರು ಶ್ರೀಮತಿ ಸುಬ್ಬಮ್ಮನವರನ್ನು ತಮ್ಮ ಸಹಧರ್ಮಿಣಿಯನ್ನಾಗಿ ಸ್ವೀಕರಿಸಿದರು. ಈ ದಂಪತಿಗಳಿಗೆ ಇಬ್ಬರು ಗಂಡುಮಕ್ಕಳು ಒಬ್ಬ ಪುತ್ರಿ ಜನಿಸಿ ಇವರದು ಚಿಕ್ಕ ಚೊಕ್ಕ ಸಂಸಾರವೆನಿಸಿತು.

## ಕಲಾತಪಸ್ವಿಯಾಗಿ

ಸಾರ್ವಜನಿಕ ಕ್ಷೇತ್ರದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರೂ ವೆಂಕಟಪ್ಪನವರು ತಮ್ಮ ಕಲಾರಾಧನೆಯನ್ನು ಎಂದೂ ಬಿಟ್ಟವರಲ್ಲ. ಕಲಾಕ್ಷೇತ್ರ ದಲ್ಲಿ ಇವರಿಗೆ ದೊರೆತಿದ್ದ ಕಲಾವಿದರ ಸಖ್ಯ ಹಾಗಿತ್ತು. ಸಂಗೀತ ವಾದ್ಯಗಳ ತಯಾರಕ, ಹಾರ್ಮೋನಿಯಂ ವಾದನ ಮಾಂತ್ರಿಕ ವಿದ್ವಾನ್ ಅರುಣಾಚಲಪ್ಪ ನವರು ವೆಂಕಟಪ್ಪನವರ ಆತ್ಮೀಯ ಗೆಳೆಯರಾಗಿದ್ದವರು. ಅಂತೆಯೇ ವೈಣಿಕ ವಿದ್ವಾನ್ ಎಲ್. ರಾಜಾರಾಯರು. ವೆಂಕಟಪ್ಪನವರನ್ನು ಕಲಾಕ್ಷೇತ್ರದ ಒಂದು ಭವ್ಯಮೂರ್ತಿಯನ್ನಾಗಿ ಕಡೆದ ಶಿಲ್ಪಿಗಳಿವರು.

ಕೇವಲ ಸಂಗೀತ ಕ್ಷೇತ್ರವೇ ಅಲ್ಲದೆ ನಾಟಕ, ಚಿತ್ರಕಲೆಗಳನ್ನೂ ಅಭ್ಯಸಿಸಿ ಉತ್ತಮ ನಾಟಕಕಾರ-ನಟರಾಗಿ, ರೇಖಾಚಿತ್ರ, ವರ್ಣಚಿತ್ರಗಳ ಚಿತ್ರಬ್ರಹ್ಮ ರಾಗಿ ಹೆಸರು ಪಡೆದವರು ವೆಂಕಟಪ್ಪನವರು.

''ನಾಟಕವ ನೋಡು ಬ್ರಹ್ಮಾಂಡ ರಂಗಸ್ಥಳದಿ'' ಎಂಬ ಡಿ.ವಿ.ಜಿ. ಮಾತು ಇವರಿಗೆ ಉತ್ತಮ ಮೇಲ್ಪಂಕ್ತಿಯಾಯಿತು. ಮಾಲೂರು ಇವರ ನಾಟಕಗಳ ರಂಗಸ್ಥಲವಾಯಿತು. ೧೯೦೫ರಲ್ಲಿ ನಾಟಕರಂಗದಲ್ಲಿ

ಖ್ಯಾತರೆನಿಸಿದ್ದ ಕಂಪನಿ ವೀರಭದ್ರಪ್ಪನವರು ಒಂದು ವೃತ್ತಿ ನಾಟಕ ಸಂಸ್ಥೆಯನ್ನು ಮಾಲೂರಿನಲ್ಲಿ ಸ್ಥಾಪಿಸಿದಾಗ ವೆಂಕಟಪ್ಪನವರ ತಂದೆ ತಿಮ್ಮಯ್ಯದಾಸರು ಅಲ್ಲಿ ಪ್ರಧಾನ ಪಾತ್ರ ವಹಿಸುತ್ತಿದ್ದರು. ನಾಟಕ ಕಲೆ ತಂದೆಯಿಂದಲೇ ಬಳುವಳಿಯಾಗಿ ಬಂತು ಮಗನಿಗೆ. ಮುಂದೆ ತಿಮ್ಮಯ್ಯದಾಸರು ಶ್ರೀಮಾರ್ಕಂಡೇಶ್ವರ ಸ್ವಾಮಿ ಕೃಪಾಪೋಷಿತ ನಾಟಕ ಮಂಡಳಿಯನ್ನು ಸ್ಥಾಪಿಸಿ ಅನೇಕ ನಟರಿಗೆ ಮಾರ್ಗದರ್ಶಕರಾಗಿದ್ದರು. ಈ ಸಮಯದಲ್ಲಿ ವೆಂಕಟಪ್ಪನವರು ಕೇವಲ ನಾಲ್ಕು ವರ್ಷದ ಬಾಲಕ. ಆಗಿನಿಂದಲೇ ಇವರಿಗೆ ನಾಟಕದ ಗೀಳು ಅಂಟಿಕೊಂಡಿತು. ಮುಂದೆ ಅದು ಹೆಮ್ಮರವಾಗಿ ಬೆಳೆಯಿತು. ಕೇವಲ ಸಾಮಾಜಿಕ, ಐತಿಹಾಸಿಕ ನಾಟಕಗಳೇ ಅಲ್ಲದೆ ಅನೇಕ ಪುರಾಣಗಳ ಕಾವ್ಯಾಧಾರಿತ ಪ್ರಸಂಗಗಳನ್ನು ನಾಟಕಕ್ಕೆ ಅಳವಡಿಸಿ ತಮ್ಮ ಸಾಹಿತ್ಯ-ಸಂಗೀತಗಳ ಪಾಂಡಿತ್ಯದಿಂದ ಹಲವಾರು ಗೇಯ ನಾಟಕಗಳನ್ನೂ ರಚಿಸಿ ಪ್ರಯೋಗಿಸಿದ ಸಾಹಸಿ.

**ಮಾಲೂರು, ಸುತ್ತಮುತ್ತಲಿನ ಗ್ರಾಮಗಳ ಯುವಕರು ತಾವು ನಾಟಕವಾಡುವಾಗಲೆಲ್ಲ ವೆಂಕಟಪ್ಪನವರ ಸೂಕ್ತ ಮಾರ್ಗದರ್ಶನ ಪಡೆಯುತ್ತಿದ್ದರು. ಇಡೀ ಮಾಲೂರಿಗೆ ವೆಂಕಟಪ್ಪನವರು ಅಜಾತ ಶತ್ರುವೆನಿಸಿದ್ದವರು. 'ಆಶುನಾಟಕ'ವೆಂದರೆ ವೆಂಕಟಪ್ಪನವರಿಗೆ ಸುಲಿದ ಬಾಳೆ ಹಣ್ಣಿನಂತೆ.**

ಅವರ 'ಯಮದಂಡನೆ' ಆಶುನಾಟಕದಲ್ಲಿನ ನಾರದನ ಪಾತ್ರ ಇಂದಿಗೂ ಮನೆ ಮಾತಾಗಿದೆ. ಕೃಷ್ಣನ ಪಾತ್ರ ಕುರಿತು ದಾಸರ ಕೃತಿಗಳನ್ನಾಧರಿಸಿ ರಚಿಸಿದ ''ನಿನ್ನ ಮಗನ ಬಾಧೆ'' ಎಂಬ ಗೇಯ ನಾಟಕವನ್ನು ಮುಳಬಾಗಿಲಿನ ಪುರಂದರ ದಾಸರ ಆರಾಧನಾ ಸಂದರ್ಭದಲ್ಲಿ ಚಿಕ್ಕ ಮಕ್ಕಳಿಂದ ಆಡಿಸಿ ಬಂದಿದ್ದ ವಿದ್ವಾಂಸರ ಪ್ರಶಂಸೆಗೆ ಪಾತ್ರರಾದರು. ಅವರ 'ದೇವದಾಸಿ' (ಸಾಮಾಜಿಕ), 'ಮಹಾಸತಿ ಸಾವಿತ್ರಿ' (ಪೌರಾಣಿಕ) ಜನಮನದಲ್ಲಿ ಇನ್ನೂ ಅಚ್ಚಳಿಯದೇ ನಿಂತಿರುವ ರಚನೆಗಳು.

## ಚಿತ್ರಕಲಾವಿದರಾಗಿ

ಸಾಹಿತ್ಯ, ಸಂಗೀತ, ನಾಟಕ, ಗಮಕ ಕಲೆಗಳಂತೆಯೇ ಚಿತ್ರಕಲೆಯನ್ನು ಆಳವಾಗಿ ಅಭ್ಯಸಿಸಿ ಚಿತ್ರಬ್ರಹ್ಮ, ಕುಂಚಬ್ರಹ್ಮರೆಂದೆನಿಸಿಕೊಂಡವರು ವೆಂಕಟಪ್ಪನವರು.

ಚಿತ್ರಕಲೆಯಲ್ಲಿ ಮಣ್ಣಿನ ಕುಸುರಿ ಕೆಲಸದಲ್ಲಿ ಪರಿಣಿತಿ ಪಡೆದಿದ್ದ ಚಿಕ್ಕಮುನಿಯಪ್ಪನವರು ವೆಂಕಟಪ್ಪನವರ ಸ್ನೇಹಿತರು. ಕಲಾರಂಗದ

ಮಾರ್ಗದರ್ಶಕರು. ನಾಟಕದ ಪರದೆಯನ್ನು ಬರೆಯುವುದರಿಂದ ಹಿಡಿದು, ರಾಷ್ಟ್ರನಾಯಕರ ಆಳೆತ್ತರದ ವರ್ಣಚಿತ್ರವನ್ನು ರಚಿಸುವವರಿಗೆ ಚಿತ್ರಕಲೆಯ ಎಲ್ಲ ಪ್ರಕಾರಗಳಲ್ಲೂ ಕೈಯಾಡಿಸಿ ಚಿತ್ರಬ್ರಹ್ಮರೆನಿಸಿದ್ದರು. ಡಾ॥ ಸರ್ವಪಲ್ಲಿ ರಾಧಾಕೃಷ್ಣನ್, ಡಾ॥ ಬಾಬು ರಾಜೇಂದ್ರಪ್ರಸಾದ್, ಡಾ॥ ಮಾಸ್ತಿ ವೆಂಕಟೇಶ ಅಯ್ಯಂಗಾರ್, ಲಾಲಬಹದ್ದೂರ್ ಶಾಸ್ತ್ರಿ ಒಬ್ಬರೇ ಇಬ್ಬರೇ ಇವರ ಕುಂಚಕ್ಕೆ ಸಿಗದ ನಾಯಕರೇ ಇಲ್ಲವೆನ್ನ ಬಹುದು.

ಸಂಗೀತಗಾರರನ್ನು ಬರಮಾಡಿಕೊಂಡು ಅವರ ಕಚೇರಿಗಳನ್ನೇರ್ಪಡಿಸಿ ಅವರ ಸಂಗೀತ ಸವಿಯನ್ನುಣ್ಣುವುದೇ ಅಲ್ಲದೆ ಕುಳಿತಲ್ಲೇ ಅವರ ಚಿತ್ರಗಳ 'ಪೆನ್ಸಿಲ್ ಸ್ಕೆಚ್''ನ್ನು ರಚಿಸಿ ಕಲಾವಿದರಿಗೆ ಕಾಣಿಕೆಯಾಗಿ ನೀಡಿ ಅವರನ್ನು ಅಚ್ಚರಿಪಡಿಸುತ್ತಿದ್ದರು ವೆಂಕಟಪ್ಪನವರು.

## ಗಮಕ ಕಲಾವಿದರಾಗಿ

ತಮ್ಮ ತಂದೆಯವರ ಮಾರ್ಗದರ್ಶನದಲ್ಲಿ ಗಮಕ ಕಲೆಯನ್ನು ಅಭ್ಯಸಿಸಿದ ವೆಂಕಟಪ್ಪನವರು ನಾಡಿನ ಹಿರಿಯ ಗಮಕಿಗಳ ಮಾರ್ಗದರ್ಶನ ದಲ್ಲಿ ಅದನ್ನು ರೂಢಿಸಿಕೊಂಡರು. ಸಂಗೀತ ಶಿಕ್ಷಣ ಕ್ರಮಬದ್ಧವಾಗಿ ದೊರೆತಿದ್ದರಿಂದ ಶಾರೀರ ಚೆನ್ನಾಗಿ ಪಳಗಿತ್ತು. ಇದು ಗಮಕವಾಚನಕ್ಕೆ ತುಂಬಾ ಸಹಾಯಕವಾಯಿತು. ಸಾಹಿತ್ಯಾವಲೋಕನವೂ ಸಾಕಷ್ಟಿದ್ದುದರಿಂದ ಕಾವ್ಯಗಾಯನಕ್ಕೆ ಪುಷ್ಠಿ ದೊರೆಯಿತು.

ಕುಮಾರವ್ಯಾಸ ಭಾರತ, ಲಕ್ಷ್ಮೀಶನ ಜೈಮಿನಿ ಭಾರತವೇ ಅಲ್ಲದೆ ಕುವೆಂಪುರವರ ರಾಮಾಯಣ ದರ್ಶನಂ ಮಹಾಕಾವ್ಯವನ್ನು ಐದು ಬಾರಿ ನಿತ್ಯ ಪಾರಾಯಣವನ್ನು ಮಾಡಿ ಆ ಕಾವ್ಯಗಳನ್ನು ಕರಗತ ಮಾಡಿಕೊಂಡವರು.

ವೆಂಕಟಪ್ಪನವರದ್ದು ಇಂಪಾದ ಗೌಳ ಶಾರೀರ. ಬಹು ಮೆದು ಒರಟುತನಕ್ಕೆ ಅವಕಾಶವೇ ಇಲ್ಲದ ಏನಿಕೆ, ರಸಕ್ಕೆ, ಭಾವಕ್ಕೆ ತಕ್ಕಂತೆ ಪದ್ಯಗಳಿಗೆ ರಾಗ ಪೋಷಣೆ ನೀಡುವಲ್ಲಿ ಸಿದ್ಧಹಸ್ತರು, ಸ್ವತಃ ಮೃದಂಗ ವಾದಕರಾಗಿದ್ದವರಾದ್ದರಿಂದ ರಗಳೆ, ಸಾಂಗತ್ಯಗಳನ್ನು ಗತಿಗೆ ತಕ್ಕಂತೆ ಹಾಡುವ ಕೆಲವೇ ಗಮಕಿಗಳಲ್ಲಿ ವೆಂಕಟಪ್ಪನವರು ಅಗ್ರಸ್ಥಾನ ಪಡೆದಿದ್ದರು.

## ಸಾರ್ವಜನಿಕ ಕ್ಷೇತ್ರದಲ್ಲಿ

ಕಲಾರಂಗವೇ ಅಲ್ಲದೆ ಸಾರ್ವಜನಿಕ-ಸಾಮಾಜಿಕ ಕ್ಷೇತ್ರಗಳಲ್ಲೂ ವೆಂಕಟಪ್ಪನವರ ಪಾತ್ರ ಹಿರಿದು.''ಆಡು ಮುಟ್ಟದ ಸೊಪ್ಪಿಲ್ಲ ಆಕಳು

ತುಳಿಯದ ಹಾದಿಯಿಲ್ಲ''ಎಂಬ ನಾಣ್ಣುಡಿ ವೆಂಕಟಪ್ಪನವರಿಗೆ ಅನ್ವರ್ಥ. ಸಾರ್ವಜನಿಕ ರಂಗವೇ ಆಗಲಿ ಕಲಾರಂಗವೇ ಆಗಲಿ ಅವರ ಕೈಯಾಡಿಸದ ಕ್ಷೇತ್ರವಿಲ್ಲ. ಮಾಲೂರಿನ ಯಾವುದೇ ಸಭೆ - ಸಮಾರಂಭ - ಉತ್ಸವವಾದಲ್ಲಿ ಅಲ್ಲಿ ವೆಂಕಟಪ್ಪನವರಿರಲೇ ಬೇಕು. ಅವರ ಮಾರ್ಗದರ್ಶನದಲ್ಲೇ ಕಾರ್ಯಕ್ರಮ ನಡೆಯಬೇಕು. ಹೀಗೆ ಮಾಲೂರಿನ ಜನ-ಮನಗಳಲ್ಲಿ ಹಾಸು ಹೊಕ್ಕಾಗಿದ್ದರು ವೆಂಕಟಪ್ಪನವರು. ಇದಕ್ಕೆ ಅವರ ಸೌಜನ್ಯ-ನಿರಾಡಂಬರ ವ್ಯಕ್ತಿತ್ವವೇ ಕಾರಣ.

''ಎನಗಿಂತ ಕಿರಿಯರಿಲ್ಲ-ನಿಮಗಿಂತ ಹಿರಿಯರಿಲ್ಲ''ಎಂಬ ದಾಸ್ಯ ಭಾವದಲ್ಲಿ ನಂಬಿಕೆಯನ್ನಿಟ್ಟಿದ್ದವರು. ಹಾಗಾಗಿ ಎಲ್ಲರಿಂದಲೂ ಅಜಾತ ಶತ್ರುಗಳೆನಿಸಿಕೊಂಡಿದ್ದವರು.

ಕರ್ನಾಟಕ ಗಾನ ಕಲಾ ಪರಿಷತ್ತು, ಕರ್ನಾಟಕ ಗಮಕ ಕಲಾ ಪರಿಷತ್ತು, ಶ್ರೀ ಪುರಂದರ-ತ್ಯಾಗರಾಜ ಸಂಗೀತ ಮಂಡಳಿ (ವಸಂತಪುರ) ಗಳ ಅಜೀವ ಸದಸ್ಯರು. ಗಮಕ ಕಲಾ ಪರಿಷತ್ತಿನ ಕೋಲಾರ ಜಿಲ್ಲಾ ಪ್ರತಿನಿಧಿಗಳಾಗಿದ್ದವರು. ಈಗ ಅವರ ಮಗ ಆ ಸ್ಥಾನವನ್ನು ತುಂಬಿದ್ದಾರೆ. ವೆಂಕಟಪ್ಪನವರು ಬದುಕಿದ್ದಷ್ಟು ಕಾಲ ಮುಳಬಾಗಿಲಿನಲ್ಲಿ ನಾವು ನಡೆಸುತ್ತಿರುವ ಪುರಂದರ ಆರಾಧನಾ ಮಹೋತ್ಸವಕ್ಕೆ ತಮ್ಮ ಶಿಷ್ಯರೊಡಗೂಡಿ ಆಗಮಿಸಿ ಉತ್ಸವದಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು.

## ಪ್ರಶಸ್ತಿ, ಗೌರವಗಳು

ಬಹುಮುಖ ಕಲಾ ಪ್ರತಿಭೆಯನ್ನು ಹೊಂದಿದ್ದ ವೆಂಕಟಪ್ಪನವರನ್ನ ನಾಡಿನ ಹಲವಾರು ಸಂಸ್ಥೆಗಳು ಮಠಾಧಿಪತಿಗಳು ಗೌರವಿಸಿ ಸನ್ಮಾನಿಸಿದ್ದಾರೆ.



೧೯೮೩ರಲ್ಲಿ ಬೆಂಗಳೂರಿನ ಗಾಯನ ಸಮಾಜದಲ್ಲಿ ಕರ್ನಾಟಕ ಗಮಕ ಕಲಾಪರಿಷತ್ತಿನ ವತಿಯಿಂದ ನಡೆದ ಪ್ರಥಮ ಅಖಿಲ ಕರ್ನಾಟಕ ಗಮಕ ಸಮ್ಮೇಳನ ನಮ್ಮ ಪೂಜ್ಯ ತಂದೆಯವರಾದ ದಿ|| ಮೈ. ಶೇ. ಅನಂತಪದ್ಮನಾಭ ರಾಯರ ಅಧ್ಯಕ್ಷತೆಯಲ್ಲಿ ನಡೆದಾಗ ವೆಂಕಟಪ್ಪನವರ ಕಲಾಸೇವೆಯನ್ನು ಗುರುತಿಸಿ ಸನ್ಮಾನಿಸಲಾಯಿತು.

೧೯೯೦ರಲ್ಲಿ ಮಾಲೂರಿನ ಅಭಿಮಾನಿಗಳು ವೆಂಕಟಪ್ಪನವರ ೭೫ನೇ ಜನ್ಮದಿನೋತ್ಸವದ ನೆನಪಿಗಾಗಿ ಅಮೃತೋತ್ಸವವನ್ನು ಆಚರಿಸಿ ಒಂದು ಸ್ಮರಣ ಸಂಚಿಕೆಯನ್ನು ತಂದದ್ದೇ ಅಲ್ಲದೆ ಅವರನ್ನು ಅಭಿನಂದಿಸಿ ಗೌರವಿಸಿದೆ.

೧೯೯೨ರ ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿ ಪ್ರಶಸ್ತಿ ''ಕರ್ನಾಟಕ ಕಲಾ ತಿಲಕ'' ಎಂಬ ಬಿರುದಿನೊಂದಿಗೆ ಇವರಿಗೆ ಲಭಿಸಿತು.

ಅಭಿನವ ಭಾರ್ಗವ, ಕಲಾತಪಸ್ವಿ, ಮಾಲೂರು ಮಾಣಿಕ್ಯ, ಕಲಾಭಂಡಾರಿ ಮೊದಲಾದ ಬಿರುದುಗಳನ್ನು ನೀಡಿ ಸಂಸ್ಥೆಗಳು ಇವರನ್ನು ಸನ್ಮಾನಿಸಿವೆ.

ದಾನ ಶಿಖಾಮಣಿ ಎಂ. ಎಸ್. ರಾಮಯ್ಯನವರು ತಮ್ಮ ಆರಾಧ್ಯಮೂರ್ತಿ ಯೋಗಿ ನಾರೇಯಣರ ಸ್ಮರಣಾರ್ಥ ಕೈವಾರದಲ್ಲಿ ಒಂದು ಗಮಕ ಸಮ್ಮೇಳನವನ್ನು ಏರ್ಪಡಿಸಿದ್ದು ಅದಕ್ಕೆ ಕರ್ನಾಟಕ ಗಮಕ ಕಲಾ ಪರಿಷತ್ತಿನ ಸಹಕಾರ ಕೋರಿದಾಗ್ಗೆ ಪರಿಷತ್ತು ಅದಕ್ಕೆ ಸ್ಪಂದಿಸಿದ್ದೇ ಅಲ್ಲದೆ ಕೋಲಾರ ಜಿಲ್ಲೆಯವರೇ ಆದ ವೆಂಕಟಪ್ಪನವರನ್ನೇ ಅಧ್ಯಕ್ಷ ಸ್ಥಾನಕ್ಕೆ ಅವಿರೋಧವಾಗಿ ಆಯ್ಕೆ ಮಾಡಿತು. ಆದರೆ ಈ ಸಮ್ಮೇಳನ ನಡೆಯುವುದಕ್ಕೆ ಮುನ್ನವೇ ತೀವ್ರ ಅಸ್ವಸ್ಥತೆಯಿಂದ ವೆಂಕಟಪ್ಪನವರು ತೀರಿಕೊಂಡರು.

ಮಾಲೂರು ರೋಟರಿ ಸಂಸ್ಥೆಯ ಸಕ್ರಿಯ ಕಾರ್ಯಕರ್ತರಾಗಿ ಸುಮಾರು ಏಳು ವರ್ಷಗಳ ಕಾಲ ಸೇವೆ ಸಲ್ಲಿಸಿ ಉತ್ತಮ ರೋಟೇರಿಯನ್ ಎಂಬ ಪ್ರಶಂಸೆಗೆ ಪಾತ್ರರಾಗಿದ್ದಾರೆ.

ಕರ್ನಾಟಕ ಗಮಕ ಕಲಾ ಪರಿಷತ್ತಿನ ಅಧ್ಯಕ್ಷರಾದ ಗಾನ ಕಲಾಭೂಷಣ ಎ. ವೀರಭದ್ರಯ್ಯನವರು ವೆಂಕಟಪ್ಪನವರ ಬಗ್ಗೆ ಬರೆಯುತ್ತ:

> ''ಕಲಾ ಮೇಧಾವಿಗಳು ಒಂದು ನಾಡಿನ ಪುಣ್ಯವಿಶೇಷದಿಂದ ಜನಿಸುತ್ತಾರೆ. ಅಂಥವರಿಂದ ಆ ನಾಡು, ಅವರಿರುವ ಸಮಾಜ, ಅವರಿಗೆ ಕರಗತವಾದ ಕಲೆ ಉದ್ಧಾರವಾಗುತ್ತದೆ. ವೆಂಕಟಪ್ಪನವರ ಜೀವನಕ್ರಮ ಅದರ ಸಿದ್ಧಿ, ಅವರ ಸಾಧನೆ, ಕಲಾಸೇವೆ ಇವುಗಳನ್ನು ಅವಲೋಕಿಸಿದರೆ ಮೇಲಿನ ಮಾತು ಪೂರ್ಣಸತ್ಯ, ಎಂಬುದು ಅರಿವಾಗುತ್ತದೆ.

''ಸೃಜನ ಶೀಲ ಕಲಾವಿದ ವೆಂಕಟಪ್ಪ ಜೀವನದ ಮೊದಲಲ್ಲಿ ರಾಜಕೀಯ ರಂಗದಲ್ಲಿದ್ದು ಅನಂತರ ತಮ್ಮನ್ನು ಪೂರ್ತಿಕಲೆಗೇ ಅರ್ಪಿಸಿಕೊಂಡ ಧೀಮಂತ ವ್ಯಕ್ತಿ'' ಎಂದು ಪ್ರಶಂಸಿಸಿದ್ದಾರೆ.

''ವೆಂಕಟಪ್ಪ ಒಬ್ಬ ಅತ್ಯಂತ ಸರಳ ಸ್ವಭಾವದ ಸಜ್ಜನಿಕೆಯ ಧೀಮಂತ ವ್ಯಕ್ತಿ. ಮಾಲೂರಿಗೂ ಇವರಿಗೂ ಒಂದು ಎಡಬಿಡದ ಆ ಜನ್ಮ ಬಾಂಧವ್ಯ. ಇವರನ್ನು ಒಬ್ಬ ಅಜಾತ ಶತ್ರುವೆಂದು ಹೇಳಿದರೆ ಅದು ಉತ್ಪ್ರೇಕ್ಷೆಯಾಗಲಾರದು''ಎಂದು ಉದ್ಗರಿಸಿದವರು ಕರ್ನಾಟಕ ಗಮಕ ಕಲಾ ಪರಿಷತ್ತಿನ ಅಧ್ಯಕ್ಷ ಜಿ. ನಾರಾಯಣ ಅವರು.

ಮಾಲೂರಿನ ಪ್ರಥಮ ದರ್ಜೆ ಮಹಾವಿದ್ಯಾಲಯದ ಪ್ರಾಂಶುಪಾಲ ಶ್ರೀ ಎನ್. ಬಿ. ಚಂದ್ರಮೋಹನ್ ಅವರು ವೆಂಕಟಪ್ಪನವರನ್ನು ಕುರಿತು :

''ಕುವೆಂಪುರವರ ರಾಮಾಯಣ ದರ್ಶನವೇ ಆಗಲೀ, ಮಾಸ್ತಿಯವರ ಕವಿತೆಗಳಾಗಲೀ, ಹಳೆಗನ್ನಡದ ಕಠಿಣ ಕಾವ್ಯಗಳಾಗಲೀ, ಅವರ ಗಮಕ ಕಲೆ ಮತ್ತು ರಸಿಕ ಸಹೃದಯತ್ವದ ಸಂಸ್ಪರ್ಶದಿಂದ ಸಾವಿರಾರು ಜನರ ಮನಸ್ಸುಗಳನ್ನು ತಲುಪಿಸಿ ಅವರು ಯಾವತ್ತೂ ಪ್ರಚಾರಕ್ಕೆ ಒಳಪಡದೆ ಎಲೆ ಮರೆಯ ಹೂವಾಗಿ ಕಂಪು ಬೀರುವುದರಲ್ಲೇ ತೃಪ್ತಿ ಹೊಂದುವ ಹಿರಿತನ ಅವರದ್ದು'' ಎಂದು ತಮ್ಮ ಲೇಖನವೊಂದರಲ್ಲಿ ಬರೆದಿದ್ದಾರೆ.

''ಮಾಲೂರು ಕಲಾತಿಲಕ ಕಣ್ಮಣಿ'' ಎಂದು ತಮ್ಮ ಗೌರವ ಸೂಚಿಸಿದವರು ಸಂಗೀತ ವಿದ್ವಾನ್ ಸಿ. ಹೊನ್ನಪ್ಪ ಭಾಗವತರು.

ಮಾಲೂರಿನ ಜನತೆ ವೆಂಕಟಪ್ಪನವರ ಅಮೃತೋತ್ಸವ ಸಮಾರಂಭವನ್ನು ಏರ್ಪಡಿಸಿದಾಗ ಅವರ ಆತ್ಮೀಯರಾದ ಟಿ. ವೇಣುಗೋಪಾಲ್ ಅವರು ವೆಂಕಟಪ್ಪನವರನ್ನು ಕುರಿತು ಬರೆದ ಪದ್ಯ:

## ''ನಿಮಗಿದೋ ನಮನ''

ಸಾರ್ಥಕ ಬದುಕಿನ ಸಾಫಲ್ಯ ಜೀವಿಗಳೆ
ನಿಸ್ವಾರ್ಥ ನಡೆಯಾ, ಅನ್ವರ್ಥನಾಮರೆ
ಮಾರ್ಗದರ್ಶಕ ನೀವು, ಸರಳ ಸಜ್ಜನಿಕೆಗೆ
ಮಾಲೂರಿನವರೆಂಬ, ಹೆಗ್ಗಳಿಕೆ ನಮಗೆ
ಸಂಗೀತ ಸಾಹಿತ್ಯ ಲಲಿತಕಲೆಗಳ ತೌರು
ತಂಬೂರಿ ಹಿಡಿದಾಡಿ ಮೋಡಿಮಾಡುವರು
ಮೃದಂಗವಾ ನುಡಿಸಿ ತಾಳ ಹಾಕಿಸುವರು
ಕುಂಚ ಹಿಡಿದರೆ ಕೈಲಿ ಪ್ರಪಂಚ ಮರೆಸುವರು.

ಕಾವ್ಯವಾಚನವೋ ಅಮೃತಸಿಂಚನವೋ
ಕಥನ ವಾಚನವೋ ನುಡಿಮುತ್ತ ಮಳೆಯೋ
ವೇದಿಕೆಯ ಭಾಷಣವೋ, ಘಂಟಾನಿನಾದವೋ
ಮೃದುಮಧುರ ನುಡಿಗಳಾ, ವಾತ್ಸಲ್ಯಮಯಿಯೋ
ಬರೆಯುತ್ತಲಿದ್ದರೆ ನುಡಿಗಳೇ ಸಾಲವು
ಸ್ತುತ್ಯಾತೀತರು ನೀವು, ನೀವು ಮೇರು!
ಜನ್ಮವಿತ್ತವರಾ ಒಡಲ ಪುಣ್ಯವು
ನೀವು ಜನಿಸಿದೂರಿನ ಕೀರ್ತಿಜ್ಯೋತಿ ನೀವು

# ಗಮಕಿ ರಾಮಕೃಷ್ಣ ಶಾಸ್ತ್ರಿಗಳು

# ಗಮಕಿ ರಾಮಕೃಷ್ಣ ಶಾಸ್ತ್ರಿಗಳು

ಗಮಕಿ ರಾಮಕೃಷ್ಣ ಶಾಸ್ತ್ರಿಗಳವರ ವಿಷಯ ಕೇಳಿದ್ದೇನೇ ಹೊರತು ಅವರನ್ನು ನೋಡುವ ಅವಕಾಶ ನನಗೆ ಒದಗಿ ಬರಲಿಲ್ಲ.

ಶಾಸ್ತ್ರಿಗಳು ಬಹುಮುಖ ಪ್ರತಿಭೆಯ ಕಲಾವಿದರು. ಗಮಕ, ಸಂಗೀತ, ಹರಿಕಥೆ, ನಾಟಕ ಹೀಗೆ ಕಲೆಯ ಎಲ್ಲಾ ಪ್ರಕಾರಗಳಲ್ಲೂ ಕೈಯಾಡಿಸಿದವರು. ಜೊತೆಗೆ ಉತ್ತಮ ಸಾಹಿತಿ ಕೂಡ.

೧೯೬೭ರಲ್ಲಿ ಸಂಗೀತ ನೃತ್ಯ ಅಕಾಡೆಮಿಯು ಡಾ|| ದೊರೆಸ್ವಾಮಿ ಅಯ್ಯಂಗಾರರ ಅಧ್ಯಕ್ಷತೆಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ್ಗೆ ಕರ್ನಾಟಕದ ಕೀರ್ತನಕಾರರ ಪರಿಚಯ ಗ್ರಂಥವನ್ನು ಬರೆಯುವ ಜವಾಬ್ದಾರಿಯನ್ನು ನನಗೆ ವಹಿಸಿತ್ತು. ಆಗ್ಗೆ ನಾನು ಹರಿಕಥಾರಂಗದಲ್ಲಿ ಸುಮಾರು ನಲುವತ್ತು ವರ್ಷಗಳಿಗೂ ಮಿಕ್ಕಿ ಸೇವೆ ಸಲ್ಲಿಸಿದ್ದ ರಾಮಕೃಷ್ಣ ಶಾಸ್ತ್ರಿಗಳ ಬಗ್ಗೆ ವಿಷಯ ಸಂಗ್ರಹಿಸಲು ಪ್ರಯತ್ನಿಸಿದೆ. ಆದರೆ ಹೆಚ್ಚು ಮಾಹಿತಿ ದೊರೆಯಲಿಲ್ಲ. ಕರ್ನಾಟಕ ಕೀರ್ತನ ಕಲಾಪರಿಷತ್ತು, ಕರ್ನಾಟಕ ಗಮಕ ಕಲಾ ಪರಿಷತ್ತು, ಗಮಕಿ ಎಂ. ರಾಘವೇಂದ್ರರಾವ್ ಹಾಗೂ ಕನ್ನಡ ಸಾಹಿತ್ಯ ಪರಿಷತ್ತು ಪ್ರಕಟಿಸಿರುವ 'ಕರ್ನಾಟಕದ ಗಮಕಿಗಳು' ಪುಸ್ತಕಗಳ ಮೂಲಕ ಸಾಧ್ಯವಾದಷ್ಟು ವಿಷಯ ಸಂಗ್ರಹಿಸಿದ್ದೇನೆ. ಇದರಿಂದ ಶಾಸ್ತ್ರಿಗಳ ಪರಿಚಯ ಗಮಕ ಕ್ಷೇತ್ರಕ್ಕೆ ದೊರೆಯಲು ಸಹಾಯಕವಾಗಬಹುದೆಂದೇ ನನ್ನ ನಂಬುಗೆ.

ಗಮಕಿ ರಾಮಕೃಷ್ಣಶಾಸ್ತ್ರಿಗಳು ಜನಿಸಿದ್ದು ಈಗ್ಗೆ ೧೦೧ ವರ್ಷದ ಹಿಂದೆ ಮೈಸೂರಿನಲ್ಲಿ. ಆ ಕಾಲದಲ್ಲಿ ಪ್ರಸಿದ್ಧ ಗಮಕಿಗಳೆನಿಸಿದ್ದ ಮೈಸೂರು ಜವಳಿ ಅಂಗಡಿ ತಮ್ಮಯ್ಯನವರಲ್ಲಿ ಬಾಲ್ಯದಲ್ಲೇ ಗಮಕ ಕಲೆಯ ಅಭ್ಯಾಸ ಮಾಡಿದ್ದರು ಶಾಸ್ತ್ರಿಗಳು.

ತಮ್ಮಯ್ಯನವರ ಹೆಸರಿಗೆ ಮಾತ್ರ 'ಜವಳಿ ಅಂಗಡಿ' ಅಂಟಿಕೊಂಡಿತ್ತೇ ಹೊರತು ಒಂದು ದಿನಕ್ಕಾದರೂ ಜವಳಿ ವ್ಯಾಪಾರ ಮಾಡಿದವರಲ್ಲ. ಮೈಸೂರಿನಲ್ಲಿ ಇವರು ಪುರಾಣದ ತಮ್ಮಯ್ಯನವರೆಂದೇ ಖ್ಯಾತರಾಗಿದ್ದರು. ಗಮಕ ಕಲೆಯಲ್ಲಿ ವಿಶೇಷ ಪಾಂಡಿತ್ಯ ಹೊಂದಿದ್ದ ತಮ್ಮಯ್ಯನವರು ತಮ್ಮ ಗಮಕ ಗುರುಕುಲದ ಮೂಲಕ ಅನೇಕ ಶಿಷ್ಯರನ್ನು ತಯಾರು ಮಾಡಿದ್ದಾರೆ. ಇದರಲ್ಲಿ ಶಾಸ್ತ್ರಿಗಳು ಹಾಗೂ ಗಮಕಿ ಎಂ. ರಾಘವೇಂದ್ರರಾಯರು

ಪ್ರಮುಖರು. ಉತ್ತಮ ವ್ಯಾಖ್ಯಾನಕಾರರೂ ಆಗಿದ್ದ ರಾಮಕೃಷ್ಣಶಾಸ್ತ್ರಿಗಳು ಮಂಡಿಪೇಟೆ ನರಹರಿ ಜೋಯಿಸರ ಮನೆಯಲ್ಲಿ ನಡೆಯುತ್ತಿದ್ದ ಗಮಕವಾದ ಕಾರ್ಯಕ್ರಮಗಳಲ್ಲಿ ಬಾಲಕನಾಗಿದ್ದ ರಾಘವೇಂದ್ರರಾಯರ ವಾಚನಕ್ಕೆ ವ್ಯಾಖ್ಯಾನ ನೀಡುತ್ತಿದ್ದರು.

ಮೈಸೂರು ವಾಸುದೇವಾಚಾರ್ಯರು, ಚಿಕ್ಕರಾಮರಾಯರು ಹಾಗೂ ಬೆಳಕವಾಡಿ ಶ್ರೀನಿವಾಸೈಯ್ಯಂಗಾರರಲ್ಲಿ ಸಂಗೀತ ಶಿಕ್ಷಣವನ್ನೂ ಪಡೆದಿದ್ದ ಶಾಸ್ತ್ರಿಗಳು ಗಮಕ ವಾಚನದಲ್ಲಿ ಸಂಗೀತಕ್ಕೆ ಹೆಚ್ಚಿನ ಒತ್ತು ಕೊಡುತ್ತಿದ್ದರು.

ಹರಿಕೇಶ್‌ನಲ್ಲೂರ್ ಮುತ್ತಯ್ಯ ಭಾಗವತರ್, ಸಂಬಂಧಮೂರ್ತಿ ಭಾಗವತರ್ ಮುಂತಾದ ಘನವಿದ್ವಾಂಸರು ಸಂಗೀತದ ಜೊತೆಗೆ ಹರಿಕಥಾ ಕಲೆಯನ್ನು ರೂಢಿಸಿಕೊಂಡಿದ್ದು ಕಥೆ ನಡೆಯುತ್ತಿದ್ದುದನ್ನು ಕೇಳಿ ಅದರಿಂದ ಪ್ರಭಾವಿತರಾಗಿ ತಾವೂ ಗಮಕದ ಜೊತೆಗೆ ಹರಿಕಥೆಯ ಕಡೆಗೂ ವಾಲಿದರು.

ಅಂದಿನ ಮೆಟ್ರಿಕ್ಯುಲೇಶನ್‌ವರೆಗೆ ವಿದ್ಯಾಭ್ಯಾಸ ಮಾಡಿದ್ದ ಶಾಸ್ತ್ರಿಗಳು ಕನ್ನಡ, ಸಂಸ್ಕೃತ ಎರಡೂ ಭಾಷಾ ಸಾಹಿತ್ಯಗಳಲ್ಲಿ ಉತ್ತಮ ಪ್ರಭುತ್ವವನ್ನು ಹೊಂದಿದ್ದವರು. ತಮ್ಮ ಸಾಹಿತ್ಯ ಜ್ಞಾನದ ಬಲದಿಂದ ಗಮಕ ವಾಚನದ ಜೊತೆಗೆ ವ್ಯಾಖ್ಯಾನವನ್ನು ರೂಢಿಸಿಕೊಂಡರು. ೧೯೨೦ ರಲ್ಲೇ ಮೈಸೂರಿನ ಆಸ್ಥಾನ ವಿದ್ವಾಂಸರೂ ಸಂಸ್ಕೃತ ಪಾಠಶಾಲಾ ಪ್ರಾಚಾರ್ಯರೂ ಆಗಿದ್ದ ನಂಜನಗೂಡು ಶ್ರೀಕಂಠ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ''ಗಮಕಿ'' ಎಂಬ ಬಿರುದು ಇವರಿಗೆ ಸಂದಿತ್ತು. ಮುಂದೆ ಇವರು ಹರಿಕಥಾ ವಿದ್ವಾಂಸರಾಗಿ, ನಾಟಕಕಾರರಾಗಿ ಪ್ರಸಿದ್ಧರಾದರೂ ಈ 'ಗಮಕಿ'ಬಿರುದು ಇವರ ಬೆನ್ನಿಗೆ ಅಂಟಿಕೊಂಡೇ ಬಂದು ಗಮಕಿ ರಾಮಕೃಷ್ಣಶಾಸ್ತ್ರಿಗಳೆಂದೇ ಪ್ರಸಿದ್ಧರಾದರು.

ಗಮಕ ರಂಗದಲ್ಲಿ ಸಾಕಷ್ಟು ಕೃಷಿ ಮಾಡಿದ ಶಾಸ್ತ್ರಿಗಳು ಹಿಂದಿನ ಗಮಕಿಗಳಂತೆ ಕೇವಲ ಕುಮಾರವ್ಯಾಸನಿಗೇ ಅಂಟಿಕೊಳ್ಳಲಿಲ್ಲ. ಹೆಚ್ಚಿನಂಶ ವೀರಶೈವ ಸಾಹಿತ್ಯದ ಕಡೆ ಗಮನ ಹರಿಸಿದರು. ರಾಜಶೇಖರ ವಿಳಾಸ, ಬಸವ ಪುರಾಣ, ವಚನ ಸಾಹಿತ್ಯ, ಪ್ರಭುಲಿಂಗಲೀಲೆ ಮುಂತಾದ ಅನೇಕ ಕಾವ್ಯಗಳನ್ನು ವಾಚಿಸುವಲ್ಲಿ ನಿಷ್ಣಾತರೆನಿಸಿದ್ದರು. ಇವರು ಗಮಕ ವಾಚನ ಮಾಡುತ್ತಿದ್ದರು ಎಂದು ಕೇಳಿದ್ದೇ ಹೊರತು ಹೇಗೆ ಮಾಡುತ್ತಿದ್ದರು. ಇವರ ವಾಚನದ ಶೈಲಿ ಬಗ್ಗೆಯಾಗಲೀ, ಇವರ ಕಂಠ ಹೇಗಿತ್ತು ಎಂಬುದಾಗಲೀ ನನಗೆ ತಿಳಿಯದ ವಿಷಯ. ಆದರೆ ಹರಿಕತೆಯಲ್ಲಿ ಸಂಗೀತದ ಬಳಕೆ ವಿಪುಲವಾಗಿದ್ದು ಕೇಳಲು ಮಾಧುರ್ಯವಾಗಿರುತ್ತಿತ್ತು ಎಂದು ಕೀರ್ತನ ವಲಯದ ಹಲವು ವಿದ್ವಾಂಸರಿಂದ ಕೇಳಿದ್ದರಿಂದ ಗಮಕ ಕಲೆಯಲ್ಲೂ ಇವರ ಹಾಡಿಕೆ ಅಷ್ಟೇ ಇಂಪಾಗಿರಬೇಕು ಎಂದು ಮಾತ್ರ ಊಹಿಸಲು ಸಾಧ್ಯ. ಏನೇ ಇರಲಿ ಗಮಕ ಕ್ಷೇತ್ರದಲ್ಲಿ ಇವರ ಹೆಸರು ಚಿರಸ್ಥಾಯಿಯಾಗಿ ನಿಲ್ಲುವಂಥದ್ದು.

## ಆಕಾಶವಾಣಿಯ ಪ್ರಥಮ ಕಲಾವಿದ

ಮೈಸೂರು ಆಕಾಶವಾಣಿ ಮಾನ್ಯ ಶ್ರೀ ಗೋಪಾಲಸ್ವಾಮಿಯವರ ನೇತೃತ್ವದಲ್ಲಿ ಪ್ರಾರಂಭವಾದ ಮೊದಲ ದಿನವೇ ಶಾಸ್ತ್ರಿಗಳ ಹರಿಕತೆ ಪ್ರಸಾರವಾದದ್ದು ಇವರ ಹೆಗ್ಗಳಿಕೆ. ಹೀಗಾಗಿ ಕೀರ್ತನ ರಂಗದಲ್ಲಿ ಆಕಾಶವಾಣಿಯ ಪ್ರಥಮ ಕಲಾವಿದ ಎಂಬ ಖ್ಯಾತಿಗೆ ಪಾತ್ರರಾದರು ಶಾಸ್ತ್ರಿಗಳು. ಸಾಹಿತ್ಯ ಜ್ಞಾನವನ್ನೂ ವಿಪುಲವಾಗಿ ಬೆಳೆಸಿಕೊಂಡಿದ್ದ ಶಾಸ್ತ್ರಿಗಳು ಪದ್ಯ, ಗದ್ಯ ರಚನಕಾರರಾಗಿದ್ದುದೇ ಅಲ್ಲದೆ ಅನೇಕ ಕಥಾ ಪ್ರಸಂಗಗಳನ್ನು ಕೀರ್ತನ ರೂಪದಲ್ಲಿ ರಚಿಸಿ ಹರಿಕತಾ ಕ್ಷೇತ್ರಕ್ಕೆ ಒಂದು ಉತ್ತಮ ಕೊಡುಗೆಯನ್ನೇ ನೀಡಿದ್ದರಲ್ಲದೆ ಇಂದಿನ ಅನೇಕ ಕೀರ್ತನ ಕಲಾವಿದರಿಗೆ ಮಾರ್ಗದರ್ಶಕರಾಗಿದ್ದರು.

## ನಾಟಕಕಾರರಾಗಿ-ನಟರಾಗಿ

ಕೀರ್ತನ ಕ್ಷೇತ್ರದ ಬಹುತೇಕ ಕಲಾವಿದರು ನಾಟಕ ವೃತ್ತಿಯಲ್ಲಿದ್ದು ಮುಂದೆ ನಾಟಕ ಕ್ಷೇತ್ರ ಅವನತಿಯ ಹಾದಿ ಹಿಡಿದಾಗ ಉದರಂಭರಣಕ್ಕಾಗಿ ಹರಿಕತೆಯ ಮೊರೆ ಹೊಕ್ಕರು. ಆದರೆ ಶಾಸ್ತ್ರಿಗಳ ವಿಷಯದಲ್ಲಿ ಇದು ತದ್ವಿರುದ್ಧ. ತಮ್ಮ ಕೀರ್ತನ ಕಲಾಕೌಶಲ್ಯದಿಂದ, ಗಮಕ ಪಾಂಡಿತ್ಯದ ಪ್ರಭಾವದಿಂದ, ನಾಟಕ ಕಲೆಗೆ ವಾಲಿ ನಾಟಕ ಕ್ಷೇತ್ರಕ್ಕೆ ಒಂದು ರೀತಿಯ ಜೀವನಾಡಿಯಾದರು. ಇವರು ರಚಿಸಿದ 'ಮಾತೃಭಕ್ತಿ', 'ಸತೀ ಸಾವಿತ್ರಿ', 'ರಾವಣ ದಿಗ್ವಿಜಯ' ನಾಟಕಗಳು ಅಂದಿನ ಮೈಸೂರರಸರಾಗಿದ್ದ ನಾಲ್ವಡಿ ಕೃಷ್ಣರಾಜರ ಸಮ್ಮುಖದಲ್ಲಿ ಪ್ರದರ್ಶಿಸಲ್ಪಟ್ಟು ಪ್ರಭುಗಳ ಪ್ರಶಂಸೆಗೆ ಪಾತ್ರವಾದುವು. ಕ್ರಮೇಣ ಚಲನ ಚಿತ್ರರಂಗಕ್ಕೂ ಪದಾರ್ಪಣೆ ಮಾಡಿದ ಶಾಸ್ತ್ರಿಗಳು ಹೆಸರಾಂತ ನಟ ಸುಬ್ಬಯ್ಯನಾಯ್ಡು, ನಾಂಗೇಂದ್ರರಾಯರು ಅಭಿನಯಿಸಿದ್ದ ಭೂ ಕೈಲಾಸ, ವಸಂತಸೇನೆ, ಕಬೀರ್ ದಾಸ್, ಹರಿಶ್ಚಂದ್ರ ಮುಂತಾದ ಚಿತ್ರಗಳಿಗೆ ಹಾಡು ಪದ್ಯಗಳನ್ನು ರಚಿಸಿಕೊಟ್ಟಿದ್ದಾರೆ. ಅಲ್ಲದೆ ಕರ್ನಾಟಕದ ವಿದ್ಯಾಸಚಿವರಾಗಿದ್ದ ಕೆ. ವಿ. ಶಂಕರಗೌಡರು ರಚಿಸಿ ಅಭಿನಯಿಸಿದ 'ಪಾದುಕಾ ಕಿರೀಟ' ನಾಟಕಕ್ಕೆ ಬಳಸಿದ ಎಲ್ಲ ಗೀತೆಗಳೂ ಶಾಸ್ತ್ರಿಗಳ ರಚನೆಗಳು.

## ಕವಿ, ಸಾಹಿತಿ ಗೀತರಚನಕಾರರಾಗಿ

ಕಾವ್ಯಾವಲೋಕನದ ಅನುಭವದಿಂದ ಶಾಸ್ತ್ರಿಗಳು ಅನೇಕ ಪುರಾಣಗಳ ಕಥಾ ಪ್ರಸಂಗಗಳನ್ನು ಕೀರ್ತನ ರೂಪದಲ್ಲಿ ರಚಿಸಿರುವುದಲ್ಲದೆ ಅನೇಕ ಗ್ರಂಥಗಳನ್ನೂ ರಚಿಸಿದ್ದಾರೆ. ಇದರಲ್ಲಿ ಶೈವ ಗ್ರಂಥಗಳೇ ಹೆಚ್ಚು. ಅನೇಕರು ಇವರ ಸಾಹಿತ್ಯರಚನೆಗಳನ್ನು ಕೃತಿಚೌರ್ಯಮಾಡಿ ತಮ್ಮ ಹೆಸರಿನಲ್ಲಿ

ಪ್ರಕಟಿಸಿದ್ದೂ ಉಂಟು. ಇಂಥ ಅನೇಕ ಕಹಿ ಅನುಭವಗಳು ಶಾಸ್ತ್ರಿಗಳ ಜೀವನದಲ್ಲಿ ಬಂದರೂ ಅದಕ್ಕಾಗಿ ಅವರು ತಲೆಕೆಡಿಸಿಕೊಂಡವರಲ್ಲ. ತಮ್ಮ ರಚನಾ ಕಾರ್ಯವನ್ನು ನಿಲ್ಲಿಸಿದವರೂ ಅಲ್ಲ. ವಿಪುಲವಾಗಿ ಹರಿಯಿತು ಅವರ ಕಾವ್ಯಧಾರೆ.

ಧಾರವಾಡ ಆಕಾಶವಾಣಿಯಿಂದ ಆಗಾಗ್ಗೆ ಪ್ರಸಾರವಾಗುತ್ತಿದ್ದ 'ಶ್ರೀರಾಮ ಸುಪ್ರಭಾತ' ರಚಯಿತರು ಶಾಸ್ತ್ರಿಗಳೇ. ಆನಂದ ರಾಮಾಯಣ, ಅದ್ಭುತ ರಾಮಾಯಣ, ದೇವೀಭಾಗವತಗಳ ಅನೇಕ ಪ್ರಂಸಗಗಳನ್ನು ಕೀರ್ತನ ರೂಪೀ ಸಾಹಿತ್ಯದಲ್ಲಿ ರಚಿಸಿರುವುದೇ ಅಲ್ಲದೆ ಸ್ವಾತಂತ್ರ ಸಂಗ್ರಾಮ ಸಮಯ ದಲ್ಲಿ ಗಾಂಧೀಜೀ, ರಾಮಕೃಷ್ಣ ಪರಮಹಂಸರ ಜೀವನದ ಧ್ಯೇಯಗಳ ದೃಷ್ಟಾಂತರೂಪೀ ಕಥೆಗಳನ್ನು ರಚಿಸಿರುವುದರೊಂದಿಗೆ ತಾನೇ ಅನೇಕ ಕಡೆ ಕಥೆ ನಡೆಸಿದ್ದೂ ಉಂಟು.

ಗೋಂದಾವಳೀ ಬ್ರಹ್ಮ ಚೈತನ್ಯದ ಚರಿತ್ರೆಯನ್ನೊಳಗೊಂಡ ಕಾವ್ಯ ಭಾಮಿನೀ ಷಟ್ಪದಿಯಲ್ಲಿ ರಚಿತವಾಗಿದ್ದು ಸುಮಾರು ಒಂದು ಸಾವಿರ ಪದ್ಯಗಳಿಗೂ ಮಿಕ್ಕಿರುವ ಬೃಹದ್ಗ್ರಂಥ, 'ಕೇದಾರ-ಬದರೀ ಯಾತ್ರದರ್ಪಣ', 'ಶ್ರೀ ಸಾಯೀ ರಾಮ ಸುಧಾ', 'ಶೃಂಗಗಿರಿ ಮಹಾತಪಸ್ವಿ', ಇವರು ರಚಿಸಿದ ಗದ್ಯ ಗ್ರಂಥಗಳು. ಶೃಂಗೇರಿ ಸಂಸ್ಥಾನದ ಜಗದ್ಗುರುಗಳ ಸಮ್ಮುಖದಲ್ಲಿ ಹಲವಾರು ಬಾರಿ ಕಾವ್ಯವಾಚನ-ಕೀರ್ತನೆಗಳನ್ನು ನಡೆಸಿದ್ದಾರೆ. ಹೊರರಾಜ್ಯಗಳಾದ ಬಂಗಾಳ, ಮಹಾರಾಷ್ಟ್ರ, ದೆಹಲಿ, ಮಧ್ಯಪ್ರದೇಶಗಳಲ್ಲಿ ಸಂಚರಿಸಿ ಕಾರ್ಯಕ್ರಮ ನೀಡಿದ್ದಾರೆ.

## ಶಿಷ್ಯ ಸಂಪತ್ತು

ಕಾವ್ಯವಾಚನ ಮತ್ತು ಕೀರ್ತನ ಕ್ಷೇತ್ರದಲ್ಲಿ ಅನೇಕ ಶಿಷ್ಯರನ್ನು ತಯಾರು ಮಾಡಿದ್ದಾರೆ ಶಾಸ್ತ್ರಿಗಳು. ಗಮಕ ಕ್ಷೇತ್ರದಲ್ಲಿ ಸಾಕಷ್ಟು ಹೆಸರು ಮಾಡಿದ್ದ ಬಾಳಗಂಚಿ ನಂಜುಂಡಯ್ಯನವರು ಇವರ ಶಿಷ್ಯರಲ್ಲಿ ಪ್ರಮುಖರು. ಅಂತೆಯೇ ಕೀರ್ತನ ಕ್ಷೇತ್ರದಲ್ಲಿ ಇಂದು ಮನೆ ಮಾತಾಗಿರುವ ಭದ್ರಗಿರಿ ಸಹೋದರರ ಪ್ರಮುಖ ಶಿಷ್ಯರಾದ ಲಕ್ಷ್ಮಣ ದಾಸ್ ವೇಲ್ಹಣಕರ್ ಶಾಸ್ತ್ರಿಗಳಲ್ಲಿ ಸಂಗೀತ-ಕೀರ್ತನ ಕಲೆಯನ್ನು ಅಭ್ಯಾಸ ಮಾಡಿದವರು.

ಶಾಸ್ತ್ರಿಗಳ ಮಕ್ಕಳಾದ ದಿ|| ಹೆಚ್. ಆರ್. ಸೀತಾರಾಮಶಾಸ್ತ್ರಿ ಸಂಗೀತ - ಸುಗಮ ಸಂಗೀತ ಕ್ಷೇತ್ರದಲ್ಲಿ ಮಂಚೂಣಿಯಲ್ಲಿದ್ದವರು. ಮಗಳು ಗಾಯತ್ರಿ ಸುಬ್ಬರಾವ್ ಸಂಗೀತ ಗಮಕಗಳಲ್ಲಿ ಪಾಂಡಿತ್ಯ ಪಡೆದಿದ್ದಾರೆ. ದಿಲ್‌ರುಬಾ ನಾಗರಾಜ್ ಎಂದೇ ಪ್ರಸಿದ್ಧರಾಗಿ ಆಕಾಶವಾಣಿ ನಿಲಯ ಕಲಾವಿದರಾಗಿದ್ದ ನಾಗರಾಜಶಾಸ್ತ್ರಿಗಳು ಮತ್ತೊಬ್ಬ ಪುತ್ರರು.

## ಪ್ರಶಸ್ತಿ ಗೌರವಗಳು

ಬೆಂಗಳೂರು ರಾಜಾಜಿನಗರದ ದಾಸಾಶ್ರಮದಲ್ಲಿ ೧೯೬೪ರಲ್ಲಿ ನಡೆದ ಅಖಿಲ ಕರ್ನಾಟಕ ಕೀರ್ತನಕಾರರ ಪ್ರಥಮ ಸಮ್ಮೇಳನದಲ್ಲಿ ಇವರನ್ನು 'ಕೀರ್ತನ ಭೂಷಣ' ಎಂಬ ಬಿರುದಿನೊಂದಿಗೆ ಸನ್ಮಾನಿಸಲಾಯಿತು.

ದ್ವಾರಕಾ ಶೃಂಗೇರಿ ಜಗದ್ಗುರುಗಳಿಂದ 'ಕೀರ್ತನ ಕಲಾನಿಧಿ', ಶಿವಮೊಗ್ಗಾ ವಿದ್ವನ್ಮಂಡಲಿಯಿಂದ 'ಕೀರ್ತನ ಕಮಲ ಭಾಸ್ಕರ', ೧೯೨೦ರಲ್ಲಿ ನಂಜನಗೂಡು ಶ್ರೀಕಂಠಶಾಸ್ತ್ರಿಗಳಿಂದ 'ಗಮಕಿ' ಎಂಬ ಬಿರುದು ಗೌರವಗಳು ಸಂದಿವೆ.

ಅನೇಕ ವೀರಶೈವ ಜಗದ್ಗುರುಗಳು ಇವರು ಶರಣ ಸಾಹಿತ್ಯಕ್ಕೆ ನೀಡಿದ ಕೊಡುಗೆಗಾಗಿ ಗೌರವಿಸಿ ಸನ್ಮಾನಿಸಿದ್ದಾರೆ.

ಹೀಗೆ ಸಂಗೀತ, ಸಾಹಿತ್ಯ, ನಾಟಕ, ಗಮಕ, ಕೀರ್ತನ ಕ್ಷೇತ್ರಗಳ ಬಹುಮುಖ ಪ್ರತಿಭೆಯ ಕಲಾವಿದರಾಗಿದ್ದ ಗಮಕಿ ರಾಮಕೃಷ್ಣ ಶಾಸ್ತ್ರಿಗಳು ಕಲಾಕ್ಷೇತ್ರದ ಮೇರುವಾಗಿ ಮೆರೆದವರು. ಇವರ ಕೀರ್ತಿ ಇಂದಿಗೂ ಅಜರಾಮರ.



# ಗಮಕಿ ಎಂ. ರಾಘವೇಂದ್ರರಾವ್

ಕಾವ್ಯಗಾಯನ ಕಲೆ! ಇದಕ್ಕೆ ಏನಾದರೊಂದು ರೂಪರೇಶೆಯಿತ್ತೇ? ಕಾವ್ಯಗಾಯನವೆಂದರೆ ಏನು? ಇದನ್ನು ಹೇಗೆ ಹಾಡಬೇಕು ಎಂಬುದರ ಬಗ್ಗೆ ಹಿಂದಿನಿಂದಲೂ ಯಾರೂ ಯೋಚಿಸಿರಲಿಲ್ಲ. ಗಮಕ ಕಲೆಯ ಬಗ್ಗೆ ಅಷ್ಟಾಗಿ ತಲೆ ಕೆಡಿಸಿಕೊಂಡಿರಲಿಲ್ಲ. ಸಂಗೀತ - ಸಾಹಿತ್ಯ ಜ್ಞಾನದ ಪ್ರಭಾವ ದಿಂದ ಕಾವ್ಯವನ್ನು ರಾಗವಾಗಿ ಭಾವಪೂರ್ಣವಾಗಿ ಕೇಳುಗರ ಮನಸ್ಸಿಗೆ ನಾಟುವಂತೆ ಪ್ರಸಂಗಗಳನ್ನು ವಾಚಿಸುತ್ತಿದ್ದರು. ಹೆಚ್ಚಾಗಿ ಕುಮಾರವ್ಯಾಸ ಭಾರತ, ಜೈಮಿನಿ ಭಾರತಗಳೇ ವಾಚನಕ್ಕೆ ಪ್ರಾಧಾನ್ಯತೆ ಪಡೆದಿದ್ದು ಇದು 'ಭಾರತ ವಾಚನ' ಕಲೆಯೆಂದೇ ಪ್ರಸಿದ್ಧಿಯಾಗಿತ್ತು. 'ಗಮಕ ಭಗೀರಥ' ರೆನಿಸಿದ್ದ ಭಾರತ ಬಿಂದೂರಾಯರು, ಭಾರತದ ಕೃಷ್ಣರಾಯರು. ಕಳಲೆ ಸಂಪತ್ಕುಮಾರಾಚಾರ್ಯರು ಹೆಚ್ಚಿನಂಶ ಕುಮಾರವ್ಯಾಸ ಭಾರತವನ್ನೇ ವಾಚನ ಮಾಡುತ್ತಿದ್ದುದರಿಂದ ಅವರ ಹೆಸರಿನ ಹಿಂದೆ 'ಭಾರತ' ಅಂಟಿಕೊಂಡೇ ಬಂತು. 'ಗಮಕಿ' ಎಂಬ ಬಿರುದು ಅಥವ ಸೂಚ್ಯನಾಮ ಇವರ ಹೆಸರಿನ ಜೊತೆ ಬರಲೇ ಇಲ್ಲ. ಆದರೆ ಈ ಗಮಕ ಕಲೆಯನ್ನು ಈ ಮೂವರೂ ಉಚ್ಛ್ರಾಯ ಸ್ಥಿತಿಗೆ ತಂದವರಾದ್ದರಿಂದ ಗಮಕ ಭಗೀರಥರೆನಿಸಿದರು. ತಮ್ಮ ಹೆಸರಿನೊಂದಿಗೆ 'ಗಮಕಿ' ಎಂಬ ಅಭಿದಾನ ಬಂದಿದ್ದು ಮೈಸೂರಿನ ಗಮಕಿ ಎಂ. ರಾಘವೇಂದ್ರರಾಯರಿಗೆ. ಇವರಿಗಿಂತ ಮುಂಚೆ 'ಗಮಕಿ' ಎನ್ನಿಸಿಕೊಂಡವರು ರಾಮಕೃಷ್ಣಶಾಸ್ತ್ರಿಗಳು. ಇಬ್ಬರೂ ಒಂದೇ ಗುರುಗಳ ಶಿಷ್ಯರು. ಮೈಸೂರಿನ ಜವಳಿ ಅಂಗಡಿ ತಮ್ಮಯ್ಯನವರು ಇವರ ಗುರುಗಳು.

ಗಮಕ ಕಲೆಗೆ ಒಂದು ರೂಪರೇಶೆಯಿತ್ತು ಅದನ್ನು ಓದುವ ರೀತಿ, ರಾಗಗಳನ್ನು ಅಳವಡಿಸಿಕೊಳ್ಳುವ ಬಗೆ, ಸಂಗೀತದ ತಿಳುವಳಿಕೆ ಎಷ್ಟಿರಬೇಕು. ಸಾಹಿತ್ಯಭಾಗದ ಪ್ರಾಧಾನ್ಯತೆ ಎಷ್ಟು? ಎಂಬ ವಿವರಗಳನ್ನೊಳಗೊಂಡ 'ಗಮಕಿ' ಎಂಬ ಕಾವ್ಯವನ್ನೇ ರಚಿಸಿ ಗಮಕ ಕಲೆಗೆ ಒಂದು ಉನ್ನತ ಸ್ಥಾನವನ್ನು ಕಲ್ಪಿಸಿದವರು ರಾಘವೇಂದ್ರರಾಯರು. ಅಷ್ಟೇ ಅಲ್ಲದೆ ಗಮಕಾಭ್ಯಾಸಿಗಳಿಗೆ ಅನುಕೂಲವಾಗುವಂತೆ ''ಕಾವ್ಯ ಗಾಯನ ಕಲೆ'' ಎಂಬ ಪುಸ್ತಕವನ್ನು ಬರೆದು ಗಮಕ ಅಂದರೇನು ಎಂಬ ಬಗೆಗೆ ಬೆಳಕು ಚೆಲ್ಲಿದ್ದಾರೆ.

ಗಮಕ, ಸಂಗೀತ - ಸಾಹಿತ್ಯ ಈ ಎಲ್ಲ ಪ್ರಕಾರಗಳಲ್ಲೂ ತಮ್ಮದೇ ಆದ ವಿಶಿಷ್ಟ ಪಾಂಡಿತ್ಯ ಗಳಿಸಿ ಗಮಕ ಕಲೆಯ 'ರಸ ಋಷಿ' ಎನಿಸಿಕೊಂಡವರು ರಾಘವೇಂದ್ರರಾಯರು. ಸಂಗೀತ ಅದರಲ್ಲೂ ದಾಸಸಾಹಿತ್ಯ-ಹರಿದಾಸ ಕೃತಿ ಗಾಯಕರಿಗೇ ಮೀಸಲೆನಿಸಿರುವ ಕರ್ನಾಟಕದ ಪ್ರತಿಷ್ಠಿತ ಗೌರವ 'ಕನಕ ಪುರಂದರ' ಪ್ರಶಸ್ತಿ ರಾಘವೇಂದ್ರರಾಯರಂಥ ಒಬ್ಬ ಗಮಕಿಗೆ ದೊರೆತಿದೆ ಎಂದ ಮೇಲೆ ಅವರ ಗಮಕ ಕಲೆ ಯಾವ ಮಟ್ಟದಲ್ಲಿದೆ ಎಂಬುದಕ್ಕೆ ಜ್ವಲಂತ ಸಾಕ್ಷಿಯಾಗಿದೆ. ಇದು ಕೇವಲ ಅವರೊಬ್ಬರಿಗೇ ಅಲ್ಲ, ಇಡೀ ಗಮಕ ಕಲಾಕ್ಷೇತ್ರಕ್ಕೇ ಸಂದ ದೊಡ್ಡ ಗೌರವ! ಇಂಥ ಒಬ್ಬ ಮಹಾನ್ ಗಮಕಿ ಇಂದು ನಮ್ಮೊಡನಿರುವುದು ನಮ್ಮ ಸುಕೃತ.

## ರಾಘವೇಂದ್ರರಾಯರನ್ನು ನಾನು ಕಂಡಿದ್ದು

ರಾಘವೇಂದ್ರರಾಯರನ್ನು ನಾನು ಮೊಟ್ಟಮೊದಲಿಗೆ ನೋಡಿದ್ದು ೧೯೫೨ರಲ್ಲಿ. ಅವರು ಮಡಿಕೇರಿಗೆ ಗಮಕ ಪರೀಕ್ಷೆಗೆ ಪರೀಕ್ಷಕರಾಗಿ ಬಂದಿದ್ದಾಗ. ಸಂಸಾರ ಸಮೇತ ಬಂದಿದ್ದರು. ಈಗ ಬೆಂಗಳೂರು ಆಕಾಶವಾಣಿ ನಿಲಯದ ಕಾರ್ಯಕ್ರಮ ನಿರ್ವಾಹಕರಾಗಿರುವ ಎಂ. ಆರ್. ಸತ್ಯನಾರಾಯಣ ರಾಯರ ಕಿರಿಯ ಪುತ್ರ. ಆಗ ಆತ ಎರಡು ವರ್ಷದ ಮಗು. ನನ್ನ ತಮ್ಮ ಚಿ|| ಮಡಿಕೇರಿ ನಾಗೇಂದ್ರ ಅದೇ ವಯಸ್ಸಿನವನು. ಇಬ್ಬರೂ ಒಟ್ಟಿಗೆ ಆಟವಾಡಿಕೊಂಡು ಸ್ನೇಹ ಬೆಳೆಸಿಕೊಂಡರು. ಅವರಿಬ್ಬರ ಸ್ನೇಹ ಇಂದಿಗೂ ಅಚ್ಚಳಿಯದಂತಿದೆ.

ಇದಕ್ಕೆ ಮುನ್ನ ೧೯೪೭ರಲ್ಲಿ ಮಡಿಕೇರಿಯ ರಾಮೋತ್ಸವ ಕಾರ್ಯಕ್ರಮಕ್ಕೆ ಬಂದಿದ್ದು ನಮ್ಮ ಮನೆಯಲ್ಲಿ ತಂಗಿದ್ದುದಾಗಿಯೂ ಆಗಲೇ ನಮ್ಮ ತಂದೆಯವರ-ಅವರ ಪರಸ್ಪರ ಪರಿಚಯವಾದದ್ದಾಗಿಯೂ ಬರೆದಿದ್ದಾರೆ ರಾಘವೇಂದ್ರರಾಯರು ತಮ್ಮ 'ಕಲೆಯ ಕಾಣಿಕೆ' ಆತ್ಮ ಚರಿತ್ರಾ ಗ್ರಂಥದಲ್ಲಿ. ಆದರೆ ಅದು ನನಗೆ ನೆನಪಿಲ್ಲ. ಎರಡನೇ ಬಾರಿ ಗಮಕ ಪರೀಕ್ಷಕರಾಗಿ ಬಂದದ್ದು ಚೆನ್ನಾಗಿ ನೆನಪಿದೆ. ಆಗಲೂ ಅವರ ವಾಚನ ಕಾರ್ಯಕ್ರಮ ಏರ್ಪಾಡಾಗಿತ್ತು. ಆಗ ಅವರ ವಾಚನದ ಶೈಲಿಯನ್ನು ಕೇಳಿ ಮಾರುಹೋದವರಲ್ಲಿ ನಾನು ಒಬ್ಬ.

ರಾಯರದ್ದು ಸಣ್ಣದನಿ ಗಂಡು ಶಾರೀರವಲ್ಲ. ಆದರೆ ಹಾಡಿಕೆಯಲ್ಲಿನ ಮಾರ್ದವತೆ ಎಂಥವರನ್ನೂ ಸೆರೆ ಹಿಡಿಯುವಂಥದ್ದು. ಸಂಗೀತವನ್ನೂ ಚೆನ್ನಾಗಿ ಅಭ್ಯಸಿಸಿದ್ದ ರಾಯರು ಕಾವ್ಯದ ರಸಪೋಷಣೆಗೆ ತಕ್ಕಂತೆ ರಾಗಗಳನ್ನು ಅಳವಡಿಸುತ್ತಿದ್ದ ರೀತಿ ಮೆಚ್ಚುವಂಥದ್ದು. ಎಲ್ಲಕ್ಕಿಂತ ಅವರು ಹಾಡುತ್ತಿದ್ದ ರೀತಿ, ಸಂದರ್ಭಕ್ಕೆ ತಕ್ಕಂತೆ ಪದಗಳನ್ನು ಹಿಂದುಮುಂದಾಗಿ ಮಾಡಿ

ಸಾಮಾನ್ಯನಿಗೂ ಅರ್ಥವಾಗುವಂತೆ ಓದುತ್ತಿದ್ದರು. ಇವರ ವಾಚನಕ್ಕೆ ವ್ಯಾಖ್ಯಾನದ ಅವಶ್ಯಕತೆಯೇ ಇರಲಿಲ್ಲ. ಅಷ್ಟು ಸ್ಫುಟತೆ ಅವರ ಹಾಡಿಕೆಯಲ್ಲಿರುತ್ತಿತ್ತು.

## ರಾಯರ ಜನನ, ಬಾಲ್ಯ

ರಾಘವೇಂದ್ರರಾಯರು ಹುಟ್ಟಿದ್ದು ೧೯೧೪ರ ಆಗಸ್ಟ್ ೭ ರಂದು ಶ್ರಾವಣ ಬಹುಳ ಬಿದಿಗೆ - ರಾಯರ ಆರಾಧನಾ ದಿನದಂದು ಹುಟ್ಟಿದ ಮಗುವಿಗೆ ರಾಘವೇಂದ್ರನೆಂದೇ ನಾಮಕರಣ ಮಾಡಿದರು. ತಂದೆ ಎಂ. ಎನ್. ಕೇಶವರಾವ್ ಹಾಗೂ ತಾಯಿ ವೆಂಕಟಲಕ್ಷ್ಮಮ್ಮನವರು. ಕೇಶವರಾಯರ ಎರಡನೇ ಮಗನೇ ರಾಘವೇಂದ್ರರಾಯರು.

ಕೇಶವರಾಯರು ಓದಿದ್ದು ಆಗಿನ ಕೂಲಿಮಠದಲ್ಲಿ. ಹಾಗಾಗಿ ಅಲ್ಲಿ ಅವರಿಗೆ ಅನೇಕ ಕಾವ್ಯಗಳ ಪದ್ಯಗಳು ಕಂಠಪಾಠವಾಗಿದ್ದುವು. ಈ ಕೂಲಿಮಠದ ಉಪಾಧ್ಯಾಯರಾಗಿದ್ದ ಉಪಾಧ್ಯ ನಂಜಪ್ಪನವರು ಉತ್ತಮ ಗಮಕಿ ಎನಿಸಿಕೊಂಡಿದ್ದವರು. ರಾಜಶೇಖರ ವಿಳಾಸ, ಜೈಮಿನಿ ಭಾರತದ ಪದ್ಯಗಳನ್ನು ರಸಭರಿತವಾಗಿ ಓದುತ್ತಿದ್ದರು. ಇವರು 'ಅಭಿನವ ಕಾಳಿದಾಸ' ರೆಂದೇ ಖ್ಯಾತರಾಗಿದ್ದ ಬಸವಪ್ಪಶಾಸ್ತ್ರಿಗಳ ಗೆಳೆಯರು. ಆದರೆ ಕೇಶವರಾಯ ರಿಗೆ ಸಾಹಿತ್ಯ ಜ್ಞಾನ ವೃದ್ಧಿಯಾಯಿತೇ ಹೊರತು ಸಂಗೀತ ಒಲಿಯಲಿಲ್ಲ. ಇವರ ಸಹಪಾಠಿಗಳಲ್ಲಿ ಮಂಡಿಪೇಟೆ ನರಹರಿ ಜೋಯಿಸರು, ಜವಳಿ ಅಂಗಡಿ ತಮ್ಮಯ್ಯನವರು ಪ್ರಮುಖರು. ನರಹರಿ ಜೋಯಿಸರೂ ಕೇವಲ ಕಾವ್ಯಾಭಿಮಾನಿಗಳಾದರು, ಆದರೆ ತಮ್ಮಯ್ಯನವರು ಮಾತ್ರ ನಂಜಪ್ಪನವರಿಂದ ಕಾವ್ಯಗಾಯನವನ್ನೂ ಕಲಿತರು.

ಕೇಶವರಾಯರ ಚಿಕ್ಕಮ್ಮ ತುಳಸಮ್ಮ ಎಂಬುವರು ಮನೆತಪ್ಪಿ ರಾಯರ ಆಶ್ರಯದಲ್ಲಿದ್ದರು. ಈಕೆ ಒಳ್ಳೆಯ ಗಾಯಕಿ. ದೇವರನಾಮ, ಹನುಮದ್ವಿಲಾಸ, ರುಕ್ಮಿಣೀ ಕಲ್ಯಾಣದ ಪದ್ಯಗಳನ್ನು ಹಾಡುತ್ತಿದ್ದರು. ಆಕೆಗೆ ಮಕ್ಕಳಿರಲಿಲ್ಲ. ಇವರನ್ನು 'ಹಾಡಿನ ತುಳಸಮ್ಮ'ನೆಂದೇ ಎಲ್ಲರೂ ಕರೆಯುತ್ತಿದ್ದರು. ಮಕ್ಕಳಿಲ್ಲದ ತುಳಸಮ್ಮನಿಗೆ ಮಗು 'ರಾಘಪ್ಪ' ಅಚ್ಚುಮೆಚ್ಚಿನ ಹುಡುಗನಾದ. ಅವರು ಹಾಡುತ್ತಿದ್ದ ಪದ್ಯಗಳು. ದೇವರ ನಾಮಗಳೇ ರಾಯರು ಗಮಕ ಕಲೆಯ ಕಡೆ ವಾಲಲು ದಾರಿಯಾಯಿತು.

ತಂದೆ ಕೇಶವರಾಯರು ವಿದ್ಯಾ ಇಲಾಖೆಯಲ್ಲಿ ಕೆಲಸದಲ್ಲಿದ್ದುದರಿಂದ ಅವರಿಗೆ ಆಗಾಗ್ಗೆ ವರ್ಗವಾಗುತ್ತಿತ್ತು. ಪಾವಗಡ, ಚಿತ್ರದುರ್ಗ, ಮಳವಳ್ಳಿ ಹೀಗೆ ಅನೇಕ ಕಡೆ ಸುತ್ತಾಡಿ ೧೯೨೨ರಲ್ಲಿ ಮೈಸೂರಿಗೆ ಬಂದರು. ಆಗ ರಾಯರಿಗೆ ಎಂಟು ವರ್ಷ. ಪ್ರಾಥಮಿಕ ಶಿಕ್ಷಣದ ನಂತರ ಶಾರದಾ ವಿಲಾಸ

ಮಾಧ್ಯಮಿಕ ಶಾಲೆಯಲ್ಲಿ ಓದುತ್ತಿದ್ದಾಗ್ಗೆ ಗೌರಿ ದೇವುಡುಶಾಸ್ತ್ರಿಗಳು ಇವರ ಗುರುಗಳು. ಗೌರಿ ದೇವುಡುರವರು ಗಮಕ ಕಲೆಯಲ್ಲಿ ನಿಷ್ಣಾತರಾಗಿದ್ದರು. ಅವರು ಹಾಡುತ್ತಿದ್ದ ಶ್ಲೋಕ, ಪದ್ಯಗಳ ಧಾಟಿ ರಾಘವೇಂದ್ರರಾಯರ ಮೇಲೆ ಸಾಕಷ್ಟು ಪ್ರಭಾವ ಬೀರಿತು. ಚಿಕ್ಕಜ್ಜಿ ತುಳಸಮ್ಮನಿಂದ ಕಲಿತ ಹಾಡುಗಳ ಪರಿಶ್ರಮದಿಂದ ಶ್ಲೋಕ ಪದ್ಯಗಳನ್ನೂ ಹಾಡಲು ಅಭ್ಯಸಿಸಿದರು. ತಂದೆ ಕೇಶವರಾಯರ ಸಹಪಾಠಿ ನರಹರಿ ಜೋಯಿಸರು ತಮ್ಮ ಮನೆಯಲ್ಲಿ ಪ್ರತಿ ದಿನ ಕಾವ್ಯವಾಚನ - ಶನಿವಾರದಂದು ಭಜನೆ ನಡೆಸುತ್ತಿದ್ದರು. ಅನೇಕ ಗಮಕಿಗಳು ಇಲ್ಲಿ ಬಂದು ಹಾಡುತ್ತಿದ್ದರು. ಹೀಗೆ ಬರುತ್ತಿದ್ದ ಗಮಕಿಗಳಲ್ಲಿ ಗಮಕಿ ರಾಮಕೃಷ್ಣಶಾಸ್ತ್ರಿಗಳೂ ಒಬ್ಬರು.

ತಂದೆಯವರ ಜೊತೆ ಈ ಎಲ್ಲ ಕಾರ್ಯಕ್ರಮಗಳಿಗೂ ಹೋಗುತ್ತಿದ್ದ ರಾಯರು ಕೇವಲ ಗ್ರಹಿಕೆಯಿಂದಲೇ ಕಾವ್ಯಗಾಯನ ಕಲೆಯನ್ನು ಕರಗತ ಮಾಡಿಕೊಂಡರು. ಜೋಯಿಸರ ಮನೆಯಲ್ಲಿ ಅನೇಕ ಬಾರಿ ಕಾವ್ಯ ವಾಚನವನ್ನೂ ಮಾಡಿದರು. ಆಗ ರಾಮಕೃಷ್ಣಶಾಸ್ತ್ರಿಗಳು ಇವರ ವಾಚನಕ್ಕೆ ವ್ಯಾಖ್ಯಾನ ಮಾಡುತ್ತಿದ್ದರು ಎಂದು ರಾಯರು ಇತ್ತೀಚೆಗೆ ಅವರನ್ನು ಭೇಟಿ ಮಾಡಿದ್ದಾಗ ನನಗೆ ತಿಳಿಸಿದರು.

ಇದಲ್ಲದೆ ಅನೇಕ ಕೀರ್ತನಕಾರರು ಮುಖ್ಯವಾಗಿ ಬೇಲೂರು ಕೇಶವದಾಸರು, ಸೋಸಲೆ ರಾಮದಾಸರು, ಹೆಬ್ಬಣಿ ಕೃಷ್ಣಶಾಸ್ತ್ರಿಗಳು ಮುಂತಾದವರ ಹರಿಕತೆಗಳನ್ನು ಕೇಳಿ ಅದರ ಸಹಾಯದಿಂದಲೂ ತಮ್ಮಲ್ಲಿ ಸುಪ್ತವಾಗಿದ್ದ ಗಮಕ ಕಲೆಯನ್ನು ಊರ್ಜಿತಗೊಳಿಸಿಕೊಂಡರು. ಮುಂದೆ ಇವರ ಗಾಯನ ವೈಖರಿಯನ್ನೂ, ಕಾವ್ಯವನ್ನೂ ಸ್ಫುಟವಾಗಿ ಓದುತ್ತಿದ್ದ ರೀತಿಯನ್ನು ಗ್ರಹಿಸಿದ ತಮ್ಮಯ್ಯನವರು ತಮಗೆ ಬೇಕಾದಂಥ ಉತ್ತಮ ಶಿಷ್ಯ ದೊರಕಿದನೆಂದು ಸಂತೋಷಿಸಿ ತಮ್ಮಲ್ಲಿದ್ದ ಸಂಪೂರ್ಣ ಗಮಕ ಕಲೆಯನ್ನು ಶಿಷ್ಯನಿಗೆ ಧಾರೆಯೆರೆದರು. ಹೀಗೆ ರಾಯರು ಅತ್ಯಂತ ಚಿಕ್ಕ ವಯಸ್ಸಿನಲ್ಲೇ ಉತ್ತಮ ಗಮಕಿಗಳ ಸಾಲಿಗೆ ಸೇರಿದರು. ಒಂದು ಕಡೆಯಂತೂ (ಮೈಸೂರಿನ ಗಮಕ ಸಮಾಜ) ಗುರುಗಳ ಜೊತೆಯಲ್ಲಿ ತಾವೂ ವಾಚನಕ್ಕೆ ಕುಳಿತು ಅಂದಿನ ಪ್ರಸಂಗದಲ್ಲಿ ತಮ್ಮಯ್ಯನವರು ಅರ್ಜುನನ ಪರ ಪದ್ಯಗಳನ್ನೂ ರಾಯರು ಸುಧನ್ವನ ಪರ (ಜೈಮಿನಿ ಭಾರತ) ಪದ್ಯಗಳನ್ನು ವಾಚಿಸಿ ಎಲ್ಲರಿಂದಲೂ 'ಭೇಷ್' ಎನಿಸಿಕೊಂಡದ್ದಲ್ಲದೇ ಅಂದು ಉಪಸ್ಥಿತರಿದ್ದ ಜೆಸ್ಟಿಸ್ ಶಂಕರನಾರಾಯಣ ರಾಯರ ಬಾಯಿಂದ 'ಗುರುವಿಗೆ ಮಿಂಚಿದ ಶಿಷ್ಯ' ಎಂಬ ಪ್ರಶಂಸೆಗೆ ಪಾತ್ರರಾದರು. ಅಂದ ಮೇಲೆ ರಾಯರ ಗಮಕ ವಾಚನದ ಶೈಲಿಯ ಬಗ್ಗೆ ಎರಡು ಮಾತಿಲ್ಲ.

ಹೀಗೆ ಶಾಲಾವಿದ್ಯಾರ್ಥಿಯಾಗಿದ್ದಾಗಲೇ ಕಾವ್ಯಗಾಯನ ಕಲೆಯನ್ನು ಕರಗತ ಮಾಡಿಕೊಂಡ ರಾಯರು ಮುಂದೆ ತಲಕಾಡು ಮಾಯಿಗೌಡ ರಿಂದಲೂ 'ಸೈ' ಎನಿಸಿಕೊಂಡರು.

## ಮೈಸೂರಿನಿಂದ ಬೆಂಗಳೂರಿಗೆ

ಮಗನಲ್ಲಿದ್ದ ಈ ಗಮಕ ಕಲೆ ಒಂದೇ ಕಡೆಗೆ ಮೀಸಲಾಗಬಾರದು, ಇದು ಪಸರಿಸಬೇಕು ಎಂದು ಮನಗಂಡ ಕೇಶವರಾಯರು ತಾವು ಹೋಗುತ್ತಿದ್ದ ಊರುಗಳಿಗೆಲ್ಲ ಮಗನನ್ನು ಕರೆದೊಯ್ಯುತ್ತಿದ್ದರು. ರಾಯರು ಸ್ಕೂಲ್ ಫೈನಲ್‌ನಲ್ಲಿದ್ದಾಗ ರಜಾದಿನಗಳಲ್ಲಿ ಒಮ್ಮೆ ಮಳವಳ್ಳಿ ಸಾಲಿಗ್ರಾಮಕ್ಕೆ ತಂದೆಯವರ ಜೊತೆ ಹೋಗಿದ್ದು ಎರಡೂ ಕಡೆಗಳಲ್ಲಿ ವಾಚನ ಮಾಡಿ ಪ್ರಶಂಸೆಗೆ ಪಾತ್ರರಾದದ್ದೇ ಅಲ್ಲದೆ ಜರತಾರಿ-ಪಂಚೆ-ಶಲ್ಯ-ಚಿನ್ನದ ಉಂಗುರಗಳೂ ಸಂಭಾವನಾ ರೂಪದಲ್ಲಿ ದೊರೆತವು. ಮುಂದೆ ತಂದೆಯ ಜೊತೆ ಬೆಂಗಳೂರಿಗೂ ಬಂದಾಗ ಅಲ್ಲಿ ರಾಯರ ಸೋದರಮಾವನ ಮೂಲಕ ಹರಿದಾಸ ಸಾಹಿತ್ಯರತ್ನರೆನಿಸಿದ್ದ ಸುಬೋಧ ರಾಮರಾಯರ ಪರಿಚಯವಾಯಿತು. ರಾಮರಾಯರ ಪ್ರಯತ್ನದಿಂದ ಕರ್ಪೂರ ಶ್ರೀನಿವಾಸರಾಯರ ಮನೆಯಲ್ಲಿ ರಾಯರ ವಾಚನ ನಡೆಯಿತು. ಅಂದು ಹರಿಕಥಾಪ್ರವೀಣ ಬೇಲೂರು ಕೇಶವದಾಸರೂ ಅಕಸ್ಮಾತ್ತಾಗಿ ಬಂದು ಆಶೀರ್ವದಿಸಿದ್ದು ರಾಯರ ಜೀವನದಲ್ಲಿ ಮರೆಯಲಾಗದ ಒಂದು ಸಂದರ್ಭ. ಇಂಥದೇ ಒಂದು ಸಂದರ್ಭದಲ್ಲಿ ರಾಯರಿಗೆ ಗೇಯ ನಾಟಕ ಕವಿ ಪು.ತಿ.ನ. ಅವರ ಪರಿಚಯವೂ ಲಭಿಸಿತು. ರಾಯರ ವಾಚನಕ್ಕೆ ಮಾರುಹೋದ ಪು.ತಿ.ನ.ಅವರು ರಾಯರನ್ನು ಮತ್ತೆ ಬೆಂಗಳೂರಿಗೆ ಕರೆಸಿಕೊಂಡು ವಾಚನ ಕಾರ್ಯಕ್ರಮ ಏರ್ಪಡಿಸಿದರು. ಆ ಸಂದರ್ಭದಲ್ಲಿ ಇವರಿಗೆ ದ.ರಾ. ಬೇಂದ್ರೆ, ತೀ.ನಂ.ಶ್ರೀ. ಹಾಗೂ ಶಿವರಾಮ ಶಾಸ್ತ್ರಿಗಳ ಪರಿಚಯ ಲಭಿಸಿತು. ಅವರುಗಳ ಸಮ್ಮುಖದಲ್ಲಿ ಅವರೆಲ್ಲರ ಕೋರಿಕೆಯಂತೆ, ಕುಮಾರವ್ಯಾಸ ಭಾರತ ಹಾಗೂ ಜೈಮಿನಿ ಭಾರತದ ಕೆಲವು ಪದ್ಯಗಳ ವಾಚನ ನಡೆಯಿತು. ಮೂವರೂ ರಾಯರ ವಾಚನ ವೈಖರಿಗೆ ಮರುಳಾಗಿದ್ದರು. ಹೀಗೆ ಕಾವ್ಯವಾಚನಕ್ಕಾಗಿ ಆಗಾಗ್ಗೆ ಬೆಂಗಳೂರಿಗೆ ಪಯಣಿಸುತ್ತಿದ್ದು ಕೊನೆಗೆ ಬೆಂಗಳೂರಿನಲ್ಲೇ ವಲಸೆ ಹೂಡುವಂತಾಯಿತು.

## ಕುವೆಂಪು-ಕೃಷ್ಣರಾಯರ ಸಂಪರ್ಕ

ರಾಯರು ಎಸ್.ಎಸ್.ಎಲ್.ಸಿ. ಮುಗಿಸಿ ಮೈಸೂರಿನ ಇಂಟರ್ ಮೀಡಿಯಟ್ ಕಾಲೇಜಿಗೆ ಸೇರಿದರು (1931-32). ಆಗಲೇ ಅವರಿಗೆ

ವಿವಾಹವೂ ಆಯಿತು. ಸೀನಿಯರ್ ಇಂಟರ್ ಓದುತ್ತಿದ್ದಾಗ ರಾಯರ ತಂದೆ ಕೇಶವರಾವ್ ನಿವೃತ್ತರಾದಾಗ ರಾಯರ ಓದಿಗೆ ಇತಿಶ್ರೀ ಹಾಡಬೇಕಾಯಿತು.

ರಾಯರು ಕಾಲೇಜಿನ ವ್ಯಾಸಂಗದಲ್ಲಿದ್ದಾಗ್ಗೆ ಕವಿ ಕುವೆಂಪುರವರು ಕನ್ನಡ ಉಪನ್ಯಾಸಕರಾಗಿದ್ದರು. ಭಾರತದ ಕೃಷ್ಣರಾಯರೆಂದೇ ಪ್ರಸಿದ್ಧರಾಗಿದ್ದ ಕೃಷ್ಣರಾಯರು ಕಾಲೇಜಿನ ಲೈಬ್ರೇರಿಯನ್. ಸಂಗೀತ ಕಲಿತು ಉತ್ತಮ ಪಿಟೀಲು ವಾದಕರಾಗಿದ್ದ ಕೃಷ್ಣರಾಯರು ಭಾರತವಾಚನ ಪ್ರವೀಣ ಸಂ. ಗೋ. ಬಿಂದೂರಾಯರ ವಾಚನದಿಂದ ಪ್ರಭಾವಿತರಾಗಿ ತಾವೂ ಗಮಕ ಕಲೆಯ ಕಡೆ ವಾಲಿದರು. ವಾಚನ-ವ್ಯಾಖ್ಯಾನಗಳೆರಡರಲ್ಲೂ ಪರಿಣತಿ ಗಳಿಸಿ ಅಪ್ರತಿಮ ಗಮಕಿಗಳೆನಿಸಿದ್ದರು.

ಪ್ರತಿದಿನ ಸಂಜೆ ಕಾಲೇಜಿನ ಕೊಠಡಿಯೊಂದರಲ್ಲಿ ಒಂದು ಘಂಟೆ ಕಾಲ ಉಚಿತವಾಗಿ ಪದ್ಯವಾಚನಕ್ರಮವನ್ನು ಹೇಳಿಕೊಡುತ್ತಿದ್ದರು. ಈ ವಿಷಯ ತಿಳಿದ ರಾಘವೇಂದ್ರರಾಯರು ಒಂದು ದಿನ ಆ ತರಗತಿಗೆ ಹೋಗಿ ತಮ್ಮ ಹಾಗೂ ತಮ್ಮ ಗುರುಗಳ ಪರಿಚಯ ತಿಳಿಸಿದರು. ವಿಷಯ ತಿಳಿದು ಸಂತೋಷಿಸಿದ ಕೃಷ್ಣರಾಯರು ರಾಯರ ಕೈಯಲ್ಲಿ ಕೆಲವು ಪದ್ಯ ಹಾಡಿಸಿ ಕೇಳಿ ಸಂತೋಷಿಸಿದರು. ಹಾಡಿಕೆಯ ಶೈಲಿಯ ಬಗ್ಗೆ ಪ್ರಶಂಸೆ ವ್ಯಕ್ತಪಡಿಸಿ ಅಲ್ಲಿದ್ದ ಇತರ ವಿದ್ಯಾರ್ಥಿಗಳನ್ನುದ್ದೇಶಿ ''ನೋಡಿ ನೀವೂ ಇವರಂತೆ ಹಾಡಲು ಕಲಿಯಬೇಕು'' ಎಂದು ತಿಳಿಸದರಂತೆ. ಅಷ್ಟೇ ಅಲ್ಲ ರಾಘವೇಂದ್ರರಾಯರಿಗೂ ತರಗತಿಗೆ ಆಗಾಗ್ಗೆ ಬರುತ್ತಿರುವಂತೆ ಆಹ್ವಾನ ನೀಡಿದರು. ಹೀಗೆ ಕೃಷ್ಣರಾಯರೂ ರಾಯರಿಗೆ ಒಂದು ವಿಧದಲ್ಲಿ ಗುರುಸ್ವರೂಪರಾದರು. ಮುಂದೆ ಒಂದೆರಡು ಬಾರಿ ಇವರ ವಾಚನಕ್ಕೆ ಕೃಷ್ಣರಾಯರು ವ್ಯಾಖ್ಯಾನವನ್ನೂ ಮಾಡಿರುವ ವಿಚಾರವನ್ನು ರಾಯರು ತಮ್ಮ ನೆನಪಿನ ಸಂಚಿಯಿಂದ ತೆಗೆದಿಡುತ್ತಾರೆ.

## ಬೆಂಗಳೂರಿನಲ್ಲಿ ಹೊಸ ಜೀವನ

ರಾಯರ ತಂದೆ ಕೇಶವರಾಯರ ಆರೋಗ್ಯ ಹದಗೆಟ್ಟು ಮಾತೇ ನಿಂತು ಹೋಗುವಂತಾಗಿತ್ತು. ಸಕಾಲದಲ್ಲಿ ಡಾ॥ ಸುಬ್ಬರಾಯರೆಂಬುವರ ಬಳಿ ಚಿಕಿತ್ಸೆ ಪಡೆದು ಔಷಧೋಪಚಾರಗಳಿಂದ ಆರೋಗ್ಯ ಸುಧಾರಿಸಿ ತಕ್ಕಮಟ್ಟಿಗೆ ಮಾತನಾಡುವಂತಾಗಿ ತಮಗೆ ಕಂಠಪಾಠವಾಗಿದ್ದ ಶ್ಲೋಕಸ್ತೋತ್ರಗಳನ್ನು ಹೇಳಿಕೊಳ್ಳುವಷ್ಟು ಗುಣಮುಖರಾದರು. ಅವರ ಅನಾರೋಗ್ಯ ನಿಮಿತ್ತ ಇನ್ನೂ ಉತ್ತಮ ಚಿಕಿತ್ಸೆ ಕೊಡಿಸುವ ಸಲುವಾಗಿ ಮೈಸೂರು ಬಿಟ್ಟು ಬೆಂಗಳೂರಿಗೆ ವಲಸೆ ಬಂದು ಮಲ್ಲೇಶ್ವರದ ೧೭ನೇ ಕ್ರಾಸ್‌ನಲ್ಲಿ ಒಂದು ಮನೆ ಮಾಡಿ ಅಲ್ಲಿ ವಸತಿ ಹೂಡಿದರು. ರಾಯರಿಗೆ

ಆಗಿನ್ನೂ ಕೆಲಸವಿರಲಿಲ್ಲ. ಸಂಸಾರ ನಿರ್ವಹಣೆಗೆ ಮೈಸೂರಿನಲ್ಲಿದ್ದ ಮನೆ ಮಾರಿ ಬಂದ ಹಣವೇ ಬಂಡವಾಳ.''ಕೂತು ತಿನ್ನಲು ಕುಡಿಕೆ ಹೊನ್ನು ಸಾಲದು''ಎಂಬ ಮಾತು ಇವರ ವಿಷಯದಲ್ಲಿ ಸತ್ಯವಾಯಿತು. ಇಟ್ಟ ಹಣ ಕರಗುತ್ತಾ ಬಂತೇ ಹೊರತು ಬೇರೆ ಸಂಪಾದನೆಯಿಲ್ಲ. ಆಗ ರಾಯರು ತಮ್ಮಲ್ಲಿದ್ದ ಗಮಕ ಕಲೆಯನ್ನು ಬಂಡವಾಳವನ್ನಾಗಿ ಮಾಡಿಕೊಂಡು ಪ್ರವಾಸ ಮಾಡಲು ನಿಶ್ಚಯಿಸಿದರು. ತಂದೆಯವರ ಅಪ್ಪಣೆ ಪಡೆದು ಬೇಲೂರು, ಚಿಕ್ಕಮಗಳೂರು, ಹಳೇಬೀಡು ಚೆನ್ನರಾಯ ಪಟ್ಟಣ ಮೊದಲಾದ ಊರುಗಳಿಗೆ ಹೋಗಿ ಅಲ್ಲಿ ವಾಚನ ಕಾರ್ಯಕ್ರಮಗಳನ್ನು ನಡೆಸಿ ಎಲ್ಲ ಕಡೆಯೂ ಅಪಾರ ಪ್ರಶಂಸೆಗೆ ಪಾತ್ರರಾದರು. ಇದು ಇವರ ಭವಿಷ್ಯವನ್ನು ನಿರ್ಧರಿಸಲು ನಾಂದಿಯಾಯಿತು. ತಂದೆಯವರ ಆದೇಶದಂತೆ ದಾಸಸಾಹಿತ್ಯವನ್ನೂ ಆಳವಾಗಿ ಅಭ್ಯಸಿಸಿದರು. ಈ ಹೊತ್ತಿಗೆ ಇವರಿಗೆ ತಾತ್ಕಾಲಿಕವಾಗಿ ಪ್ರಾಥಮಿಕ ಶಾಲೆಯೊಂದರಲ್ಲಿ ಅಧ್ಯಾಪಕ ಕೆಲಸವೂ ದೊರೆಯಿತು. ಮುಂದೆ ಮಾವಳ್ಳಿಯ ಪ್ರಾಥಮಿಕ ಶಾಲೆಯಲ್ಲಿ ಖಾಯಂ ಉದ್ಯೋಗವೂ ಲಭಿಸಿದ ಮೇಲೆ ಮನೆಯನ್ನು ಮಲ್ಲೇಶ್ವರದಿಂದ ಚಾಮರಾಜಪೇಟೆಗೆ ಬದಲಾಯಿಸಿದರು. ಇದು ರಾಯರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಸಂಪರ್ಕಹೊಂದಲು ಸಹಕಾರಿಯಾಯಿತು. ಚಾಮರಾಜಪೇಟೆ ಯಲ್ಲಿದ್ದ ಸುಬೋಧ ರಾಮರಾಯರು ಈಗಾಗಲೇ ರಾಯರಿಗೆ ಸುಪರಿಚಿತರಾಗಿದ್ದು ಅವರ ವಾಚನವನ್ನು ಕೇಳಿದ್ದರು. ರಾಯರು ಬೆಂಗಳೂರಿಗೆ ಬಂದಮೇಲೆ ಅವರ ಮೊದಲ ಕಾರ್ಯಕ್ರಮ ಸುಬೋಧ ರಾಮರಾಯರು ನಡೆಸುತ್ತಿದ್ದ ರಾಮೋತ್ಸವದ ಸಂದರ್ಭದಲ್ಲೇ ನಡೆಯಿತು. ಇದೂ ಅಲ್ಲದೆ ಇನ್ನೂ ಕೆಲವರ ಮನೆಯಲ್ಲಿ ಮುಖ್ಯವಾಗಿ ಗಮಕ ಕಲಾಪ್ರೇಮಿ ವೀಣಾರಾಜಾರಾಯರ ಮನೆಯಲ್ಲಿ ಅವರ ಮಿತ್ರಗೋಷ್ಠಿಯ ಸಮ್ಮುಖದಲ್ಲಿ ವಾಚನ ನಡೆಯಿತು. ಈಗಾಗಲೇ ಆಗಾಗ್ಗೆ ಪರಿಷತ್ತಿಗೂ ಹೋಗಿ ಬರುತ್ತಿದ್ದ ರಾಯರನ್ನು ಒಬ್ಬ'ಗಮಕಿ'ಎನ್ನುವ ವಿಷಯ ಪರಿಷತ್ತಿನ ಕೆಲವು ಹಿರಿಯರ ಕಿವಿಗೂ ಬಿತ್ತು.

## ಬಿಂದೂರಾಯರ ಅನುಗ್ರಹ

ಆಚಾರ್ಯ ಡಿ. ವಿ. ಜಿ. ಆಗ ಪರಿಷತ್ತಿನ ಉಪಾಧ್ಯಕ್ಷರು. ಪರಿಷತ್ತಿನಲ್ಲಿ ಗಮಕ ವಿಭಾಗವನ್ನು ತೆರೆದು ಬಿಂದೂರಾಯರನ್ನು ಪ್ರಪ್ರಥಮ ಗಮಕ ಶಿಕ್ಷಕರನ್ನಾಗಿ ನೇಮಿಸಿದ್ದರು. ಪ್ರತಿ ದಿನ ಬೆಳಿಗ್ಗೆ ೮ ರಿಂದ ೯ ರವರೆಗೆ ಗಮಕಾಸಕ್ತ ವಿದ್ಯಾರ್ಥಿಗಳಿಗೆ ಪಾಠ. ಇದೇ ಸಂದರ್ಭದಲ್ಲಿ ಚಾಮರಾಜಪೇಟೆ ಶ್ರೀ ರಾಮೇಶ್ವರ ದೇವಸ್ಥಾನದಲ್ಲಿ ಸಂಜೆ ಅವರ ವಾಚನ. ವಾಚನಕ್ಕೆ ಹೋದ

ರಾಯರು ಕಾರ್ಯಕ್ರಮ ಮುಗಿದ ನಂತರ ಅವರಿಗೆ ನಮಸ್ಕರಿಸಿ ತಮ್ಮ ಪರಿಚಯ ತಿಳಿಸಿದರು.

ಬಿಂದೂರಾಯರು ಈಗಾಗಲೇ ಒಮ್ಮೆ ರಾಯರನ್ನು ನೋಡಿದ್ದರಿಂದ ಬೇಗನೆ ಗುರುತು ಹಿಡಿದು ಸಂತೋಷ ವ್ಯಕ್ತಪಡಿಸಿದ್ದೇ ಅಲ್ಲದೆ ರಾಯರ ಗಮಕ ಕಲಾ ಸಾಧನೆಯ ಬಗ್ಗೆ ತಮ್ಮ ಪ್ರಶಂಸೆ ವ್ಯಕ್ತಪಡಿಸಿ, ಬೆಂಗಳೂರಲ್ಲಿ ತಾವು ಇಳಿದುಕೊಂಡಿದ್ದ ನೆಂಟರ ಮನೆಗೆ ರಾಯರನ್ನು ಕರೆದೊಯ್ದರು. ಮನೆ ತೋರಿಸಿ ''ಬೆಳಿಗ್ಗೆ ಬಾ. ನಿನ್ನ ಬಾಯಲ್ಲಿ ಕೆಲವು ಪದ್ಯ ಕೇಳುವ ಆಸೆ ನನಗೆ, ಆಮೇಲೆ ನಿನ್ನ ಮನೆ ತೋರಿಸು ನೀಲಕಂಠನನ್ನು ನೋಡಬೇಕು''ಎಂದರು. ನೀಲಕಂಠರಾವ್ ಎಂದರೆ ರಾಯರ ತಂದೆ. ಅವರಿಗೆ ಮೊದಲೇ ನೀಲಕಂಠರಾವ್ ಎಂಬ ಹೆಸರಿದ್ದು ಬೇಲೂರಿನಲ್ಲಿ ಅಧ್ಯಾಪಕ ವೃತ್ತಿಯಲ್ಲಿದ್ದಾಗ ಕೇಶವರಾವ್ ಎಂದು ಸೇರಿಸಿಕೊಂಡು ಮೈಸೂರು ನೀಲಕಂಠರಾವ್ ಕೇಶವರಾವ್ ಆದರು.

ಮಾರನೇ ದಿನ ಭಾನುವಾರವಾದ್ದರಿಂದ ಬಿಂದೂರಾಯರ ಇಚ್ಛೆಯಂತೆ ರಾಯರು ಅವರ ಮನೆಗೆ ಹೋದರು. ಬಿಂದೂರಾಯರ ಆದೇಶದಂತೆ ಕುಮಾರವ್ಯಾಸ ಭಾರತದಿಂದ ''ವಿದುರಾತಿಥ್ಯ''ದ ಭಾಗವನ್ನು ವಾಚನ ಮಾಡಿದರು. ಬಿಂದೂರಾಯರಿಗೆ ಮಹದಾನಂದವಾಗಿ ''ರಾಘಣ್ಣಾ ಗಮಕ ಶಾರದೆ ನಿನಗೆ ಸಂಪೂರ್ಣವೊಲಿದಿದ್ದಾಳೆ. ಎಂದಿಗೂ ಅವಳ ಕೈ ಬಿಡಬೇಡ''ಎಂದರು. ರಾಯರೊಡನೆ ಮನೆಗೆ ಬಂದ ಬಿಂದೂರಾಯರು ''ನೀಲಕಂಠರಾವ್ ನಿನ್ನ ಮಗ ತುಂಬಾ ಚೆನ್ನಾಗಿ ಹಾಡ್ತಾನಪ್ಪ, ನಮ್ಮ ಹೆಸರನ್ನುಳಿಸುತ್ತಾನೆ''ಎಂದು ಹೇಳಿ ರಾಯರನ್ನು ಆಶೀರ್ವದಿಸಿ ತೆರಳಿದರು. ಹೀಗೆ ರಾಯರು ಬಿಂದೂರಾಯರ ಸಂಪೂರ್ಣ ಅನುಗ್ರಹಕ್ಕೆ ಪಾತ್ರರಾದರು.

## ಕಳಲೆ ಸಂಪತ್ಕುಮಾರಾಚಾರ್ಯರ ಸಂಪರ್ಕ

ಗಮಕ ಭಗೀರಥದಲ್ಲಿ ಬಿಂದೂರಾವ್, ಕೃಷ್ಣರಾಯರ ಸಂಪರ್ಕ ಈಗಾಗಲೇ ಲಭಿಸಿ ಮೂರನೆಯವರಾದ ಕಳಲೆ ಸಂಪತ್ಕುಮಾರಾಚಾರ್ಯರ ವಾಚನ ಕೇಳಲು ತವಕಿಸುತ್ತಿದ್ದರು. ಇಬ್ಬರೂ ಮೈಸೂರಿನ ಗಮಕಿಗಳು. ವೀಣೆ ರಾಜಾರಾಯರ ಪರಮ ಮಿತ್ರರು. ಕೃಷ್ಣರಾಯರ ವಾಚನವನ್ನು ಕೇಳಿ ತಾವೂ ಗಮಕ ಕಲೆಗೆ ಜೋತು ಬಿದ್ದವರು. ಹಿಂದೂಸ್ತಾನೀ ರಾಗಗಳನ್ನು ಅಳವಡಿಸಿ ವಾಚನ ಮಾಡುವಲ್ಲಿ ನಿಷ್ಣಾತರೆನಿಸಿದ್ದರು. ವಿದ್ಯಾರ್ಥಿಯಾಗಿದ್ದಾಗ ರಾಯರು ಆಚಾರ್ಯರ ವಾಚನವನ್ನು ಕೇಳಿದ್ದರಂತೆ. ಆಚಾರ್ಯರಿಗೂ ರಾಯರು ತಮ್ಮಯ್ಯನವರ ಶಿಷ್ಯರೆಂಬುದು ತಿಳಿದಿತ್ತು. ಬೆಂಗಳೂರಿಗೆ ರಾಯರು ಬಂದ ಮೇಲೆ ಆಚಾರ್ಯರ ಗೆಳೆತನ ಲಭಿಸಿತು. ಮನೆಗೂ

ಆಹ್ವಾನಿಸುತ್ತಿದ್ದರು. ಒಮ್ಮೆ ರಾಯರ ಗೆಳೆಯರೂ ಬಿಂದೂರಾಯರ ಶಿಷ್ಯರೂ ಗಮಕಿ ರಾಮಕೃಷ್ಣ ಶಾಸ್ತ್ರಿಗಳ ಸಂಬಂಧಿಕರೂ ಆದ ಬಾಳಗಂಜಿ ನಂಜುಂಡಯ್ಯನವರು ಆಚಾರ್ಯರ ವಾಚನ ಕೇಳುವ ಅಪೇಕ್ಷೆ ವ್ಯಕ್ತಪಡಿಸಿದಾಗ ರಾಯರೇ ಅವರನ್ನು ಆಚಾರ್ಯರ ಮನೆಗೆ ಕರೆದೊಯ್ದು ವಾಚನ ಕೇಳಿಸಿದರಂತೆ. ಅಷ್ಟು ನಿಕಟವಾಗಿತ್ತು ರಾಯರ ಆಚಾರ್ಯರ ಸಂಬಂಧ. ಆಚಾರ್ಯರಿಗೆ ರಾಯರ ಬಗ್ಗೆ ತುಂಬಾ ಗೌರವವಿತ್ತು. ಅಲ್ಲದೆ ಗಮಕ ಕಲೆ ಅವರಿಂದ ಉಚ್ಛ್ರಾಯ ಸ್ಥಿತಿಗೆ ತಲುಪುತ್ತದೆಂಬ ಭರವಸೆಯೂ ಇತ್ತು. ಅದನ್ನು ಆಚಾರ್ಯರು ತಮ್ಮ ಕೊನೆಯ ದಿನಗಳಲ್ಲಿ ರಾಯರನ್ನು ಬರಮಾಡಿಕೊಂಡು ತಮ್ಮ ಮನಸ್ಸಿನಲ್ಲಿದ್ದ ವಿಷಯವನ್ನು ವ್ಯಕ್ತಪಡಿಸಿದರು. ''ರಾಘವೇಂದ್ರರಾವ್ ನಾವಿಬ್ಬರೂ ಮೈಸೂರಿನ ಗಮಕಿಗಳು. ಈ ಪರಂಪರೆಯಿಂದ ಬೆಂಗಳೂರು ಹಾಗೂ ಕರ್ನಾಟಕದಲ್ಲಿ ಬೆಳೆಯುತ್ತಿರುವ ಕಾವ್ಯ ಪ್ರೇಮಿಗಳ ಸಂಖ್ಯೆಯನ್ನೂ ಯೋಗ್ಯರಾದ ಶಿಷ್ಯರನ್ನು ಬೆಳೆಸಿಕೊಂಡು ಹೋಗುವುದು ನಿಮ್ಮ ಭಾರ. ನೀವು ಈ ಜವಾಬ್ದಾರಿಯನ್ನು ವಹಿಸುವಿರೆಂಬ ನಂಬಿಕೆ ನನಗಿದೆ'' ಎಂದು ರಾಯರ ಎರಡೂ ಕೈಗಳನ್ನೂ ಹಿಡಿದುಕೊಂಡು ಕಳಕಳಿಯಿಂದ ಮನವಿ ಮಾಡಿಕೊಂಡರಂತೆ. ರಾಯರೂ ಅವರ ಮನವಿಗೆ ಸ್ಪಂದಿಸಿ ನಿಮ್ಮಂಥವರ ಅನುಗ್ರಹ-ಆಶೀರ್ವಾದವಿದ್ದರೆ ಇದು ಏನು ಕಷ್ಟವಾಗಲಾರದು. ಖಂಡಿತ ನಿಮ್ಮ ಸಂಕಲ್ಪವನ್ನು ಈಡೇರಿಸುತ್ತೇನೆ'' ಎಂದು ರಾಯರು ಆಶ್ವಾಸನೆ ನೀಡಿದರಂತೆ. ಸಮಾಧಾನದ ನಿಟ್ಟುಸಿರು ಬಿಟ್ಟ ಆಚಾರ್ಯರು ಮುಂದೆ ಕೆಲವು ದಿನಗಳಲ್ಲೇ ಇಹಲೋಕ ವ್ಯಾಪಾರ ಮುಗಿಸಿದರು. ಈ ವಿಚಾರವನ್ನು ಹೇಳುವಾಗ ರಾಯರು ಕೆಲವು ಕ್ಷಣ ಅಂತರ್ಮುಖಿಗಳಾಗುತ್ತಾರೆ. ಅವರ ಹೃದಯ ತುಂಬಿ ಬರುತ್ತದೆ.

## ಕನ್ನಡ ಸಾಹಿತ್ಯ ಪರಿಷತ್ತಿಗೆ

ಪರಿಷತ್ತಿನ ಗಮಕ ಶಿಕ್ಷಕರಾಗಿ ಗಮಕ ಭಗೀರಥರು ತಮ್ಮ ಕಾರ್ಯ ನಿರ್ವಹಿಸಿದ ಮೇಲೆ ಭಗೀರಥದಲ್ಲಿ ಕೊನೆಯವರಾದ ಸಂಪತ್ಕುಮಾರಾ ಚಾರ್ಯರ ನಂತರ ತೆರವಾಗಿದ್ದ ಸ್ಥಾನವನ್ನು ತುಂಬಿದವರು ರಾಘವೇಂದ್ರ ರಾಯರು.

ಈ ಹಿಂದೆ ತಿಳಿಸಿದ್ದಂತೆ ರಾಯರು ವೀಣಾರಾಜಾರಾಯರ ಮನೆಯಲ್ಲಿ ಏರ್ಪಡಿಸಿದ್ದ ಮಿತ್ರಕೂಟದಲ್ಲಿ ವಾಚನ ಮಾಡಿದಾಗ ಅಲ್ಲಿಗೆ ಸಿ. ಕೆ. ವೆಂಕಟರಾಮಯ್ಯ, ಎಂ. ವಿ. ಸೀತಾರಾಮಯ್ಯ ಅವರುಗಳು ವಿಶೇಷವಾಗಿ ಆಗಮಿಸಿದ್ದರು. ಇದು ರಾಯರನ್ನು ಇವರುಗಳಿಗೆ ಪರಿಚಯಿಸಲೆಂದೇ ರಾಜಾರಾಯರು ಏರ್ಪಡಿಸಿದ್ದ ಕಾರ್ಯಕ್ರಮ.

''ಜೈಮಿನಿ ಭಾರತ''ದಲ್ಲಿನ ಸೀತಾಪರಿತ್ಯಾಗದ ಭಾಗ ವಾಚನ. ವಾಚನದ ಶೈಲಿ ಇಬ್ಬರಿಗೂ ಅಮಿತಾನಂದವನ್ನುಂಟುಮಾಡಿತು. ಪರಿಣಾಮವಾಗಿ ಮುಂದೆ ಕೆಲವೇ ದಿನಗಳಲ್ಲಿ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಇವರ ವಾಚನವನ್ನು ಎಂ. ವಿ. ಸೀ ಅವರು ಏರ್ಪಡಿಸಿದರು. ಹೀಗೆ ರಾಯರು ಗಮಕಿಯಾಗಿ ವಿಧ್ಯುಕ್ತವಾಗಿ ಪರಿಷತ್ತಿಗೆ ಪ್ರವೇಶ ಮಾಡಿ ಪರಿಷತ್ತಿನ ಸದಸ್ಯರಾದರು. ಮುಂದೆ ಗಮಕ ತರಗತಿಯ ಅಧ್ಯಾಪಕರಾಗಿ ಗಮಕ ವಿಭಾಗದ ಸಂಚಾಲಕರೂ ಆದರು. ಈ ಹೊತ್ತಿಗಾಗಲೇ ರಾಯರ ವಾಚನಗಳನ್ನು ಕೇಳಿದ್ದ ಆಚಾರ್ಯ ಬಿ. ಎಂ. ಶ್ರೀಕಂಠಯ್ಯನವರು ಉತ್ತರ ಕರ್ನಾಟಕದ ಭಾಗಗಳಲ್ಲಿ ಗಮಕ ಪ್ರಚಾರ ಕಾರ್ಯಗಳನ್ನು ನಡೆಸಲು ರಾಯರನ್ನು ನೇಮಿಸಿದರು. ಹೀಗೆ ಕೇವಲ ಮೈಸೂರು ಬೆಂಗಳೂರಿಗೆ ಸೀಮಿತವಾಗಿದ್ದ ಗಮಕ ಕಲೆ ಉತ್ತರ ಕನ್ನಡದ ಭಾಗಗಳಿಗೂ ಪಸರಿಸಲು ಅನುಕೂಲವಾಯಿತು.

## ಗಮಕಿ ಪದ್ಯರಚನೆ

ಈ ಹೊತ್ತಿಗಾಗಲೇ ರಾಯರ ಸಾಹಿತ್ಯಕೃಷಿಯೂ ಬೆಳೆದು ಮಂತ್ರಾಲಯ ಪ್ರಭುಗಳ ಅನುಗ್ರಹದಿಂದ ''ರಾಘವೇಂದ್ರ ಗುರುಕೀರ್ತನ ಮಾಲೆ'' ಎಂಬ ಶೀರ್ಷಿಕೆಯಲ್ಲಿ 'ರಘುವರ'ನ ಅಂಕಿತದೊಂದಿಗೆ ೪೮ ಕೃತಿಗಳ ರಚನೆಯಾಗಿತ್ತು. ಅಲ್ಲದೆ ''ವೆಂಕಟೇಶ ವಿಜಯ''ವೆಂಬ ಕಾವ್ಯ ರಚನೆಯೂ ಆಗಿತ್ತು. ಈ ಕಾವ್ಯ ರಚನೆಯಾದದ್ದೂ ಒಂದು ಸ್ವಾರಸ್ಯಕರ ಘಟನೆಯೇ.

ನವರಾತ್ರಿಯ ಒಂದು ಸಂದರ್ಭ: ಚಾಮರಾಜಪೇಟೆ ಮಾಧ್ವ ಸಂಘದಲ್ಲಿ ಒಂಭತ್ತು ದಿನಗಳೂ ರಾಯರ ವಾಚನ. ಸುಬೋಧ ರಾಮರಾಯರಾದಿಯಾಗಿ ಅನೇಕ ಗಣ್ಯರೂ ಪ್ರತಿದಿನ ತಪ್ಪದೇ ಬರುತ್ತಿದ್ದರು. ರಾಮಾಯಣ, ಭಾರತಗಳಿಂದ ಆಯ್ದ ಪ್ರಸಂಗಗಳಿಂದ ವಾಚನ ಏಳು ದಿನಗಳವರೆಗೂ ನಡೆಯಿತು. ಇನ್ನೂ ೩ ದಿನಗಳ ವಾಚನವಿತ್ತು. ವಿಜಯದಶಮಿಯ ದಿನ 'ವೆಂಕಟೇಶ ಕಲ್ಯಾಣ' ವಾಚನವಾದರೆ ಒಪ್ಪುವುದು ಎಂದು ಸುಬೋಧ ರಾಮರಾಯರು ಅಭಿಪ್ರಾಯಪಟ್ಟರು. ಆದರೆ ರಾಯರ ಬಳಿ ಕಾವ್ಯ ಲಭ್ಯವಿರಲಿಲ್ಲ. ಅದನ್ನೇ ತಿಳಿಸಿದರು. ಗ್ರಂಥ ಒದಗಿಸಿದರೆ ವಾಚನ ಮಾಡುವುದಾಗಿ ತಿಳಿಸಿದರು ರಾಯರು. ಆದರೆ ರಾಮರಾಯರ ಸಂಕಲ್ಪವೇ ಬೇರೆ. ರಾಯರು ಸ್ವತಃ ಕವಿಯೂ ಆಗಿರುವ ವಿಚಾರ ಇವರಿಗೆ ತಿಳಿದಿತ್ತು. ಮನಸ್ಸು ಮಾಡಿದರೆ ನೀವೇ ಕಾವ್ಯರಚನೆ ಮಾಡಿ ವಾಚಿಸಬಹುದು ಎಂದು ಸೂಚಿಸಿಯೇ ಬಿಟ್ಟರು. ಸಂಘದ ಅಧ್ಯಕ್ಷರೂ ಇದಕ್ಕೆ

ದನಿಗೂಡಿಸಿದರು. ರಾಯರು ಒಪ್ಪಲೇಬೇಕಾಯಿತು. ಮಾರನೇ ದಿನ 'ಸರಸ್ವತೀ ಆರಾಧನೆ' ಮಾಡಿ ತಮ್ಮ ಗೆಳೆಯರಾಗಿದ್ದ ಹರಿಕಥಾ ವಿದ್ವಾನ್ ಹರಿಸರ್ವೋತ್ತಮದಾಸರಲ್ಲಿಗೆ ಹೋಗಿ ಬಿನ್ನವಿಸಿಕೊಂಡರು. ''ದಾಸರೇ ಈಗ ನೀವು ವೈಶಂಪಾಯನ ನಾನು ಜನಮೇಜಯ. ಶ್ರೀನಿವಾಸ ಕಲ್ಯಾಣದ ಕಥೆ ಈಗ ನೀವು ವಿಸ್ತರಿಸಬೇಕು'' ಎಂದರು. ಸರಿ ದಾಸರು ತಮ್ಮ ಕಡತಗಳನ್ನು ತೆಗೆದು ಕಥೆ ಆರಂಭಿಸಿಬಿಟ್ಟರು. ರಾಯರು ತಮಗೆ ಬೇಕಾದ ಅಂಶಗಳನ್ನು ಟಿಪ್ಪಣಿ ಮಾಡಿಕೊಂಡರು. ಅಷ್ಟಮಿ, ನವಮಿ, ದಶಮಿ ಈ ಮೂರು ದಿನಗಳಲ್ಲಿ ರಾಯರ ಸತತ ಶ್ರಮದಿಂದ ವೆಂಕಟೇಶ ವಿಜಯ ಸಿದ್ಧವಾಯಿತು. ಭಾಮಿನೀ ಷಟ್ಪದಿಯಲ್ಲಿಯೇ ಕಾವ್ಯರಚನೆ. ವಾಚನವೂ ಸಾಂಗವಾಗಿ ನಡೆದು ಎಲ್ಲರ ಮನ್ನಣೆಗೆ ಪಾತ್ರವಾಯಿತು. ರಾಯರು ವ್ಯಾಸರಾಯಮಠಕ್ಕೆ ಸೇರಿದವರು. ಆಗ ಮಠಾಧೀಶರಾಗಿದ್ದ ಶ್ರೀ ಶ್ರೀ ವಿದ್ಯಾ ಪ್ರಸನ್ನ ತೀರ್ಥರಿಗೆ ರಾಯರ ಬಗ್ಗೆ ಚೆನ್ನಾಗಿ ತಿಳಿದಿತ್ತು. ಅವರ ವಿಷಯದಲ್ಲಿ ಗೌರವವೂ ಇತ್ತು. ಅವರ ಅನುಜ್ಞೆಯಂತೆ ಮುಂದೆ ''ವ್ಯಾಸರಾಯ ಮಹಾತ್ಮೆ''ಯನ್ನು ಪದ್ಯರೂಪದಲ್ಲಿ ರಚಿಸಿ ಗುರುಗಳಿಗೆ ಸಮರ್ಪಿಸಿದರು. ಹೀಗೆ ಕವಿಗಳೂ ಆಗಿದ್ದ ರಾಯರು ಗಮಕ ಕಲೆಯ ಅನುಕೂಲಕ್ಕಾಗಿ 'ಗಮಕಿ'ಎಂಬ ಪದ್ಯಮಾಲಿಕೆಯನ್ನೂ ಕಂದ ಪದ್ಯವಾಗಿ ರಚಿಸಲು ಸಂಕಲ್ಪಿಸಿದರು. ಇದರಲ್ಲಿ ಗಮಕ ಕಲೆಯ ಸ್ವರೂಪ-ಲಕ್ಷಣ-ಮುಖ್ಯ ಸೂತ್ರಗಳ ಪರಿಚಯ ನೀಡಿ ಒಂದು ಪದ್ಯ ಶತಕ ರಚಿಸಲು ತೊಡಗಿದರು. ಇದರ ವಿಶೇಷವೆಂದರೆ ಪ್ರತಿಪದ್ಯದ ಕೊನೆಯಲ್ಲಿ 'ಗಮಕಿ' ಎಂಬ ಶಬ್ದ ಪ್ರಯೋಗದಿಂದ ಒಂದಕ್ಷರ ಲೋಪವಾಗಿ ಕಂದ ಪದ್ಯದ ಛಂದಸ್ಸಿಗೆ ದೋಷವುಂಟಾಗುವುದು ಎಂದೆನಿಸಿ ಸಲಹೆಗಾಗಿ ಹಸ್ತಪ್ರತಿಯನ್ನು ತೀ. ನಂ. ಶ್ರೀಯವರಿಗೆ ತೋರಿಸಿದಾಗ ಅವರು 'ಗಮಕಿ' ಬದಲಿಗೆ 'ಗಮಕೀ'ಎಂದರೆ ಲೋಪವಾಗುವುದಿಲ್ಲ. ಹಾಗೇ ಬರೆಯಿರಿ ಎಂದರಂತೆ. ಹೀಗೆ ರಾಯರಿಂದ ಗಮಕ ಕಲೆಗೆ ಅತ್ಯಂತ ಉಪಯುಕ್ತವಾದ 'ಗಮಕಿ' ಪದ್ಯ ಶತಕ ರಚನೆಯಾಯಿತು. ಮುಂದೆ ಗದ್ಯದಲ್ಲಿ 'ಕಾವ್ಯಗಾಯನ ಕಲಾ ಸಂಗ್ರಹ' ಅಲ್ಲದೆ 'ಗಮಕ ಗೀತೆಗಳು' ಸಹ ಇವರ ಲೇಖನಿಯಿಂದ ಉದ್ಭವಿಸಿತು.

## ಗಮಕ ಕಲೆಯ ಪುನರುಜ್ಜೀವನ

ರಾಘವೇಂದ್ರರಾಯರ ಹೆಸರಿನ ಹಿಂದೆ ಅಂಟಿಕೊಂಡ 'ಗಮಕಿ' ಎಂಬ ಬಿರುದು ಎಷ್ಟು ಕೆಲಸ ಮಾಡಿತೆಂದರೆ ಅದನ್ನು ಅವರ ಬಾಯಿಂದಲೇ ಕೇಳಬೇಕು. ಅಧ್ಯಾಪಕ ವೃತ್ತಿಯಲ್ಲಿದ್ದ ರಾಯರು ಮೊದಲು ಆ ಕೆಲಸ ಬಿಟ್ಟು ವಿಮಾನ ಕಾರ್ಖಾನೆಯಲ್ಲಿ ಕೆಲಸಕ್ಕೆ ಸೇರಿದ್ದರು. ಅದೂ ಸರಿಹೋಗದೆ ಮತ್ತೆ ವಿದ್ಯಾ ಇಲಾಖೆಗೇ ಹಿಂದಿರುಗಿ ಪರೀಕ್ಷಾ ವಿಭಾಗದಲ್ಲಿ ಗುಮಾಸ್ತರಾಗಿ

ಸೇರಿದರು. ಆ ಕಾಲದಲ್ಲಿ ಇವರಿಗೆ ಎ. ಸಿ. ದೇವೇಗೌಡರು ವಿದ್ಯಾಧಿಕಾರಿಗಳು. ಪರಿಷತ್ತಿನ ಗಮಕ ವಿಭಾಗದ ಸಂಚಾಲಕರಾಗಿದ್ದ ರಾಯರು ಮಾಸ್ತಿಯವರ ಆದೇಶದಂತೆ ಉತ್ತರ ಕರ್ನಾಟಕದ ಪ್ರವಾಸಕ್ಕೆ ಕೆಲವು ದಿನಗಳ ರಜೆ ಹಾಕಿ ಹೋಗಬೇಕಾಯಿತು. ಆದರೆ ನಿಗದಿತ ಅವಧಿಗಿಂತ ಹೆಚ್ಚು ಕಾಲ ಪ್ರವಾಸ ಮಾಡಬೇಕಾಗಿ ಬಂದಾಗ ಹೆಚ್ಚುವರಿ ರಜೆಗಾಗಿ ಅರ್ಜಿ ಹಾಕಿದ್ದರಂತೆ. ಈ ಹೊತ್ತಿಗಾಗಲೇ ರಾಯರ ಪ್ರತಿಭೆಯ ಬಗ್ಗೆ ದೇವೇಗೌಡರಿಗೆ ತಿಳಿದಿತ್ತು. ರಾಯರನ್ನು ಕಂಡು ತಮ್ಮ ಪ್ರಶಂಸೆ ವ್ಯಕ್ತಪಡಿಸಿ ರಜೆ ಮಂಜೂರು ಮಾಡಿದರಂತೆ. ಮುಂದೆ ದೇವೇಗೌಡರು ವಿದ್ಯಾ ಇಲಾಖಾ ನಿರ್ದೇಶಕರಾಗಿದ್ದಾಗ ರಾಯರು ಮನೆಕಟ್ಟಲು ಮುಂಗಡ ಸಾಲವನ್ನು ವಿಶೇಷವಾಗಿ ಒದಗಿಸಿದರಂತೆ. ಇದೆಲ್ಲ 'ಗಮಕಿ' ಹೆಸರಿನ ಪ್ರಭಾವ ಎನ್ನುತ್ತಾರೆ ರಾಯರು.

ರಾಯರು ಬರೆದ 'ಗಮಕಿ' ಪುಸ್ತಕವನ್ನು ಅವಲೋಕಿಸಿದ ಪರಿಷತ್ತಿನ ಗಮಕ ಸಮಿತಿಯವರು ರಾಯರು ಗಮಕ 'ಪ್ರೌಢ' ತರಗತಿಯನ್ನು ನಡೆಸಲು ಶಿಫಾರಸು ಮಾಡಿದರು. ಮತ್ತೊಬ್ಬ ಶಿಕ್ಷಕರಾಗಿದ್ದ ಎಂ. ಎಸ್. ಚಂದ್ರಶೇಖರಯ್ಯನವರು 'ಪ್ರವೇಶ' ತರಗತಿಯ ಅಧ್ಯಾಪಕರಾಗಿ ನೇಮಕವಾಗಿದ್ದರು.

ರಾಯರು ಅಧ್ಯಾಪಕರಾದ ಮೇಲೆ ತರಗತಿಗೆ ಬರುವ ವಿದ್ಯಾರ್ಥಿಗಳ ಮಟ್ಟ ಅಳೆಯಲು ಒಂದೂ ರೂಪರೇಶೆಯನ್ನು ತಯಾರಿಸಿ ಅದರ ತಖ್ತೆಯನ್ನು ಸಮಿತಿಯ ಮುಂದಿಟ್ಟು ಅನುಮತಿ ಪಡೆದು ಅದರಂತೆ ತರಗತಿಗೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವ ವಿಧಾನ ಆರಂಭಿಸಿದರು. ಅಲ್ಲದೆ ೩ ತಿಂಗಳ ಶಿಕ್ಷಣದ ಅವಧಿಯನ್ನೂ ೬ ತಿಂಗಳಿಗೆ ವಿಸ್ತರಿಸಲು ಶಿಫಾರಸು ಮಾಡಿದರು. ಮೌಖಿಕ-ಲಿಖಿತ ಪರೀಕ್ಷೆ ನಡೆಸಲೂ ತಯಾರಿ ನಡೆಸಿದರು.

ಇದೇ ಸಮಯಕ್ಕೆ ಸೊಲ್ಲಾಪುರದಲ್ಲಿ ಸಾಹಿತ್ಯ ಸಮ್ಮೇಳನ ನಡೆಸುವ ಏರ್ಪಾಡಾಗಿದ್ದು ಅದಕ್ಕೆ ಎಂ. ಆರ್. ಶ್ರೀನಿವಾಸಮೂರ್ತಿಗಳನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಚುನಾಯಿಸಲಾಗಿತ್ತು. ಸಮ್ಮೇಳನದಲ್ಲಿ ನಡೆಸುವ ವಿವಿಧ ಗೋಷ್ಠಿಗಳ ಬಗ್ಗೆಯೂ ಪ್ರಕಟವಾಗಿದ್ದು ಅಲ್ಲಿ ಗಮಕಕ್ಕೆ ಯಾವ ಸ್ಥಾನವೂ ಇರಲಿಲ್ಲ. ರಾಯರು ಇದನ್ನು ನೋಡಿ ಅಧ್ಯಕ್ಷರಾಗಿದ್ದ ಉತ್ತಂಗಿ ಚೆನ್ನಪ್ಪನವರ ಮನವೊಲಿಸಿ ಗಮಕ ಗೋಷ್ಠಿಯನ್ನು ಸಮ್ಮೇಳನದಲ್ಲಿ ಸೇರಿಸಲು ಪ್ರಯತ್ನಿಸಿ ಸಫಲರಾದರು. ಹೆಸರಾಂತ ನಾಟಕಕಾರ, ನಟ ಹಾಗೂ 'ಗಮಕ ಕಲಾನಿಧಿ' ಜೋಳದ ರಾಶಿ ದೊಡ್ಡಣ್ಣ ಗೌಡರು ನಾಟಕ ಹಾಗೂ ಗಮಕ ಗೋಷ್ಠಿಯ ಅಧ್ಯಕ್ಷರಾದರು. ಹೀಗೆ ರಾಯರ ಸತತ ಪ್ರಯತ್ನದಿಂದ ಮುಂದಿನ ಸಮ್ಮೇಳನಗಳಲ್ಲಿ ಗಮಕಗೋಷ್ಠಿಗಳಿಗೂ ಆದ್ಯತೆ ನೀಡುವಂತಾಯಿತು.

ರಾಘವೇಂದ್ರ ರಾಯರು ಗಮಕ ತರಗತಿಯನ್ನು ನಡೆಸುವ ರೀತಿ, ಅದರಲ್ಲಿನ ಶಿಸ್ತು-ಸಂಯಮವನ್ನು ಆಗಾಗ್ಗೆ ಅವಲೋಕಿಸುತ್ತಿದ್ದ ಪರಿಷತ್ತಿನ ಅಧಿಕಾರಿಗಳು ಬಹಳವಾದ ತೃಪ್ತಿ ವ್ಯಕ್ತಪಡಿಸಿದ್ದೇ ಅಲ್ಲದೆ ಮುಂದೆ ಗಮಕ ಶಿಕ್ಷಣದ ಕುರಿತು ರಾಯರು ಯಾವುದೇ ಮಾರ್ಪಾಡು ಮಾಡಿದರೂ ಅದು ಕಲೆಯ ಉಜ್ಜೀವನಕ್ಕೆ ಎಂದು ಮನಗಂಡು ಅವರ ಸಲಹೆಗಳನ್ನೆಲ್ಲ ಅಂಗೀಕರಿಸಿದರು.

ಹೀಗಾಗಿ ಪರಿಷತ್ತಿನಲ್ಲಿ ಗಮಕ ಕಲೆ ಊರ್ಜಿತಗೊಂಡಿತು. ನಾಡಿನ ಮೂಲೆ ಮೂಲೆ ಗಳಲ್ಲಿ ಗಮಕ ಸೌರಭ ಪಸರಿಸಲು ಕಾರಣವಾಯಿತು. ಪದ್ಯ-ಸಾಹಿತ್ಯ ವಿಭಾಗಗಳ ಪಠ್ಯಪುಸ್ತಕಗಳು ಅಚ್ಚಾಗಿ ಗಮಕ ವಿದ್ಯಾರ್ಥಿಗಳಿಗೆ ಸಾಕಷ್ಟು ಅನುಕೂಲವಾಯಿತು.

ಮುಂದೆ ಜಿ. ನಾರಾಯಣ ಅವರು ಪರಿಷತ್ತಿನ ಅಧ್ಯಕ್ಷರಾಗಿ ಬಂದ ಮೇಲೆ ಅವರು ಅದಕ್ಕೆ ಸಾಕಷ್ಟು ಒತ್ತು ಕೊಟ್ಟು ರಾಯರೂ ನಾರಾಯಣ ಅವರೂ ಅಶ್ವಿನೀ ದೇವತೆಗಳಂತೆ ಗಮಕ ಕಲೆಯ ಅಭಿವೃದ್ಧಿಯನ್ನೂ ಮಾಡಿದರು. ಗಮಕ ತರಗತಿಯನ್ನೂ ನಡೆಸುವ ಶಿಕ್ಷಕರಿಗೆ ಸೂಕ್ತ ತರಬೇತಿಯನ್ನು ನೀಡಲು ತಿಂಗಳ ಅವಧಿಯ ಗಮಕ ಶಿಕ್ಷಣ ಶಿಬಿರವನ್ನು ನಡೆಸಿದರು. ನಾರಾಯಣ ಅವರು ಅಧ್ಯಕ್ಷರಾಗಿರುವಷ್ಟು ಕಾಲ ಇದು ಅನೂಚಾನವಾಗಿ ನಡೆದು ಬಂತು.

ಜಿ. ನಾರಾಯಣರ ನಂತರ ಬಂದ ಅಧ್ಯಕ್ಷರುಗಳಿಗೆ ಗಮಕ ಕಲೆಯ ಬಗ್ಗೆ ಆಸಕ್ತಿ ಕುಂದಿ ಕ್ರಮೇಣ ಪರಿಷತ್ತಿನಿಂದ ಗಮಕ ಕಲೆ ಮಾಯವಾಯಿತು. ಅದನ್ನು ಉಳಿಸಲು ಮಾಡಿದ ರಾಯರ ಪ್ರಯತ್ನವೆಲ್ಲವೂ ವಿಫಲವಾಗಿ ತಾವು ಕಷ್ಟಪಟ್ಟು ಪೋಷಿಸಿ ಬೆಳೆಸಿದ ಕಲೆ ನಶಿಸಲು ಬಿಡಬಾರದು ಎಂಬ ಛಲ ಅವರಲ್ಲಿ ಬೆಳೆಯಿತು. ಈ ಹೊತ್ತಿಗೆ ರಾಯರು ತಮ್ಮ ವೃತ್ತಿಯಿಂದ ನಿವೃತ್ತರಾಗಿದ್ದು ಗಮಕ ಕಲೆಯ ಊರ್ಜಿತಕ್ಕೆ ತಮ್ಮ ಸಮಯವನ್ನೆಲ್ಲಾ ಮುಡಿಪಾಗಿಟ್ಟರು. ಪರಿಣಾಮ ಕರ್ನಾಟಕ ಗಮಕ ಕಲಾ ಪರಿಷತ್ತಿನ ಉದಯ.

ಮೈಸೂರಿನ ಕಾವ್ಯರಂಜನೀ ಸಭಾ-ಕುಮಾರವ್ಯಾಸ ಗುರುಕುಲ ರಾಯರು ನಡೆಸುತ್ತಿದ್ದ ಕಾವ್ಯಗಾಯನ ಕಲಾ ಶಾಲೆಯವರು ಒಟ್ಟುಗೂಡಿ ಸಮಾಲೋಚಿಸಿ ಗಮಕ ಕಲೆಗಾಗಿ ಪರಿಷತ್ತೊಂದನ್ನು ಸ್ಥಾಪಿಸಲು ನಿರ್ಣಯಿಸಿದರು. ಹೀಗೆ ಉದಯಿಸಿತು ಕರ್ನಾಟಕ ಗಮಕ ಕಲಾ ಪರಿಷತ್ತು. ಗಮಕ ಕಲೆಯ ಬಗ್ಗೆ ಅಪಾರ ಕಳಕಳಿಯನ್ನು

ಹೊಂದಿದ್ದ ಸಾಹಿತ್ಯ ಪರಿಷತ್ತಿನಲ್ಲಿ ರಾಯರ ಜೊತೆ ಜೊತೆಗೂ ದುಡಿದ ಜಿ. ನಾರಾಯಣ ಅವರನ್ನೇ ಅಧ್ಯಕ್ಷರನ್ನಾಗಿ ನೇಮಿಸಿ ರಾಯರೇ ಅದರ ಉಪಾಧ್ಯಕ್ಷರಾದರು.

೧೯೮೭ ಅಕ್ಟೋಬರ್ ೨ರಂದು ವಿದ್ಯುಕ್ತವಾಗಿ ಕರ್ನಾಟಕ ಗಮಕ ಕಲಾ ಪರಿಷತ್ತಿನ ಉದಯವಾಯಿತು. ಈ ಪರಿಷತ್ತಿನ ಮೂಲಕ ತಾವು ಗಮಕ ಕಲೆಯ ಅಭಿವೃದ್ಧಿಗೆ ಯಾವ ತರಹದ ಯೋಜನೆ ಹಾಕಿಕೊಂಡಿದ್ದರೆ ಅದನ್ನೆಲ್ಲಾ ಕಾರ್ಯಗತ ಮಾಡಲು ಸಹಕಾರಿಯಾಯಿತು. ನಾಡಿನ ಹಲವೆಡೆ ಶಿಕ್ಷಣ ಶಿಬಿರಗಳನ್ನು ನಡೆಸಿದರು. ೧೯೮೩ರಲ್ಲಿ ಅಖಿಲ ಕರ್ನಾಟಕ ಪ್ರಥಮ ಗಮಕ ಸಮ್ಮೇಳನ ನಡೆಯಿತು. ೧೯೮೮ರಲ್ಲಿ ದ್ವಿತೀಯ ಸಮ್ಮೇಳನ ನಡೆದು ೧೯೯೨ರಲ್ಲಿ ನಡೆದ ತೃತೀಯ ಗಮಕ ಸಮ್ಮೇಳನಕ್ಕೆ ರಾಯರೇ ಅಧ್ಯಕ್ಷರಾಗಿ ಚುನಾಯಿತರಾದರು.

## ರಾಯರ ಕುಟುಂಬ

ರಾಯರದು ತುಂಬು ಕುಟುಂಬ. ರಾಯರ ಪತ್ನಿ ಬೆಂಗಳೂರು ಜಿಲ್ಲೆಯ ರಾಮೋಹಳ್ಳಿಯವರು. ನಾಲ್ಕು ಗಂಡು ಮೂರು ಹೆಣ್ಣು ಮಕ್ಕಳನ್ನು ನೀಡಿ ಮಕ್ಕಳು ಬೆಳೆದು ದೊಡ್ಡವರಾದ್ದನ್ನು ನೋಡಿ ರಾಯರ ಗಮಕ ಕಲೆಯ ಸಾರೋದ್ಧಾರತೆಯನ್ನು ಕಂಡು ಸೊಸೆಯರನ್ನು ಮನೆ ತುಂಬಿಸಿ ಕೊಂಡು ತುಂಬು ಸಂಸಾರವನ್ನು ನೋಡಿ ಆನಂದಿಸಿ ೧೯೬೫ರಲ್ಲಿ ಮುತ್ತೈದೆ ಸಾವಿತ್ರಿಯಾಗಿ ಇಹಲೋಕ ತ್ಯಜಿಸಿದರು.

ರಾಯರ ಹಿರಿಯಮಗ ರಾಮಕೃಷ್ಣ ಉತ್ತಮ ಗಮಕಿ. ವಲಯ ಸಾರಿಗೆ ಇಲಾಖೆಯಲ್ಲಿ ವೃತ್ತಿಯಲ್ಲಿದ್ದು ನಿವೃತ್ತರಾಗಿದ್ದಾರೆ. ಇವರ ಪತ್ನಿ ಕಮಲಾ ಕೃಷ್ಣಗಿರಿ ಕೃಷ್ಣರಾಯರ ಶಿಷ್ಯೆ. ಉತ್ತಮ ಗಮಕಿ.

ಎರಡನೇ ಮಗ ಗುರುರಾಜ ಅಲ್ಪಾಯು. ಚಿಕ್ಕವಯಸ್ಸಿನಲ್ಲೇ ಹೋಗಿಬಿಟ್ಟ. ಮೂರನೆಯವನು ಕೇಶವಮೂರ್ತಿ. ನಾಲ್ಕನೆಯ ಮಗ ಸತ್ಯನಾರಾಯಣ. ಈಗ ಆಕಾಶವಾಣಿ ನಿಲಯದಲ್ಲಿ ಕಾರ್ಯಕ್ರಮ ನಿರ್ವಾಹಕ ರಾಗಿದ್ದಾರೆ. ಎಲ್ಲರೂ ತಂದೆಯ ಜಾಡಿನಲ್ಲೇ ನಡೆಯುತ್ತಾ ಗಮಕಿಗಳಾಗಿ ತಂದೆಯ ಹೆಸರನ್ನುಳಿಸಿದ್ದಾರೆ.

ಹೆಣ್ಣುಮಕ್ಕಳು ಪರಿಮಳಾ ಗುರುರಾಜ್, ಲೀಲಾವತಿ ಗಿರಿಧರ್, ಹಾಗೂ ರುಕ್ಮಿಣಿ ಸುಧೀಂದ್ರ, ಎಲ್ಲರೂ ಗಮಕ ಕಲೆಯಲ್ಲಿ ನಿಷ್ಣಾತರು. ಅಳಿಯ ಗಿರಿಧರ್ ಮೈಸೂರಿನ ಗಮಕಿಗಳ ಸಾಲಿಗೆ ಸೇರಿದವರು.

## ರಾಯರ ಕೃತಿಗಳು

ರಾಯರು 'ಗಮಕಿ',ಕಾವ್ಯಗಾಯನ ಕಲಾಸಂಗ್ರಹವಲ್ಲದೆ, ಸತ್ಯದೇವ ಚರಿತೆ, ವ್ಯಾಸರಾಯ ಮಹಾತ್ಮೆ, ಗಮಕ ಗೀತೆಗಳು, ಗುರುರಾಘವೇಂದ್ರ ಕೀರ್ತನ ಮಾಲಾ, ವಾಸುದೇವ ವಿಜಯ, ವೆಂಕಟೇಶ ವಿಜಯ, ಮಧ್ವಗೀತೆ, ಆನಂದಗೀತೆ, ಮೈಸೂರು ಕೋಗಿಲೆ, ಗಮಕ ಪ್ರಚಾರ ಬೋಧಿನಿ, ಗಮಕ ಮತ್ತು ಹರಿದಾಸರು, ರಾಘಣ್ಣನ ಕಲಿಪದ, ಪರಿಮಳಾಚಾರ್ಯನಮನ ಹಾಗೂ ತಮ್ಮ ಸಂಪೂರ್ಣ ಜೀವನ ಚರಿತೆಯನ್ನೊಳಗೊಂಡ 'ಕಲೆಯ ಕಾಣಿಕೆ' ಎಂಬ ಬೃಹದ್ಗ್ರಂಥ ರಚಿಸಿದ್ದಾರೆ.

## ಗೌರವ ಪ್ರಶಸ್ತಿಗಳು

ರಾಯರ ಗಮಕ ಕಲಾ ಸೇವೆಯನ್ನು ಗುರುತಿಸಿದ ಕರ್ನಾಟಕ ಸಾಹಿತ್ಯ ಅಕಾಡೆಮಿ (ಆಗ ಗಮಕ ಕಲೆ ಸಾಹಿತ್ಯ ಅಕಾಡೆಮಿಯ ವ್ಯಾಪ್ತಿಯಲ್ಲಿದ್ದು ಈಗ ಸಂಗೀತ ಅಕಾಡೆಮಿಗೆ ವಿಲೀನವಾಗಿದೆ.) ೧೯೭೪ರಲ್ಲಿ ಇವರಿಗೆ ಪ್ರಶಸ್ತಿ ನೀಡಿ ಗೌರವಿಸಿದೆ.

ಮಡಿಕೇರಿಯ ಭಾರತೀಯ ಸಂಗೀತ ನೃತ್ಯಶಾಲೆ, ಬೆಂಗಳೂರು ಗಾಯನ ಸಮಾಜ, ಭಾರತೀ ವೃಂದವೇ ಅಲ್ಲದೆ ಅನೇಕ ಸಂಘಸಂಸ್ಥೆಗಳು ಮಠಾಧೀಶರು ಮುಖ್ಯವಾಗಿ ಎಲ್ಲಾ ಮಾಧ್ವಮಠದ ಶ್ರೀಗಳವರುಗಳು ಫಲಮಂತ್ರಾಕ್ಷತೆ ಶಾಲು ಗೌರವದೊಂದಿಗೆ ಸನ್ಮಾನಿಸಿ ಗೌರವಿಸಿದ್ದಾರೆ.

೧೯೯೨ರಲ್ಲಿ ನಡೆದ ಅಖಿಲ ಕರ್ನಾಟಕ ತೃತೀಯ ಗಮಕ ಸಮ್ಮೇಳನದ ಅಧ್ಯಕ್ಷರಾಗಿ 'ಗಮಕ ರತ್ನಾಕರ' ಎಂಬ ಬಿರುದು ಪಡೆದು ಸನ್ಮಾನಿತರಾಗಿದ್ದಾರೆ.

೧೯೯೫ರಲ್ಲಿ ಇವರಿಗೆ ಕರ್ನಾಟಕ ಸರ್ಕಾರ ರಾಜ್ಯೋತ್ಸವದಂದು ರಾಜ್ಯಪ್ರಶಸ್ತಿ ನೀಡಿ ಗೌರವಿಸಿದ್ದೇ ಅಲ್ಲದೆ ೧೯೯೬ರಲ್ಲಿ ಅತ್ಯುನ್ನತ ಪ್ರಶಸ್ತಿ ಯಾದ 'ಕನಕ-ಪುರಂದರ'ಪ್ರಶಸ್ತಿಯನ್ನು ನೀಡಿ ಗೌರವಿಸಿ ತನ್ನ ಘನತೆಯನ್ನು ಹೆಚ್ಚಿಸಿಕೊಂಡಿದೆ.

ಜೀವನ ಪರ್ಯಂತ ಅನೇಕ ನೋವು-ನಲಿವುಗಳನ್ನು ಅನುಭವಿಸಿದ ರಾಯರು ಗಮಕ ಕಲೆಯನ್ನು ತನ್ನ ಉಸಿರಾಗಿ ಮಾಡಿಕೊಂಡವರು. ಅತ್ಯಂತ ಹಾಸ್ಯಪ್ರಿಯರು. ವಿಡಂಬನಾತ್ಮಕ ಚಟಾಕಿಗಳನ್ನು ತಮ್ಮ ವ್ಯಾಖ್ಯಾನಗಳಲ್ಲಿ ಪ್ರಯೋಗಿಸಿ ಶ್ರೋತೃಗಳನ್ನು ನಗೆಗಡಲಿನಲ್ಲಿ ತೇಲಿಸುವ ರಾಯರು ಗಮಕದ ಅತ್ಯಂತ ಹಿರಿಯ ಚೇತನ. ನಮಗೆಲ್ಲ ಮಾರ್ಗದರ್ಶಕರು-ಪೂಜನೀಯರು.



# ಗಮಕ ಶಾರದೆ
# ಶಕುಂತಲಾಬಾಯಿ ಪಾಂಡುರಂಗರಾವ್

೧೯೫೬ರ ವೈಶಾಖ ಮಾಸ ಇರಬಹುದು. ನಾನು ನನ್ನ ವಿದ್ಯಾಭ್ಯಾಸ ಮುಗಿಸಿ ಅದೇ ತಾನೇ ಮಡಿಕೇರಿಯ ಸರಕಾರೀ ಮುದ್ರಣಾಯಲದಲ್ಲಿ ಕೆಲಸಕ್ಕೆ ಸೇರಿದ್ದೆ. ಆಗ್ಗೆ ಕೊಡಗು ಪ್ರತ್ಯೇಕ ರಾಜ್ಯವಾಗಿಯೇ ಇತ್ತು. ಇನ್ನು ರಾಜ್ಯ ಪುನರ್ವಿಂಗಡಣೆಯಾಗಿರಲಿಲ್ಲ. ನಮ್ಮ ತಂದೆಯವರು, ಮೈ. ಶೇ. ಅನಂತಪದ್ಮನಾಭರಾಯರು, ಕೊಡಗು ವಿಧಾನ ಸಭೆಯ ಹಿರಿಯ ವರದಿಗಾರ ರಾಗಿದ್ದರಲ್ಲದೆ ಕೊಡಗು ಸಂಗೀತ ನಾಟಕ ಅಕಾಡೆಮಿಯ ಕಾರ್ಯದರ್ಶಿ ಗಳೂ ಆಗಿದ್ದರು. ನನ್ನ ಅಣ್ಣ ಶೇಷಗಿರಿ ಅಲ್ಲಿಯ ಅರಣ್ಯ ಇಲಾಖೆಯಲ್ಲಿ ಗುಮಾಸ್ತನಾಗಿದ್ದ. ಎಲ್ಲ ಕಚೇರಿಗಳೂ ಮಡಿಕೇರಿ ಕೋಟೆಯೊಳಗಿರುವ ಭವ್ಯ ಅರಮನೆಯಲ್ಲಿ ಕೆಲಸ ನಿರ್ವಹಿಸುತ್ತಿದ್ದವು.

ಒಂದು ದಿನ ನಮ್ಮ ತಂದೆಯವರಿಂದ ಅಂದು ಸಂಜೆ ಬೇಗ ಮನೆಗೆ ಬರುವಂತೆಯೂ ಕೆಲವು ಅತಿಥಿಗಳು ಮನೆಗೆ ಬರಲಿದ್ದಾರೆಂದು ಸಂದೇಶ ಬಂತು. ಅಂದರೆ ಅವರ ಕಚೇರಿಯಿಂದ ನಾನಿದ್ದ ಮುದ್ರಣಾಲಯಕ್ಕೆ.

ಮನೆಗೆ ಬಂದಾಗ ನಮ್ಮ ತಾಯಿಯವರು ಅತಿಥಿಗಳ ಸ್ವಾಗತಕ್ಕೆ ಸತ್ಕಾರಕ್ಕೆ ಸಿದ್ಧತೆ ನಡೆಸುತ್ತಿದ್ದರು. ನಾನು ಬರುವುದು ಯಾರೆಂದು ಅವರನ್ನು ಕೇಳಿದಾಗ ಶಕುಂತಲಾಬಾಯಿ ಪಾಂಡುರಂಗರಾಯರು ಬರುತ್ತಾರಂತೆ ಎಂದರು. ನಾನು ಅದುವರೆಗೂ ಅವರನ್ನು ನೋಡಿರಲಿಲ್ಲ. ಆಕಾಶವಾಣಿಯಿಂದ ಪ್ರಸಾರವಾಗುತ್ತಿದ್ದ ಅವರ ವಾಚನ ಕಾರ್ಯಕ್ರಮವನ್ನು ಕೇಳಿದ್ದೆ ಅಷ್ಟೆ.

ವೀರಾಜಪೇಟೆಯಲ್ಲಿ ಯಾವುದೋ ಕಾರ್ಯಕ್ರಮಕ್ಕೆ ಬಂದಿದ್ದ ಶಕುಂತಲಾ ಬಾಯಿ ಮತ್ತು ಪಾಂಡುರಂಗರಾವ್ ದಂಪತಿಗಳು ಪ್ರೊ॥ ಎಲ್. ಎಸ್. ಶೇಷಗಿರಿರಾಯರ ಆಹ್ವಾನದ ಮೇರೆ ಮಡಿಕೇರಿಗೆ ಬರುವವರಿದ್ದರು. ಶೇಷಗಿರಿರಾಯರು ಈ ವಿಷಯ ನಮ್ಮ ತಂದೆಯವರಿಗೆ ತಿಳಿಸಿ ಅವರನ್ನು ಮನೆಗೆ ಕರೆತರುವುದಾಗಿ ತಿಳಿಸಿದರು.

ಆಗ ಪ್ರೊ|| ಎಲ್. ಶೇಷಗಿರಿರಾಯರು ಮಡಿಕೇರಿ ಸರಕಾರಿ ಪ್ರಥಮ ದರ್ಜೆ ಮಹಾವಿದ್ಯಾಲಯದಲ್ಲಿ ಆಂಗ್ಲಭಾಷಾ ಉಪನ್ಯಾಸಕರೂ, ಆಂಗ್ಲ ವಿಭಾಗದ ಮುಖ್ಯಸ್ಥರೂ ಆಗಿದ್ದರು. ಅವರ ಧರ್ಮಪತ್ನಿ ಶಾಂತ ಪಾಂಡುರಂಗರಾಯರ ಬಂಧು ಚಿಂತಾಮಣಿಯ ಮಾಧವರಾಯರ ಮಗಳು. ಈ ಬಂಧುತ್ವವೇ ಪಾಂಡುರಂಗರಾವ್ ದಂಪತಿಗಳು ಶೇಷಗಿರಿರಾಯರ ಮನೆಗೆ ಬರಲು ಕಾರಣವಾಯಿತು.

ಅಂದು ಸಂಜೆ ಶೇಷಗಿರಿರಾವ್, ಶಾಂತ, ಪಾಂಡುರಂಗರಾವ್ ದಂಪತಿಗಳನ್ನು ಮನೆಗೆ ಕರೆತಂದರು. ಸುಮಾರು ಸಂಜೆ ಏಳು ಘಂಟೆಯಿರಬಹುದು. ನಾವುಗಳು ಅವರಿಗಾಗಿ ಕಾಯುತ್ತಿದ್ದೆವು. ಶೇಷಗಿರಿರಾಯರು ಅತಿಥಿಗಳಿಗೆ ನಮ್ಮೆಲ್ಲರನ್ನು ಪರಿಚಯಿಸಿದರು. ನಮ್ಮ ತಾಯಿ ಶಕುಂತಲಾಬಾಯಿಯವರನ್ನು ಸ್ವಾಗತಿಸಿ ಒಳಗೆ ಕರೆದೊಯ್ದರು.

ಮಡಿಕೇರಿಯಲ್ಲಿ ನಾಲ್ಕಾರು ಮಾಧ್ವಬ್ರಾಹ್ಮಣರ ಮನೆಗಳಿದ್ದರೂ ಹದಿನೆಂಟು ಮೊಳದ ಮೇಲುಗಚ್ಚೆ ಸೀರೆ ಉಡುತಿದ್ದವರು ನಮ್ಮ ತಾಯಿಯವರೊಬ್ಬರೇ. ಶಕುಂತಲಾಬಾಯಿಯವರೂ ನಾಲ್ಕು ಬೆಟ್ಟಂಚಗಲದ ಜರಿ ಅಂಚಿನ ರೇಶ್ಮೆ ಸೀರೆಯನ್ನು ನಮ್ಮ ತಾಯಿಯವರಂತೆಯೇ ಮೇಲುಗಚ್ಚೆ ಹಾಕಿ ಒಪ್ಪವಾಗಿ ಉಟ್ಟಿದ್ದರು. ಅವರನ್ನು ನೋಡಿದಾಗ ನಮಗೆ ನಮ್ಮ ತಾಯಿಯವರನ್ನು ಕಂಡಂತೆಯೇ ಭಾಸವಾಯಿತು. ಒಂದು ರೀತಿಯ ಮಾತೃಭಕ್ತಿ ಮನಸ್ಸಿನಲ್ಲಿ ಉದ್ಭವವಾಯಿತು. ನಮ್ಮ ತಾಯಿಯಂತೆಯೇ ಅವರದೂ ಸಜ್ಜನಿಕೆಯ -ಸೌಮ್ಯಭಾವದ ವ್ಯಕ್ತಿತ್ವ.

ಆದರೆ ಪಾಂಡುರಂಗರಾಯನ್ನ ನೋಡಿದಾಗ ನಮಗೆ ಅವರ ಹಿರಿತನದ ಭಾವಕ್ಕಿಂತಲೂ ಒಂದು ರೀತಿಯ ಸ್ನೇಹಭಾವದ ಬಾಂಧವ್ಯವುಂಟಾಯಿತು. ಕಾರಣ ಅವರ ವ್ಯಕ್ತಿತ್ವ ಅಂಥದ್ದು. ಯಾರೇ ಆಗಲೀ ಅವರ ಭುಜದ ಮೇಲೆ ಕೈಹಾಕಿ ಆತ್ಮೀಯ ಗೆಳೆಯರಂತೆ ಮಾತನಾಡಿಸಿ ತಮ್ಮೆಡೆಗೆ ಸೆಳೆದುಕೊಳ್ಳುವ ಸಂಮೋಹಕಶಕ್ತಿ ಅವರಲ್ಲಿತ್ತು. ಅಲ್ಲಿ ಹಿರಿಯರು-ಕಿರಿಯರು ಎಂಬ ತಾರತಮ್ಯಕ್ಕೆ ಎಡೆಯಿರಲಿಲ್ಲ. ಎಲ್ಲರಲ್ಲೂ ಅವರಿಗೆ ಒಂದೇ ವಿಧವಾದ ಆತ್ಮೀಯತೆ. ನಮ್ಮ ತಂದೆ ಬೆಂಗಳೂರಿಗೆ ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯಕಾರೀ ಸಮಿತಿ ಸಭೆಗಳಿಗೆ ಹೋದಾಗಲೆಲ್ಲ ಪಾಂಡುರಂಗರಾಯರ ಭೇಟಿಯಾಗುತ್ತಿದ್ದು ಅವರವರಲ್ಲಿ ನಿಕಟ ಸಂಪರ್ಕ ಬೆಳೆದಿತ್ತು. ಅಲ್ಲದೆ ತಂದೆಯವರು ಕೇವಲ ಗಮಕಿಗಳೇ ಅಲ್ಲದೆ ಸಾಹಿತಿಗಳೂ ಆಗಿದ್ದರಿಂದ ಇಬ್ಬರಿಗೂ ಅವರಲ್ಲಿ ಪೂಜ್ಯಭಾವನೆ ಬೆಳೆದಿತ್ತು.

ಸರಿ, ಮನೆಯ ಹಜಾರದಲ್ಲಿ ಎಲ್ಲರೂ ಸೇರಿದ್ದೆವು. ಒಂದು ಸಣ್ಣ ಗೋಷ್ಠಿಯೇ ಅಲ್ಲಿ ನಡೆದಿತ್ತು. ಈಗಾಗಲೇ ಶೇಷಗಿರಿರಾಯರು ನಮ್ಮ ಪ್ರತಿಭೆಯ ಬಗ್ಗೆ ಪಾಂಡುರಂಗರಾವ್ ದಂಪತಿಗಳಿಗೆ ಮೊದಲೇ ತಿಳಿಸಿದ್ದ ರೆಂದು ಕಾಣುತ್ತದೆ. ಸರಿ ಆರಂಭವಾಯಿತು ನಮ್ಮ ಪರೀಕ್ಷೆ.

ಮೊದಲು ನನ್ನ ಮತ್ತು ನಮ್ಮಣ್ಣನ ಸಂಗೀತ ಕೃತಿಗಳ ಯುಗಳ ಗಾಯನ. ಆಗ ನಾವಿಬ್ಬರೂ ಒಟ್ಟಿಗೆ ಹಾಡುತ್ತಿದ್ದೆವು. ಅನಂತರ ಒಬ್ಬೊಬ್ಬರದೇ ಸರದಿ. ನಮ್ಮ ಅಣ್ಣ ಡಿ.ವಿ.ಜಿ.ಯವರ ಅಂತಃಪುರ ಗೀತೆಗಳಿಂದ ಕೆಲವು ಗೀತೆಗಳನ್ನು ಹಾಡಿದ. ಅವನು ಪೊನ್ನಂಪೇಟೆ ಯಲ್ಲಿದ್ದಾಗ ಅಲ್ಲಿ ಶಾಲಾ ಇನ್ಸ್‌ಪೆಕ್ಟರರಾಗಿದ್ದ ಎ. ಕೃಷ್ಣಮೂರ್ತಿಯವರ ನಿಕಟ ಸಂಪರ್ಕ ಅವನಿಗಿತ್ತು. ಕೃಷ್ಣಮೂರ್ತಿಯವರು (ಈಗ ದಿವಂಗತರು) ಪ್ರೊ॥ ಎ. ಎನ್. ಮೂರ್ತಿರಾಯರ ಕಿರಿಯ ಸೋದರರು ಮತ್ತು ಡಾ. ಎಚ್. ಕೆ. ರಂಗನಾಥ್‌ರವರ ಭಾವ. ಕೃಷ್ಣಮೂರ್ತಿಯವರು ಚೆನ್ನಾಗಿ ಹಾಡುತ್ತಿದ್ದರು. ಅವರಿಂದ ಶೇಷಗಿರಿ ಅಂದರೆ ನಮ್ಮಣ್ಣ ಅನೇಕ ಭಾವ ಗೀತೆಗಳನ್ನು ಅಭ್ಯಸಿಸಿದ್ದ. ಅವನ ಹಾಡುಗಾರಿಕೆಯಲ್ಲಿ ಶಾಸ್ತ್ರೀಯ ಸಂಗೀತದ ಛಾಯೆ ಹೆಚ್ಚಾಗಿರುತ್ತಿತ್ತು. ಅಲ್ಲದೆ ಗಮಕ-ಪಲುಕುಗಳು ಸ್ಪುಟ ವಾಗಿರುತ್ತಿತ್ತು. ಪಾಂಡುರಂಗರಾಯರು ಅವನ ಹಾಡನ್ನು ಬಹುವಾಗಿ ಮೆಚ್ಚಿಕೊಂಡರು.

ಅನಂತರದ ಸರದಿ ನನ್ನದು. ಶೇಷಗಿರಿರಾಯರಿಗೆ ನನ್ನ ಹಾಡಿಕೆ ಯೆಂದರೆ ಬಹುಮೆಚ್ಚು. ಅದರಲ್ಲಿ ಬೇಂದ್ರೆಯವರ ಗಂಗಾವತರಣ, ಹರಿಹರನ ಗುಂಡಯ್ಯನ ರಗಳೆಗಳನ್ನು ನನ್ನಿಂದ ಹಾಡಿಸಿ ಕೇಳುತ್ತಿದ್ದರು. ಪ್ರಸಿದ್ಧ ಗಾಯಕ ಗುಡಿಬಂಡೆ ರಾಮಾಚಾರ್ಯರು ಈ ಹೊತ್ತಿಗಾಗಲೇ ಅನೇಕಬಾರಿ ಕೊಡಗಿಗೆ ಬಂದಿದ್ದು ಮಡಿಕೇರಿಯಲ್ಲಿ ನಮ್ಮ ಮನೆಯಲ್ಲೇ ತಂಗುತ್ತಿದ್ದರು. ಅವರ ದೋಣಿಸಾಗಲಿ, ಗಂಗಾವತರಣ, ಗುಂಡಯ್ಯನ ರಗಳೆ ನನಗೆ ಬಹು ಅಚ್ಚುಮೆಚ್ಚು. ಅವನ್ನು ನಾನು ಅವರಿಂದಲೇ ಕಲಿತಿದ್ದೆ. ಸರಿ ನನ್ನ ಸರದಿ ಬಂದಾಗ ನಾನು ನೇರವಾಗಿ ಗುಂಡಯ್ಯನ ರಗಳೆಯನ್ನೇ ಎತ್ತಿಕೊಂಡೆ. ವಸಂತ ರಾಗದಲ್ಲಿ 'ಆಡಿದನಾಡಿದನಾಹಾ ಶಂಕರ'' ಪುಂಖಾನುಪುಂಖವಾಗಿ ಹರಿಯಿತು. ಹಾಡು ಮುಗಿಯುತ್ತಿದ್ದ ಹಾಗೇ ಪಾಂಡುರಂಗರಾಯರು ''ರಾಮಾಚಾರ್'' ಅಂದರು. ಅಂದರೆ ಈ ಗೀತೆಗಳು ರಾಮಾಚಾರ್ ಬಾಯಿಂದಲೇ ಕೇಳಬೇಕೆನ್ನುವಷ್ಟು ಅಭಿಪ್ರಾಯ ಮೂಡಿತ್ತು. ಆ ಮೇಲೆ ''ಗಂಗಾವತರಣವೂ'' ಆಯಿತು ಕೆಲವೊಂದು ಭಾರತದ ಪದ್ಯಗಳ ನಂತರ ನಮ್ಮ ತಂದೆಯವರ ಶಿಷ್ಯವೃಂದ ಅವರ ಪ್ರತಿಭೆಯ ಪರಿಚಯ ಮಾಡಿಸಿದರು.

ಶಕುಂತಲಾಬಾಯಿಯವರ ವಾಚನ ಕಾರ್ಯಕ್ರಮ ಮಾರನೇದಿನ ಮಡಿಕೇರಿಯ ಆಂಜನೇಯ ದೇವಸ್ಥಾನದಲ್ಲಿ ಏರ್ಪಡಿಸಿದ್ದರಿಂದ ಅವರು ಅಂದು ಹಾಡಲಿಲ್ಲ. ನಮ್ಮ ತಾಯಿಯವರ ಜೊತೆ ಲೋಕಾಭಿರಾಮಾವಾಗಿ ಮಾತನಾಡುತ್ತಿದ್ದರು. ರಾತ್ರಿ ನಮ್ಮಲ್ಲೇ ಊಟವಾಯಿತು.

ಮಾರನೇ ದಿನ ಶ್ರೀಆಂಜನೇಯನ ಸನ್ನಿಧಾನದಲ್ಲಿ ಅವರ ವಾಚನ-ಪಾಂಡುರಂಗರಾಯ ವ್ಯಾಖ್ಯಾನದೊಂದಿಗೆ ನಡೆಯಿತು. ಅದುವರೆಗೆ ಅಲ್ಲಿಯ ಜನ ವಾಚನ ಬೇರೆ ವ್ಯಾಖ್ಯಾನ ಬೇರೆ ಕೇಳಿರಲಿಲ್ಲ. ಭಾರತದ ಕೃಷ್ಣರಾಯರಾಗಲೀ, ನಮ್ಮ ತಂದೆಯವರಾಗಲೀ ತಾವೇ ಸ್ವತಃ ವಾಚನ-ವ್ಯಾಖ್ಯಾನ ಮಾಡುತ್ತಿದ್ದವರು. ಇದನ್ನೇ ಕೇಳಿ ಅಭ್ಯಾಸವಾಗಿದ್ದ ಅಲ್ಲಿನ ಶ್ರೋತೃವೃಂದಕ್ಕೆ ಇದು ಒಂದು ರೀತಿಯ ಹೊಸ ಅನುಭವವಾಯಿತು. ಅಲ್ಲದೆ ಶಕುಂತಲಾಬಾಯಿಯವರ ಆ ಗಾನರಸಧಾರೆ ಅವರ ಮೈ ಮರೆಸಿತ್ತು.

**ಶಕುಂತಲಾಬಾಯಿಯವರ ಗಾನಧಾರೆಗೆ ಪಾಂಡುರಂಗ ರಾಯರ ವ್ಯಾಖ್ಯಾನದ ವಾಗ್ಝರಿ ಹಾಲುಜೇನಿನಂತೆ ಮಿಳಿತವಾಗಿತ್ತು. ಕಾವ್ಯ ಪ್ರಾಚೀನವಾದರೇನು? ಆ ಗಾನಮಾಧುರ್ಯದಲ್ಲಿ ಅದು ನಾವೀನ್ಯತೆಯನ್ನು ಪಡೆದಿತ್ತು. 'ಹಾಡು ಹಳೆಯದಾದರೇನು, ಭಾವನವನವೀನ'' ಎಂಬ ಕವಿವಾಣಿ ಇವರ ಗಾಯನಕ್ಕೆ ಅನ್ವರ್ಥವೆನಿಸಿತು. ಶಕುಂತಲಾ ಬಾಯಿಯವರದು ಗಂಡು ಶಾರೀರ. ಹೇಗೆ ಎಳೆದರೂ ತ್ರಿಸ್ಥಾಯಿಯಲ್ಲೂ ಲೀಲಾಜಾಲವಾಗಿ ಹರಿಯು ತ್ತಿತ್ತು ರಾಗರಸಧಾರೆ. ಬಿಳಿ ಒಂದನೇ ಮನೆ ಶ್ರುತಿಯಲ್ಲಿ ಲೀಲಾಜಾಲ ವಾಗಿ ಹಾಡುತ್ತಿದ್ದರು.**

ಇದಕ್ಕೆ ಅವರಿಗೆ ಬಾಲ್ಯದಲ್ಲಿ ದೊರೆತ ಸಂಗೀತ ಶಿಕ್ಷಣ ಭದ್ರಬುನಾದಿ ಯಾಯಿತು. ವಿದ್ವಾನ್ ಚಿಂತಲಪಲ್ಲಿ ಕೃಷ್ಣಮೂರ್ತಿಯವರಲ್ಲಿ ಇವರಿಗೆ ಸಾಕಷ್ಟು ಸಂಗೀತಪಾಠವಾಗಿತ್ತು. ಹೀಗೆ ನಾನು ಶಕುಂತಲಾಬಾಯಿಯವರನ್ನು ಮೊದಲಬಾರಿ ನೋಡಿದ್ದು ಮಡಿಕೇರಿಯಲ್ಲಿ. ಅನಂತರ ನಾನು ನನ್ನ ವೃತ್ತಿಯನ್ನು ಪತ್ರಿಕೋದ್ಯಮಕ್ಕೆ ಬದಲಾಯಿಸಿ ಮುಂಬೈನ 'ಇಂಡಿಯನ್ ಎಕ್ಸ್‌ಪ್ರೆಸ್'' ಪತ್ರಿಕಾಲಯದಲ್ಲಿ ನೌಕರಿ ಹಿಡಿದೆ.

೧೯೭೦ರಲ್ಲಿ ನಾನು ಬೆಂಗಳೂರು ಕಾರ್ಯಾಲಯಕ್ಕೆ ವರ್ಗವಾಗಿ ಬಂದಾಗ ನಮ್ಮ ತಂದೆ-ತಾಯಿಯವರೂ ನಮ್ಮ ಅಣ್ಣನ ಕುಟುಂಬದೊಂದಿಗೆ ಬೆಂಗಳೂರಿಗೇ ಬಂದು ನೆಲೆಸಿದ್ದರು. ಆ ಹೊತ್ತಿಗೆ ಪಾಂಡುರಂಗರಾಯರ ಶೇಷಾದ್ರಿಪುರದಲ್ಲಿದ್ದ ಮಕ್ಕಳ ಮಂಟಪ ಸಾಕಷ್ಟು ಪ್ರಸಿದ್ಧಿಗೆ ಬಂದು

ಗಮಕಕಲಾರಾಧನೆಯ ಮಂದಿರವಾಗಿತ್ತು. ಸ್ವತಃ ಸಾಹಿತಿಗಳೂ - ಶಿಸುಸಾಹಿತ್ಯ ಕರ್ತರೂ ಆಗಿದ್ದ ಪಾಂಡುರಂಗರಾಯರು ಮಲ್ಲೇಶ್ವರದ ಹದಿನೆಂಟನೇ ಕ್ರಾಸಿನಲ್ಲಿದ್ದ ನಮ್ಮ ಮನೆಗೆ ವಿಚಾರ ವಿನಮಯಕ್ಕಾಗಿ ಆಗಾಗ್ಗೆ ಬರುತ್ತಿದ್ದರು. ಹಾಗಾಗಿ ನಮ್ಮ ಬಾಂಧವ್ಯ ನಿಕಟವಾಯಿತು. ಇಷ್ಟಾದರೂ ಶಕುಂತಲಾ ಬಾಯಿಯವರ ವಾಚನ ಕೇಳುವ ಅವಕಾಶ ಮತ್ತೆ ಲಭಿಸಿರಲಿಲ್ಲ. ಅಂಥ ಅವಕಾಶ ನನಗೆ ಮತ್ತೆ ದೊರೆತಿದ್ದು ೧೯೭೮ರಲ್ಲಿ ನಾರಣಪ್ಪನ ಹುಟ್ಟೂರಾದ ಕೋಳಿವಾಡದಲ್ಲಿ.

ಹುಬ್ಬಳ್ಳಿಯ ಕುಮಾರವ್ಯಾಸ ಗಮಕಕಲಾಸಂಘ ೧೯೭೮ರಲ್ಲಿ ಕುಮಾರವ್ಯಾಸ ಜಯಂತಿಯ ಅಂಗವಾಗಿ ಮೂರು ದಿನಗಳ ಗಮಕ ಸಂಗೀತೋತ್ಸವವನ್ನು ಅಲ್ಲಿನ ಸವಾಯ್ ಗಂಧರ್ವ ಸಭಾಂಗಣದಲ್ಲಿ ಏರ್ಪಡಿಸಿತ್ತು. ಮೈಸೂರು ರಾಜ್ಯದ ಗಮಕಿಗಳನ್ನು ಉತ್ತರ ಕರ್ನಾಟಕದವರಿಗೆ ಪರಿಚಯಿಸುವ ಒಂದು ಸದವಕಾಶ ಈ ಉತ್ಸವದಿಂದ ಲಭಿಸಿತ್ತು. ಹಿರಿಯ ಗಮಕಿಗಳ ಸಾಲಿನಲ್ಲಿ ನಮ್ಮ ತಂದೆಯವರು, ಜೋಳದರಾಶಿ ದೊಡ್ಡಣ್ಣ ಗೌಡರು, ನಂ. ಅಶ್ವತ್ಥನಾರಾಯಣ, ಶಕುಂತಲಾ ಬಾಯಿಯವರು ಸೇರಿದ್ದರೆ ಕಿರಿಯ ಗಮಕಿಗಳ ಸಾಲಿನಲ್ಲಿ ನನಗೂ ಆಹ್ವಾನವಿತ್ತು.

ಸಂಯುಕ್ತ ಕರ್ನಾಟಕದ ಆಗಿನ ಸ್ಥಾನಿಕ ಸಂಪಾದಕ ಸುರೇಂದ್ರದಾನಿ ಈ ಉತ್ಸವದ ಅಧ್ವರ್ಯು ಹಾಗೂ ಸಂಚಾಲಕರು. ನಾವು ಹುಬ್ಬಳ್ಳಿಗೆ ಹೋದ ಮಾರನೇ ದಿವಸ ನಮ್ಮನ್ನು ಕೋಳೀವಾಡಕ್ಕೆ ಕರೆದೊಯ್ಯುವ ಏರ್ಪಾಡಾಗಿತ್ತು. ನಾನು, ನಮ್ಮ ತಂದೆ, ಶಕುಂತಲಾ ಬಾಯಿ-ಪಾಂಡರಂಗರಾವ್ ಹಾಗೂ ಗಮಕ ವಿದುಷಿ ಗೌರಮ್ಮ ನಾಗರಾಜ್ ಇಷ್ಟು ಜನ ಕೋಳಿವಾಡ ತಲುಪಿದೆವು. ಗ್ರಾಮ ಪ್ರದಕ್ಷಿಣೆಯ ನಂತರ ಕೋಳಿವಾಡದ ಜನಾರ್ಧನ ಸ್ವಾಮಿ ಸನ್ನಿಧಿಯಲ್ಲಿ ನಮ್ಮಗಳ ವಾಚನವಿತ್ತು.

ಮೊದಲಿಗೆ ಗೌರಮ್ಮ ನಾಗರಾಜ್ ಅವರು ಹಾಡಿದರು. ಅನಂತರ ನಮ್ಮ ತಂದೆಯವರದ್ದಾಯಿತು. ಮುಂದೆ ಶಕುಂತಲಾ ಬಾಯಿಯವರ ಸರದಿ. ಕುಂತೀಕರ್ಣದಲ್ಲಿನ ಕೃಷ್ಣನ ಭೇದೋಪಾಯದ ಭಾಗವನ್ನು ತುಂಬಾ ಸುಶ್ರಾವ್ಯವಾಗಿ ಭಾವಪೂರ್ಣವಾಗಿ ಪಾಂಡುರಂಗರಾಯರ ವ್ಯಾಖ್ಯಾನ ದೊಂದಿಗೆ ಹಾಡಿದರು. ಇಪ್ಪತ್ತೆರಡು ವರ್ಷಗಳನಂತರ ನಾನು ಎರಡನೆಯ ಬಾರಿಗೆ ಅವರ ಗಾಯನ ಸೌರಭವನ್ನು ಉಂಡೆ.

"ಎನಲು ಕರ್ಣನ ದೃಢವ ಕಂಡನು
ಮನದೊಳುತ್ಸಾಹಿಸಿದನಾದೊಡೆ
ಅನುಜರೈವರ ಹದನನಿನ್ನದು ಬಲುಹಮಾಡುವೊಡೆ
ಮನಕೆ ಖತಿಯಹುದರುಹದಿರ್ದೊಡೆ

ಯೆನಗೆ ಗುಣವಿಲ್ಲಂಬಕಾರಣ
ವಿನಿಸನೊಡ್ಡಯಿಸಿದೆನು ನೀ ಸುಖಿಯಾಗು ಹೋಗೆಂದ''

ಎಂದು ವಾಚನವನ್ನು ಮುಗಿಸಿ ಮುಂದಿನದು ನನ್ನ ಸರದಿ ಎಂಬಂತೆ ನನ್ನ ಕಡೆ ನೋಡಿದರು. ಅವರು ನೋಡಿದ ರೀತಿ ''ನೀ ಸುಖವಾಗಿ ಹಾಡು'' ಎಂದು ಹರಸಿದಂತೆ ಭಾಸವಾಗಿ ನನಗೆ ನಮ್ಮ ತಾಯಿಯೇ ಎದುರಿಗೆ ಕೂತು ಹೇಳಿದಂತಾಯಿತು. ಅದುವರೆಗೆ ನಾನು ಏನು ಹಾಡಬೇಕೆಂದು ಯೋಚಿಸಿಯೇ ಇರಲಿಲ್ಲ. ''ನೀ ಸುಖಿಯಾಗು ಹೋಗು'' ಎಂಬ ಮಾತು ನನ್ನ ಮನಸ್ಸಿನಲ್ಲುಳಿದು ನಾನು ನನಗರಿವಿಲ್ಲದಂತೇ ಅಲ್ಲಿಂದ ಬರುವ ಮುಂದಿನ ಪ್ರಸಂಗ ಕುಂತೀ ಕರ್ಣರ ಭೇಟಿಯ ಭಾಗವನ್ನೇ ಹಾಡಿದೆ. 'ಆದೊಡೈವರು ಮಕ್ಕಳನು ತಲೆಗಾಯ್ದು ತೋರೈಕಂದ'' ಎಂಬ ಪದ್ಯ ದೊಂದಿಗೆ ನಾನು ಹಾಡಿ ಮುಗಿಸಿದಾಗ ನಮ್ಮ ತಂದೆಯವರು ತೃಪ್ತಿಯ ಮಂದಹಾಸ ಬೀರಿದರು. ಶಕುಂತಲಾಬಾಯಿಯವರು ಮಾತೃವಾತ್ಸಲ್ಯದಿಂದ ನನ್ನ ತಲೆ ಸವರಿದರು. ಪಾಂಡುರಂಗರಾಯರು ನಮ್ಮ ತಂದೆಯವರೊಡನೆ ನಿಮ್ಮ ಚಿರಂಜೀವಿ ನಿಮ್ಮ ಹೆಸರನ್ನುಳಿಸುತ್ತಾನೆ ಎಂದರು. ಅಂದಿನಿಂದ ಪಾಂಡುರಂಗರಾಯರು ನಮ್ಮ ತಂದೆಯವರೊಡನಿದ್ದ ಆತ್ಮೀಯತೆಯಂತೇ ನನ್ನಲ್ಲೂ ವರ್ತಿಸುತ್ತಿದ್ದರು. ಅಷ್ಟೇ ಅಲ್ಲ ಶಕುಂತಲಾಬಾಯಿಯವರ ಷಷ್ಟ್ಯಬ್ಧಿ ಪೂರ್ತಿಯ ಸವಿನೆನಪಿಗಾಗಿ ಹೊರತಂದ ''ಗಮಕಶಾರದೆ'' ಎಂಬ ಅಭಿನಂದನಾ ಗ್ರಂಥದಲ್ಲಿ ನನ್ನ ಬಗ್ಗೆಯೂ ಅಭಿಮಾನ ಪೂರ್ವಕ ಎರಡು ಸಾಲುಗಳನ್ನು ಸೇರಿಸಿರುವುದು ಅವರ ಹೃದಯ ಶ್ರೀಮಂತಿಕೆಗೆ ಸಾಕ್ಷಿ.

## ಮಹಿಳಾ ಗಮಕಿಯ ಉದಯ

ಶಕುಂತಲಾಬಾಯಿಯವರ ಜನನ ೧೯೨೧ರಲ್ಲಿ. ನಾರಾಯಣ ಕೆರೆ ವೆಂಕೋಬರಾಯರು ಹಾಗೂ ಸುಂದರಾಬಾಯಿ ಇವರ ಮಾತಾಪಿತೃಗಳು. ವೆಂಕೋಬರಾಯರು ರೈಲ್ವೇ ಗಾರ್ಡ್-ಆಗಿದ್ದುದರಿಂದ ಅವರನ್ನು ಗಾರ್ಡ್ ವೆಂಕೋಬರಾಯರೆಂದೇ ಕರೆಯುತ್ತಿದ್ದರು. ಸುಂದರಾಬಾಯಿಯವರ ಮಲತಮ್ಮನೇ ಪಾಂಡುರಂಗರಾಯರು. ಬಿಂಗೇಪುರದ ಶ್ರೀನಿವಾಸರಾಯರ ಹಾಗೂ ಭಾಗೀರಥೀಬಾಯಿಯವರ ಏಕೈಕಪುತ್ರ. ಭಾಗೀರಥಿ ಬಾಯಿಯವರ ಮಲಮಗಳು ಸುಂದರಾಬಾಯಿ. ೧೯೧೮ರಲ್ಲಿ ದೇಶದಾದ್ಯಂತ ವ್ಯಾಪಿಸಿದ ಇನ್‌ಫ್ಲುಯೆಂಜಾ ಜ್ವರಕ್ಕೆ ಶ್ರೀನಿವಾಸರಾಯರು ಬಲಿಯಾದಾಗ ಪಾಂಡುರಂಗರಾಯರಿಗೆ ಕೇವಲ ಐದು ವರ್ಷ. ಭಾಗೀರಥಿ ಬಾಯಿಯವರೇ ಸಂಸಾರದ ಸಮಸ್ತ ಜವಾಬ್ದಾರಿಯನ್ನು ವಹಿಸಿಕೊಂಡರು. ಅವರ ಬೆಂಬಲಕ್ಕೆ ತಂಗಿ ನಿಂತರು.

ತಾಯಿ ಮತ್ತು ಚಿಕ್ಕಮ್ಮನ ಅಕ್ಕರೆಯಲ್ಲಿ ಬೆಳೆದ ಪಾಂಡುರಂಗರಾಯರು ಲಂಡನ್ ಮಿಷನ್ ಶಾಲೆಯಲ್ಲಿ ಓದಿ ಎಸ್.ಎಸ್.ಎಲ್.ಸಿ. ಮುಗಿಸಿದಾಗ ಅವರಿಗೆ ಹದಿನೇಳು ವರ್ಷ.

ಮಗನಿಗೆ ಹದಿನಾರು ತುಂಬಿದಾಗಲೇ ಮದುವೆಮಾಡುವ ಯೋಚನೆಯನ್ನು ಮಾಡಿಬಿಟ್ಟಿದ್ದರು ಭಾಗೀರಥೀಬಾಯಿ. ಅಕ್ಕ-ಭಾವ ಇರುವಾಗಲೇ ಅವರನ್ನು ಕರೆಸಿ ಅವರ ಕೈಯಲ್ಲಿ ಸೊಸೆಯನ್ನು ಧಾರೆಯೆರೆಸಿಕೊಳ್ಳಬೇಕೆಂಬ ಆಸೆ ಅವರಲ್ಲಿ ಮೂಡಿದ್ದು ಕಾರ್ಯಾಚರಣೆಗೂ ತೊಡಗಿದರು. ಹುಡುಗಿಯನ್ನು ಹುಡುಕಬೇಕಾದ ಅವಶ್ಯಕತೆಯೇ ಇರಲಿಲ್ಲ. ತಮ್ಮ ಮಲಮಗಳ ಮಗಳು ಶಕುಂತಲೆ ಕಣ್ಣೆದುರಿಗೇ ಬೆಳೆಯುತ್ತಿದ್ದರು. ಸೋದರ ಸಂಬಂಧವಾದ್ದರಿಂದ ಜಾತಕ-ಪಾತಕ ನೋಡುವ ಪ್ರಶ್ನೆಯೇ ಇರಲಿಲ್ಲ. ಮಗಳು-ಸುಂದರಾಬಾಯಿ ಅಳಿಯ ವೆಂಕೋಬರಾಯರನ್ನು ಕರೆಸಿಕೊಂಡರು. ನೇರವಾಗಿಯೇ ಮದುವೆ ಮಾತುಕತೆ ಆರಂಭಿಸಿದರು. ಆಗ ಶಕುಂತಲಾಬಾಯಿಗೆ ಕೇವಲ ಎಂಟು ವರ್ಷ. ಮದುವೆ ಎಂದರೇನು ಎಂದು ತಿಳಿಯುವಷ್ಟು ವಯಸ್ಸಲ್ಲ. ಜೊತೆಗೊಬ್ಬ ಆಟಕ್ಕೆ ಸಿಗುತ್ತಾನೆ ಎಂಬಷ್ಟೇ ತಿಳಿವಳಿಕೆಯ ಪ್ರಾಯವಷ್ಟೇ. ವೆಂಕೋಬರಾಯರು-ಸುಂದರಾಬಾಯಿ ತಮಗೆ ಚೊಚ್ಚಲು ಹೆಣ್ಣು ಹುಟ್ಟಿದಾಗಲೇ ಈ ಮಗೂ 'ಪಾಂಡಣ್ಣ''ನಿಗೇ ಮೀಸಲು ಎಂದು ತೊಟ್ಟಿಲಿಗೆ ಬಾಸಿಂಗ ಕಟ್ಟಿದ್ದರಂತೆ. ಹಿರಿಯರು ಮದುವೆ ನಿಶ್ಚಯಿಸಿದ್ದಾಯಿತು. ಹುಡುಗ-ಹುಡುಗಿಯ ಅಭಿಪ್ರಾಯ ಕೇಳುವ ಪರಿಪಾಠವಿಲ್ಲದ ಕಾಲ ಅದು. ೧೯೩೦ರ ಮೇ ತಿಂಗಳ ೫ನೇ ದಿನಾಂಕದಂದು ಎಂಟುವರ್ಷದ ಮುಗ್ಧಬಾಲೆ ಶಕುಂತಲೆ - ೧೭ ವರ್ಷದ ಕಿಶೋರ ಪಾಂಡುರಂಗರಾಯರ ಬಾಳಸಂಗಾತಿಯಾಗಿ ಅವರ ಮನೆ ಬೆಳಗಿದರು. ಎಂಟು ದಿನಗಳ ಆಗಿನ ಕಾಲದ ಮದುವೆ. ಅದ್ದೂರಿಯಿಂದಲೇ ನಡೆಯಿತು.

ಚಿಕ್ಕಂದಿನಲ್ಲೇ ಶಕುಂತಲಾ ಬಾಯಿಗೆ ಅವರ ಹಿರಿಯರು ಹಾಡು-ಹಸೆಗಳನ್ನು ಕಲಿಸಿದ್ದರು. ಪ್ರಾಥಮಿಕ ವಿದ್ಯಾಭ್ಯಾಸವೂ ಆಗಿತ್ತು. ದೈವದತ್ತವಾಗಿಯೇ ಬಂದಿತ್ತು ಸಿರಿಕಂಠ. ಸುಲ್ತಾನಪೇಟೆಯ ಆರ್ಯ ಬಾಲಿಕಾ ಪಾಠ ಶಾಲೆಯಲ್ಲಿ ಆಕೆ ಓದುತ್ತಿದ್ದಾಗ್ಗೆ ಅಲ್ಲಿನ ಕನ್ನಡ ಅಧ್ಯಾಪಕಿ ಎಂ. ಸುಂದರಮ್ಮನವರು ಭಾವಪ್ರಧಾನವಾಗಿ ಹಾಡುತ್ತಿದ್ದ ಶಕುಂತಲೆಯ ಪ್ರತಿಭೆಯನ್ನು ಗುರುತಿಸಿ ನಾಟಕಗಳಲ್ಲಿ ಸೇರಿಸಿಕೊಂಡು ಅಭಿನಯ ಶಿಕ್ಷಣವನ್ನೂ ನೀಡಿದ್ದರು. ನಾಟಕ ಹಾಗೂ ಚಲನಚಿತ್ರರಂಗದ ಹೆಸರಾಂತ ತಾರೆಯರಾಗಿದ್ದ ಎಂ. ವಿ. ರಾಜಮ್ಮ ಮತ್ತು ಎಸ್. ಕೆ. ಪದ್ಮಾದೇವಿ ಇವರ ಸಹಪಾಠಿಗಳು. ಶಾಸ್ತ್ರೀಯ

**ಸಂಗೀತದಲ್ಲೂ ಸಾಕಷ್ಟು ಪಾಠವಾಗಿದ್ದರಿಂದ ಹಾಡಿಕೆಯಲ್ಲು ಈಗಾಗಲೇ ಪಕ್ವತೆ ಬಂದಿತ್ತು.**

ಆರ್ಯಬಾಲಿಕಾ ಶಾಲೆಯ ಬಾಲಿಕಿಯರು ಅಭಿನಯಿಸುತ್ತಿದ್ದ ನಾಟಕಗಳ ಕೀರ್ತಿ ಅರಮನೆಗೂ ಮುಟ್ಟಿತ್ತು. ಮೈಸೂರರಸ ನಾಲ್ವಡಿ ಕೃಷ್ಣಪ್ರಭುಗಳ ಪಟ್ಟದರಸಿ ಬೆಂಗಳೂರು ಅರಮನೆಗೆ ಆಗಮಿಸಿದ್ದಾಗ್ಗೆ ಅರಸರ ಕೋರಿಕೆಯಂತೆ ಈ ಬಾಲಿಕೆಯರ ನಾಟಕ ಪ್ರದರ್ಶನ ಮಹಾರಾಣಿಯವರ ಸನ್ನಿಧಾನದಲ್ಲಿ ನಡೆದು, ಅವರ ಪ್ರಶಂಸೆಗೆ ಪಾತ್ರವಾಗಿದ್ದುವು.

ಎಂಟನೆಯ ವರ್ಷಕ್ಕೆ ಇಷ್ಟೆಲ್ಲ ಪ್ರತಿಭೆಗಳಿಸಿದ್ದ ಶಕುಂತಲೆ ತನ್ನ ಮದುವೆಯ ಉರುಟಣೆ- ಆರತಕ್ಷತೆ ಕಲಾಪಗಳ ಸಂದರ್ಭದಲ್ಲಿ ತನ್ನ ಉನ್ನತ ಕಂಠ ಶ್ರೀಯಿಂದ ಹಸೆಕರೆದ ಹಾಡುಗಳನ್ನು ಹೇಳಿ ಎಲ್ಲರನ್ನು ಮುಗ್ಧ ಗೊಳಿಸಿದ್ದರು. ನಾಟಕಗಳಲ್ಲಿ ಅಭ್ಯಸಿಸಿದ್ದ ಕೆಲವೊಂದು ಪದ್ಯಗಳೂ ಆಕೆಯ ಸಿರಿಕಂಠದಿಂದ ಹೊಮ್ಮಿ ಆಕೆಯಲ್ಲಿ ಸುಪ್ತವಾಗಿದ್ದ ಗಮಕ ಕಲಾಪ್ರತಿಭೆಗೆ ಸಾಣೆ ಹಿಡಿದಂತಾಯಿತು. ಪತ್ನಿಯ ಈ ಪ್ರೌಢಿಮೆಯನ್ನು ಗುರುತಿಸಿದ ಪಾಂಡುರಂಗರಾಯರು ಸಂಸಾರ ಬಂಧನದಲ್ಲಿ ಈ ಕಲೆ ಕಮರುವುದಕ್ಕೆ ಬಿಡಬಾರದು ಎಂದು ಅಂದೇ ನಿರ್ಧರಿಸಿದರಂತೆ.

ವಿದ್ಯಾರ್ಥಿದೆಸೆಯಲ್ಲೇ ಸಕ್ರಿಯವಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಧುಮುಕಿ ರಾಜಕೀಯ ರಂಗದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದ ಪಾಂಡುರಂಗರಾಯರು ಅಪ್ಪಟ ಗಾಂಧೀವಾದಿ. ಈಗ ಸಂಸಾರದ ಸಂಪೂರ್ಣ ಜವಾಬ್ದಾರಿ ತನ್ನ ಮೇಲೆ ಬಿದ್ದಿದ್ದು ತಾಯಿ- ಚಿಕ್ಕಮ್ಮ ಹಾಗೂ ಈಗ ಪತ್ನಿಯನ್ನು ಸಾಕುವ ಹೊಣೆ ತನ್ನ ಮೇಲಿರುವುದರಿಂದ ತಾವು ರಾಜಕೀಯ ಬಿಟ್ಟು ಸಂಸಾರ ಬಂಧನಕ್ಕೆ ಸಿಲುಕಿದರು ರಾಯರು. ಇದಕ್ಕೆ ಅವರ ಮಾವ ( ಭಾವ) ಗಾರ್ಡ್‌ವೆಂಕೋಬರಾಯರ ಕಳಕಳಿಯ ಪ್ರಾರ್ಥನೆಯೂ ಕಾರಣವಾಯಿತು.

ಅನಂತರ ೧೯೩೦ರಲ್ಲಿ ನಿಷೇಕದ ಶಾಸ್ತ್ರ ಮುಗಿಸಿ ತಂದೆ-ತಾಯಿಗಳು ಮಗಳನ್ನು ಗಂಡನ ಮನೆಗೆ ಕಳುಹಿಸಿ ಮನೆ ತುಂಬಿಸಿದರು.

ಈ ಹೊತ್ತಿಗೆ ಕನ್ನಡ ಸಾಹಿತ್ಯ ಪರಿಷತ್ತು ಗಮಕ ತರಗತಿಗಳನ್ನು ಪ್ರಾರಂಭಿಸಿ ಭಾರತವಾಚನ ಪ್ರವೀಣ ಸಂ.ಗೋ. ಬಿಂದೂರಾಯರನ್ನು ಅಧ್ಯಾಪಕರನ್ನಾಗಿ ನೇಮಿಸಿ ಪ್ರಕಟಣೆ ಹೊರಡಿಸಿತ್ತು. ಶಕುಂತಲಾಬಾಯಿ ಯಲ್ಲಿ ಸುಪ್ತವಾಗಿದ್ದ ಗಮಕಕಲಾಸೌರಭ ಪಸರಿಸಲು ಇದು ಅನುಕೂಲ ವೆಂದು ಮನಗಂಡ ಪಾಂಡುರಂಗರಾಯರು ಆಕೆಯನ್ನು ಗಮಕ ತರಗತಿಗೆ ಕಳುಹಿಸಲು ನಿರ್ಧರಿಸಿದರು. ಆಗ ಇವರು ನಗರ್ತಪೇಟೆಯ ದಾಸೋಪಂತರ ಗಲ್ಲಿಯಲ್ಲಿದ್ದ ಮನೆಯಲ್ಲಿ ವಾಸಿಸುತ್ತಿದ್ದರು.

ಲಂಡನ್ ಮಿಷನ್ ಸ್ಕೂಲ್ ವಿದ್ಯಾರ್ಥಿಯಾಗಿದ್ದಾಗ ರಂಗಸ್ವಾಮಿ ಗುಡಿಯಲ್ಲಿ ನಡೆಯುತ್ತಿದ್ದ ವಾಚನ-ವಾಖ್ಯಾನ ಕಾರ್ಯಕ್ರಮಕ್ಕೆ ತಪ್ಪದೆ ಹೋಗುತ್ತಿದ್ದ ಪಾಂಡುರಂಗ ರಾಯರು ಗಮಕಕಲಾಭಿಮಾನಿಯಾದರು. ಗಮಕಕಲಾಭಿರುಚಿಯ ಜೊತೆಗೆ ಸಾಹಿತ್ಯಾಸಕ್ತಿಯೂ ಬೆಳೆಯಿತು. ಶಾಲೆಯಲ್ಲಿನ ಸಾಹಿತ್ಯ ಚಟುವಟಿಕೆಗಳೆಲ್ಲದರಲ್ಲೂ ರಾಯರದ್ದೇ ಪ್ರಧಾನ ಪಾತ್ರ. ಈ ಚಟುವಟಿಕೆಯಿಂದ ಪಾಠದ ಕಡೆಗೆ ಗಮನ ಕುಂಠಿತವಾಗಿ ಎಸ್.ಎಸ್.ಎಲ್.ಸಿ. ಪರೀಕ್ಷೆಯಲ್ಲಿ ತೇರ್ಗಡೆಯಾಗಲಿಲ್ಲ. ಮುಂದೆ ಬಸವನಗುಡಿಯ ದೇಶೀಯ ವಿದ್ಯಾಶಾಲೆಗೆ ಸೇರಿ ವಿದ್ಯಾಭ್ಯಾಸ ಮುಂದುವರಿಸಿದರು. ಆಗ ಸಂಪದ್ಗಿರಿರಾಯರು ಶಾಲೆಯ ಮುಖ್ಯೋಪಾಧ್ಯಾಯರು. ಒಮ್ಮೆ ನಿಟ್ಟೂರು ಶ್ರೀನಿವಾಸರಾಯರ ಮನೆಯಲ್ಲಿ ಭಾರತವಾಚನ ಪ್ರವೀಣ ಬಿಂದೂರಾಯರ ವಾಚನ ಏರ್ಪಡಿಸಿದ್ದು ಅವರ ಕಾರ್ಯಕ್ರಮ ಕೇಳುವ ಸುಯೋಗ ಲಭಿಸಿತ್ತು. ಅಂದು ಅಲ್ಲಿಗೆ ಆಗಮಿಸಿದ್ದ ಸಾಹಿತಿ ಸಿ. ಕೆ. ನಾಗರಾಜರಾಯರ ಸ್ನೇಹ ಲಭಿಸಿತು. ಬಿಂದೂರಾಯರ ವಾಚನ ಅಂದು ಕೇಳಿದ ಮೇಲೆ ಅವರಿಂದಲೇ ಪತ್ನಿಗೆ ಶಿಕ್ಷಣ ಕೊಡಿಸಬೇಕೆಂಬ ದೃಢ ನಿರ್ಧಾರ ಮಾಡಿದರು ರಾಯರು. ಮತ್ತೊಂದು ಸಂದರ್ಭದಲ್ಲಿ ಬಹುಷಃ ಅವರ ಮನೆಯಲ್ಲಿ ಮದುವೆ ಸಮಾರಂಭವೊಂದರಲ್ಲಿ ಆಗಮಿಸಿದ್ದ ಭಾರತದ ಕೃಷ್ಣರಾಯರ ವಾಚನವನ್ನು ಕೇಳುವ ಸುಯೋಗವೂ ಇವರಿಗೆ ಲಭಿಸಿತ್ತು. ಕೃಷ್ಣರಾಯರು ಬಿಂದೂರಾಯರ ಶಿಷ್ಯರು. ಅದು ಬಹಿರಂಗವಾದದ್ದು ಪಾಂಡುರಂಗರಾಯರ ಮನೆಯಲ್ಲೇ.

ಕನ್ನಡಸಾಹಿತ್ಯ ಪರಿಷತ್ತಿನ ಪ್ರಕಟಣೆ ಸಕಾಲದಲ್ಲಿ ರಾಯರ ಗಮನಸೆಳೆದು ಪತ್ನಿಯನ್ನು ಅವರ ಸಮ್ಮತಿ ಪಡೆದು ತರಗತಿಗೆ ಸೇರಿಸಿದರು. ಮೊದಲ ದಿನದ ಪಾಠಕ್ಕೆ ಹೋಗುವ ಮೊದಲು ಸೀತಾಪತಿ ಅಗ್ರಹಾರದಲ್ಲಿರುವ ರಾಯರ ಬೃಂದಾವನದ ಸನ್ನಿಧಿಯಲ್ಲಿ ಸೇವೆಸಲ್ಲಿಸಿ ಅನಂತರ ಪಾಠಕ್ಕೆ ಹೋಗುವಾಗ ದಾರಿಯಲ್ಲೇ ಗುರು (ಬಿಂದೂರಾಯರ) ದರ್ಶನವಾಯಿತು. ಅಂದು ತರಗತಿಗೆ ಆಯ್ಕೆಯಾದ ಹನ್ನೊಂದು ಅಭ್ಯರ್ಥಿಗಳಲ್ಲಿ ಈಕೆಯೊಬ್ಬರೇ ಹೆಣ್ಣುಮಗಳು. ಉಳಿದ ಹತ್ತು ಮಂದಿ ಪುರುಷರು.

ಎಸ್. ನಾಗೇಶರಾಯರು, ಬಾಳಗಂಜಿ ನಂಜುಂಡಯ್ಯ, ಹರಿನಾರಾಯಣ ಇವರಲ್ಲಿ ಪ್ರಮುಖರು ಹಾಗೂ ಹಿರಿಯರು. ಎಲ್ಲರ ಸಂದರ್ಶನ-ಪ್ರತಿಭಾಪ್ರದರ್ಶನವಾದ ಮೇಲೆ ಕೊನೆಯದಾಗಿ ಶಕುಂತಲಾಬಾಯಿಗೆ ಅವಕಾಶ. ತೊರವೆ ರಾಮಾಯಣದಲ್ಲಿನ ಮಂಗಲಾಚರಣೆಯಲ್ಲಿಯ ಮೂರು ಪದ್ಯಗಳನ್ನು ವಾಚಿಸಿದರು. ಇವರ ವಾಚನದ ಶೈಲಿಗೆ ಕಂಠಮಾಧುರ್ಯಕ್ಕೆ ಪರೀಕ್ಷಕರಾಗಿ ಬಂದಿದ್ದ

ವಿ. ಸೀತಾರಾಮಯ್ಯ, ನಿಟ್ಟೂರು ಶ್ರೀನಿವಾಸರಾಯರು, ಎಂ. ಆರ್. ಶ್ರೀನಿವಾಸಮೂರ್ತಿ, ಎಸ್. ವಿ. ರಂಗಣ್ಣ, ಪರಿಷತ್ತಿನ ಅಧ್ಯಕ್ಷರಾಗಿದ್ದ ಡಿ. ವಿ. ಜಿ. ಮಾರು ಹೋಗಿ ಮಂತ್ರಮುಗ್ಧರಾಗಿದ್ದರು. ಇವರ ಮನೋಧರ್ಮದ ಬಗ್ಗೆ ಮೊದಲಿಗೆ ಸಂಶಯ ವ್ಯಕ್ತಪಡಿಸಿದ್ದ ಆಚಾರ್ಯ ಬಿಂದೂರಾಯರ ಮುಖ ಸಂತೋಷದಿಂದ ಅರಳಿತು. ಇಪ್ಪತ್ತರಿಂದ ಇಪ್ಪತ್ತೈದು ವರ್ಷಗಳ ಅನುಭವೀ ಪುರುಷ ಅಭ್ಯರ್ಥಿಗಳ ಮಧ್ಯೆ ಅತ್ಯಂತ ಕಿರಿಯ ವಯಸ್ಸಿನ ಈ ಕಿಶೋರಿ ಯಾವ ಅಳುಕೂ ಇಲ್ಲದೆ ಹಾಡಿದ ರೀತಿ ಎಲ್ಲರ ಗಮನ ಸೆಳೆಯಿತು. ಬಂದ ಅಭ್ಯರ್ಥಿಗಳೆಲ್ಲರೂ ಆಯ್ಕೆಯಾಗಿದ್ದರು.

ಪರಿಷತ್ತಿನ ಗಮಕ ಇತಿಹಾಸದಲ್ಲಿ ಗಮಕ ಕಲಿಯಲು ಬಂದ ಪ್ರಥಮ ಮಹಿಳೆ ಶಕುಂತಲಾಬಾಯಿ. ಮುಂದೆ ಬಿಂದೂರಾಯರು ತಮ್ಮ ಗಮಕಕಲಾ ಪಾಂಡಿತ್ಯವನ್ನು ಸಮಸ್ತವಾಗಿ-ಮನಃಪೂರ್ವಕವಾಗಿ ಈಕೆಗೆ ಧಾರೆಯೆರದು ಈಕೆಯನ್ನು ನಾಡಿನ 'ಗಮಕಶಾರದೆ'ಯನ್ನಾಗಿ ಕಡೆದ ಶಿಲ್ಪಿಯಾದರು. ಕನ್ನಡ ನಾಡಿನಲ್ಲಿ ಹೀಗೊಂದು ಮಹಿಳಾ ಗಮಕಿಯ ಉದಯವಾಯಿತು.

## ಇನ್ನೊಬ್ಬ ಮಹಿಳಾ ವಿದ್ಯಾರ್ಥಿನಿ

ಪಾಂಡುರಂಗರಾಯರಂತೆಯೇ ಪತ್ನಿಗೆ ಗಮಕ ಕಲಿಯಲು ಉತ್ತೇಜನ ನೀಡಿದ ಮತ್ತೊಬ್ಬರೆಂದರೆ, ಸಿ. ಕೆ. ನಾಗರಾಜರಾಯರು. ಹೆಸರಾಂತ ನಾಟಕಕಾರ-ಸಾಹಿತಿ, ನಿಟ್ಟೂರು ಶ್ರೀನಿವಾಸರಾಯರ ಸೋದರಳಿಯ. ದೇಶೀಯ ವಿದ್ಯಾಶಾಲೆಯಲ್ಲಿ ಪಾಂಡುರಂಗರಾಯರ ಸಹಪಾಠಿ.

ಪಾಂಡುರಂಗರಾವ್ ದಂಪತಿಗಳು ದಿನಾ ಪರಿಷತ್ತಿನ ಕಡೆ ಹೋಗಿ ಬರುತ್ತಿದ್ದುದನ್ನು ಗಮನಿಸುತ್ತಿದ್ದರು. ಸಿ. ಕೆ. ನಾಗರಾಜರಾವ್ ತಾವು ಆಗ ವ್ಯವಸ್ಥಾಪಕರಾಗಿದ್ದ ಸತ್ಯಶೋಧನ ಪುಸ್ತಕ ಭಂಡಾರದಿಂದ. ಒಂದು ದಿನ ತಡೆಯದೆ ವಿಚಾರಿಸಿದಾಗ ಗಮಕ ಕಲಿಯಲು ಪರಿಷತ್ತಿಗೆ ಹೋಗಿ ಬರುತ್ತಿರುವುದಾಗಿ ತಿಳಿಸಿದರು. ನಾಗರಾಜರಾಯರಿಗೂ ಈ ಬಗ್ಗೆ ಆಸಕ್ತಿಯುಂಟಾಗಿ ತಮ್ಮ ಪತ್ನಿ ರಾಜಾಮಣಿ ಅವರನ್ನು ಗಮಕ ತರಗತಿಗೆ ಸೇರಿಸಿದರು. ಹೀಗಾಗಿ ಶಕುಂತಲಾಬಾಯಿ- ರಾಜಾಮಣಿ ಗಮಕದ ಸಮಕಾಲೀನವರು ಹಾಗೂ ಬಿಂದೂರಾಯರ ಮೊದಲ ಮಹಿಳಾ ಶಿಷ್ಯರೆನಿಸಿದರು.

ರಾಜಾಮಣಿಯವರೂ ಸಾಕಷ್ಟು ಸಂಗೀತ ಕಲಿತಿದ್ದು ವೀಣೆ ನುಡಿಸುತ್ತಿದ್ದರು. ರಾಗಜ್ಞಾನ ಚೆನ್ನಾಗಿತ್ತು. ವೀಣೆ ನುಡಿಸಿಕೊಂಡು ಹಾಡುವ

ಅಭ್ಯಾಸವೂ ಇದ್ದುದರಿಂದ ಗಮಕದ ಕಲಿಕೆಗೆ ಸುಗಮವಾಗಿತ್ತು. ಜೊತೆಗೆ ಸಾಹಿತ್ಯಭಾಗ ಹೇಳಿಕೊಡಲು ನಾಗರಾಜರಾಯರೇ ಇದ್ದರು.

ಬಿಂದೂರಾಯರ ಪಾಠಕ್ರಮ ತುಂಬ ಶಿಸ್ತಿನಿಂದ ಕೂಡಿತ್ತು. ಜೊತೆಗೆ ಅವರಲ್ಲಿ ಮುಂಗೋಪವೂ ಮನೆಮಾಡಿತ್ತು. ವಿದ್ಯಾರ್ಥಿಗಳು ತರಗತಿಗೆ ಸಮಯಕ್ಕೆ ಸರಿಯಾಗಿ ಹಾಜರಾಗಬೇಕು, ಅವರಿಗಿಂತ ಮೊದಲೇ ರಾಯರು ತರಗತಿಗೆ ಬಂದು ತಂಬೂರಿ ಶ್ರುತಿ ಮಾಡಿಕೊಂಡು ಮೀಟುತ್ತಾ ಅದರ ನಾದ ಸೌಖ್ಯವನ್ನು ಅನುಭವಿಸುತ್ತಿರುತ್ತಿದ್ದರು. ಗುಂಪಿನಲ್ಲಿ ಪಾಠ ಹೇಳಿ ಕೊಡುವ ಪರಿಪಾಠದವರಲ್ಲ. ಒಬ್ಬೊಬ್ಬರಿಗೂ ಬಿಡಿ ಬಿಡಿಯಾಗಿ ತುಂಬ ಮುತುವರ್ಜಿಯಿಂದ ಹೇಳಿಕೊಡುತ್ತಿದ್ದರು. ಹೀಗಾಗಿ ಅವರ ಶಿಷ್ಯರುಗಳ್ಯಾರೂ 'ನಾಮಕಾವಸ್ತೆ' ಶಿಷ್ಯರುಗಳಾಗದೆ ಉತ್ತಮ ಗಮಕಿಗಳಾದರು.

## ಟಿ. ಎಸ್. ವಿ. ಪ್ರಶಂಸೆ

ಈ ರೀತಿ ಗಮಕ ತರಗತಿ ನಡೆಯುತ್ತಿದ್ದಾಗ್ಗೆ ಅವಲೋಕನಕ್ಕಾಗಿ ಡಿ.ವಿ.ಜಿ., ಎಸ್. ವಿ. ರಂಗಣ್ಣ, ಎಂ.ಆರ್.ಶ್ರೀರಂ. ಶ್ರೀ ಮುಗಳಿ, ಹೀಗೆ ಹತ್ತು ಹಲವು ಸಾಹಿತಿಗಳು ಬಂದು ಕುಳಿತು ಗಮಕದ ಸವಿಯನ್ನುಣುತ್ತಿದ್ದರು. ಒಮ್ಮೆ ಟಿ. ಎಸ್. ವೆಂಕಣ್ಣಯ್ಯನವರು ಮೈಸೂರಿನಿಂದ ಆಗಮಿಸಿದ್ದರು. ಇವರೂ ಬಿಂದೂರಾಯರೂ ತಳುಕಿನಲ್ಲೇ ಜನಿಸಿದವರು. ಇಬ್ಬರೂ ಆತ್ಮೀಯರು. ಸರಿ ಕುಳಿತು ಪಾಠಗಳ ಕ್ರಮವನ್ನು ನೋಡಿ ತೃಪ್ತಿವ್ಯಕ್ತಪಡಿಸಿ ಶಕುಂತಲಾಬಾಯಿ ಚಿಕ್ಕಬಾಲೆಯಾದರೂ ಯಾವ ಅಳುಕೂ ಇಲ್ಲದೆ ಹಾಡುತ್ತಿದ್ದ ವೈಖರಿ ತಳುಕಿನ ಈ ಹಿರಿಯ ಚೇತನಕ್ಕೆ ಮುದನೀಡಿತು. 'ಈ ಮಗುವಿಗೆ ಮನೋಧರ್ಮ ಕುದುರಿದರೆ ಈಕೇ ನಾಡಿನ ಉದ್ದಾಮ ಗಮಕಿಯಾಗುವ ಲಕ್ಷಣಗಳಿವೆ'' ಎಂದು ಅಂದೇ ಭವಿಷ್ಯ ನುಡಿದರು. ಆ ಹಿರಿಯರ ವಾಣಿ ಹುಸಿಯಾಗಲಿಲ್ಲ., ಶಕುಂತಲಾಬಾಯಿ ತಮ್ಮ ಸ್ವಯಂ ಪ್ರತಿಭೆ ಹಾಗೂ ಪಾಂಡುರಂಗರಾಯ ಸತತ ಪರಿಶ್ರಮದ ಫಲವಾಗಿ ನಾಡಿನ ಪ್ರಸಿದ್ಧ ಗಮಕ ವಿದುಷಿಯಾದರು. ಅಂದಿನಿಂದ ಇಂದಿನವರೆಗೆ ಯಶಸ್ಸಿನ ಕಡೆ ದಾಪುಗಾಲು ಹಾಕಿದರು ಎಂದೂ ಹಿಂದಿರುಗಿ ನೋಡಲಿಲ್ಲ. ಮುನ್ನಡೆದರು. ಮುನ್ನಡೆಯುತ್ತಲೇ ಇದ್ದಾರೆ. ಈಗ ಎಪ್ಪತ್ತೈದರ ಹರೆಯದಲ್ಲೂ ಇಪ್ಪತ್ತೈದರ ಕಸುವಿದೆ ಶಾರೀರದಲ್ಲಿ, ರಾಗಭಾವದಲ್ಲಿ, ಸಾಹಿತ್ಯಸ್ಫುಟತೆಗೆ ಯಾವ ಕುಂದೂ ಬಂದಿಲ್ಲ. ತನ್ನ ಬೆಂಗಾವಲಾಗಿ, ವ್ಯಾಖ್ಯಾನಕಾರರಾಗಿ, ಬಾಳ ಸಂಗಾತಿಯಾಗಿ ಉತ್ತೇಜಿಸುತ್ತಿದ್ದ ಪತಿ ಪಾಂಡುರಂಗರಾಯರು ಸನಿಹದಲ್ಲಿಲ್ಲ ಎಂಬ ಕೊರತೆಯೊಂದನ್ನು ಬಿಟ್ಟರೆ ಆಕೆಯ ಗಮಕ ಕಲೆಗೆ ಯಾವ ಕುಂದೂ ಬಂದಿಲ್ಲ.

## ಪ್ರಪ್ರಥಮವಾಗಿ ಗಮಕವೇದಿಕೆಗೆ

ಗಮಕ ತರಗಿತಿಗೆ ಸೇರಿದ ೬ ತಿಂಗಳಲ್ಲೇ ವಾಚನದ ಕಲೆಯನ್ನು ಕರಗತ ಮಾಡಿಕೊಂಡ ಶಕುಂತಲಾಬಾಯಿ ಪರಿಷತ್ತು ನಿಗದಿ ಪಡಿಸಿದ ದಿನ ಪರೀಕ್ಷೆಗೂ ಹಾಜರಾದರು. ಸಾಹಿತ್ಯಭಾಗಕ್ಕೆ ಸಿ. ಕೆ. ವೆಂಕಟರಾಮಯ್ಯ ಹಾಗೂ ವೀ.ಸೀ.ಯವರು ಸಂಗೀತಭಾಗಕ್ಕೆ ಬಿ. ವೆಂಕಟಕೃಷ್ಣಪ್ಪ ಮತ್ತು ತಿರುಮಲೆ ರಾಜಮ್ಮನವರು ಪರೀಕ್ಷಕರಾಗಿದ್ದರು. ಇಂಥ ದಿಗ್ಗಜಗಳ ಸಮ್ಮುಖದಲ್ಲಿ ಕೇವಲ ೧೬ ವರ್ಷದ ಬಾಲೆ ಯಾವ ಅಳುಕೂ ಇಲ್ಲದೆ ಹಾಡಿ ಉತ್ತಮ ದರ್ಜೆಯಲ್ಲಿ ತೇರ್ಗಡೆ ಹೊಂದಿದಾಗ ಬಿಂದೂರಾಯರು ಸಂತೋಷದಿಂದ ಸಮಾಧಾನದ ನಿಟ್ಟುಸಿರು ಬಿಟ್ಟರು.

ಶಕುಂತಲಾಬಾಯಿ ನಿತ್ಯವೂ ಪರಿಷತ್ತಿಗೆ ಹೋಗಿ ಗಮಕ ಕಲಿತು ಮನೆಗೆ ಬಂದು ರಾತ್ರಿಯ ಹೊತ್ತು ಹಾರ್ಮೋನಿಯಂ ಶ್ರುತಿಯೊಂದಿಗೆ ಅಭ್ಯಾಸ ಮಾಡುತ್ತಿದ್ದುದನ್ನು ತಪ್ಪದೆ ಗಮನಿಸುತ್ತಿದ್ದವರು ಪಕ್ಕದ ಮನೆಯಲ್ಲಿದ್ದ ಆರ್. ಕಲ್ಯಾಣಮ್ಮನವರು. ಶಿಶುಸಾಹಿತ್ಯಕ್ಕೆ ಹೆಚ್ಚಿನ ಇಂಬುಗೊಟ್ಟು ಮಕ್ಕಳ ಮಂಟಪಕಟ್ಟಿ ಮಕ್ಕಳ ಸಾಹಿತ್ಯಕ್ಕೆಂದೇ 'ಸರಸ್ವತಿ'' ಎಂಬ ಮಾಸ ಪತ್ರಿಕೆಯನ್ನು ನಡೆಸುತ್ತಿದ್ದು ಅದರ ಸಂಪಾದಕಿಯಾಗಿದ್ದರು. ಪಾಂಡುರಂಗ ರಾಯರನ್ನು ಚಿಕ್ಕಂದಿನಿಂದಲೂ ಬಲ್ಲವರಾಗಿದ್ದ ಕಲ್ಯಾಣಮ್ಮನವರು ಮಕ್ಕಳ ಸಾಹಿತ್ಯರಚನೆಗೆ ಪ್ರೇರೇಪಿಸಿ ಪಾಂಡುರಂಗರಾಯರ 'ಸುಳ್ಳಿನ ಸೋಲು'' ಎಂಬ ಮಕ್ಕಳ ನಾಟಕವನ್ನು ತಮ್ಮ ಪತ್ರಿಕೆಯಲ್ಲಿ ಪ್ರಕಟಿಸಿ ಉತ್ತೇಜಿಸಿದವರು.

ಹಾಗೆಯೇ ಶಕುಂತಲಾಬಾಯಿವರ ಗಮಕ ಕಲೆ ನಾಲ್ಕು ಗೋಡೆಗಳ ಮಧ್ಯಕ್ಕೇ ಸೀಸಲಾಗಬಾರದು. ಇದು ಸಾರ್ವಜನಿಕ ವೇದಿಕೆಗೆ ಬಂದು ಪ್ರಚಾರಕ್ಕೆ ದಾರಿಯಾಗಬೇಕು ಎಂದು ನಿಶ್ಚಯಿಸಿ ಆಕೆಯನ್ನು ಸಾರ್ವಜನಿಕ ವೇದಿಕೆಗೆ ಕರೆತರಬೇಕೆಂದು ಸಂಕಲ್ಪಿಸಿ ಮಕ್ಕಳ ಸಾಹಿತಿಯಾಗಿದ್ದ ಟಿ. ಎಂ. ಆರ್. ಸ್ವಾಮಿಯವರನ್ನು ಈ ಕಾರ್ಯಕ್ಕೆ ನೇಮಿಸಿದರು. ಆದರೆ ಸಂಪ್ರದಾಯಸ್ಥ ಮನೆಯ ಸೊಸೆಯಾಗಿದ್ದ ಶಕುಂತಲಾಬಾಯಿ ತಮ್ಮ ಆತ್ಮತೃಪ್ತಿಗಾಗಿ ಈ ವಿದ್ಯೆಕಲಿತರೇ ಹೊರತು ಪ್ರಚಾರಕ್ಕಾಗಿ ಅಲ್ಲ ಎಂದು ಆಹ್ವಾನವನ್ನು ವಿನಯದಿಂದ ನಿರಾಕರಿಸಿದರು. ನಾರ್ಮಲ್ ಸ್ಕೂಲಿನ ಶಿಕ್ಷಕ ಸಂಘದ ಕಾರ್ಯದರ್ಶಿಯಾಗಿದ್ದ ಸ್ವಾಮಿ ಕಲ್ಯಾಣಮ್ಮನವರ ರಾಯಭಾರದೊಂದಿಗೆ ಶಕುಂತಲಾಬಾಯಿಯವರ ಅತ್ತೆ-ಚಿಕ್ಕತ್ತೆಯವರನ್ನೂ ಒಪ್ಪಿಸಿ ಶಕುಂತಲಾಬಾಯಿ ಪ್ರಪ್ರಥಮವಾಗಿ ವೇದಿಕೆ ಏರುವಂತೆ ಮಾಡಿದರು.

ಪಾಂಡುರಂಗರಾಯರೂ ಇಲ್ಲಿ ಒಂದು ಹೊಸ ಪ್ರಯೋಗವನ್ನೇ ಮಾಡಿದರು. ಆಗ ಕುಮಾರವ್ಯಾಸನ ಭಾರತವೇ ಪ್ರಧಾನವಾಗಿ ವಾಚಿಸುತ್ತಿದ್ದ

ಕಾಲ. ಇತರ ಕಾವ್ಯಗಳು ಅಷ್ಟಾಗಿ ಕೇಳಿ ಬರುತ್ತಿರಲಿಲ್ಲ. ಇದಕ್ಕೆ ನಾಂದಿ ಹಾಡಿದರು ಶಕುಂತಲಾಬಾಯಿ. ಗಂಡನ ಅಭಿಪ್ರಾಯದಂತೆ ಚಾಮರಸನ ಪ್ರಭುಲೀಲೆಯಲ್ಲಿನ 'ಮಹದೇವಿಯಕ್ಕನ ವಿರಕ್ತಿ' ಭಾಗವನ್ನು ಅಭ್ಯಸಿಸಿ ವಾಚನ ಮಾಡಿದರು. ಇಷ್ಟು ಕಾಲ ಗುರುಗಳು ಹಾಕಿಕೊಟ್ಟು ಕಲಿಸಿದಂಥ ರಾಗಗಳ ಬಳಕೆಯಲ್ಲೇ ಹಾಡುತ್ತಿದ್ದ ಶಕುಂತಲಾಬಾಯಿ ಇಲ್ಲಿ ತಾವೇ ಸ್ವತಃ ಭಾವಕ್ಕೆ ತಕ್ಕಂತೆ ರಸಾಭಾಸವಾಗದ ರೀತಿಯಲ್ಲಿ ರಾಗಗಳನ್ನು ಅಳವಡಿಸಿ ಕೊಂಡು ಹಾಡಿದ ರೀತಿ ಶ್ರೋತೃಗಳ ಪ್ರಶಂಸೆಗೆ ಕಾರಣವಾಯಿತು. ಪ್ರಭುಲಿಂಗಲೀಲೆಯಲ್ಲಿ ಕಾವ್ಯಲಾಲಿತ್ಯವನ್ನು ಅನುಭವಿಸುತ್ತಾ ಇದರೊಂದಿಗೆ ''ಅಕ್ಕ''ನವರ ವಚನಗಳನ್ನು ಸೇರಿಸಿ ಹಾಡಿದಾಗಿನ ಸೊಗಸೇ ಬೇರೆ ಎಂದು ಮನಗಂಡ ದಂಪತಿಗಳು ಈ ಪ್ರಯೋಗದಲ್ಲೂ ಯಶಕಂಡರು.

ಹೀಗೆ ಶಕುಂತಲಾ ಬಾಯಿ ಇತರ ಕಾವ್ಯಗಳ ಕಡೆಗೂ ಗಮನ ಹರಿಸಲು ಅನುಕೂಲವಾಯಿತು.

## ''ಕನ್ನಡ ತಾಯ್ ನೋಟ'' ಗಮಕಕ್ಕೆ

'ಪಂಪನ ಆದಿಪುರಾಣ ದಿಂದ ಹಿಡಿದು ಇತ್ತೀಚಿನ ''ಭಾರತ ಸಿಂಧು ರಶ್ಮಿ''ಯ ತನಕ ಈಕೆ ಹಾಡದ ಕಾವ್ಯವಿಲ್ಲ ಈಕೆಯ ಕಂಠದಿಂದ ಹೊರಹೊಮ್ಮುವ ರಚನೆ ಗಳಿಲ್ಲ. ನವ್ಯ ಛಂದಸ್ಸಿನ ಬಿ. ಎಂ. ಶ್ರೀಯವರ ''ಕನ್ನಡ ತಾಯ್ ನೋಟ'' ಈಕೆಯ ಕಂಠ ಸಿರಿಯಿಂದ ಹೊರ ಹೊಮ್ಮಿದಾಗ ಸಂತೋಷ ಪಡದವರೇ ಇಲ್ಲ.

1937ರಲ್ಲಿ ಆಚಾರ್ಯ ಬಿ. ಎಂ. ಶ್ರೀಯವರು ಕನ್ನಡ ಸಾಹಿತ್ಯ ಪರಿಷತ್ತಿನ ಉಪಾಧ್ಯಕ್ಷ ಸ್ಥಾನವನ್ನು ಡಿ. ವಿ. ಜಿ. ಯವರಿಂದ ವಹಿಸಿಕೊಂಡರು. ಇದಾದ ಕೆಲಸಮಯದಲ್ಲೇ ಬಿ. ಎಂ. ಶ್ರೀಯವರಿಗೆ ಅರಮನೆಯ ಪ್ರತಿಷ್ಠಿತ ಗೌರವವಾದ 'ರಾಜಸೇವಾಸಕ್ತ'' ಬಿರುದು ದೊರೆಯಿತು. ಇದರ ಅಂಗವಾಗಿ ಬಿ. ಎಂ. ಶ್ರೀಯವರ ಗೌರವಾರ್ಥ ಒಂದು ಸನ್ಮಾನ ಸಮಾರಂಭ ಏರ್ಪಡಿಸಿ ಕಲ್ಯಾಣಮ್ಮನವರು ಅಂದು ಶಕುಂತಲಾಬಾಯಿ ಭಾರತ ವಾಚನ ಮಾಡುವಂತೆ ತಿಳಿಸಿದ್ದರು.

ಈ ಆಹ್ವಾನವನ್ನು ಒಪ್ಪಿಕೊಂಡ ಪಾಂಡುರಂಗರಾವ್ ದಂಪತಿಗಳು ಅಂದು ಸಹ ಒಂದು ವಿಶೇಷ ಪ್ರಯೋಗವನ್ನು ಮಾಡಬೇಕೆಂದು ನಿಶ್ಚಯಿಸಿ ಬಿ. ಎಂ. ಶ್ರೀಯವರ ರಚನೆಯನ್ನೇ ಹಾಡಬೇಕೆಂದುಕೊಂಡರು. ಇದು ಪಾಂಡುರಂಗರಾಯರ ಸಲಹೆ. ಶಕುಂತಲಾಬಾಯಿ ಸ್ಪಂದಿಸಿದರು. ರಾಯರು, 'ಕನ್ನಡ ಬಾವುಟ' ದಲ್ಲಿ ಪ್ರಕಟವಾಗಿದ್ದ ಶ್ರೀಯವರ 'ಕನ್ನಡ ತಾಯ್ ನೋಟ'

ಕೃತಿಯನ್ನು ಅವಲೋಕಿಸಿ ಗಮಕಕ್ಕೆ ಹೊಂದುತ್ತದೆ ಎಂದು ಮನವರಿಕೆಯಾದ ಮೇಲೆ ಸಾಕಷ್ಟು ತಾಲೀಮು ನಡೆಸಿ ಸುಮಾರು ೨೦ ನಿಮಿಷಗಳಿಗೆ ಅಳವಡುವಂತೆ ಅದನ್ನು ವಾಚನಕ್ಕೆ ಹೊಂದಿಸಿಕೊಂಡರು.

ದಿನಾಂಕ ೨೬.೧೦.೧೯೩೮ರಂದು ಮೈಸೂರು ಸ್ಕೌಟ್ ಹೆಡ್ ಕ್ವಾರ್ಟರ್ಸ್ ಸಭಾಂಗಣ ಶ್ರೀಯವರ ಅಭಿಮಾನಿಗಳಿಂದ ಕಿಕ್ಕಿರಿದು ತುಂಬಿತ್ತು. ಸಾಂಪ್ರದಾಯಿಕ ಪ್ರಾರ್ಥನೆ, ಸ್ವಾಗತ ಇತ್ಯಾದಿ ನಡೆದು ಕಾವ್ಯವಾಚನಕ್ಕೆ ಶಕುಂತಲಾಬಾಯಿಯನ್ನು ವೇದಿಕೆಗೆ ಬರಮಾಡಿಕೊಂಡರು. ಎಲ್ಲರೂ ಅವರ ಭಾರತ ವಾಚನಕ್ಕೆ ಕಾದಿದ್ದರು. ಆದರೆ ಇವರು ಸರ್ವರಿಗೂ ಏನು! ಶ್ರೀಯವರಿಗೂ ಅಚ್ಚರಿಯನ್ನುಂಟು ಮಾಡುವಂತೆ 'ಕನ್ನಡ ತಾಯ್ ನೋಟ'ದ ಭಾಗವನ್ನು ಆರಂಭಿಸಿದರು.

ವಿಜಯನಗರದ ಪತನವಾಗಿ ಅದು ಹಾಳು ಹಂಪೆಯಾದಾಗ ಕನ್ನಡದ ತಾಯಿ ಭುವನೇಶ್ವರಿಯ ಅಳಲೇ ಇಲ್ಲಿ ಈ ಶಕುಂತಲೆಯ ಬಾಯಿಂದ ಹೊರಹೊಮ್ಮಿತೋ ಎನ್ನುವಷ್ಟು ಭಾವಪೂರ್ಣವಾಗಿತ್ತು ಅವರ ವಾಚನ. ಶ್ರೀಯವರಿಗಂತೂ ತನ್ನ ರಚನೆ ಇಷ್ಟು ಭಾವರಸದಿಂದ ಕೂಡಿದೆಯೇ ಎನ್ನುವಷ್ಟು ಅಚ್ಚರಿ! ಅವರು ತಮ್ಮನ್ನೇ ಮರೆತು ಆಲಿಸುತ್ತಿದ್ದರೆ ಗಾಯಕಿ ಕಾವ್ಯದಲ್ಲೇ ಲೀನವಾಗಿಬಿಟ್ಟಿದ್ದರು.

*''ಚೆಲುವೆಯರ, ಚೆನ್ನಿಗರ, ಹಿರಿಯ ತಾಯ್ ಮಕ್ಕಳಿರ*
*ಒಡಹುಟ್ಟಿದವರಾ*
*ಒಸಗೆ ನುಡಿ ಕೇಳಿದಿರಾ, ತಾಳಿದಿರ ಎದೆಯಲ್ಲಿ ತಾಳಿ ಬಾಳುವಿರಾ''*

★ ★ ★

*''ಒಕ್ಕೊರಲಲ್ಲರೂ ಕೂಗಿ ಈ ಒಕ್ಕೂಗ, ಈ ಹಿರಿಯ ಕೂಗ*
*ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಗೆಲ್ಗೆ, ಬಾಳ್ಗೆ*
*ಕನ್ನಡದ ತಾಯ್ ಗೆಲ್ಗೆ-ಬಾಳ್ಗೆ''*

ಎಂದು ಉಚ್ಚಕಂಠದಿಂದ ಹಾಡಿ ತಂಬೂರಿಯನ್ನು ಕೆಳಗಿಟ್ಟಾಗ ಸಭೆ ಅದ್ಭುತ ಕರತಾಡನದೊಂದಿಗೆ ತನ್ನ ಮೆಚ್ಚುಗೆ ಸೂಚಿಸಿತು. ಬಿ.ಎಂ.ಶ್ರೀಯವರು ತಮ್ಮ ಈ ರಚನೆಯ ಛಂದಸ್ಸು ಗಮಕಕ್ಕೆ ಒಗ್ಗುವುದು ಎಂಬುದನ್ನು ಈ ತಾಯಿ ತೋರಿಸಿಕೊಟ್ಟರು ಎಂದು ಮನಃಪೂರ್ವಕ ಅಭಿನಂದನೆ ಸಲ್ಲಿಸಿದರು.

ಕನ್ನಡ ತಾಯ್ ನೋಟದ ವಾಚನ ಸಾಕಷ್ಟು ಪ್ರಭಾವ ಬೀರಿತು. ಬೆಂಗಳೂರಿನಲ್ಲೊಂದು ಸಣ್ಣ ಆಕಾಶವಾಣಿ ಮಲ್ಲೇಶ್ವರದ ಬಡಾವಣೆಯಲ್ಲಿ ಸ್ಥಾಪಿತವಾಗಿತ್ತು. ಅಲ್ಲಿಂದ ಕಾವ್ಯವಾಚನಕ್ಕೆ ಅದರಲ್ಲೂ ''ಕನ್ನಡ ತಾಯ್ ನೋಟ'' ವಾಚನಕ್ಕೇ ಕರೆ ಬಂತು. ಬೆಂಗಳೂರಿನ ಸೆಂಟ್ರಲ್ ಕಾಲೇಜ್

ಕರ್ನಾಟಕ ಸಂಘದಿಂದ ಕರೆ ಬಂದಾಗ ಅಲ್ಲಿ ಮತ್ತೆ ಕನ್ನಡ ತಾಯಿಯ ಕಹಳೆ ಊದಿದರು. ಬೆಂಗಳೂರು ನಗರದ ಅನೇಕ ಸಂಘ ಸಂಸ್ಥೆಗಳು ಇವರನ್ನು ಆಹ್ವಾನಿಸಿ ಇವರ ಸಿರಿಕಂಠದಿಂದ ಕನ್ನಡದ ಕಹಳೆ ಮೊಳಗಿಸಿದರು.

ಈ ಹೊತ್ತಿಗಾಗಲೇ ''ಶ್ಲೋಕ ಸಂಗೀತ''ರೆಂದು ಪ್ರಸಿದ್ಧರಾಗಿ ಶ್ರೀಯವರ ''ಕರುಣಾಳು ಬಾ ಬೆಳಕೆ''; ವೀಸೀಯವರ ''ಹರಸು ತಾಯೆ'' ಕವನಗಳ ಗಾಯನವನ್ನು ಮಾಡುತ್ತಿದ್ದ ಭಾರತದ ಕಳಲೆ ಸಂಪತ್ಕುಮಾರಾಚಾರ್ಯರು ಶಕುಂತಲಾಬಾಯಿಯವರ ''ಕಂಠದ ಮುಂದೆ ನನ್ನದೇನೂ ಅಲ್ಲ'' ಎಂದು ತಮ್ಮ ಪ್ರಶಂಸೆ ವ್ಯಕ್ತಪಡಿಸಿದರಂತೆ. ಕೇವಲ ಮೈಸೂರು ಸಂಸ್ಥಾನವೇ ಅಲ್ಲದೆ ಹೊರನಾಡುಗಳಲ್ಲೂ ಮದರಾಸು, ದೆಹಲಿ - ಮುಂಬೈಗಳಲ್ಲೂ ''ಕನ್ನಡ ತಾಯಿ'' ವಿಜೃಂಭಿಸಿದಳು ಶಕುಂತಲಾಬಾಯಿಯ ಕಂಠದ ಮೂಲಕ.

## ಎಲ್ಲ ಛಂದಸ್ಸುಗಳು ಕರಗತ

ಬಿಂದೂರಾಯರು ಕುಮಾರವ್ಯಾಸನ ಅವಿಚ್ಛಿನ್ನ ಭಕ್ತರು. ಹಾಗಾಗಿ ಅವರು ಅವನ ಕರ್ನಾಟ ಭಾರತ ಕಥಾ ಮಂಜರಿಯನ್ನು ಬಿಟ್ಟು ಬೇರೆ ಕಾವ್ಯಗಳ ಕಡೆ ಕಣ್ಣು ಸಹ ಹಾಯಿಸಲಿಲ್ಲ. ಆದ್ದರಿಂದ ಅವರು ಭಾರತದ ಬಿಂದೂರಾಯರೆಂದೇ ಹೆಸರು ಪಡೆದರು. ಗಮಕ ಭಗೀರಥರಲ್ಲಿ ಇವರಿಗೆ ಪ್ರಥಮ ಸ್ಥಾನ. ಎರಡನೆಯವರಾದ ಕೃಷ್ಣಗಿರಿ ಕೃಷ್ಣರಾಯರು ''ಭಾರತದ



ಕೃಷ್ಣರಾಯ'' ರಾದರೂ ಇತರ ಕಾವ್ಯಗಳನ್ನು ವಾಚನ ಮಾಡುವ ಸಂಪ್ರದಾಯವನ್ನಿಟ್ಟುಕೊಂಡಿದ್ದರು. ಮೂರನೇ ಭಗೀರಥ ''ಕಳಲೆ ಸಂಪತ್ಕುಮಾರಾಚಾರ್'' ಅವರಿಗೆ ಭಾರತ ಅಚ್ಚುಮೆಚ್ಚಾದರೂ ಇತರ ಷಟ್ಪದಿ ಕಾವ್ಯಗಳನ್ನು ವಾಚಿಸುತ್ತಿದ್ದರು. ಶಕುಂತಲಾಬಾಯಿ ಈ ದಿಸೆಯಲ್ಲಿ ಕೃಷ್ಣರಾಯರ ಹಾದಿ ತುಳಿದರು. ಜೊತೆಗೆ ಗಂಡನ ಒತ್ತಾಸೆ. ಎಲ್ಲ ಕಾವ್ಯಪ್ರಕಾರ ಗಳಲ್ಲೂ ಕೈ ಆಡಿಸಿದರು.

ಕುವೆಂಪುರವರ ''ರಾಮಾಯಣ ದರ್ಶನ'' ಇವರ ಅಚ್ಚುಮೆಚ್ಚಿನ ಕಾವ್ಯ. ಸ್ವತಃ ಪುಟ್ಟಪ್ಪನವರೇ ಅವರ ಬಾಯಿಂದ ಈ ಕಾವ್ಯದ ರಸಧಾರೆಯನ್ನು ಆಸ್ವಾದಿಸಿ ತಮ್ಮ ಹಸ್ತಾಕ್ಷರವಿರುವ ಗ್ರಂಥವನ್ನು ದಯಪಾಲಿಸಿದ್ದಾರೆ.

ನಾಡಿನ ಹಿರಿಯ ರಾಷ್ಟ್ರಕವಿಯೆನಿಸಿದ್ದ ಮಂಜೇಶ್ವರದ ಗೋವಿಂದ ಪೈಯವರ ರಚನೆ 'ಗೊಲ್ಗೊಥಾ'ವನ್ನು ಅವರ ಸಮ್ಮುಖದಲ್ಲಿ ವಾಚನ ಮಾಡಿ ಅವರಿಂದ 'ನೀವು ನನ್ನ ಕಾವ್ಯಕ್ಕೆ ಧ್ವನಿ ಕೊಟ್ಟಿರಿ' ಎಂದೆನಿಸಿ ಕೊಂಡರು.

ವೀರಶೈವ ಸಾಹಿತ್ಯಗಳೆನಿಸಿದ್ದ ''ಬಸವ ಪುರಾಣ''; ಪ್ರಭುಲಿಂಗಲೀಲೆ, ವಚನಗಳು, ಶರಣ ಸಾಹಿತ್ಯಗಳನ್ನು ವೀರಶೈವ ಜಗದ್ಗುರುಗಳ ಸಮ್ಮುಖದಲ್ಲಿ ವಾಚನಮಾಡಿ ಕೀರ್ತಿ ಗಳಿಸಿದ್ದಾರೆ.

ಇವರ ಸಿರಿಕಂಠದಿಂದ ಕುವೆಂಪುರವರ ''ರಾಮಾಯಣ ದರ್ಶನಂ'' ಹೊರಹೊಮ್ಮಿ ಜಯಭೇರಿ ಹೊಡೆದಂತೆಯೇ ಡಿ. ವಿ. ಜಿ.ಯವರ ''ಶ್ರೀ ರಾಮಪರೀಕ್ಷಣಂ''; ಮುದ್ದಣನ ''ರಾಮಾಶ್ವಮೇಧ''; ಮಾಸ್ತಿಯವರ ''ಶ್ರೀರಾಮ ಪಟ್ಟಾಭಿಷೇಕಮ್''; ಮೈ. ಶೇ. ಅನಂತಪದ್ಮನಾಭರಾಯರ ''ಶ್ರೀ ತುಲಸೀರಾಮಾಯಣ'' ಕಾವ್ಯಗಳು ಸಾಕಷ್ಟು ಜನಪ್ರಿಯತೆ ಗಳಿಸಲು ಕಾರಣವಾಗಿವೆ.

ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹನ್ನೆರಡು ವಾರಗಳ ಕಾಲ ರಾಮಾಯಣ ದರ್ಶನದ ಸತತ ವಾಚನದ ಏರ್ಪಾಡಾಗಿತ್ತು. ದಿನಕ್ಕೆ ಸುಮಾರು ೯೦ ನಿಮಿಷಗಳ ವಾಚನ ವಾರಕ್ಕೊಂದರಂತೆ ನಡೆಯಿತು. 'ಕತೆಗಾರ' ಸಂಪಾದಕರಾಗಿದ್ದ ಜಿ. ಎ. ನರಸಿಂಹಮೂರ್ತಿಯವರು ನಾಲ್ಕನೆಯ ವಾಚನಕ್ಕೆ ಬಂದಿದ್ದು ಅಂದು ಅವರು ಕೇಳಿದ ''ಓ ಲಕ್ಷ್ಮಣಾ'' ಭಾಗದ ಕುರಿತು ತಾಯಿನಾಡು ಪತ್ರಿಕೆಯಲ್ಲಿ ಪ್ರಶಂಸಾತ್ಮಕ ಲೇಖನ ಬರೆದರು. ಸಮಾರೋಪದ ದಿನ ಬಿ.ಎಂ.ಶ್ರೀಯವರು ಅಧ್ಯಕ್ಷತೆ ವಹಿಸಿದ್ದು ಕೊನೆಯಲ್ಲಿ ಶಕುಂತಲಾಬಾಯಿಯನ್ನು ಪ್ರಶಂಸಿಸುತ್ತಾ **''ಶಕುಂತಲಾಬಾಯಿ ಶ್ರೇಷ್ಠ ಗಮಕಿ ಕರ್ನಾಟಕದ ಆಸ್ತಿ; ಪಾಂಡುರಂಗರಾವ್ ಆ ಆಸ್ತಿಗೆ ಟ್ರಸ್ಟಿ''** ಎಂದು ಉದ್ಗರಿಸಿದರಂತೆ.

## ರಾಷ್ಟ್ರೀಯ ಕಲಾವಿದೆಯಾಗಿ ದೆಹಲಿಗೆ

೧೯೩೪ರಲ್ಲಿ ಗೋಪಾಲಸ್ವಾಮಿಯವರು ಮೈಸೂರಿನಲ್ಲೊಂದು ಆಕಾಶವಾಣಿಯನ್ನು ಸ್ಥಾಪಿಸಿದರು. ಅಲ್ಲಿಂದ ಶಕುಂತಲಾಬಾಯಿಗೆ ಕರೆಬಂತು. ಅಲ್ಲಿ ಮಾಸ್ತಿಯವರ 'ಅಭಿಮನ್ಯು' ಕಥನವನ್ನು ವಾಚನ ಮಾಡಿದರು. ಮುಂದೆ ಆಕಾಶವಾಣಿ ರಾಷ್ಟ್ರೀಕೃತವಾಗಿ ಅಧಿಕೃತವಾಗಿ 'ಆಲ್ ಇಂಡಿಯಾ ರೇಡಿಯೋ' ಆಗಿ ಬೆಂಗಳೂರಿಗೆ ಸ್ಥಳಾಂತರಿಸಲ್ಪಟ್ಟು ಶಕುಂತಲಾಬಾಯಿ ಯನ್ನು ಆಡೀಷನ್ ಇಲ್ಲದೆಯೇ ನಿಲಯ ಕಲಾವಿದರನ್ನಾಗಿ ಸ್ವೀಕರಿಸಿತು. ಇದೊಂದು ವಿಶಿಷ್ಟ ದಾಖಲೆ. ದೆಹಲಿ ಕೇಂದ್ರದಿಂದ ಪ್ರಸಾರವಾಗುತ್ತಿರುವ ದೇಶೀಭಾಷೆಗಳ ''ನ್ಯಾಷನಲ್ ಪ್ರೋಗ್ರಾಂ''ನಲ್ಲಿ ವಾಚನ ಮಾಡಲು ಶಕುಂತಲಾಬಾಯಿಗೆ ಕರೆ ಬಂದಾಗ ಎಲ್ಲರಿಗೂ ಆಶ್ಚರ್ಯ. ಇದು ಒಂದು ಸಾಂಸ್ಕೃತಿಕ ಕಾರ್ಯಕ್ರಮ. ಇದರಲ್ಲಿ ಸಂಗೀತ, ಗಮಕ, ಸುಗಮ ಸಂಗೀತ, ಜಾನಪದ ಎಲ್ಲ ಪ್ರಕಾರಗಳೂ ಇದ್ದುವು. ಪ್ರಸಿದ್ಧ ವೈಣಿಕ ಡಾ|| ವಿ. ದೊರೆಸ್ವಾಮಿ ಅಯ್ಯಂಗಾರ್ ಅವರು ಇದರ ನೇತಾರರು. ಈ ತಂಡದಲ್ಲಿ ಬೆಳಕವಾಡಿ ಶ್ರೀನಿವಾಸ ಅಯ್ಯಂಗಾರ್, (ಶಾಸ್ತ್ರೀಯ ಸಂಗೀತ) ಧಾರವಾಡ ನಿಲಯದ ಚಕ್ರಕೋಡಿ ನಾರಾಯಣ ಶಾಸ್ತ್ರಿ (ನನ್ನ ಸಂಗೀತ ಗುರುಗಳು) ವಚನ ಗಾಯನಕ್ಕೆ;ಜಾನಪದ ಗಾಯನಕ್ಕೆ ಪಿ. ಕಾಳಿಂಗರಾವ್ ತಂಡ, ಗಮಕಕ್ಕೆ ಶಕುಂತಲಾಬಾಯಿಯವರು ಸೇರಿದ್ದರು. ಹೀಗೆ ದೆಹಲಿ ಆಕಾಶವಾಣಿ ಯಿಂದ ಗಮಕ ವಾಚನ ಮಾಡಿದ ಪ್ರಥಮ ಗಮಕಿ ಎಂಬ ಹೆಗ್ಗಳಿಕೆಗೆ ಪಾತ್ರರಾದರು ಶಕುಂತಲಾಬಾಯಿ. ಹಾಗೂ ರಾಷ್ಟ್ರಮಟ್ಟದ ಕಲಾವಿದೆ ಯಾದರು. ದೆಹಲಿಯ ಅನೇಕ ಕನ್ನಡ ಸಂಘ ಸಂಸ್ಥೆಗಳಲ್ಲಿ ವಾಚನ ನಡೆಯಿತು. ಮುಂದೆ ಮೂರು ಬಾರಿ ದೆಹಲಿ ಯಾತ್ರೆ ಮಾಡಿದರು.

## ಧ್ವನಿ ಮುದ್ರಿಕೆ ಕ್ಷೇತ್ರಕ್ಕೆ

ಮದರಾಸಿನ ಕೊಲಂಬಿಯಾ ಧ್ವನಿಮುದ್ರಣ ಸಂಸ್ಥೆ ''ಭೀಮಕವಿ'' ಎಂದೇ ಖ್ಯಾತರಾಗಿದ್ದ ಜಿ. ಹೆಚ್. ಬಿ. ಆಚಾರ್ಯ (ಇವರು ನನ್ನ ಆತ್ಮೀಯ ಗೆಳೆಯರೂ ಕೂಡ - ಇತ್ತೀಚೆಗೆ ಹರಿಪಾದ ಸೇರಿದರು - ಅವರ ಆತ್ಮಕ್ಕೆ ಶಾಂತಿಯಿರಲಿ). ಅವರ ವಿರಚಿತ 'ರಾಘವೇಂದ್ರ ಗುರೂಜಿ' ಎಂಬ ಕಾವ್ಯಕ್ಕೆ ಕಂಠದಾನ ಮಾಡಲು ಶಕುಂತಲಾಬಾಯಿಗೆ ಆಹ್ವಾನ ಬಂತು. ಹಿಮ್ಮೇಳಕ್ಕೆ ಪಿಟೀಲು, ವೀಣೆ ಮತ್ತು ಹಾರ್ಫ್ ವಾದ್ಯಗಳ ಬಳಕೆಯೊಂದಿಗೆ ಇವರ ಗಾಯನವನ್ನು ಧ್ವನಿಯನ್ನು ಮುದ್ರಿಸಿಕೊಳ್ಳಲಾಯಿತು. ಹೀಗೆ ಗ್ರಾಮಾಫೋನ್ ಕಂಪೆನಿಯಿಂದ ಹಾಡಿದ ಪ್ರಥಮ ಮಹಿಳೆ ಎರಡನೆ ಗಮಕಿಯೆನಿಸಿಕೊಂಡರು.

ಈ ಮುಂಚೆ ಗಮಕಿ ಸಂಪತ್ಕುಮಾರಾಚಾರ್ಯರು ಗ್ರಾಮಾಫೋನ್ ಕಂಪೆನಿಗೆ ಹಾಡಿ ಪ್ರಥಮ ಗಮಕಿಯೆನಿಸಿಕೊಂಡಿದ್ದರು.

## ಪ್ರಶಸ್ತಿ, ಗೌರವ ಸನ್ಮಾನಗಳು

ವಿದುಷಿ ಶಕುಂತಲಾಬಾಯಿಯವರನ್ನು ಗೌರವಿಸದ, ಸನ್ಮಾನಿಸದ ಸಂಸ್ಥೆಗಳು ರಾಷ್ಟ್ರದಲ್ಲೇ ಇಲ್ಲವೆನ್ನಬಹುದು. ಕಾಶ್ಮೀರದಿಂದ ಹಿಡಿದು ಕನ್ಯಾಕುಮಾರಿಯವರೆಗೆ ಇವರ ಕಾವ್ಯ ವಾಚನದ ಸವಿ ಪಸರಿಸಿದೆ. ದೆಹಲಿ, ಕಲ್ಕತ್ತೆ, ವಾರಣಾಸಿ, ಹೈದರಾಬಾದ್, ತಿರುಪತಿ, ಚೆನ್ನೈ (ಮದರಾಸು) ಮುಂತಾದ ಹೊರನಾಡುಗಳಲ್ಲಿ ಗೌರವ ಸನ್ಮಾನ ಪಡೆದಿದ್ದಾರೆ.

೧೯೭೭ರಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಇವರ ಗಮಕ ಕಲಾಸೇವೆಯನ್ನು ಗುರುತಿಸಿ ನಟರಾಜ ವಿಗ್ರಹದೊಂದಿಗೆ ಸನ್ಮಾನಿಸಿದರೆ ೧೯೯೦ರ ರಾಜ್ಯೋತ್ಸವ ಪ್ರಶಸ್ತಿ ಇವರಿಗೆ ಲಭಿಸಿದೆ.

ಕನ್ನಡ ಸಾಹಿತ್ಯ ಪರಿಷತ್ತು ತನ್ನ ಸಮ್ಮೇಳನಗಳ ಸಂದರ್ಭದಲ್ಲಿ ನಡೆಸುತ್ತಿದ್ದ ಗಮಕ ಗೋಷ್ಠಿಗೆ ೧೯೭೭ರಲ್ಲಿ ಅಧ್ಯಕ್ಷ ಸ್ಥಾನಕ್ಕೆ ಆಯ್ಕೆ ಮಾಡಿ ಗೌರವಿಸಿದೆ.

ಬೆಂಗಳೂರು ಗಾಯನ ಸಮಾಜ, ಕರ್ನಾಟಕ ಗಾನ ಕಲಾ ಪರಿಷತ್, ವಿದ್ಯಾವರ್ಧಕ ಸಂಘ, ತ್ಯಾಗರಾಜಗಾನ ಸಭೆ, ಕರ್ನಾಟಕ ಗಮಕ ಕಲಾ ಪರಿಷತ್ತಿನ ಚತುರ್ಥ ಗಮಕ ಸಮ್ಮೇಳನ (ಶಿವಮೊಗ್ಗಾ) ಹೀಗೆ ಒಂದೇ ಎರಡೇ ನೂರಾರು ಸಂಸ್ಥೆಗಳು ಇವರನ್ನು ಗೌರವಿಸಿ ತಮ್ಮ ಘನತೆಯನ್ನು ಹೆಚ್ಚಿಸಿಕೊಂಡಿವೆ.

## 'ಗಮಕ ಶಾರದೆ'

ಶಕುಂತಲಾಬಾಯಿಯವರು ಅರುವತ್ತು ವಸಂತಗಳನ್ನು ದಾಟಿದಾಗ ಅವರ ಷಷ್ಟ್ಯಬ್ಧಿ ಪೂರ್ತಿ ಮಹೋತ್ಸವವನ್ನು ವೈಭವದಿಂದ ಆಚರಿಸಿ ಅದರ ಕುರುಹಾಗಿ 'ಗಮಕ ಶಾರದೆ' ಎಂಬ ಅಭಿನಂದನಾ ಬೃಹದ್ಗ್ರಂಥವನ್ನು ಹೊರ ತಂದಿದ್ದಾರೆ. ಇದರಲ್ಲಿ ಅನೇಕ ಸಾಹಿತಿಗಳು ಇವರನ್ನು 'ಸಹೃದಯಶ್ರೀ' ಯಾಗಿ ಕಂಡರೆ ಗಮಕಿಗಳು 'ಗಮಕಶ್ರೀ' ಯಾಗಿ ಕೊಂಡಾಡಿದ್ದಾರೆ. ತಮ್ಮ ಬಂಧುವರ್ಗದವರಿಗೆ 'ಬಂಧುಶ್ರೀ' ಯಾದರೆ ತಮ್ಮ ಪತಿಗೆ ಪಾಂಡುರಂಗ ರಾಯರಿಗೆ 'ಆತ್ಮಶ್ರೀ' ಯಾಗಿ ಅಭಿನಂದನಾ ಗ್ರಂಥದಲ್ಲಿ ವಿಜೃಂಭಿಸಿದ್ದಾರೆ, ಶಕುಂತಲಾಬಾಯಿಯವರು. ಈಗ ಎಪ್ಪತ್ತಾರರ ಹರೆಯದಲ್ಲಿರುವ ಶಕುಂತಲಾಬಾಯಿ ತಮ್ಮ ಮಗ ಮೋಹನರಾವ್, ಸೊಸೆ, ಶೀಲಶ್ರೀ, ಹೆಣ್ಣುಮಕ್ಕಳು, ಅಳಿಯಂದಿರು ಮೊಮ್ಮಕ್ಕಳ ಮಧ್ಯೆ ಇದ್ದು ತಮ್ಮ ಗಮಕ

ಕಲಾರಾಧನೆಯನ್ನು ಮಾಡುತ್ತಿದ್ದಾರೆ. ಆದರೆ ಅವರ ಗಮಕ ಕಲೆಯ ಸ್ಫೂರ್ತಿ, ಗಮಕ ಕಲೆಯೆಂಬ ಆಸ್ತಿಯ ಟ್ರಸ್ಟಿ ಪಾಂಡುರಂಗರಾಯರು ಈಗ ಇಲ್ಲ. ಆದರೆ ಆ ಚೇತನ ನೀಡಿದ ಸ್ಫೂರ್ತಿ ಉತ್ತೇಜನ ಇವರ ಕಾವ್ಯ ಗಾಯನದ ಅಡಿಗಲ್ಲಾಗಿ ಅವರ ಕಂಠದಲ್ಲಿ ಚಿರಸ್ಥಾಯಿಯಾಗಿ ನಿಂತಿದೆ.

## ಗ್ರಂಥ ಋಣ

೧. ಗಮಕಿ ಭಗೀರಥರು: ಬಿ. ಶ್ರೀ ಪಾಂಡುರಂಗರಾವ್

೨. ಗಮಕ ಶಾರದೆ

೩. ಕೃಷ್ಣಗಿರಿ ಕೃಷ್ಣರಾಯರ ಸಂಸ್ಮರಣ ಗ್ರಂಥ

೪. ಮಾಲೂರು ಟಿ. ವೆಂಕಟಪ್ಪ ಅಮೃತೋತ್ಸವ ಸ್ಮರಣಸಂಚಿಕೆ

೫. ಕಲೆಯ ಕಾಣಿಕೆ : ಗಮಕಿ ಎಂ. ರಾಘವೇಂದ್ರರಾವ್

## ಚಿತ್ರಗಳು

ಶಕುಂತಲಾಬಾಯಿ

ಮೈ.ಶೇ.ಅ.

ಕೃಷ್ಣಗಿರಿ ಕೃಷ್ಣರಾವ್

ಮಾಲೂರು ಟಿ. ವೆಂಕಟಪ್ಪ

**ಗಮಕಿ ಎಂ. ರಾಘವೇಂದ್ರರಾವ್**

‘ಗಮಕ ಕಲೆಗೆ ಸಾಹಿತ್ಯ ಸಂಗೀತಗಳಿರುವಷ್ಟೇ ಹಳೆಯ ಇತಿಹಾಸವಿದೆ.
ಈ ಸಂಕಲನದಲ್ಲಿ ಗಮಕ ಕಲೆಯನ್ನು ಕರಗತ ಮಾಡಿಕೊಂಡಿರುವ ಹಲವು ಹಿರಿಯ ಗಮಕ ವಿದ್ವಾಂಸರನ್ನು ಲೇಖಕರು ಪರಿಚಯಿಸಿದ್ದಾರೆ.’

